1

ಐಸಿಡಿಎಸ್ ಅನುಷ್ಠಾನಕ್ಕೆ ವಿಸ್ತೃತ ಕಾರ್ಯಚೌಕಟ್ಟು

ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ,

ಭಾರತ ಸರ್ಕಾರ, ಅಕ್ಟೋಬರ್ 2012

ವಿಷಯ ಸೂಚಿಕೆ


1. ಸಂದರ್ಭ

1.1. ಸವಾಲುಗಳು

1.2 ಐಸಿಡಿಎಸ್ ವಿಕಾಸ ಮತ್ತು ಬೆಳವಣಿಗೆ

1.3 ಹೊಮ್ಮುತ್ತಿರುವ ವಿಷಯಗಳು ಮತ್ತು ಕಂದರಗಳು

1.4 ಬದಲಾವಣೆಯ ವಾತಾವರಣ

2. ಐಸಿಡಿಎಸ್ ಸಬಲಗೊಳಿಸುವಿಕೆ ಮತ್ತು ಪುನರ್ವಿನ್ಯಾಸ

2.1 ಐಸಿಡಿಎಸ್ ಬಲಗೊಳಿಸುವಿಕೆ

2.1.1. ಬಲಗೊಳಿಸುವಿಕೆಗೆ ತೆಗೆದುಕೊಂಡ ಹೆಜ್ಜೆಗಳು

2.1.2 ಬಲಗೊಳಿಸುವಿಕೆಗೆ ಭವಿಷ್ಯದಲ್ಲಿ ತೆಗೆದುಕೊಳ್ಳುವ ಹೆಜ್ಜೆಗಳು

213 ಕಲಿತ/ಪಾಠಗಳು/ಸಲಹೆಗಳು

2.2 ಐಸಿಡಿಎಸ್ ಮರುವಿನ್ಯಾಸಗೊಳಿಸುವಿಕೆ

221 ಕಾರ್ಯಕ್ರಮದಲ್ಲಿ ಸುಧಾರಣೆಗಳು

222 ನಿರ್ವಹಣೆಯಲ್ಲಿ ಸುಧಾರಣೆಗಳು

223 ಸಾಂಸ್ಥಿಕ ಸುಧಾರಣೆಗಳು

3. ಐಸಿಡಿಎಸ್ ಮಿಷನ್

3.1 ಐಸಿಡಿಎಸ್ ಮಿಷನ್ ಏಕೆ?

3.2 ಮುನ್ನೋಟ

3.3 ಗುರಿಗಳು

3.4 ಐಸಿಡಿಎಸ್ ಮಿಷನ್ ಉದ್ದೇಶಗಳು

3.5 ಸಾಧನೆಯ ಗುರುತುಗಳು

3.6 ಮುಖ್ಯ ಕಾರ್ಯತಂತ್ರಗಳು

3.7 ಸೇವಾ ಮಾದರಿಗಳು

4. ಅನುಷ್ಠಾನಕ್ಕೆ ಕಾರ್ಯಯೋಜನೆ

4.1 ಕೇಂದ್ರದ ಮಟ್ಟದಲ್ಲಿ ಕ್ರಮಗಳು

4.2 ಅನುಷ್ಠಾನದಲ್ಲಿ ರಾಜ್ಯದ ನಾಯಕತ್ವ ಮತ್ತು ಅಧಿಕ ಬದ್ಧತೆ

4.3 ರಾಜ್ಯ/ಜಿಲ್ಲೆ/ವಿಭಾಗ ಮತ್ತು ಗ್ರಾಮ ಮಟ್ಟದಲ್ಲಿ ಐಸಿಡಿಎಸ್ ಮಿಷನ್‌ನ ನಿರ್ವಹಣೆ

4.4 ಇನ್ನಿತರ ಮಂತ್ರಾಲಯಗಳು/ ಇಲಾಖೆಗಳೊಡನೆ ಏಕತ್ರಗೊಳಿಸುವುದು

4.5 (ಎ)ಸ್ಥಳೀಯ ಸಂಸ್ಥೆಗಳ ಪಾತ್ರ

(ಬಿ) ನಾಗರಿಕ ಸಮಾಜ ಮತ್ತು ಸ್ವಯಂಸೇವಾ ಕ್ರಿಯೆಗಳ ಪಾತ್ರ

4.6 ಮಾನವ ಸಂಪನ್ಮೂಲಗಳನ್ನು ಬಲಗೊಳಿಸುವುದು

4.7 ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ

4.8 ಸಾಕ್ಷ್ಯಾಧಾರಿತ ನಾವೀನ್ಯತೆಯ ಮಧ್ಯಸ್ಥಿಕೆಯನ್ನು ಬಲಗೊಳಿಸುವುದು ಮತ್ತು ಹೆಚ್ಚಳಗೊಳಿಸುವುದು

4.9 ಸಂಗ್ರಹಣೆ ಸೇರಿದಂತೆ ಸಾಗಣೆಯ ನಿರ್ವಹಣೆ

4.10 ಪರಾಮರ್ಶನ/ಉತ್ತರದಾಯಿತ್ವದ ಚೌಕಟ್ಟು

5. ಐಸಿಡಿಎಸ್ ಮಿಷನ್‌ನ ಸಾಂಸ್ಥಿಕ ಏರ್ಪಾಟುಗಳು

5.1 ಕೇಂದ್ರದ ಮಟ್ಟದಲ್ಲಿ ಸಾಂಸ್ಥಿಕ ವ್ಯವಸ್ಥೆ

5.2 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಹಂತದಲ್ಲಿ ಸಾಂಸ್ಥಿಕ ವ್ಯವಸ್ಥೆ

5.3 ವಿಭಾಗ/ಯೋಜನಾ ಹಂತದಲ್ಲಿ ಸಾಂಸ್ಥಿಕ ವ್ಯವಸ್ಥೆ

5.4 ಗ್ರಾಮ/ವಾರ್ಡ್ ಹಂತದಲ್ಲಿ ಸಾಂಸ್ಥಿಕ ವ್ಯವಸ್ಥೆ

6 ರಾಜ್ಯ/ಜಿಲ್ಲಾ ಐಸಿಡಿಎಸ್ ಯೋಜನೆ (ಎಪಿಐಪಿ)

7 ಹಣಕಾಸು ಸಂಪನ್ಮೂಲಗಳು ಮತ್ತು ಅನುದಾನದ ಹರಿವು

7.1 ಅಂಗನವಾಡಿ ಕೇಂದ್ರ(ಎಡಬ್ಲ್ಯುಸಿ)ಗಳ ನಿರ್ಮಾಣ

7.2 ಅಂಗನವಾಡಿ ಕೇಂದ್ರಗಳ ಬಾಡಿಗೆ

7.3 ಪೂರಕ ಪೋಷಕಾಂಶ

7.4 ವರ್ಗೀಕರಣ ಮತ್ತು ಮಾನ್ಯತೆ

7.5 ಕಾರ್ಯನಿರ್ವಹಣೆ ವೆಚ್ಚ

7.6 ಆಯವ್ಯಯ

7.7 ಅನುದಾನದ ಬಿಡುಗಡೆ ಮತ್ತು ಅನುದಾನದ ಹರಿವು

8. ಪರಾಮರ್ಶನ, ಅವಲೋಕನ ಮತ್ತು ಮೌಲ್ಯಮಾಪನ

9 ದೂರುಗಳ ಪರಿಹಾರ ವ್ಯವಸ್ಥೆ

10 ಅನುಬಂಧಗಳು

## 1. ಸಂದರ್ಭ

1.1 ಸವಾಲು: ಭಾರತವು 0-6 ವರ್ಷ ವಯೋಮಿತಿಯ 158.7 ದಶಲಕ್ಷ ಮಕ್ಕಳ ನಿವಾಸ. 0-4 ವರ್ಷ ವಯೋಮಾನದ ಮಕ್ಕಳಲ್ಲಿ ಅಂದಾಜು ಶೇ.20 ರಷ್ಟು ಮಕ್ಕಳನ್ನು ಹೊಂದಿರುವ ಭಾರತವು ಜಗತ್ತಿನ ಅತ್ಯಂತ ಹೆಚ್ಚು ಮಕ್ಕಳು ಇರುವ ನೆಲೆಯಾಗಿದೆ[1].

ಆರ್ಥಿಕತೆ ಮತ್ತು ಸಾಕ್ಷರತೆಯಲ್ಲಿ ಹೆಚ್ಚಳವಾಗಿದ್ದರೂ, ಮಕ್ಕಳ ಒಟ್ಟಾರೆ ಬೆಳವಣಿಗೆಯನ್ನು ಅರ್ಥ ಮಾಡಿಕೊಳ್ಳುವುದು, ಒಳಗೊಳ್ಳುವುದು ಮತ್ತು ಸಮರೂಪಗೊಳಿಸುವಲ್ಲಿ ಹಾಗೂ ಮುಖ್ಯವಾಗಿ, ಈ ಕ್ಷೇತ್ರದಲ್ಲಿ ಹೂಡಿಕೆ ಕಡಿಮೆ ಆಗಿದೆ ಎಂಬ ಬಗ್ಗೆ ನಮ್ಮಲ್ಲಿ ಅರಿವು ಕಡಿಮೆ ಇದೆ.

ಶೇ.40 ರಷ್ಟು ಮಕ್ಕಳು ಪೋಷಕಾಂಶ ಕೊರತೆಯಿಂದ ಬಳಲುತ್ತಿದ್ದು ಅವರ ಬೆಳವಣಿಗೆ ಮತ್ತು ಪ್ರಗತಿಗೆ ಜೀವಮಾನದಲ್ಲಿ ಮುಂದೆಂದೂ ಸರಿಯಾಗದಂತೆ ಅಡ್ಡಿಯುಂಟಾಗಿದೆ. ಹಲವು ರಾಷ್ಟ್ರೀಯ ಕಾರ್ಯಕ್ರಮ ಸೇರಿದಂತೆ ಬಲಿಷ್ಠ ಸಾಂವಿಧಾನಿಕ, ಶಾಸನಾತ್ಮಕ ಕಾರ್ಯನೀತಿ ಹಾಗೂ ಕಾರ್ಯಕ್ರಮಗಳಿದ್ದರೂ, ಮಕ್ಕಳ ಆರಂಭಿಕ ಬೆಳವಣಿಗೆಯ ಫಲಿತಾಂಶಗಳ ಸುಧಾರಣೆಯು ಇಂದಿಗೂ ನಿಜವಾದ ಸವಾಲಾಗಿದೆ. ಮಕ್ಕಳ ಒಟ್ಟಾರೆ ಬೆಳವಣಿಗೆ ಮತ್ತು ಪ್ರಗತಿಯನ್ನು ಕಾಯ್ದುಕೊಳ್ಳಲು ವಿನ್ಯಾಸ, ವಿತರಣೆ ಮತ್ತು ಮಾನವ ಹಾಗೂ ಹಣಕಾಸು ಸಂಪನ್ಮೂಲ ನೀಡಿಕೆಯ ಎಲ್ಲ ಹಂತದಲ್ಲೂ ಹೆಚ್ಚು ಹೂಡಿಕೆ, ಹೆಚ್ಚು ಬದ್ಧತೆ ಅಗತ್ಯವಿದೆ.

### 1.2 ಐಸಿಡಿಎಸ್ : ವಿಕಾಸ ಮತ್ತು ಪ್ರಗತಿ

1975ರಲ್ಲಿ ಚಾಲನೆಗೊಂಡ ಐಸಿಡಿಎಸ್ ಎಳೆಯ ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುತ್ತಿರುವ ತಾಯಂದಿರ ಆರೋಗ್ಯ ರಕ್ಷಣೆ, ಪೋಷಕಾಂಶ ಹಾಗೂ ಬೆಳವಣಿಗೆಯ ಅಗತ್ಯಗಳ ಪೂರೈಸುವಿಕೆಯನ್ನು ಗುರಿಯಾಗುಳ್ಳ ಮಕ್ಕಳ ಆರಂಭಿಕ ಬೆಳವಣಿಗೆಯ ಅಭಿವೃದ್ಧಿಯ ವಿಶಿಷ್ಟ

[1] 2008ರ ವಿಶ್ವ ಜನಸಂಖ್ಯಾ ಮುನ್ನೋಟದ ಪ್ರಕಾರ, ಪರಿಷ್ಕರಣೆ ಜನಸಂಖ್ಯೆಯ ಡೇಟಾಬೇಸ್, 2010ರಲ್ಲಿ ಭಾರತದಲ್ಲಿರುವ 0-4 ವರ್ಷದ ಮಕ್ಕಳ ಅಂದಾಜು ಸಂಖ್ಯೆ 126 ದಶಲಕ್ಷ (ಚೀನಾ 88 ದಶಲಕ್ಷ). ಭಾರತದಲ್ಲಿ ಅದೇ ವರ್ಷದಲ್ಲಿ 0-14 ವರ್ಷದ ಮಕ್ಕಳ ಸಂಖ್ಯೆ 374 ದಶಲಕ್ಷ (ಚೀನಾ 269 ದಶಲಕ್ಷ).

ಕಾರ್ಯಕ್ರಮ. 35 ವರ್ಷಗಳ ಬಳಿಕ 1975ರಲ್ಲಿ ಆಯ್ಕೆ ಮಾಡಿಕೊಂಡ 33 ಸಮುದಾಯ ಅಭಿವೃದ್ಧಿ ಘಟಕಗಳಿಂದ ದೇಶದೆಲ್ಲೆಡೆಯ ಜನವಸತಿ (14 ಲಕ್ಷ)ಗಳಿಗೆ ಅದು ವಿಸ್ತರಿಸಿದೆ. ಆದರೆ, ವಿಸ್ತರಣೆಯ ಹೆಚ್ಚು ಭಾಗ (ಶೇ.50ಕ್ಕಿಂತ ಅಧಿಕ) 2005ರ ನಂತರ ಆಗಿದೆ. ಮಕ್ಕಳ ಆರಂಭಿಕ ಬೆಳವಣಿಗೆಯು ಮಾನವ ಅಭಿವೃದ್ಧಿಯ ಬುನಾದಿ ಎಂಬು ದನ್ನು ಪರಿಗಣಿಸಿ, ಸಮುದಾಯಗಳು ಹಾಗೂ ಪಾಲಕರ ಸಾಮರ್ಥ್ಯವನ್ನು ಬಲಪಡಿಸುವ ಮೂಲಕ ಆರು ವರ್ಷದೊಳಗಿನ ಮಕ್ಕಳ ಒಟ್ಟಾರೆ ಬೆಳವಣಿಗೆಯನ್ನು ಉತ್ತೇಜಿಸುವಂತೆ ಐಸಿಡಿಎಸ್‌ನ್ನು ವಿನ್ಯಾಸಗೊಳಿಸ ಲಾಗಿದೆ. ಈ ಗುಂಪಿನಲ್ಲಿ ತೀವ್ರವಾಗಿ ಬೆಳವಣಿಗೆಯಾಗುವ ಮತ್ತು ಹಾಗೆಯೇ ಹೆಚ್ಚು ದುರ್ಬಲ ಸ್ಥಿತಿಯಲ್ಲಿರುವ ಅವಸ್ಥೆಯಾದ ಜನನದ ನಂತರದ 3 ವರ್ಷಗಳ ಕೆಳಗಿನ ಹಂತಕ್ಕೆ ಆದ್ಯತೆ ನೀಡಲಾಗಿದೆ. ಕಡಿಮೆ ಆದಾಯದ ಹಾಗೂ ದುರ್ಬಲ ಗುಂಪುಗಳನ್ನು ನಿರ್ದಿಷ್ಟವಾಗಿ ಗುರಿಯಾಗಿಸಿಕೊಂಡು ಅಸಮತೆಯನ್ನು ಪರಿಣಾಮಕಾರಿಯಾಗಿ ಕಡಿಮೆಗೊಳಿಸಲು ಈ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ. ಸಮುದಾಯಗಳು ಮತ್ತು ಇನ್ನಿತರ ವ್ಯವಸ್ಥೆಗಳಾದ ಪ್ರಾಥಮಿಕ ಆರೋಗ್ಯ ರಕ್ಷಣೆ, ಶಿಕ್ಷಣ, ನೀರು ಮತ್ತು ನೈರ್ಮಲ್ಯ ಮತ್ತಿತರ ವ್ಯವಸ್ಥೆಗಳನ್ನು ಏಕತ್ರಗೊಳಿಸುವ ವೇದಿಕೆಯನ್ನು ಐಸಿಡಿಎಸ್ ಒದಗಿಸುತ್ತದೆ. ಸಮರ್ಪಕ ಹೂಡಿಕೆ  ಮತ್ತು ಸಬಲಗೊಳಿಸುವ ಪರಿಸರವನ್ನು ಒದಗಿಸಿದಲ್ಲಿ ಮಕ್ಕಳು ಮತ್ತು ಮಹಿಳೆಯರು ಎದುರಿಸುವ ಅನನುಕೂಲತೆಗಳನ್ನು ಹಾಗೂ ತಲೆಮಾರುಗಳಿಂದ ಮುಂದುವರಿದಿರುವ ಅಪೌಷ್ಟಿಕತೆಯ ಆವೃತ್ತವನ್ನು ಛಿದ್ರ ಗೊಳಿಸುವ ಸಾಮರ್ಥ್ಯ ಈ ಕಾರ್ಯಕ್ರಮಕ್ಕೆ ಇದೆ.

ಭಾರತ: 0-6 ವರ್ಷದ ಮಕ್ಕಳ ಪರಿಸ್ಥಿತಿ

* ಜಗತ್ತಿನಲ್ಲಿರುವ 5 ರಲ್ಲಿ ಒಂದು ಮಗು ಭಾರತದಲ್ಲಿದೆ

* 0-6 ವರ್ಷ (2011ರ ಜನಗಣತಿ)

ಒಟ್ಟು ಮಕ್ಕಳು 15.87 ಕೋಟಿ; ಬಾಲಕರು 8.29 ಕೋಟಿ, ಬಾಲಕಿಯರು 7.58 ಕೋಟಿ

2001ರ ಜನಗಣತಿಗೆ ಹೋಲಿಸಿದರೆ 5 ದಶಲಕ್ಷ ಕಡಿಮೆಯಾಗಿದ್ದಾರೆ. ಹೆಣ್ಣು ಮಕ್ಕಳ ಸಂಖ್ಯೆಯಲ್ಲಿ ಹೆಚ್ಚು ಕುಸಿತ : 30 ಲಕ್ಷ. * ಮಕ್ಕಳ ಜನನ: ವಾರ್ಷಿಕ 2.5 ಕೋಟಿ; ಉಳಿಯುವ ಮಕ್ಕಳು 1.75 ಕೋಟಿ * ಮಕ್ಕಳ ಸಾವು: ವಾರ್ಷಿಕ 0.8 ಕೋಟಿ : ನಾಪತ್ತೆಯಾಗುವ ಬಾಲಕಿಯರು: 0.4-0.5 ಕೋಟಿ

* ಮಕ್ಕಳ ಲಿಂಗಾನುಪಾತ ಕುಸಿತ : 1,00ಕ್ಕೆ 927 ರಿಂದ 914

* ಐಎಂಆರ್; ಗಂಡು 46, ಹೆಣ್ಣು 49 (ಎಸ್‌ಆರ್‌ಎಸ್ 2010)

*. ಯು5ಎಂಆರ್; ಭಾರತ 59, ಬಾಲಕರು-55, ಬಾಲಕಿಯರು-64(ಎಸ್‌ಆರ್‌ಎಸ್2010)

* ಎಲ್‌ಬಿಡಬ್ಲ್ಯು ಮಕ್ಕಳು: ಶೇ.22 (ಎನ್‌ಎಫ್‌ಎಚ್‌ಎಸ್ 3)(ಎಸ್‌ಆರ್‌ಎಸ್2010)

* ಸಂಪೂರ್ಣ ಲಸಿಕೆ ತೆಗೆದುಕೊಂಡವರು: ಶೇ.44 (ಎನ್‌ಎಫ್‌ಎಚ್‌ಎಸ್ 3)

* 0-5 ವರ್ಷದೊಳಗಿನ ಶೇ.42.5 ಮಕ್ಕಳು ಕಡಿಮೆ ತೂಕ ಹೊಂದಿರುತ್ತಾರೆ(ಎನ್‌ಎಫ್‌ಎಚ್‌ಎಸ್ 3)

* ಶೇ.79 ಮಕ್ಕಳು (6-35 ತಿಂಗಳು) ರಕ್ತಹೀನತೆಯಿಂದ ಬಳಲುತ್ತಾರೆ (ಎನ್‌ಎಫ್‌ಎಚ್‌ಎಸ್ 3)

1.3 ಹೊರಹೊಮ್ಮುತ್ತಿರುವ ವಿಷಯಗಳು ಮತ್ತು ಕಂದರಗಳು:

ವರ್ಷಗಳು ಕಳೆದಂತೆ ಬೇರೆ ಬೇರೆ ರಾಜ್ಯಗಳಲ್ಲಿ ವಿತರಣೆ ವಿಧಾನ, ಏಕತ್ರಗೊಳಿಸುವಿಕೆ, ಸಮುದಾಯ ಮತ್ತು ಎನ್‌ಜಿಒ ಸಹಭಾಗಿತ್ವ, ಸೇವಾವಧಿ, ಲಭ್ಯ ಸಂಪನ್ಮೂಲ ಮತ್ತು ಮೂಲಸೌಲಭ್ಯ, ಗೌರವ ಕಾರ್ಮಿ ಕರಿಗೆ ವೇತನ, ಆಯ್ಕೆ ಪ್ರಕ್ರಿಯೆ ಇತ್ಯಾದಿಗೆ ಸಂಬಂಧಿಸಿದಂತೆ ಐಸಿಡಿಎಸ್ ವಿಕಾಸ ಹೊಂದಿದೆ. ಈ ವೈವಿಧ್ಯವು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಆಡಳಿತದ ಹಂತಗಳೊಟ್ಟಿಗೆ ಕೂಡ ತಳಕು ಹಾಕಿ ಕೊಂಡಿದೆ. ತಮಿಳುನಾಡು, ಗುಜರಾತ್, ಕರ್ನಾಟಕ, ಆಂಧ್ರಪ್ರದೇಶ, ಕೇರಳ, ರಾಜಸ್ಥಾನ, ಒರಿಸ್ಸಾ ಇತ್ಯಾದಿ ರಾಜ್ಯಗಳ ಸರ್ಕಾರಗಳು ಅಳವಡಿಸಿಕೊಂಡ ಅನ್ವೇಷಕ ಪ್ರವೃತ್ತಿಯ ಮತ್ತು ಯಶಸ್ವಿ ಮಾದರಿಗಳ ಉದಾ ಹರಣೆಯಿದ್ದು, ಇವು ಒಂದು ಅಥವಾ ಅದಕ್ಕಿಂತ ಹೆಚ್ಚು ಅಂಶಗಳು ಅಥವಾ ಹೊಸದಾಗಿ ಸೇರಿಸಿಕೊಂಡ ಅಂಶಗಳಿಂದಾಗಿ ಉತ್ತಮ ಫಲಿತಾಂಶ ಬಂದಿದ್ದು, ಅವುಗಳನ್ನು ಬೇರೆಡೆಯೂ ಅಳವಡಿಸಿಕೊಳ್ಳುವ ಸಾಮರ್ಥ್ಯ ಹೊಂದಿರುತ್ತವೆ. ಈ ಕಾರ್ಯಕ್ರಮವು ಒಟ್ಟಾರೆಯಾಗಿ ಪೋಷಕಾಂಶಗಳನ್ನು ಪೂರೈಸುವ ಮತ್ತು ಸೂಕ್ತವಾದ ಹೂಡಿಕೆ, ಬೆಂಬಲ ನೀಡಿದಲ್ಲಿ ಹಾಗೂ ಉತ್ತಮವಾಗಿ ನಿರ್ವಹಿಸಿದಲ್ಲಿ, ಆರಂಭಿಕ ಬಾಲ್ಯ ಕಾಲದ ಫಲಿತಾಂಶಗಳನ್ನು ನೀಡಬಲ್ಲ ಸಾಮರ್ಥ್ಯವನ್ನು ಹೊಂದಿದೆ.

(I) ಸಾರ್ವತ್ರೀಕರಣದ ಸವಾಲುಗಳು:

2008-09ರಲ್ಲಿ ಕಾರ್ಯಕ್ರಮವನ್ನು ಸಾರ್ವತ್ರೀಕರಿಸಲಾಯಿತು. 2007ರಲ್ಲಿ 8.44 ಲಕ್ಷದಷ್ಟಿದ್ದ ಎಡಬ್ಲ್ಯುಸಿಗಳು ಆಗಸ್ಟ್ 2012 ರಲ್ಲಿ 13.19 ಲಕ್ಷಕ್ಕೆ ಹಾಗೂ 2012ರ ಅಂತ್ಯದಲ್ಲಿ 14 ಲಕ್ಷಕ್ಕೆ ವಿಸ್ತರಿಸಿದವು. ಆದರೆ, ಸಂಖ್ಯೆಗಳ ಹೆಚ್ಚಳಕ್ಕೆ ಅನುಗುಣವಾಗಿ ಮಾನವ ಹಾಗೂ ಹಣಕಾಸು ಸಂಪನ್ಮೂಲ ಹೆಚ್ಚಳವಾಗದೆ, ಎಲ್ಲ ಹಂತದಲ್ಲೂ ಸರಣಿಯೋಪಾದಿಯಲ್ಲಿ ಸವಾಲುಗಳು ಎದುರಾದವು, ಸಾರ್ವತ್ರೀಕರಣದ ಜೊತೆಗೆ ಬಂದ ಮತ್ತು 3ನೇ ಹಂತದ ವಿಸ್ತರಣೆಯಿಂದ ಎದುರಾದ ಕೆಲವು ಸವಾಲುಗಳ ತಾತ್ಪರ್ಯವನ್ನು ಕೆಳಗೆ ನೀಡಲಾಗಿದೆ;

ಐಸಿಡಿಎಸ್ ಸಾರ್ವತ್ರೀಕರಣ ಮತ್ತು 3ನೇ ಹಂತದ ವಿಸ್ತರಣೆಗಳು: ಪ್ರಸ್ತುತ ಸವಾಲುಗಳು

ಐಸಿಡಿಎಸ್ ಯೋಜನೆಯ ಸಾರ್ವತ್ರೀಕರಣವು ಮಿಶ್ರಗೊಂಡ ವರದಂತೆ ಇದ್ದಿತ್ತು. ಎಡಬ್ಲ್ಯುಸಿಗಳ ಸಂಖ್ಯೆಯಲ್ಲಿ ಹೆಚ್ಚಳ ಮತ್ತು ಅವುಗಳನ್ನು ಸಣ್ಣ ಗುಂಪುಗಳಲ್ಲಿನ ಮಕ್ಕಳ ಮನೆಬಾಗಿಲಿಗೆ ಕೊಂಡೊಯ್ಯುವುದು ಸ್ವಾಗತಾರ್ಹ ಹೆಜ್ಜೆಯಾಗಿದ್ದರೂ, ಅದು(ಸಾರ್ವತ್ರೀಕರಣ) ತನ್ನೊಟ್ಟಿಗೆ ಸಂಪನ್ಮೂಲದ ಭಾರಿ ಸವಾಲನ್ನು ಹಾಗೂ ನಿರ್ವಹಣೆ, ಗುಣಮಟ್ಟ ಮತ್ತು ಮಾದರಿ ಸೇವೆಗಳ ವಿತರಣೆಯ ಭಾರಿ ಸವಾಲುಗಳನ್ನು ತಂದಿತು. ಸಾರ್ವತ್ರೀಕರಣದೊಂದಿಗೆ ಬಂದ ಹಾಗೂ 3ನೇ ಹಂತದ ವಿಸ್ತರಣೆಯ ಸವಾಲುಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ;

* ಸಾರ್ವತ್ರೀಕರಣದ ವಿಳಂಬ

* 2008-9ರಲ್ಲಿ ಸಾರ್ವತ್ರೀಕರಣಕ್ಕೆ ಅಂಗೀಕಾರ; 6,722 ಯೋಜನೆಗಳಿಗೆ ಚಾಲನೆ(ಮಾರ್ಚ್ 2011); 7,005 ಎಡಬ್ಲ್ಯುಸಿಗಳು ಸಕ್ರಿಯ(ಆಗಸ್ಟ್ 2012)

* 14 ಲಕ್ಷ ಜನವಸತಿ ಪ್ರದೇಶಗಳಲ್ಲಿ 7,076 ಯೋಜನೆಗಳು; 12.62 ಲಕ್ಷ ಎಡಬ್ಲ್ಯುಸಿಗಳು ಸಕ್ರಿಯ(ಮಾರ್ಚ್ 2011); 13.19 ಲಕ್ಷ ಎಡಬ್ಲ್ಯುಸಿಗಳು ಸಕ್ರಿಯ(ಆಗಸ್ಟ್ 2012)

* ಪೂರಕ ಪೋಷಕಾಂಶದ ವೆಚ್ಚ: ರೂ.1(1991-2004); 2-2.70 ರೂ.(2004-09); 4-6 ರೂ.(2009-10)

* ಪರಿಷ್ಕೃತ ಜನಸಂಖ್ಯಾ ಮಾದರಿಗಳಿಗೆ ಅನುಗುಣವಾಗಿಲ್ಲ.

* ಹರಿವಿನ ಪರಿಪೂರ್ಣತೆಯನ್ನು ಖಾತ್ರಿಗೊಳಿಸಲು ಮ್ಯಾಪಿಂಗ್(ಜಿಐಎಸ್) ಮತ್ತು ಭೂಭಾಗದ ದೃಢಪಡಿಸುವಿಕೆ ಇನ್ನೂ ಪೂರ್ಣಗೊಂಡಿಲ್ಲ.

* ಎಸ್ಎನ್‌ಪಿ ನಿರ್ವಹಣೆ ಮತ್ತು ಆಡಳಿತಾತ್ಮಕ ಸವಾಲುಗಳು:

* ಪರಿಷ್ಕೃತ ಪೋಷಕಾಂಶ ಮತ್ತು ವೆಚ್ಚ ಮಾದರಿಗಳ ಅಳವಡಿಸಿಕೊಳ್ಳುವಿಕೆ ಮತ್ತು ಅನುಸರಣೆ ಇನ್ನೂ ರಚನೆಯಾಗಬೇಕಿದೆ ಮತ್ತು ಸಂಪೂರ್ಣವಾಗಿ ಸಾಧಿಸಲು ಆಗಿಲ್ಲ.

* ವ್ಯಾಪ್ತಿಯ ಹೆಚ್ಚಳ ಮತ್ತು ವಿತರಣೆಯಲ್ಲಿನ ಗುಣಮಟ್ಟದ ಸುಧಾರಣೆ ಆಗಬೇಕಿದೆ.

* ಎಡಬ್ಲ್ಯುಸಿಗಳಿಗೆ ತಿಂಗಳಿಗೆ 25 ದಿನ ಅಡೆತಡೆಯಿಲ್ಲದೆ ವಿತರಣೆ ಮತ್ತು ಪೂರೈಕೆ ಸರಪಳಿ ಹಾಗೂ ಸರಕು ನಿರ್ವಹಣೆಯಲ್ಲಿ ಸುಧಾರಣೆ ಅಗತ್ಯವಿದೆ.

* ಹಣಕಾಸು ನಿರ್ವಹಣೆ ಹಾಗೂ ಎಸ್ಒಇ:

* ಅಂಶವಾರು ವೆಚ್ಚವನ್ನು ಒಳಗೊಂಡ ಎಸ್ಇಒಯೊಟ್ಟಿಗೆ ಬಳಕೆ ಪ್ರಮಾಣಪತ್ರ(ಯುಸಿ)ವನ್ನು ಸಕಾಲಕ್ಕೆ ಸಲ್ಲಿಸುವುದು

* ಎಸ್ಎನ್‌ಪಿ ಮತ್ತು ಐಸಿಡಿಎಸ್(ಜಿ) ಶರತ್ತುಗಳ ಅನ್ವಯ ಪಿಎಸ್ಇ, ವೈದ್ಯಕೀಯ ಕಿಟ್‌ಗಳು, ಪಿಒಎಲ್, ಫ್ಲೆಕ್ಸಿ ಫಂಡ್‌ಗಳ ಬಳಕೆ ಇತ್ಯಾದಿ ವೆಚ್ಚ ಸೇರಿದಂತೆ ಅನುದಾನದ ಬಳಕೆ

* ಅಂಗನವಾಡಿ ಕೇಂದ್ರಗಳಿಗೆ ಸ್ಥಳಾವಕಾಶ ಲಭ್ಯತೆಯ ಕೊರತೆ: ಮಾನವ ಸಂಪನ್ಮೂಲದ ಲಭ್ಯತೆ; ಭಾರಿ ಪ್ರಮಾಣದಲ್ಲಿ ಖಾಲಿ ಹುದ್ದೆಗಳು(ಆಗಸ್ಟ್ 2012)-ಸಿಡಿಪಿಒ/ಎಸಿಡಿಪಿಒ(ಶೇ.32), ಮೇಲ್ವಿಚಾರಕರು (ಶೇ.34), ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್(ಶೇ.8) ಇದ್ದು, ಐಸಿಡಿಎಸ್ ಅಧಿಕಾರಿಗಳಿಗೆ ಮುಡುಪಾಗಿಟ್ಟ ಶ್ರೇಣಿ ಮತ್ತು ತಂಡ ಹಾಗೂ ಸ್ಥಿರ ಅಧಿಕಾರಾವಧಿ ಅಗತ್ಯವಿದೆ ಹಾಗೂ ಐಸಿಡಿಎಸ್ ಅಧಿಕಾರಿಗಳು ಐಸಿಡಿಎಸ್‌ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳದೆ ಇರುವಂತೆ ನೋಡಿಕೊಳ್ಳಬೇಕಿದೆ. ಯಾವ ರೀತಿ ಕಾರ್ಯ ನಿರ್ವಹಿಸಬೇಕು ಎಂಬುದನ್ನು ಕಂಡುಕೊಳ್ಳಬೇಕು.

* ಅಂತರ್ ವಿಭಾಗೀಯ ಒಮ್ಮುಖತೆಗೆ ಸವಾಲುಗಳ ಹೆಚ್ಚಳ: ಶುದ್ಧ ಕುಡಿಯುವ ನೀರು ಮತ್ತು ಮಕ್ಕಳಸ್ನೇಹಿ ಶೌಚಾಲಯ, ಮೂರೂ ಸೇವೆಗಳ ವಿತರಣೆಗೆ ಜಂಟಿ ವ್ಯವಸ್ಥೆ; ಲಸಿಕೀಕರಣ, ಆರೋಗ್ಯ ಪರೀಕ್ಷೆ ಮತ್ತು ನೆರವು, ಜಂಟಿ ಮನೆ ಭೇಟಿಗಳು, ನಿರ್ವಹಣೆ ಮತ್ತು ಪೋಷಕಾಂಶ ಕೊರತೆ ಇರುವ ಮಕ್ಕಳ ಉಪಚಾರ, ಎನ್‌ಆರ್‌ಸಿ ಮತ್ತು ಎಂಟಿಸಿ ಜೊತೆಗೆ ಜೋಡಿಸುವಿಕೆ.

* ಬೆಳವಣಿಗೆಯ ಪರಾಮರ್ಶನ, ಇಸಿಸಿಇ ಮತ್ತು ಪಿಎಸಿ ಕಿಟ್‌ಗಳ ಬಗ್ಗೆ ಕಡಿಮೆ ಲಕ್ಷ್ಯ: ಜಂಟಿ ಎಂಸಿಸಿ ಕಾರ್ಡ್‌ಗಳನ್ನು ಬಿಡುಗಡೆಗೊಳಿಸುವುದು ಹಾಗೂ ಪಿಎಸ್‌ಸಿ ಕಿಟ್‌ಗಳ ಲಭ್ಯತೆಯನ್ನು ಖಾತ್ರಿಗೊಳಿಸುವುದು

* ಆರಂಭಿಕ ಬಾಲ್ಯಾವಸ್ಥೆಯ ಶಿಕ್ಷಣದ ಬಗ್ಗೆ ಕಡಿಮೆ ಗಮನ: ಕಾರ್ಯನೀತಿ, ಪಠ್ಯಕ್ರಮ ಚೌಕಟ್ಟು ಹಾಗೂ ಮಾರ್ಗದರ್ಶಿ ಚೌಕಟ್ಟು ಹಾಗೂ ಮಾರ್ಗದರ್ಶಿ ಸೂತ್ರಗಳ ಅಗತ್ಯ.

* ತರಬೇತಿ, ಪರಾಮರ್ಶನ, ಎಂಐಎಸ್ ಮತ್ತು ಐಟಿಸಿಯ ಬಲವರ್ಧನೆಯ ಸವಾಲುಗಳು; ವಿಭಾಗಾಂತರ, ಲಂಬ ಹಾಗೂ ಸಮತಲ ಒಮ್ಮುಖತೆ, ವಿಷಯ ಮತ್ತು ತರಬೇತಿ ಘಟಕಗಳ ಭಾಗವಹಿಸುವಿಕೆ, ಎಡಬ್ಲ್ಯುಟಿಸಿಗಳು ಮತ್ತು ಎಂಎಲ್‌ಟಿಸಿಗಳಿಗೆ ಸಮಯಕ್ಕೆ ಸರಿಯಾಗಿ ಅನುದಾನ ಬಿಡುಗಡೆಗೆ ಮಾರ್ಗದರ್ಶಿ ಸೂತ್ರಗಳ ಅನುಷ್ಠಾನ.

(II) ಕಾರ್ಯಕಾರಿತ್ವ ಮತ್ತು ಕಾರ್ಯಾಚರಣೆಯಲ್ಲಿನ ಕಂದರಗಳು: ವಿವಿಧ ಅಧ್ಯಯನಗಳಿಂದ ಬಂದ ಕಲಿಕೆ, ರಾಜ್ಯಗಳು ಸರಣಿಯಲ್ಲಿ ನಡೆಸಿದ ಸಲಹಾಸಭೆಗಳ ಒಳಸುರಿ ಹಾಗೂ ರಾಜ್ಯಗಳ ವಾರ್ಷಿಕ ಕಾರ್ಯಕ್ರಮ ಅನುಷ್ಠಾನ ಯೋಜನೆ(ಎಪಿಐಪಿ)ಗಳ ವರದಿಯನ್ನು ಆಧರಿಸಿ, ಹಾಲಿ ಐಸಿಡಿಎಸ್ ಯೋಜನೆಯ ಅನುಷ್ಠಾನ, ನಿರ್ವಹಣೆ, ಮೇಲ್ವಿಚಾರಣೆ ಹಾಗೂ ಪರಾಮರ್ಶನದಲ್ಲಿನ ಪ್ರಮುಖ ಕಂದರಗಳನ್ನು ಗುರುತಿಸಲಾಗಿದೆ. ಐಸಿಡಿಎಸ್ ಯೋಜನೆಯ ಪರಿಣಾಮಕಾರಿ ಅನುಷ್ಠಾನದಲ್ಲಿನ ಮುಖ್ಯ ಕಂದರಗಳನ್ನು 2 ವಿಶಾಲ ವಿಭಾಗಗಳಲ್ಲಿ, ಅಂದರೆ, ಕಾರ್ಯಕ್ರಮದಲ್ಲಿನ ಕಂದರಗಳು ಹಾಗೂ ಕಾರ್ಯಾಚರಣೆಯಲ್ಲಿನ ಕಂದರಗಳು, ಇವುಗಳ ಬಗ್ಗೆ ಕೆಳಗೆ ಚರ್ಚಿಸಲಾಗಿದೆ;

* ಕಾರ್ಯಾಚರಣೆಯಲ್ಲಿನ ಕಂದರಗಳು: ದೇಶದ ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಐಸಿಡಿಎಸ್ ಕಾರ್ಯಕ್ರಮದ ಅನುಷ್ಠಾನ ಒಂದೇ ರೀತಿ ಇಲ್ಲ. ಕಾರ್ಯಕ್ರಮದಲ್ಲಿ ಅನೇಕ ವ್ಯತ್ಯಾಸಗಳಿದ್ದು, ಇದರಲ್ಲಿ ಕೆಲವು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಾರ್ವತ್ರಿಕವಾಗಿದ್ದರೆ, ಇನ್ನು ಕೆಲವು ರಾಜ್ಯಗಳಿಗೆ ನಿರ್ದಿಷ್ಟವಾಗಿರುವಂಥವು. ಸಾರ್ವತ್ರೀಕರಣವು ಒಂದು ರೀತಿ ಕೆಲವು ವ್ಯತ್ಯಾಸಗಳನ್ನು ಗಂಭೀರಗೊಳಿಸಿಬಿಟ್ಟಿದೆ. ಅವುಗಳೆಂದರೆ.,

* ಕ್ಷಮತೆ ಮತ್ತು ದಕ್ಷತೆಯಿಂದ ಕಾರ್ಯ ನಿರ್ವಹಿಸಲು ಅಗತ್ಯವಾದ ಮೂಲಸೌಲಭ್ಯ(ಕಟ್ಟಡ) ಮತ್ತು ಸೌಕರ್ಯಗಳು ಇಲ್ಲದೆ ಇರುವುದು (ಬಿ) ಸುಧಾರಿತ ಗುಣಮಟ್ಟದ ವಿವಿಧ ಸೇವೆಗಳನ್ನು ನೀಡಲು ಅಗತ್ಯವಾದ ಮಾನವ ಸಂಪನ್ಮೂಲದ ಸಂಖ್ಯೆ ಹಾಗೂ ಗುಣಮಟ್ಟದ ಅಡೆತಡೆಗಳು (ಸಿ) 3ಎಸ್ ಕಡೆಗೆ ಕಡಿಮೆ ಗಮನ (ಡಿ) ಎಡಬ್ಲ್ಯುಸಿಗೆ ಸಂಬಂಧಿಸಿದ ಕೆಲಸಗಳಲ್ಲಿ ಎಡಬ್ಲ್ಯುಡಬ್ಲ್ಯುಗಳು ಹೆಚ್ಚು ಕಾಲ ತೊಡಗಿಸಿಕೊಳ್ಳು ವುದರಿಂದ, ಆರಂಭಿಕ ಬಾಲ್ಯಾವಸ್ಥೆಯ ವಿದ್ಯಾಭ್ಯಾಸ(ಇಸಿಇ)ಕ್ಕೆ ಹೆಚ್ಚು ಗಮನ ನೀಡಲಾಗದೆ ಇರುವುದು (ಇ) ಅಧಿಕ ಕೆಲಸದ ಭಾರ ಹಾಗೂ ಕಡಿಮೆ ವೇತನ ಪಡೆಯುವ ಎಡಬ್ಲ್ಯುಡಬ್ಲ್ಯುಗಳು ನಡೆಸುವ ಉಣಿಸುವ ಕೇಂದ್ರಗಳು ಎಂದು ಪರಿಗಣಿಸಲ್ಪಟ್ಟಿರುವುದು (ಎಫ್) ಮಕ್ಕಳ ಅಭಿವೃದ್ಧಿಗೆ ಮಾನವ ಹಾಗೂ ಹಣಕಾಸು ಸೇರಿದಂತೆ ಕಡಿಮೆ ಸಂಪನ್ಮೂಲ ಹೂಡಿಕೆ(ಇ) ಕಾರ್ಯಕ್ರಮಗಳು/ಸೇವೆಗಳ ಅಸಮರ್ಪಕ ಏಕತ್ರಗೊಳಿಸುವಿಕೆ-ಸಾರ್ವಜನಿಕ ಆರೋಗ್ಯ ವ್ಯವಸ್ಥೆಯೊಂದಿಗೆ ದುರ್ಬಲ ಜೋಡಣೆ (ಎಚ್) ಕಾರ್ಯಕ್ರಮ ಅನುಷ್ಠಾನದ ಬಹುಪಾಲನ್ನು ರಾಜ್ಯಗಳಿಗೆ ಬಿಡಲಾಗಿರುವುದು (ಐ) ಸಮುದಾಯದ ಒಳಗೊಳ್ಳುವಿಕೆ ಮತ್ತು ಸಹಭಾಗಿತ್ವ ಇಲ್ಲದೆ ಇರುವುದರಿಂದ, ಸೇವೆಗೆ ಕಡಿಮೆ ಬೇಡಿಕೆ (ಜೆ) ಅಸಮರ್ಪಕ ಹಾಗೂ ಸೂಕ್ತವಲ್ಲದ ತರಬೇತಿ (ಜೆ) ಅಂಕಿಅಂಶ, ಮಾಹಿತಿ ವ್ಯವಸ್ಥೆ(ಎಂಐಎಸ್) ವಿಶ್ಲೇಷಣೆ ಮತ್ತು ವರದಿಗಾರಿಕೆ ದುರ್ಬಲವಾಗಿರುವುದು (ಎಲ್) ಕಾರ್ಯಕ್ರಮದ ಅನುಷ್ಠಾನವು ನಿರ್ದಿಷ್ಟ ಕಾಲಾವಧಿಗೊಮ್ಮೆ ಪರಿಷ್ಕರಣೆಯಾಗುವ ಕಚೇರಿ ಆದೇಶ/ಸುತ್ತೋಲೆಗಳ ಹಾಗೂ ನಿಯಮಗಳ ಮೂಲಕ ನಡೆಸಲ್ಪಡುವುದು (ಎಂ) ಕಾರ್ಯಕ್ರಮಕ್ಕೆ ಸಮಗ್ರ ಮಾರ್ಗದರ್ಶಿ ಸೂತ್ರಗಳು ಇಲ್ಲದೆ ಇರುವುದು ಮತ್ತು (ಎನ್) ಕೆಲಸದಲ್ಲಿ ತೊಡಗಿರುವ

ಮಹಿಳೆಯರ ಅಗತ್ಯಗಳ ಬಗ್ಗೆ ಕಡಿಮೆ ಅಥವಾ ಯಾವುದೇ ಗಮನ ನೀಡದೆ ಇರುವುದು-ಶಿಶುವಿಹಾರ ಮತ್ತು ಡೇಕೇರ್ ಸೇವೆಗಳಿಗೆ ಪ್ರವೇಶಾವಕಾಶ ಮತ್ತು ಲಭ್ಯತೆ(ಪ್ರಸ್ತುತ ಕಾರ್ಯಕ್ರಮದ ಭಾಗವಲ್ಲ).

* ಕಾರ್ಯಕಾರಿತ್ವದ ಸಂಗತಿಗಳು: ಐಸಿಡಿಎಸ್ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹಲವು ಕಾರ್ಯಕಾರಿತ್ವದ ಕಂದರಗಳಿದ್ದು, ಅವುಗಳೆಂದರೆ,

(ಎ). ರಾಷ್ಟ್ರೀಯ, ರಾಜ್ಯ, ಜಿಲ್ಲೆ ಮತ್ತು ಗ್ರಾಮೀಣ ಮಟ್ಟದಲ್ಲಿ ಮೂಲಸೌಲಭ್ಯ ಮತ್ತು ಮಾನವಸಂಪನ್ಮೂಲ ಹಾಗೂ ಚಲನಶೀಲತೆ ಇತ್ಯಾದಿ ಕೊರತೆ ಹಾಗೂ ಉತ್ತರದಾಯಿತ್ವದ ಕೊರತೆ(ಹೆಚ್ಚು ಖಾಲಿ ಹುದ್ದೆಗಳು, ಶೈಕ್ಷಣಿಕ ಅರ್ಹತೆ ಮತ್ತು ಸಂಖ್ಯೆಯಲ್ಲಿ ಕೊರತೆ) (ಬಿ) 2005-6ಕ್ಕೆ ಮುನ್ನ ಎಸ್‌ಎನ್‌ಪಿಯ ವೆಚ್ಚವನ್ನು ಹಂಚಿಕೊಳ್ಳದ್ದರಿಂದ, ಪೂರಕ ಪೋಷಕಾಂಶದ ವಿತರಣೆ, ಆನಂತರ ಬೆಳಗಿನ ಉಪಾಹಾರ ಮತ್ತು ಬಿಸಿಯೂಟ ಪೂರೈಸಬೇಕಾದ್ದರಿಂದ ಉದ್ಭವಿಸಿದ ಎಸ್‌ಎನ್‌ಪಿಯ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳು (ಸಿ) ಆಹಾರ, ಇಂಧನ ಮತ್ತು ಸಾಗಣೆ ಇತ್ಯಾದಿ ವೆಚ್ಚ ಹೆಚ್ಚಾದರೂ ದರ ಮರುಪರಿಶೀಲನೆ ಮತ್ತು ಮರುವರ್ಗೀಕರಣ ಮಾಡದೆ ಇರುವುದು (ಡಿ) ಕಾರ್ಯಕ್ರಮವನ್ನು ಸಮುದಾಯ ಚಾಲಿತ ಎಂದಿದ್ದರೂ, ವಾಸ್ತವದಲ್ಲಿ ಅದು ರಾಜ್ಯಚಾಲಿತ ಕಾರ್ಯಕ್ರಮವಾಗಿ ವಿಕಾಸಗೊಂಡಿರುವುದು (ಇ) ಕೆಲಸದ ನಿಗದಿತ ಸಮಯ, ದಿನಗಳ ಸಂಖ್ಯೆ ಮತ್ತು ಸೇವಾ ನಿಯಮಗಳ ಅನ್ವಯ ಎಡಬ್ಲ್ಯುಸಿಯ ಕಾರ್ಯನಿರ್ವಹಣೆಯನ್ನು ನಿಯತಗೊಳಿಸುವುದು (ಎಫ್) ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳಿಂದಾಗಿ ಸಾರ್ವತ್ರೀಕರಣದ ವೇಗ ನಿಧಾನಗೊಂಡಿರುವುದು (ಜಿ) ಅನುದಾನ ವರ್ಗಾವಣೆ ಕಾರ್ಯತಂತ್ರದಲ್ಲಿ ವಿಳಂಬದಿಂದಾಗಿ, ಎಡಬ್ಲ್ಯುಡಬ್ಲ್ಯು ವೇತನ ಹಾಗೂ ಎಸ್‌ಎನ್‌ಪಿಗೆ ಅನುದಾನ ಬಿಡುಗಡೆ ವಿಳಂಬಕ್ಕೆ ಕಾರಣವಾಗುತ್ತದೆ (ಎಚ್) ಅಂಕಿಅಂಶದ ಕೊರತೆ ಹಾಗೂ ಅಂಕಿಅಂಶಗಳನ್ನು ಬಳಸದೆ ಇರುವುದರಿಂದ, ಮಾಹಿತಿ ವ್ಯವಸ್ಥೆಯ ನಿರ್ವಹಣೆ(ಎಂಐಎಸ್)ಯಲ್ಲಿ ಅಸಮರ್ಪಕತೆಯಿಂದಾಗಿ, ಅನುಷಂಗಿಕ ಪರಾಮರ್ಶೆ ದುರ್ಬಲವಾಗಿ ಮುಂದುವರಿದಿರುವುದು ಮತ್ತು (ಐ) ಪ್ರತಿಯೊಂದು ಎಡಬ್ಲ್ಯುಡಬ್ಲ್ಯು ಮತ್ತು ಐಸಿಡಿಎಸ್‌ನಲ್ಲಿರುವ ಒಬ್ಬರೇ ಎಡಬ್ಲ್ಯುಸಿ ಮೇಲೆ ಐಸಿಡಿಎಸ್‌ಗೆ ಸಂಬಂಧಿಸದ ಕೆಲಸಗಳನ್ನು ಹೇರಿರುವುದು.

1.4 ಬದಲಾವಣೆಯ ವಾತಾವರಣ:

ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು 11ನೇ ಪಂಚವಾರ್ಷಿಕ ಯೋಜನೆಯ ಮಧ್ಯಂತರ ಮೌಲ್ಯಮಾಪನದ ಬಳಿಕ ಐಸಿಡಿಎಸ್ ಬದಲಾವಣೆಗೆ ಸೂಕ್ತವಾದ ವಾತಾವರಣವನ್ನು ಸೃಷ್ಟಿಸಲು, ಬಲದುಂಬಲು ಮತ್ತು ಪುನರ್ವಿನ್ಯಾಸಗೊಳಿಸಲು ಮತ್ತು ಭಾರತದ ಪೋಷಕಾಂಶ ಸವಾಲುಗಳನ್ನು ನಿವಾರಿಸಲು ಜಂಟಿ ಕಾರ್ಯತಂತ್ರ ದಾಖಲೆಯನ್ನು ಸಿದ್ಧಗೊಳಿಸಬೇಕಾದ ಸಂದರ್ಭ ದಲ್ಲಿ ಹಲವು ಉಪಕ್ರಮಗಳನ್ನು ಆರಂಭಿಸಿದೆ. ಐಸಿಡಿಎಸ್‌ನ್ನು ಶಕ್ತಗೊಳಿಸುವುದು ಮತ್ತು ಮರುವಿನ್ಯಾಸಗೊಳಿಸುವುದು ಈ ಕಾರ್ಯತಂತ್ರದ ಕೇಂದ್ರ ಬಿಂದುವಾಗಿದ್ದು, ನಾನಾ ಹಂತಗಳಲ್ಲಿ ಸರಣಿಯೋಪಾದಿಯ ಸಲಹಾ ಸಭೆಗಳನ್ನು ನಡೆಸಿ, ಚರ್ಚಿಸಲಾಗಿದೆ. ಈ ಸಲಹಾಸಭೆಗಳನ್ನು ವಿವಿಧ ಹಂತದಲ್ಲಿ ಸಂಬಂಧಿಸಿದ ಎಲ್ಲರೊಡನೆ, ಸಹಭಾಗಿಗಳು ಮತ್ತು ರಾಜ್ಯಗಳ ಡಬ್ಲ್ಯುಸಿಡಿ ಕಾರ್ಯದರ್ಶಿಗಳೊಡನೆಯೂ ನಡೆಸಲಾಗಿದ್ದು, ಭಾರತದ ಪೋಷಕಾಂಶ ಸವಾಲುಗಳನ್ನು ನಿವಾರಿಸಲು ಸಮಗ್ರ ಕಾರ್ಯತಂತ್ರ ಮತ್ತು ಕ್ರಿಯೆಗಳನ್ನು ಕಂಡುಕೊಳ್ಳುವುದು ಮತ್ತು ಅರ್ಥಮಾಡಿಕೊಳ್ಳುವಿಕೆಯನ್ನು ಸೃಷ್ಟಿಸುವುದು ಇದರ ಗುರಿಯಾಗಿತ್ತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯಗಳ ನಡುವೆ ಅಂತರ್ ಸಚಿವಾಲಯ ಸಭೆಗಳನ್ನು ಕೂಡ ನಡೆಸಲಾಯಿತು. ಭಾರತದ ಪೋಷಕಾಂಶ ಸವಾಲುಗಳನ್ನು ಪ್ರವರ್ತಿಸುವಿಕೆ ಕುರಿತ ಜಂಟಿ ಕಾರ್ಯನೀತಿ ದಾಖಲೆಯನ್ನು ಯೋಜನಾ ಆಯೋಗ ಆಯೋಜಿಸಿದ ಬಹುವಿಭಾಗೀಯ ನೆಲೆ ದ್ವಾರಾ ಮಾನ್ಯ ಮಾಡಲಾಯಿತು[2], ಈ ಎಲ್ಲ ಸಭೆಗಳು ಮತ್ತು ಸಂವಾದದ ಮುಖ್ಯ ಶಿಫಾರಸು ಏನೆಂದರೆ, ಐಸಿಡಿಎಸ್‌ನ್ನು ಬಲಗೊಳಿಸಬೇಕು ಮತ್ತು ಮರುವಿನ್ಯಾಸಗೊಳಿಸಬೇಕು ಎಂಬುದಾಗಿತ್ತು ಮತ್ತು ಇದನ್ನು ಭಾರತದ ಪೋಷಕಾಂಶ ಸವಾಲು ಕುರಿತ ಪ್ರಧಾನಮಂತ್ರಿಯವರ ರಾಷ್ಟ್ರೀಯ ಮಂಡಳಿ ಗೆ ಸಲ್ಲಿಸಲಾ ಯಿತು.

ಪ್ರಧಾನಮಂತ್ರಿಯವರ ರಾಷ್ಟ್ರೀಯ ಮಂಡಳಿಯ ನಿರ್ಧಾರಗಳು ಮತ್ತು ರಾಷ್ಟ್ರೀಯ ಸಲಹಾ ಮಂಡಳಿ(ಎನ್‌ಎಸಿ)ಯ ಶಿಫಾರಸುಗಳು ಮೇಲೆ ಉಲ್ಲೇಖಿಸಿದ ನಾನಾ ಸಭೆಗಳು ಮತ್ತು 12ನೇ ಯೋಜನೆಯ ಪ್ರಸ್ತಾವ ದಾಖಲೆಗಳು ಐಸಿಡಿಎಸ್ ಮತ್ತು ಅದರ ಉದ್ದೇಶಿತ ಪರಿಣಾಮ ಕುರಿತು ಒಟ್ಟಭಿಪ್ರಾಯ ಮತ್ತು ವಾಗ್ವಾದವನ್ನು ಪ್ರತಿಫಲಿಸುತ್ತವೆ. ಐಸಿಡಿಎಸ್ ವೇದಿಕೆಯನ್ನು ತಾಯಿ ಮತ್ತು ಮಕ್ಕಳ ಅಭಿವೃದ್ಧಿ ಮೇಲೆ ಪ್ರಭಾವ ಬೀರುವ ಗುರಿಯುಳ್ಳ ಜೀವನವೃತ್ತ ಮಾರ್ಗವನ್ನು, ಯೋಗಕ್ಷೇಮದ ನಿರಂತರತೆಯನ್ನು ನೀಡುವ ಆಧಾರ ಎಂದು ನೋಡಲಾಯಿತು. ಇದನ್ನು ಸಾಧಿಸಲು ಐಸಿಡಿಎಸ್‌ಗೆ ಸೂಕ್ತ ಸಂಪನ್ಮೂಲ ಹೂಡಿಕೆಯ ಬೆಂಬಲ ದೊಂದಿಗೆ ಕಾರ್ಯಕ್ರಮ ಹಾಗೂ ವಿನ್ಯಾಸ ಎರಡನ್ನೂ ಬಲಪಡಿಸುವ ಹಾಗೂ ಮರುವಿನ್ಯಾಸಗೊಳಿಸುವ ಅಗತ್ಯವಿದೆ. ಇದರಿಂದ ಅದರ ಕಾರ್ಯಾಚರಣೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವಿಕೆ, ವ್ಯಾಪ್ತಿ ಹೆಚ್ಚಳ ಹಾಗೂ ಸ್ಥಿತಿಸ್ಥಾಪಕತ್ವವನ್ನು ಸ್ಥಾಪಿಸಬಹುದು ಹಾಗೂ ಖಾತ್ರಿಗೊಳಿಸಬಹುದು ಎಂಬ ಒಮ್ಮತಕ್ಕೆ ಬರಲಾಯಿತು.

ಐಸಿಡಿಎಸ್ ಪುನರ್ವಿನ್ಯಾಸಕ್ಕೆ ನೇಮಿಸಿದ ಕೆಲವು ರಾಜ್ಯಗಳ ಪ್ರತಿನಿಧಿಗಳಿದ್ದ ಯೋಜನಾ ಆಯೋಗದ ಸದಸ್ಯ(ಡಬ್ಲ್ಯುಸಿಡಿ ಉಸ್ತುವಾರಿ)ನ ನೇತೃತ್ವದ ಅಂತರ ಸಚಿವಾಲಯ ಗುಂಪು ತನ್ನ ವರದಿಯೊಟ್ಟಿಗೆ ಅನುಷ್ಠಾನಕ್ಕೆ ವಿಸ್ತೃತ ಚೌಕಟ್ಟೊಂದರ ಪ್ರಸ್ತಾವವನ್ನು ನೀಡಿತು. ಪ್ರಧಾನಮಂತ್ರಿಯವರ ಮಂಡಳಿಯ ನಿರ್ಧಾರಗಳು ಹಾಗೂ ಐಎಂಜಿ ಮಾಡಿದ ಎನ್‌ಎಸಿಯ ಶಿಫಾರಸುಗಳು ಮತ್ತು ಪ್ರಮುಖ ತತ್ವಗಳನ್ನು ಗಮನದಲ್ಲಿರಿಸಿ ಕೊಂಡು ಈ ಚೌಕಟ್ಟನ್ನು ರಚಿಸಲಾಗಿತ್ತು. ಐಸಿಡಿಎಸ್‌ನ್ನು ಬಲಪಡಿಸುವ ಹಾಗೂ ಮರುವಿನ್ಯಾಸಗೊಳಿಸುವ ಪ್ರಸ್ತಾವದಲ್ಲಿ ಈ ಶಿಫಾರಸುಗಳನ್ನು ಸೇರ್ಪಡೆಗೊಳಿಸಲಾಯಿತು.

ಇಷ್ಟಲ್ಲದೆ, ಇಎಫ್‌ಸಿ ಈ ಪ್ರಸ್ತಾವವನ್ನು ಮಾರ್ಚ್ 22ರಂದು ಪರಿಗಣಿಸಿತಲ್ಲದೆ, ರಾಜ್ಯಗಳಿಗೆ ಹೆಚ್ಚು ಅಧಿಕಾರ ಇರಬೇಕು ಹಾಗೂ ರಾಜ್ಯಗಳು ಈ ಕಾರ್ಯಕ್ರಮದಲ್ಲಿ ಹೆಚ್ಚು ಹೂಡಿಕೆ ಮಾಡಬೇಕು ಎಂದು 20 ಜುಲೈ 2012 ರಂದು ಸೂಚಿಸಿತು. ಹೊಸ ಘಟಕಗಳಲ್ಲಿನ ವೆಚ್ಚ ಹಂಚಿಕೆ ಕನಿಷ್ಠ 75:25 ಇರಬೇಕು; ಎನ್‌ಇಆರ್‌ನಲ್ಲಿ ವೆಚ್ಚ ಹಂಚಿಕೆ 90:10ರಲ್ಲಿ ಮುಂದುವರಿಯಬೇಕು ಎಂದು ನಿರ್ಧರಿಸಲಾಯಿತು. ರೂಪರೇಷೆ ಗಳನ್ನು ಸ್ಪಷ್ಟವಾಗಿ ರಚಿಸಬೇಕು ಮತ್ತು ನಿರ್ದೇಶಿತ ಫಲಿತಾಂಶ ಹಾಗೂ ಲಭ್ಯ ಫಲಿತಾಂಶವನ್ನು ಪರೀಕ್ಷಿಸಲು ಎಲ್ಲ ಸಂಭಾವ್ಯ ಮಾಹಿತಿಯನ್ನು ನೀಡಲು ಒಪ್ಪಲಾಯಿತು. ಐಸಿಡಿಎಸ್‌ನ ಫಲಿತಾಂಶವನ್ನು ಅಳೆಯ ಲು ವಾರ್ಷಿಕ ಆರೋಗ್ಯ ಸಮೀಕ್ಷೆ (ಎಎಚ್‌ಎಸ್) ಮತ್ತು ಜಿಲ್ಲಾ ಹಂತದ ಗೃಹ ಸಮೀಕ್ಷೆ (ಡಿಎಲ್‌ಎಚ್‌ಎಸ್)ಯನ್ನು ಆಧಾರರೇಖೆಯನ್ನಾಗಿ ಬಳಸಲು

[2] http://www.planningcommission.nic.in/reports/genrep/rep_icds2704.pdf

ನಿರ್ಧರಿಸಲಾಯಿತು. ಇಎಫ್‌ಸಿಯ ಆಧಾರದಲ್ಲಿ ಮೂಲ ಪ್ರಸ್ತಾವ ಹಾಗೂ ಅನುಷ್ಠಾನದ ವಿಸ್ತೃತ ಚೌಕಟ್ಟನ್ನು ಕಾರ್ಯಕ್ರಮ, ಆರ್ಥಿಕ ಸಂಪನ್ಮೂಲಗಳು ಹಾಗೂ ಮಾನವ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಪುನರ್ವಿಮರ್ಶಿಸಲಾಯಿತು. ಈ ಚೌಕಟ್ಟಿನಲ್ಲಿದ್ದ ಹಾಗೂ ತರುವಾಯದ ಖಂಡವನ್ನು ಐಸಿಡಿಎಸ್‌ನ ಬಲವರ್ಧನೆ ಮತ್ತು ಪುನರ್ವಿನ್ಯಾಸಕ್ಕೆ ಒಪ್ಪಿತವಾದ ನಿಯಮಗಳು ಮತ್ತು ಸಂವಾದಕ್ಕೆ ಅನುಗುಣವಾಗಿ ಸರಿಪಡಿಸಲಾಯಿತು. ವಿಷಯಗಳು/ಆದ್ಯತೆಗಳು, ವಿನ್ಯಾಸ, ಅನುಷ್ಠಾನ ಮತ್ತು ಸಂಪನ್ಮೂಲದ ಅಂತರಗಳು, ಕ್ರಿಯೆಯ ಸಾಧ್ಯತೆಗಳು, ಗುರುತಿಸಲಾದ ಮುಖ್ಯ ಕಾರ್ಯತಂತ್ರಗಳು ಮತ್ತು ಕಾರ್ಯಕ್ರಮ, ನಿರ್ವಹಣೆ ಮತ್ತು ಸಾಂಸ್ಥಿಕ ಸುಧಾರಣೆಗಳ ವಿಶ್ಲೇಷಣೆಯನ್ನು ಆಧರಿಸಿ ಐಸಿಡಿಎ ಸ್ ಮಿಷನ್‌ನ ಅನುಷ್ಠಾನ ಕಾರ್ಯಚೌಕಟ್ಟನ್ನು ಸೂತ್ರೀಕರಿಸಲಾಯಿತು. ಮಕ್ಕಳಲ್ಲಿ ಪೋಷಕಾಂಶ ಕೊರತೆಯನ್ನು ಕಡಿಮೆಗೊಳಿಸಲು ಮತ್ತು ಮಕ್ಕಳ ಸಮಗ್ರ ಆರಂಭಿಕ ಅಭಿವೃದ್ಧಿಯನ್ನು ಉತ್ತೇಜಿಸಲು ರಾಜ್ಯ ನಿರ್ದಿ ಷ್ಟ ಗುರಿಗಳೊಂದಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು/ಕೇಂದ್ರಾಡಳಿತಗಳ ನಡುವೆ ಒಪ್ಪಂದ(ಎಂಒಯು)ಕ್ಕೆ ಸಹಿ ಹಾಕಲಾಯಿತು. ಐಸಿಡಿಎಸ್ ಮಿಷನ್‌ನಲ್ಲಿ ಸೇವಾ ಗುಣಮಟ್ಟ ಮತ್ತು ಉಪಕ್ರಮ ಸೂಚಕಗಳ ಮೂಲಕ ನಿಗದಿಪಡಿಸಿದ ಫಲಶ್ರುತಿಯನ್ನು ಸಾಧಿಸಬಹುದಾಗಿತ್ತು

2. ಐಸಿಡಿಎಸ್‌ನ ಬಲವರ್ಧನೆ ಮತ್ತು ಪುನರ್ವಿನ್ಯಾಸ:

ಐಸಿಡಿಎಸ್ ಚೆನ್ನಾಗಿ ಆಯೋಜಿಸಿ, ಕಲ್ಪಿಸಿದ ಯೋಜನೆ. ಆದರೆ, ನಿಜವಾದ ಸಮಸ್ಯೆ ಅಸಮರ್ಪಕ ಅನುದಾನ, ಒಮ್ಮುಖತೆಯ ಕೊರತೆ, ಕಾರ್ಯಕ್ರಮವನ್ನು ನಿರ್ವಹಿಸುವವರು ಹಾಗೂ ಅನುಷ್ಠಾನಗೊಳಿ ಸುವವರು, ವಿಶೇಷವಾಗಿ, ಅಂಗನವಾಡಿ ಕೇಂದ್ರಗಳ ಹಂತದಲ್ಲಿ ಹಾಗೂ ಮೇಲ್ವಿಚಾರಣೆ ಹಂತದಲ್ಲಿರುವವರ ಉತ್ತರದಾಯಿತ್ವ, ಸಮುದಾಯದ ಯಜಮಾನಿಕೆ ಮತ್ತು ಇದೊಂದು ಉಣಿಸುವ ಕಾರ್ಯಕ್ರಮವೇ ಹೊರತು ಬಾಲ್ಯಾವಸ್ಥೆಯ ಅಭಿವೃದ್ಧಿ ಕಾರ್ಯಕ್ರಮವಲ್ಲ ಎನ್ನುವ ಭಾವನೆಯಲ್ಲಿ ಇದೆ. ಕಾರ್ಯಕ್ರಮದಲ್ಲಿನ ಈ ಅಸಮರ್ಪಕತೆಗಳನ್ನು ಸೂಕ್ತವಾಗಿ ಪರಿಹರಿಸಿದರೆ, ಪೋಷಕಾಂಶ ಮತ್ತು ಮಕ್ಕಳ ಅಭಿವೃದ್ಧಿಯಲ್ಲಿ ತೃಪ್ತಿಕರ ಫಲಿತಾಂಶವನ್ನು ನೀಡುವ ಸಾಮರ್ಥ್ಯ ಹೊಂದಿದೆ. ಯೋಜನೆಗೆ ಬಲದುಂಬುವ ಹಾಗೂ ಮರುವಿನ್ಯಾಸಗೊಳಿಸುವ ಪ್ರಯತ್ನಗಳಲ್ಲಿ ಈ ಸಂಗತಿಗಳನ್ನು ಕೈಗೆತ್ತಿಕೊಳ್ಳಬೇಕಿದೆ. ಆದರೆ, ಅಂಗನವಾಡಿ ಕೇಂದ್ರಗಳ ನಿರ್ವಹಣೆ ಮತ್ತು ಉಸ್ತುವಾರಿ, ಸಾಮರ್ಥ್ಯ ನಿರ್ಮಾಣ ಹಾಗೂ 3 ವರ್ಷದೊಳಗಿನ ಮಕ್ಕಳನ್ನು ಗುರಿಯಾಗಿಸಿಕೊಳ್ಳಬೇಕೆಂದರೆ, ವಿಕೇಂದ್ರೀಕೃತ ಹಾಗೂ ಅಂಗನವಾಡಿ ಕೇಂದ್ರಗಳ ಸಮೀಪದಲ್ಲಿ ನಿಯಂತ್ರಣ ವ್ಯವಸ್ಥೆಗಳನ್ನು ಸ್ಥಾಪಿಸಬೇಕಾಗುತ್ತದೆ. ಆದರೆ, ಈವರೆಗಿನ ಅನುಭವವೇನೆಂದರೆ, ಭಾರತ ಸರ್ಕಾರ ಇಲ್ಲವೇ ರಾಜ್ಯ ಸರ್ಕಾರಗಳು ಎಷ್ಟೇ ಸೂಚನೆ/ಮಾರ್ಗದರ್ಶಿ ಸೂತ್ರಗಳನ್ನು ನೀಡಿದರೂ, ಅವು ಸಮಾನವಾಗಿ ಹಂಚಿಹೋಗುವುದಿಲ್ಲ ಮತ್ತು ಅದೇ ಗಂಭೀರತೆಯಲ್ಲಿ ಕೊನೆಯ ಹಂತಗಳಲ್ಲಿ, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಮಟ್ಟದಲ್ಲಿ, ಅನುಷ್ಠಾನಗೊಳ್ಳುವುದಿಲ್ಲ. ಇದರ ಪರಿಣಾಮವಾಗಿ ಉತ್ತರದಾಯಿತ್ವ ಎನ್ನುವುದು ಧಕ್ಕೆಗೊಳಗಾ ಗುತ್ತದೆ ಮತ್ತು ಕಾರ್ಯಕ್ರಮದ ವಿತರಣೆಯು ಸಂಕಷ್ಟಕ್ಕೀಡಾಗುತ್ತದೆ.

ಐಸಿಡಿಎಸ್‌ನ ಬಲಗೊಳಿಸುವಿಕೆ ಮತ್ತು ಪುನರ್ವಿನ್ಯಾಸವು ಈ ವಿಷಯಗಳನ್ನು ಕೈಗೆತ್ತಿಕೊಳ್ಳುತ್ತದೆ ಮತ್ತು ಐಸಿಡಿಎಸ್ ಕಾರ್ಯಕ್ರಮವನ್ನು ಸಮರೋಪಾದಿಯಲ್ಲಿ ಅನುಷ್ಠಾನಗೊಳಿಸಲು ಚೌಕಟ್ಟೊಂದನ್ನು ನೀಡುತ್ತದೆ.

2.1 ಐಸಿಡಿಎಸ್‌ಗೆ ಬಲದುಂಬುವಿಕೆ

ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು ಐಸಿಡಿಎಸ್‌ನ್ನು ಬಲಗೊಳಿಸಲು ಮುಂದಾಗಿದೆ ಮತ್ತು ಭಾರತದ ಪೋಷಕಾಂಶ ಸವಾಲುಗಳ ಕುರಿತ ಪ್ರಧಾನಿಯವರ ಸಮಿತಿಯ ಸಭೆ ಬಳಿಕ ಆ ದಿಕ್ಕಿನೆಡೆಗೆ ಹೆಜ್ಜೆಗಳನ್ನೂ ಇರಿಸಿದೆ. ಈ ಕ್ರಮಗಳ ಬಗ್ಗೆ ಮುಂದಿನ ಪರಿಚ್ಛೇದಗಳಲ್ಲಿ ವಿವರಿಸಲಾಗಿದ್ದು, ಸೇವೆಗಳ ವಿತರಣೆ ಹಾಗೂ ಮೇಲ್ವಿಚಾರಣೆಯಲ್ಲಿ ಇನ್ನಷ್ಟು ಸುಧಾರಣೆಗೆ ಭವಿಷ್ಯದಲ್ಲಿ ಯಾವ್ಯಾವ ಕ್ರಮಗಳನ್ನು ಕೈ ಗೊಳ್ಳಲು ಯೋಜಿಸಲಾಗಿದೆ ಎಂಬುದನ್ನು ಸೂಚಿಸಲಾಗಿದೆ. ಇತ್ತೀಚೆಗೆ (2011-12) ಅಂಗನವಾಡಿ ಕೆಲಸಗಾರರು (ಎಡಬ್ಲ್ಯುಡಬ್ಲ್ಯು) ಮತ್ತು ಅಂಗನವಾಡಿ ಸಹಾಯಕರು(ಎಡಬ್ಲ್ಯುಎಚ್)ಗಳ ಗೌರವಧನವನ್ನು ಭಾರತ ಸರ್ಕಾರ ದುಪ್ಪಟ್ಟುಗೊಳಿಸಿದ್ದು, ಇದು ಈ ಕಾರ್ಮಿಕರ ಬಹುಕಾಲದ ಬೇಡಿಕೆಯಾಗಿತ್ತು ಮತ್ತು ಇದನ್ನು ಗುಣಮಟ್ಟ ಹೆಚ್ಚಳ, ಅಂಗನವಾಡಿ ಕೇಂದ್ರಗಳ ನಿರ್ವಹಣೆಯಲ್ಲಿ ಹೆಚ್ಚಿನ ನಿಯತತೆಯನ್ನು ಜಾರಿ ಗೊಳಿಸಲು ಹಾಗೂ ಬಹುತೇಕ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಈಗ ಇರುವ 4 ಗಂಟೆಗಳ ಕೆಲಸದ ಅವಧಿಯನ್ನು ಹೆಚ್ಚಿಸಲು ಬಳಸಬೇಕಿದೆ.

ಗಮನಿಸಬೇಕಾದ ಅಂಶವೆಂದರೆ, ಕಾರ್ಯಕ್ರಮ ನಿರ್ವಹಣೆ ಮತ್ತು ಅದರ ಅನುಷ್ಠಾನದಲ್ಲಿನ ಕಂದರಗಳ ಬಗ್ಗೆ ಚೆನ್ನಾಗಿ ಅರ್ಥವಾಗಿದೆ ಹಾಗೂ ಇದನ್ನು ಕಾಲಕಾಲಕ್ಕೆ ದಾಖಲಿಸಲಾಗಿದೆ. ಇದು ಸಂಪನ್ಮೂಲಕ್ಕೆ ಬೇಡಿಕೆ ಇರಿಸುವ ಹಾಗೂ ಉತ್ತಮ ನಿರ್ವಹಣೆಗೆ ಹಾಗೂ ಕಾರ್ಯಕ್ರಮದ ನಿಯಂತ್ರಣಕ್ಕೆ ಕಾಲಕಾಲಕ್ಕೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಬೇಕೆಂಬ ಆಗ್ರಹಕ್ಕೆ ದಾರಿ ಮಾಡಿಕೊಟ್ಟಿದೆ. ಆದರೆ, ಇಂಥ ಪ್ರಯತ್ನಗಳು ಅಸಮರ್ಪಕವಾಗಿವೆ ಮತ್ತು ಅದಕ್ಕಿಂತ ಮುSೆಯವಾಗಿ, ರಾಜ್ಯಗಳ ಪ್ರತಿಕ್ರಿಯೆಗಳು ಸಮರ್ಪಕವಾಗಿಲ್ಲ. ತಮಿಳುನಾಡು, ಗುಜರಾತ್, ಕರ್ನಾಟಕ, ಆಂಧ್ರಪ್ರದೇಶ ಕಾರ್ಯಕ್ರಮದಲ್ಲಿ ಹೂಡಿಕೆ ಮಾಡಿವೆ. ಬೇರೆ ರಾಜ್ಯಗಳು, ಉದಾಹರಣೆಗೆ ಉತ್ತರಪ್ರದೇಶ, ಬಿಹಾರ, ಜಾರ್ಖಂಡ, ಪಶ್ಚಿಮ ಬಂಗಾಳ, ಕಾರ್ಯಕ್ರಮವನ್ನು ಹೆಚ್ಚುವರಿ ನಾವೀನ್ಯತೆಯಿಲ್ಲದೆ ಹಾಗೂ ರಾಜ್ಯದ ಅನುದಾನದಿಂದ ಸಂಪನ್ಮೂಲವನ್ನು ಕ್ರೋಢೀಕರಿಸದೆ, ಅದನ್ನೊಂದು ಉಣಿಸುವ ಕಾರ್ಯಕ್ರಮದಂತೆ ಅನುಷ್ಠಾನಗೊಳಿಸುತ್ತಿವೆ. ರಾಜ್ಯದ ಬೊಕ್ಕಸದಲ್ಲಿ ಅನುದಾನದ ಕೊರತೆ ಇದಕ್ಕೆ ಒಂದು ಕಾರಣ ಇರಬಹುದು. ಆದರೆ, ಇದು 0-6 ವರ್ಷ ವಯಸ್ಸಿನ ಮಕ್ಕಳ ಅಗತ್ಯಗಳ ಸೂಕ್ಷ್ಮತೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಹಾಗೂ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಕಾರ್ಯಕ್ರಮದಲ್ಲಿ ಹೂಡಿಕೆಯಲ್ಲಿನ ಬದ್ಧತೆಯಲ್ಲಿ ಮತ್ತು ಈ ರಾಜ್ಯಗಳಲ್ಲಿನ ಒಟ್ಟಾರೆ ಆಡಳಿತದ ಸಂಗತಿಗಳಲ್ಲಿ ಇವೆ. ಆದ್ದರಿಂದ, ಬಲಗೊಳಿಸುವ ಹಾಗೂ ಮರುವಿನ್ಯಾಸಗೊಳಿಸುವ ಯಾವುದೇ ಪ್ರಸ್ತಾವಗಳಿರಲಿ, ಅವು ಎಷ್ಟೇ ಚೆನ್ನಾಗಿ ಆಲೋಚಿಸಿ, ವಿನ್ಯಾಸಗೊಳಿಸಿದ್ದರೂ, ರಾಜ್ಯಗಳು ಮಕ್ಕಳ ಅಭಿವೃದ್ಧಿ ಫಲಿತಾಂಶಕ್ಕಾಗಿ ತಾಯಿ ಮತ್ತು ಮಗುವಿನ ರಕ್ಷಣೆಗೆ ಅಧಿಕ ಯಜಮಾನತ್ವ, ಉತ್ತರದಾಯಿತ್ವ ಹಾಗೂ ಆದ್ಯತೆಗೆ ಗಮನ ನೀಡಬೇಕಾಗುತ್ತದೆ.

2.1.1 ಬಲವರ್ಧನೆಗೆ ತೆಗೆದುಕೊಂಡ ಕ್ರಮಗಳು:

* 2012ರಲ್ಲಿ ಕನಿಷ್ಠ 10 ವಾರ್ಷಿಕ ಅನುಷ್ಠಾನ ಯೋಜನೆ(ಎಪಿಐಪಿ), 2012-13ರಲ್ಲಿ 25ಕ್ಕೂ ಅಧಿಕ ರಾಜ್ಯಗಳಿಂದ ಎಪಿಐಪಿಗಳನ್ನು ಸ್ವೀಕರಿಸಲಾಗಿದೆ.

ಐಡಿಎ ಬೆಂಬಲಿತ ಐಎಸ್‌ಎಸ್‌ಎನ್‌ಐಪಿ ಕಾರ್ಯಕ್ರಮವು 8 ಆಯ್ದ ರಾಜ್ಯಗಳ 162 ಕ್ಕೂ ಅಧಿಕ ಜಿಲ್ಲೆಗಳಲ್ಲಿ ಮತ್ತು ಒಡಿಶಾ, ಉತ್ತರಾಖಂಡ ಮತ್ತು ನಗರಗಳ ಹೆಚ್ಚುವರಿ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಂಡಿದೆ. ಈ ಕಾರ್ಯಕ್ರಮದ ಪ್ರಾಯೋಗಿಕ ಮಾದರಿ ಈಗ

ಅಂಗೀಕೃತವಾಗಿದ್ದು, ವ್ಯವಸ್ಥೆಯ ಬಲಪಡಿಸುವಿಕೆ, ವಿವಿಧ ಪ್ರಾಯೋಗಿಕ ಮಾದರಿಗಳ ನಿರ್ವಹಣೆ, ಉತ್ತಮ ಆಚರಣೆಗಳಲ್ಲಿ ನಾವೀನ್ಯತೆ ಮತ್ತು ಪ್ರಯೋಗ, ಶಿಷ್ಟಾಚಾರ/ಮಾದರಿಗಳು/ಮಾರ್ಗದರ್ಶಕ ಸೂತ್ರಗಳ ಅಭಿವೃದ್ಧಿ ಮೂಲಕ ವೇಗವರ್ಧಕದಂತೆ ಬೆಂಬಲ ನೀಡುವಿಕೆಯಿಂದ ಆಡಳಿತ ಮತ್ತು ಕಾರ್ಯಕ್ರಮದಲ್ಲಿನ ಲೋಪಗಳನ್ನು ನಿವಾರಿಸುವ ಗುರಿ ಹೊಂದಿದೆ. ಸಮುದಾಯದ ಸಂಘಟನೆ, ವರ್ತನೆಯಲ್ಲಿ ಬದಲಾವಣೆ ಕೂಡ ಪ್ರಾಯೋಗಿಕ ಮಾದರಿಗಳ ಭಾಗವಾಗಿರಲಿದೆ. ಇವು ಜಿಲ್ಲಾ ವಾರ್ಷಿಕ ಕಾರ್ಯಕ್ರಮ ಅನುಷ್ಠಾನ ಯೋಜನೆಗಳು ಹಾಗೂ ಪ್ರಮಾಣಾನುಸಾರ ದೊಡ್ಡ ದಾಗಿಸಲು ಬೇಕಾದ ಕಲಿಕೆಗಳಿಗೆ ಚೌಕಟ್ಟನ್ನು ನೀಡುತ್ತದೆ. * ಡಬ್ಲ್ಯುಎಚ್‌ಒದ ಮಕ್ಕಳ ಬೆಳವಣಿಗೆ ಮಾನಕಗಳು ಹಾಗೂ ತಾಯಿ ಮತ್ತು ಮಕ್ಕಳ ಜಂಟಿ ಸಂರಕ್ಷಣಾ ಕಾರ್ಡ್‌ಗಳು * ಮೇಲುಸ್ತುವಾರಿ ಮಾರ್ಗದ ರ್ಶಿ ಸೂತ್ರಗಳು(2010) ಸೇರಿದ ಐದು ಹಂತಗಳ ಪರಾಮರ್ಶನ ವ್ಯವಸ್ಥೆ (ಮಾರ್ಚ್ 2011)ಯನ್ನು ಪರಿಚಯಿಸುವಿಕೆ * ಎಡಬ್ಲ್ಯುಸಿಗಳ ಮಾನ್ಯತೆ ಮತ್ತು ವರ್ಗೀಕರಣ ಹಾಗೂ ಸೇವಾ ಪೂರೈಕೆದಾರರು ಹಾಗೂ ಇನ್ನಿತರ ಭಾಗಿದಾರರಿಗೆ ಪ್ರಶಸ್ತಿ ನೀಡಲು ಮಾರ್ಗದರ್ಶಿ ಸೂತ್ರಗಳ ಕರಡು ಸಿದ್ಧತೆ * ಪರಿಷ್ಕೃತ ನಿರ್ವಹಣ ಮಾಹಿತಿ ವ್ಯವಸ್ಥೆ(ಎಂಐಎಸ್)ನ ಪ್ರಾಯೋಗಿಕ ಮಾದರಿಯ ಪರೀಕ್ಷಾ ಪೂರ್ಣ, ಪುನರ್ಪರಿಷ್ಕರಣೆ ಗೊಂಡ ಎಂಐಎಸ್ ಮಾರ್ಗದರ್ಶಿ ಸೂತ್ರಗಳ ನೀಡಿಕೆ, ಪ್ರಸಕ್ತ ವರ್ಷದಲ್ಲಿ ಚಾಲ್ತಿಗೆ ಮತ್ತು ಹೆಚ್ಚಿಕೆಯಾದದ್ದನ್ನು ಮುಂದಿನ ವರ್ಷ ವಿಸ್ತರಣೆ * ಇಸಿಸಿಇ ಕಾರ್ಯನೀತಿ ಸೂತ್ರೀಕರಣದ ತಿರುಳು ಗುಂಪು; ಇಸಿಸಿಇ ಕಾರ್ಯನೀತಿಯ ಕರಡು, ವ್ಯಾಸಂಗಕ್ರಮದ ಚೌಕಟ್ಟು ಮತ್ತು ಮಾನಕಗಳನ್ನು ಸಿದ್ಧಗೊಳಿಸುವುದು; ಸಾರ್ವಜನಿಕ ವೇದಿಕೆಗಳಲ್ಲಿ ಸಲಹೆಗಳು ಮತ್ತು ವಿಮರ್ಶೆಗಳನ್ನು ಹಂಚಿಕೊಳ್ಳುವುದು; ಅಕ್ಟೋಬರ್ 2012ರಲ್ಲಿ ಅಂತಿಮಗೊಳಿಸಲು ರಾಷ್ಟ್ರೀಯ ಸಭೆ ಆಯೋಜಿಸುವಿಕೆ; ಪ್ರಸ್ತುತ ಆರ್ಥಿಕ ವರ್ಷದ ಅಂತ್ಯದಲ್ಲಿ ಅಂಗೀಕಾರದ ನಿರೀಕ್ಷೆ * ಎಡಬ್ಲ್ಯುಡಬ್ಲ್ಯು ಮತ್ತು ಎಡಬ್ಲ್ಯುಎಚ್‌ಗಳ ಗೌರವಧನ ಹೆಚ್ಚಳ (ಮಾರ್ಚ್ 2011) * ಪೋಷಕಾಂಶ ಸಂಪನ್ಮೂಲ ವೇದಿಕೆಯ ಸ್ಥಾಪನೆ; ಡಿಜಿಟಲ್/ಭೌತಿಕ ಗ್ರಂಥಾಲಯ, ವೆಬ್ ಆಧಾರಿತ ಜ್ಞಾನ ನಿರ್ವಹಣೆ ಇ-ವೇದಿಕೆ ಇರುವವರೊಟ್ಟಿಗೆ ಹಾಗೂ ನಾನಾ ಭಾಗಿದಾರರೊಂದಿಗೆ ಒಟ್ಟುಗೂಡಿ ಪೋಷಕಾಂಶಕ್ಕೆ ಸಂಬಂಧಿಸಿದ ಜ್ಞಾನವನ್ನು ಹಂಚಿಕೊಳ್ಳುವ ಏಕೈಕ ಇ-ವೇದಿಕೆಯ ಸ್ಥಾಪನೆ ಪ್ರಕ್ರಿಯೆ ಆರಂಭ. ಮೊಬೈಲ್ ಫೋನ್ ಸೇವೆಗಳ ಮೂಲಕ ಅಂತಿಮ ಬಳಕೆದಾರರಿಗೆ ಸೇವೆಗಳ ಗುಚ್ಛವನ್ನು ನೀಡುವುದು ಮತ್ತು ಆಲೋಚನೆಗಳ ಹಂಚಿಕೆ ಇ-ವೇದಿಕೆಯ ಉದ್ದೇಶ. 2.12 ಬಲಪಡಿಸುವಿಕೆಯ ಮುಂದಿನ ಹೆಜ್ಜೆಗಳು: ಒಪ್ಪಿಗೆ ದೊರೆತ 7,076 ಯೋಜನೆಗಳು ಹಾಗೂ 14 ಲಕ್ಷ ಎಡಬ್ಲ್ಯುಸಿಗಳನ್ನು ಆರಂಭಿಸುವ ಗುರಿ ಮತ್ತು ಗುಣಮಟ್ಟದ ಸಾರ್ವತ್ರೀಕರಣ; ಪಿಹೆಚ್‌ಸಿ/ಸಿಎಚ್‌ಸಿ, ಜಿಲ್ಲಾ ಕೋಶಗಳು, ಯೋಜನೆ ಮತ್ತು ಎಡಬ್ಲ್ಯುಸಿಗಳ ವ್ಯಾಪ್ತಿಯ ಸಮನ್ವಯಿಸುವಿಕೆ. ಗುಚ್ಛ ವಿಧಾನ-17ರಿಂದ 25 ಎಡಬ್ಲ್ಯುಸಿಗಳ ಗುಚ್ಛದಲ್ಲಿ ಆಯ್ಕೆ ಮಾಡಿದ ಎಡಬ್ಲ್ಯುಸಿಯಲ್ಲಿ ಗುಚ್ಛ ಕಚೇರಿ ರಚನೆ ಮತ್ತು ಒಬ್ಬ ಮೇಲ್ವಿಚಾರಕನ ನೇಮಕ; 3ಎಸ್‌ಗಳ ಮೇಲೆ ದೃಷ್ಟಿಯಿರಿಸುವುದು-ಬೆಳವಣಿಗೆಯ ಪರಾಮರ್ಶನ ಮತ್ತು ಏವೈಸಿಎಫ್; ಎಲ್ಲ ಹಂತದಲ್ಲೂ ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ; ಪರಿಷ್ಕೃತ ಎಂಐಎಸ್‌ಗೆ ಚಾಲನೆ ನೀಡುವುದು; ಐಸಿಟಿಯ ಬಳಕೆ; ಆರೋಗ್ಯ-ಪೋಷಕಾಂಶ ಶಿಕ್ಷಣ ಮತ್ತು ಆರೈಕೆಯ ಆಚರಣೆಗಳು; ಕಾರ್ಯನೀತಿ, ವ್ಯಾಸಂಗಕ್ರಮ ಇತ್ಯಾದಿಯನ್ನು ಸೂತ್ರೀಕರಿಸುವ ಮೂಲಕ ಇಸಿಸಿಇಗಳ ಬಲವರ್ಧನೆಗೆ ಆರಂಭಿಕ ಕ್ರಿಯೆಗಳು; ಎಡಬ್ಲುಸಿಗಳ ಹೆಚ್ಚುವರಿ ಪೋಷಕಾಂಶದ ವೆಚ್ಚದ ಪರಿಷ್ಕರಣೆಗಾಗಿ ಮಾನವ ಸಂಪನ್ಮೂಲ ಮತ್ತು ವರ್ಗೀಕರಣ ಹಾಗೂ ಮಾನ್ಯತೆ ಇತ್ಯಾದಿಗೆ ಸಂಬಂಧಿಸಿದ ಸಂಗತಿಗಳನ್ನು ಪ್ರವರ್ತಿಸುವುದು ಹಾಗೂ ರಾಜ್ಯಗಳಿಗೆ ಹೊಂದಿಕೊಳ್ಳಲು ಅವಕಾಶ ನೀಡುವುದು ಮತ್ತು ನಾವೀನ್ಯತೆ, ಪೈಲಟ್‌ಗಳು ಹಾಗೂ ಸ್ಥಳೀಯ ಅಗತ್ಯಗಳನ್ನು ಪೂರೈಸಲು ಯಾವುದೇ ನಿರ್ಬಂಧಗಳಿಲ್ಲದ ಅನುದಾನ ಒದಗಿಸುವುದು. ಅಂಗನವಾಡಿ ಕಟ್ಟಡಗಳ ನಿರ್ಮಾಣ, ಸೌಲಭ್ಯಗಳ ಒದಗಿಸುವಿಕೆ ಮತ್ತು ಎಲ್ಲೆಲ್ಲಿ ಕಟ್ಟಡ ನಿರ್ಮಾಣ ಸೂಕ್ತ ಆಯ್ಕೆ ಆಗಿರುವುದಿಲ್ಲವೋ ಅಂಥ ಕಡೆ ಕಟ್ಟಡಗಳ ಹೆಚ್ಚುವರಿ ಬಾಡಿಗೆಯನ್ನು ಭರಿಸಲು ಹೆಚ್ಚುವರಿ ಅನುದಾನ ಕೊಡಬೇಕಾಗುತ್ತದೆ. ತೂಕದ ತಕ್ಕಡಿ ಹಾಗೂ ಇನ್ನಿತರ ಸಲಕರಣೆಗಳನ್ನು ಆಗಾಗ ಬದಲಿಸಬೇಕಾಗುತ್ತದೆ ಹಾಗೂ ಅದಕ್ಕಾಗಿ ಹಣ ವೆಚ್ಚ ಮಾಡಬೇಕಾಗುತ್ತದೆ. ಐಇಸಿಯ ಪ್ರಸ್ತುತ ವೆಚ್ಚ ಪ್ರಮಾಣಕಗಳನ್ನು ನೋಡಿದರೆ, ಶಾಲಾಪೂರ್ವ ಶಿಕ್ಷಣ

ಹಾಗೂ ವೈದ್ಯಕೀಯ ಕಿಟ್‌ಗಳ ಬೆಲೆ ಕಡಿಮೆಯಿದ್ದು, ಅದನ್ನು ಪರಿಷ್ಕರಿಸಬೇಕಿದೆ. ಮೇಲ್ವಿಚಾರಕರ ಸಂಚಾರ ಹಾಗೂ ಐವೈಸಿಎಫ್ ಚಟುವಟಿಕೆಗೆ ಹೆಚ್ಚುವರಿ ಸಂಪನ್ಮೂಲ ಬೇಕಾಗುತ್ತದೆ. ಐವೈಸಿಎಫ್ ಚಟುವಟಿಕೆಗಳ ಲಕ್ಷ್ಯ ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಗುರಿಯಾಗಿರಬೇಕಿದೆ(3) ಮತ್ತು ಇದಕ್ಕಾಗಿ ವಲಯ ಹಂತದಲ್ಲಿ ಹೆಚ್ಚುವರಿ ಪೋಷಕಾಂಶ ಸಂಯೋಜಕರ ಲಭ್ಯತೆ ಸೇರಿದಂತೆ ಬೇರೆಯದೇ ಅಯ್ಕೆಗಳನ್ನು ಬಳಸಿಕೊಂಡು ಪ್ರಯೋಗ ನಡೆಸಬೇಕಾಗುತ್ತದೆ.

2.1.3 ಕಲಿತ ಪಾಠಗಳು/ಸಲಹೆಗಳು: ರಾಜ್ಯ ಎಪಿಐಪಿಗಳಿಂದ ಪಾಠಗಳು/ಸಲಹೆಗಳು: 2011-2012 * ಬೇರೆ ಬೇರೆ ಹಂತಗಳಲ್ಲಿ ಐಸಿಡಿಎಸ್‌ನ ಉತ್ತಮ ನಿರ್ವಹಣೆ ಮತ್ತು ಅನುಷ್ಠಾನಕ್ಕಾಗಿ ಹೆಚ್ಚುವರಿ ಹುದ್ದೆಗಳ ಅಗತ್ಯವಿದೆ. * ಪ್ರಾಂತ್ಯ ಹಂತದಲ್ಲಿ ನಿರ್ದೇಶಕರು/ಕಾರ್ಯಕ್ರಮ ಅಧಿಕಾರಿಗಳು/ಪರಾಮರ್ಶನ ಅಧಿಕಾರಿಗಳು (ಗುಜರಾತ್, ತಮಿಳುನಾಡು); ಪ್ರತಿ ಜಿಲ್ಲೆಯಲ್ಲಿ ಸಹಾಯಕ ನಿರ್ದೇಶಕರು(ಆಂಧ್ರಪ್ರದೇಶ); ರಾಜ್ಯ ಮಟ್ಟದಲ್ಲಿ ಪರಾಮರ್ಶನ ಕೋಶ/ಸಿಬ್ಬಂದಿ(ಪಶ್ಚಿಮ ಬಂಗಾಳ) * ರಾಜ್ಯ ಮಟ್ಟದಲ್ಲಿ ಹೆಚ್ಚುವರಿ ತಾಂತ್ರಿಕ ಸಿಬ್ಬಂದಿ (ಜಾರ್ಖಂಡ, ಉತ್ತರಪ್ರದೇಶ) ಮತ್ತು ಜಿಲ್ಲಾ ಹಂತದಲ್ಲಿ (ಜಾರ್ಖಂಡ) * ಎಡಬ್ಲ್ಯುಸಿ ಹಂತದಲ್ಲಿ ಹೆಚ್ಚುವರಿ ಸಿಬ್ಬಂದಿ (ತಮಿಳುನಾಡು); ಆಶಾ ಸಹಯೋಗಿನಿ (ರಾಜಸ್ಥಾನ); 5-6 ಎಡಬ್ಲ್ಯುಡಬ್ಲ್ಯುಗಳಲ್ಲಿ ಆಯ್ಕೆ ಮಾಡಿಕೊಂಡ ಒಂದರಲ್ಲಿ ಒಬ್ಬರು ಮೇಲ್ವಿಚಾರಕರು (ಗುಚ್ಛ ಕಾರ್ಯವಿಧಾನ)(ಜಾರ್ಖಂಡ) * ಒಮ್ಮುಖತೆ ಮತ್ತು ಹೆಚ್ಚು ಹೊಂದಾಣಿಕೆಯನ್ನು ಆಗುಮಾಡಲು ಸಾಮಾಜಿಕ ವಿನ್ಯಾಸವೊಂದರ ಸೃಷ್ಟಿ (ಒಮ್ಮುಖತೆಯನ್ನು ಬಲಗೊಳಿಸಲು ಆಂಧ್ರಪ್ರದೇಶದಲ್ಲಿ; ಪೋಷಕಾಂಶ ಮಿಷನ್‌ನ ಭಾಗವಾಗಿ ಮಧ್ಯಪ್ರದೇಶ ಮತ್ತು ಗುಜರಾತಿನಲ್ಲಿ) * ಅಗತ್ಯಕ್ಕೆ ಅನುಗುಣವಾಗಿ ವೈದ್ಯಕೀಯ ಸಿಬ್ಬಂದಿ/ಎಎನ್‌ಎಂಗಳನ್ನು ನೇಮಿಸಿಕೊಳ್ಳುವುದು

* ಆಂಧ್ರಪ್ರದೇಶದಲ್ಲಿ ಐಸಿಡಿಎಸ್ ಅಡಿ ಮತ್ತು ತಮಿಳುನಾಡಿನಲ್ಲಿ ಎಂಒ/ಎಎನ್‌ಎಂ ಆಯವ್ಯಯ * ವಲಯ ಹಂತದಲ್ಲಿ ಎಂಒ ಹುದ್ದೆ ಖಾಲಿ ಇರುವಲ್ಲಿ ಅಥವಾ ಆರೋಗ್ಯ ತಪಾಸಣೆ ಉದ್ದೇಶಿಸಿದ ಅಂತರದಲ್ಲಿ ನಡೆಯದೆ ಇರುವಲ್ಲಿ ಖಾಸಗಿ ವೈದ್ಯರ ಸೇವೆ ಬಳಸಿಕೊಳ್ಳುವುದು (ಕರ್ನಾಟಕ)

* ನಗರ ಪ್ರದೇಶದ ಕೊಳೆಗೇರಿಗಳಲ್ಲಿ ಲಸಿಕೆ ಹಾಕಲು ಎಎನ್‌ಎಂಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳುವುದು(ಎನ್‌ಎಚ್‌ಆರ್‌ಎಂ ಅನುದಾನವನ್ನು ಬಳಸಿಕೊಂಡು)(ಪಶ್ಚಿಮಬಂಗಾಳ) * ಇಸಿಇಯಲ್ಲಿ ಪರಿಣತಿ ಹೊಂದಿರುವ ಸಂಸ್ಥೆಗಳಿಂದ ಇಸಿಇ ಕುರಿತು ವಿಶೇಷ ತರಬೇತಿ (ಆಂಧ್ರಪ್ರದೇಶ,ರಾಜಸ್ಥಾನ) * ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಐವೈಸಿಎಫ್ ಮತ್ತು ಆರೋಗ್ಯ ಹಾಗೂ ಪೋಷಕಾಂಶ ಸಂದೇಶಗಳನ್ನು ಉದಾಹರಣೆಗೆ, ಅನ್ನಪ್ರಸನ್ನ ಇತ್ಯಾದಿ ಪ್ರಸಾರ ಮಾಡುವುದು(ಆಂಧ್ರಪ್ರದೇಶ,ಮಧ್ಯಪ್ರದೇಶ, ಗುಜರಾತ್) * ಆಧುನಿಕ ಸಂವಹನ ಚಾನೆಲ್‌ಗಳನ್ನು ಉದಾಹರಣೆಗೆ, ಸ್ಯಾಟ್‌ಕಾಂ ಮತ್ತು ಮುಖಾಮುಖಿ ಟಿವಿ ಕಾರ್ಯಕ್ರಮಗಳನ್ನು ಬಳಸಿಕೊಂಡು ಸಾಮರ್ಥ್ಯ ನಿರ್ಮಾಣ (ಎಪಿ, ಗುಜರಾತ್) * ಜಿಎಂಐಎಸ್/ಜಿಐಎಸ್(ಆಂಧ್ರಪ್ರದೇಶ, ಗುಜರಾತ್, ತಮಿಳುನಾಡು) * ಎಡಬ್ಲ್ಯುಸಿಗಳಿಗೆ ಮಾನ್ಯತೆ (ಆಂಧ್ರಪ್ರದೇಶ,ಕರ್ನಾಟಕ, ಉತ್ತರಪ್ರದೇಶ, ಪಶ್ಚಿಮ ಬಂಗಾಳ) * ಪೋಷಕಾಂಶ ಕೊರತೆಯನ್ನು ಲೆಕ್ಕಿಸಲು ವಾರ್ಷಿಕ/ನಿರ್ದಿಷ್ಟ ಅವಧಿಗೊಮ್ಮೆ ಅಧ್ಯಯನ/ಸಮೀಕ್ಷೆ (ಆಂಧ್ರಪ್ರದೇಶ, ಮಧ್ಯಪ್ರದೇಶ, ಉತ್ತರ ಪ್ರದೇಶ, ತಮಿಳುನಾಡು) * ವಾರ್ಷಿಕ ಇಸಿಇ ದಿನಗಳು (ಕರ್ನಾಟಕ, ಗುಜರಾತ್); ಮಾಸಿಕ ಬಾಲ ಸಭೆಗಳು (ಮಧ್ಯಪ್ರದೇಶ) * ವಿವಿಧ ಕಾರ್ಯತಂತ್ರಗಳ

ಮೂಲಕ ಸಾಮುದಾಯಿಕ ಪರಾಮರ್ಶನ (ಕರ್ನಾಟಕ, ರಾಜಸ್ಥಾನ, ಜಾರ್ಖಂಡ) * ಬಾಲವಿಕಾಸ ಸಮಿತಿ (ಕರ್ನಾಟಕ) * ಪಿಆರ್‌ಐಗಳ ಒಳಗೊಳ್ಳುವಿಕೆ ಮೂಲಕ (ರಾಜಸ್ಥಾನ) * ಸಮುದಾಯಿಕ ಅಂಕಪಟ್ಟಿಗಳು ಮತ್ತು ಪಿಆರ್‌ಐಗಳನ್ನು ಒಳಗೊಳ್ಳುವುದು (ಜಾರ್ಖಂಡ) * ಹೆಚ್ಚುವರಿ ಗೌರವಧನ ನೀಡುವ ಮೂಲಕ ಕೆಲಸದ ಸಮಯದ ಹೆಚ್ಚಳ(ಮಧ್ಯಪ್ರದೇಶ,ಗುಜರಾತ್) * ಉತ್ತಮ ಸಾಧನೆಗೆ ಎಡಬ್ಲ್ಯುಡಬ್ಲ್ಯುಗಳಿಗೆ ಉತ್ತಮ ಸಾಧನೆಗೆ ಬಹುಮಾನ ಮತ್ತು ಪ್ರಶಸ್ತಿ(ಗುಜರಾತ್, ರಾಜಸ್ಥಾನ) * ಆರೋಗ್ಯ ಮತ್ತು ಐಸಿಡಿಎಸ್ ಇಲಾಖೆಗಳು/ಸೇವೆಗಳ ಉತ್ತಮ ಹೊಂದಾಣಿಕೆಗೆ ವಿಭಾಗಗಳನ್ನು ಸಾಲುಗೂಡಿಸುವುದು * ಸೂಕ್ತ ಮಾರ್ಗದರ್ಶಕ ಸೂತ್ರಗಳೊಂದಿಗೆ ಕಾರ್ಪೊರೇಟ್ ಸಂಸ್ಥೆಗಳೊಡನೆ ತೊಡಗಿಸಿಕೊಳ್ಳುವುದು (ತಮಿಳುನಾಡು, ಗುಜರಾತ್) *

ಎಲ್ಲಾ ರಾಜ್ಯಗಳಲ್ಲೂ ಎಡಬ್ಲ್ಯುಡಬ್ಲ್ಯು ಕಟ್ಟಡ

ರಾಜ್ಯಗಳು ಪ್ರಸ್ತಾಪಿಸಿದ ಅಗತ್ಯಗಳು; * ಎಡಬ್ಲ್ಯುಡಬ್ಲ್ಯುಗಳನ್ನು ತೆರೆಯಲು ಜನಸಂಖ್ಯಾ ಷರತ್ತುಗಳನ್ನು ಮರುಪರಿಗಣಿಸುವುದು * ಎಸ್‌ಎಸ್‌ಎ ಅಡಿಯಲ್ಲಿರುವ ಇಸಿಇ ಅನುದಾನವನ್ನು ಕಡ್ಡಾಯವಾಗಿ ಐಸಿಡಿಎಸ್‌ಗೆ ವರ್ಗಾಯಿಸಬೇಕು ***ಪೋಷಕಾಂಶದ ತೀವ್ರ ಕೊರತೆಯಿಂದ ಬಳಲಿರುವ ಮಕ್ಕಳ ಉಪಚಾರಕ್ಕೆ ಶಿಷ್ಟಾಚಾರ ಅಗತ್ಯವಿದೆ. ಪೋಷಕಾಂಶ ಪುನರ್ವಸತಿ ಕೇಂದ್ರದ ಸ್ಥಾಪನೆ, ತಜ್ಞರ ಸಮಿತಿಯು ಶಿಷ್ಟಾಚಾರವನ್ನು ರೂಪಿಸಬೇಕಿದೆ * ಎಡಬ್ಲ್ಯುಡಬ್ಲ್ಯು ನೇಮಕಕ್ಕೆ ಎಲ್ಲರಿಗೂ ಒಂದೇ ನಿಯಮ, ವಿದ್ಯಾರ್ಹತೆ ಹಾಗೂ ನಿವೃತ್ತಿ ವಯಸ್ಸು ನಿಗದಿಪಡಿಸಬೇಕು * ಎಡಬ್ಲ್ಯುಸಿಯಲ್ಲಿ ಪ್ರತ್ಯೇಕ ವೈದ್ಯ ಸೌಲಭ್ಯಗಳು * ಗ್ರಾಮೀಣ, ನಗರ ಮತ್ತು ಮೆಟ್ರೋ ನಗರಗಳಿಗೆ ಪ್ರತ್ಯೇಕವಾಗಿ ಬಾಡಿಗೆ ಪರಿಷ್ಕರಣೆ * ಸಮುದಾಯದ ನೆರವಿನ ಅಗತ್ಯ * ಸಿಬ್ಬಂದಿ ನೇಮಕದಲ್ಲಿ ಹೊಂದಿಕೊಳ್ಳುವಿಕೆ ಮತ್ತು ಷರತ್ತುಗಳ ಪರಿಷ್ಕರಣೆ * ಪಿಎಸ್‌ಇ ಕಿಟ್‌ಗಳಿಗೆ ಮಾದರಿ ಮಾರ್ಗದರ್ಶನ ಸೂತ್ರಗಳು ಹಾಗೂ ದರದ ಪರಿಷ್ಕರಣೆ * ಪಿಎಸ್‌ಇ ಕಿಟ್‌ಗಳ ಗುಣಮಟ್ಟ ಸುಧಾರಣೆ * ಎಡಬ್ಲ್ಯುಸಿಗಳ ಆಧುನಿಕೀಕರಣ * ವಾಹನ ಖರೀದಿ, ಚಾಲಕನ ನೇಮಕ * ಐಸಿಡಿಎಸ್ ಅಧಿಕಾರಿಗಳಿಗೆ ಸಂಚಾರ ವೆಚ್ಚ ಪಾವತಿ * ಕೇಂದ್ರೀಯ ಅನುದಾನದಲ್ಲಿ ಎಡಬ್ಲ್ಯುಸಿಗಳ ನಿರ್ಮಾಣ * ಎಡಬ್ಲ್ಯುಸಿಗಳ ಕೆಲಸದ ಅವಧಿಯನ್ನು 6 ಗಂಟೆಗೆ ಹೆಚ್ಚಿಸುವುದು * ಹೊಂದಿಕೊಳ್ಳಬಲ್ಲ ಅನುದಾನ ಇತ್ಯಾದಿಯನ್ನು ಪ್ರತಿ 3 ವರ್ಷಕ್ಕೊಮ್ಮೆ ಪರಿಷ್ಕರಣೆ * ಪೋಷಕಾಂಶ ಕುರಿತು ರಾಜ್ಯವಾರು ಸಮೀಕ್ಷೆ * ಐವೈಸಿಎಫ್ ಬಗ್ಗೆ ಆರೋಗ್ಯ ಕಾರ್ಯಕರ್ತರಿಗೆ ಸೂಕ್ಷ್ಮತೆ ಮೂಡಿಸುವುದು * ಎಸ್‌ಎನ್‌ಪಿ ವೆಚ್ಚ ಸೂಚ್ಯಂಕ * ಸಮವಸ್ತ್ರದ ವೆಚ್ಚ ಹೆಚ್ಚಳ.

2.2 ಐಸಿಡಿಎಸ್ ಪುನರ್ವಿನ್ಯಾಸ

ಆರು ವರ್ಷದೊಳಗಿನ ಮಕ್ಕಳ ಸಂಪೂರ್ಣಾತ್ಮಕ, ಭೌತಿಕ, ಮಾನಸಿಕೋಸಾಮಾಜಿಕ, ಸಂಜ್ಞಾನಾತ್ಮಕ ಮತ್ತು ಭಾವನಾತ್ಮಕ ಬೆಳವಣಿಗೆಯನ್ನು ಖಾತ್ರಿಪಡಿಸಲು ಐಸಿಡಿಎಸ್ ಯೋಜನೆಯನ್ನು ಸ್ಥಿತ್ಯಂತರಗೊಳಿಸುವ ದೂರದೃಷ್ಟಿಯನ್ನು ಇರಿಸಿಕೊಂಡು, ಪೋಷಿಸುವ, ರಕ್ಷಣಾತ್ಮಕವಾದ, ಮಕ್ಕಳಸ್ನೇಹಿಯಾದ ಮತ್ತು ಲಿಂಗಸೂಕ್ಷ್ಮತೆ ಇರುವ ಕುಟುಂಬ, ಸಮುದಾಯದ ಕಾರ್ಯಕ್ರಮ ಮತ್ತು ಕಾರ್ಯನೀತಿ ಪರಿಸರದಲ್ಲಿ ಬೆಳೆಸಲು ಐಸಿಡಿಎಸ್‌ನ್ನು ಇನ್ನಿತರ ಕಾರ್ಯಕ್ರಮಗಳಾದ ಎನ್‌ಆರ್‌ಎಚ್‌ಎಂ, ಎಸ್‌ಎಸ್‌ಎಯಂತೆ ಸಮರೋಪಾದಿಯಲ್ಲಿ ಅನುಷ್ಠಾನಗೊಳಿಸಬೇಕಿದೆ. ಸಮರೋಪಾದಿಯ ಐಸಿಡಿಎಸ್ ಅನುಷ್ಠಾನವು ಕೇಂದ್ರ, ರಾಜ್ಯ, ಜಿಲ್ಲೆ ಮತ್ತು ವಲಯ ಮಟ್ಟದ ಸೂಕ್ತವಾದ ಸಾಂಸ್ಥಿಕ ಸಂರಚನೆಗಳೊಡನೆ ಹೊಂದಿಕೊಳ್ಳಲಿದೆ ಹಾಗೂ ಉತ್ತರದಾಯಿತ್ವ ಮತ್ತು ಫಲಶ್ರುತಿಯೊಂದಿಗೆ ಜೋಡಿಸಲ್ಪಟ್ಟ ಮಾನವ ಮತ್ತು ಹಣಕಾಸು ಸಂಪನ್ಮೂಲಗಳೊಟ್ಟಿಗೆ ಹೊಂದಿಕೊಳ್ಳಲಿದೆ. ಇದನ್ನು ಆಗುಮಾಡಲು ಮತ್ತು ಮಕ್ಕಳಿಗೆ ಸಂಬಂಧಿಸಿದ ಫಲಿತಾಂಶದ ಮೇಲೆ ಪರಿಣಾಮ ಬೀರಲು ಕಾರ್ಯಕ್ರಮ, ನಿರ್ವಹಣೆ ಹಾಗೂ ಸಾಂಸ್ಥಿಕ ಸುಧಾರಣೆಗಳನ್ನು ಮಾಡಬೇಕಾಗುತ್ತದೆ.

2.2.1 ಕಾರ್ಯಕ್ರಮಕ್ಕೆ ಸಂಬಂಧಿಸಿದ ಸುಧಾರಣೆಗಳು: ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕೇಂದ್ರದಿಂದ ಎಡಬ್ಲ್ಯುಸಿ ಹಂತದವರೆಗೆ ಯೋಜನೆ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದ ಹಲವು ಸುಧಾರಣಾತ್ಮಕ ಕ್ರಿಯೆಗಳಿವೆ. ಲಕ್ಷ್ಯ ಏನೆಂದರೆ,

(i) ಎಡಬ್ಲ್ಯುಸಿಗಳಿಗೆ ಸಾಕಷ್ಟು ಮೂಲಸೌಕರ್ಯ ಹಾಗೂ ಮಾನವ ಸಂಪನ್ಮೂಲ ಒದಗಿಸುವ ಮೂಲಕ ಮಗುವಿಗೆ ಆರು ವರ್ಷ ಆಗುವವರೆಗೆ ಅದರ ದೈಹಿಕ, ಸಂಜ್ಞಾನಾತ್ಮಕ, ಭಾವನಾತ್ಮಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಖಾತ್ರಿಪಡಿಸಲು, ಆರೋಗ್ಯ, ಪೋಷಕಾಂಶ ಮತ್ತು ಆರಂಭಿಕ ಕಲಿಕೆಗೆ ಸಂಬಂಧಿಸಿದಂತೆ ಎಡಬ್ಲ್ಯುಸಿಯನ್ನು `ಚೈತನ್ಯಶೀಲ ಇಸಿಡಿ ಸೆಂಟರ್'ದಂತೆ ಮರುಸ್ಥಾಪನೆ ಮಾಡುವುದು. ಈ ಮೂಲಕ ಗ್ರಾಮದ ಮೊದಲ ಹೊರ ಕೇಂದ್ರದಂತೆ ರೂಪಿಸಿ, ಆರಂಭಿಕ ಬಾಲ್ಯಾವಸ್ಥೆಯ ಪಾಲನೆ ಮತ್ತು ಬೆಳವಣಿಗೆಯನ್ನು ಜೀವನವೃತ್ತ ಮಾರ್ಗದ ಮೂಲಕ ಖಾತ್ರಿಗೊಳಿಸುವುದು. ಎಡಬ್ಲ್ಯುಸಿಗಳನ್ನು ಸಾಕಷ್ಟು ಮೂಲ ಸೌಕರ್ಯಗಳಿರುವ, ಸೌಕರ್ಯಗಳು(ಅಡುಗೆಮನೆ, ಶುದ್ದ ಕುಡಿಯುವ ನೀರು ಮತ್ತು ಮಕ್ಕಳಸ್ನೇಹಿ ಶೌಚಾಲಯ), ಗೋಡೆ ಚಿತ್ರಗಳು, ಆಡಲು ಸ್ಥಳಾವಕಾಶ ಮತ್ತು ಸಂತಸಕರ ಕಲಿಕಾ ಪರಿಸರವಿರುವ ಶಿಶುಸ್ನೇಹಿ ಕೇಂದ್ರವಾಗಿ ಸನ್ನದ್ದಗೊಳಿಸಬೇಕು. ಎಡಬ್ಲ್ಯುಸಿಗಳ ಚಟುವಟಿಕೆಗಳನ್ನು ಹೆಚ್ಚುವರಿ ಗಂಟೆಗಳು(ಕನಿಷ್ಠ 6 ಗಂಟೆ), ಶಿಶುವಿಹಾರ ಮತ್ತು ದಿನಪಾಲನಾ ಕೇಂದ್ರಗಳನ್ನು ನಡೆಸಲು ರಾಜ್ಯಕ್ಕೆ ಅನುಕೂಲ ಆಗುವಂತೆ ವಿಸ್ತರಿಸುವುದಲ್ಲದೆ, ಐಜಿಎಂಎಸ್‍ವೈ ಮತ್ತು ಆರ್‍ಜಿಎಸ್‍ಇಎಜಿ ಜೊತೆಗೆ ಜೋಡಿಸಲು ಆಗುವಂತೆ ಮಾಡಬೇಕು. ಕೆಲಸಕ್ಕೆ ಹೋಗುವ ತಾಯಂದಿರು ಮತ್ತು ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಹಿರಿಯರು ಇಲ್ಲದಿದ್ದ ಪಕ್ಷದಲ್ಲಿ ಆರು ತಿಂಗಳಿನಿಂದ 6 ವರ್ಷದವರೆಗಿನ ಮಕ್ಕಳ ಪಾಲನೆ ಮತ್ತು ಬೆಳವಣಿಗೆಗೆ ದಿನಪಾಲನಾ ಕೇಂದ್ರಗಳು ಅತ್ಯಗತ್ಯವಾಗಿರುತ್ತವೆ. ವಸತಿ ಪ್ರದೇಶಗಳ ಹಂತದವೆಗೆ ವ್ಯಾಪ್ತಿ ಹೊಂದಿರುವ ಎಡಬ್ಲ್ಯುಸಿಗಳಲ್ಲಿ ಹಗಲುವೇಳೆ ಶಿಶುಪಾಲನೆ ಸೌಲಭ್ಯವನ್ನು ಒದಗಿಸುವ ಅಗತ್ಯವಿದೆ. ಆರಂಭದಲ್ಲಿ ಶೇ.5 ರಷ್ಟು ಎಡಬ್ಲ್ಯುಸಿಗಳನ್ನು ಎಡಬ್ಲ್ಯುಸಿ+ ಶಿಶುವಿಹಾರವಾಗಿ ಪರಿವರ್ತಿಸಿ, ಇವುಗಳ ವೆಚ್ಚವನ್ನು 75:25 ಅನುಪಾತದಲ್ಲಿ ರಾಜ್ಯಗಳಿಗೆ ಹೊಂದಿಸಿಕೊಳ್ಳುವ ಅವಕಾಶ ನೀಡಿ, ಹಂಚಿಕೊಳ್ಳಬಹುದು. ಈ ಮಾದರಿಯನ್ನು ಅನುಷ್ಠಾನಗೊಳಿಸುವ ಎನ್‍ಜಿಒಗಳನ್ನು ತೊಡಗಿಸಿಕೊಳ್ಳಲು ರಾಜ್ಯಗಳಿಗೆ ಅವಕಾಶ ನೀಡಬೇಕು. 21 ಆಯ್ದ ಪ್ರದೇಶಗಳಲ್ಲಿ ಎಡಬ್ಲ್ಯುಸಿ+ ಶಿಶುಪಾಲನೆ ಸೇವೆಗಳನ್ನು ಆರಂಭಿಸಲು ವಿಸ್ತೃತ ಮಾರ್ಗದರ್ಶಿ ಸೂತ್ರಗಳನ್ನು ಅನುಬಂಧ I ರಲ್ಲಿ ನೀಡಲಾಗಿದೆ.

(ii) ಸೂಕ್ತವಾದ ಎಡಬ್ಲ್ಯುಸಿ ಕಟ್ಟಡ ಮತ್ತು ಮೂಲಸೌಲಭ್ಯ: ಎಡಬ್ಲ್ಯುಸಿಗಳಿಗೆ ಸಾಕಾಗುವಷ್ಟು ಮತ್ತು ಸಮರ್ಪಕ ಮೂಲಸೌಲಭ್ಯಗಳನ್ನು ಹೊಸ ಕಟ್ಟಡಗಳ ನಿರ್ಮಾಣ, ಲಭ್ಯವಿರುವ ಕಟ್ಟಡಗಳ ನಿರ್ವಹಣೆ ಮತ್ತು ದುರಸ್ತಿಯಲ್ಲದೆ, ಬಾಡಿಗೆ ಹೆಚ್ಚಳಕ್ಕೆ ಅವಕಾಶ ನೀಡುವ ಮೂಲಕ ಐಸಿಡಿಎಸ್ ಮಿಷನ್‍ನ ಪರಿಣಾಮಕಾರಿ ಅನುಷ್ಠಾನವನ್ನು ಖಾತ್ರಿಗೊಳಿಸಬೇಕು. ಇದನ್ನು ಕೆಳಕಂಡ ನಿರ್ದಿಷ್ಟ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಸಾಧಿಸಬಹುದು; (ಎ) ಎಡಬ್ಲ್ಯುಸಿ ಕಟ್ಟಡಗಳ ನಿರ್ಮಾಣ: ಸಾರ್ವತ್ರೀಕರಣದ ಬಳಿಕ ಅಂಗೀಕಾರಗೊಂಡ 14 ಲಕ್ಷ ಅಂಗನವಾಡಿಗಳಲ್ಲಿ 13.19 ಲಕ್ಷ ಅಂಗನವಾಡಿಗಳು ಕಾರ್ಯಾರಂಭ ಮಾಡಿದವು (ಆಗಸ್ಟ್ 2012). ಲಭ್ಯ ಮಾಹಿತಿ ಪ್ರಕಾರ, ಶೇ. 46-50 ರಷ್ಟು ಅಂಗನವಾಡಿಗಳು ಪಕ್ಕಾ ಕಟ್ಟಡ/ಶಾಲೆ ಕಟ್ಟಡಗಳು/ಶಾಲೆ ಮತ್ತು ಸಮುದಾಯ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆದ್ದರಿಂದ, ಅಂದಾಜು 7 ಲಕ್ಷ ಅಂಗನವಾಡಿಗಳು ತಮ್ಮದೇ ಆದ ಸ್ವಂತ ಕಟ್ಟಡವನ್ನು ಹೊಂದಿಲ್ಲ. ಉತ್ತಮ ಸೇವೆ ನೀಡಲು ಅಂಗನವಾಡಿ ಕೇಂದ್ರಕ್ಕೆ ಪಕ್ಕಾ ಕಟ್ಟಡ ನೀಡುವುದು, ಒಂದೋ ಸ್ವಂತ ಇಲ್ಲವೇ ಬಾಡಿಗೆ, ಅಗತ್ಯವಾಗಿರಲಿದೆ. ರಾಜ್ಯಗಳು ಸುಮಾರು ಶೇ.20ರಷ್ಟು ಅಂಗನವಾಡಿ ಕೇಂದ್ರಗಳ ಅಗತ್ಯವನ್ನು ಇನ್ನಿತರ ಕಾರ್ಯಕ್ರಮಗಳಾದ ಬಿಆರ್‍ಜಿಎಫ್, ಎಂಎಸ್‍ಡಿಪಿ ಇತ್ಯಾದಿಯೊಡನೆ ಏಕತ್ರಗೊಳಿಸುವ ಮೂಲಕ ಪಡೆದುಕೊಳ್ಳಬಹುದು ಎಂದು ನಿರೀಕ್ಷಿಸಲಾಗಿದೆ. ಅಷ್ಟಲ್ಲದೆ, ಶೇ.20-25ರಷ್ಟು

ಅಂಗನವಾಡಿಗಳು ಬಾಡಿಗೆಗೆ ಪಡೆದ ಕಟ್ಟಡಗಳಲ್ಲಿ ನಡೆಯಲಿವೆ. ನಗರ ಪ್ರದೇಶದಲ್ಲಿರುವ ಕೇಂದ್ರಗಳು/ಅಧಿಕ ಜನಸಂಖ್ಯೆಯಿರುವ ಗ್ರಾಮಗಳಲ್ಲಿ ಇದು ಸೂಕ್ತ. ಇನ್ನುಳಿದ 4 ಲಕ್ಷ ಅಂಗನವಾಡಿ ಕೇಂದ್ರಗಳನ್ನು ಐಸಿಡಿಎಸ್ ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನದಿಂದ ನಿರ್ಮಿಸಬೇಕಾಗುತ್ತದೆ. 12 ನೇ ಪಂಚವಾರ್ಷಿಕ ಯೋಜನೆ ವೇಳೆಯಲ್ಲಿ ಐಸಿಡಿಎಸ್ ಮಿಷನ್ ಕಟ್ಟಡವೊಂದಕ್ಕೆ 4.5 ಲಕ್ಷ ರೂ. ವೆಚ್ಚದಲ್ಲಿ 2 ಲಕ್ಷ ಅಂಗನವಾಡಿ ಕೇಂದ್ರಗಳನ್ನು ನಿರ್ಮಿಸಲಿದೆ. ಉಳಿದ ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕೆ ರಾಜ್ಯ ಸರ್ಕಾರವು ಬಿಆರ್‌ಜಿಎಫ್, ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮ, ಎಂಎಸ್‌ಡಿಪಿ, ಐಎಪಿ, ನರೇಗಾ, 13 ನೇ ಹಣಕಾಸು ಆಯೋಗ, ಎಸಿಎ, ಎಂಪಿಎಲ್‌ಡಿ, ಎಂಎಲ್‌ಎಎಲ್‌ಎಡಿ ಇತ್ಯಾದಿ ಅನುದಾನವನ್ನು ಬಳಸಿಕೊಳ್ಳಬೇಕಾಗುತ್ತದೆ. ಅಷ್ಟಲ್ಲದೆ, ಯೋಜನಾ ಆಯೋಗವು ರಾಜ್ಯ ಸರ್ಕಾರಗಳು ಹಾಗೂ ಸಂಬಂಧಿಸಿದ ಸಚಿವಾಲಯಗಳಿಗೆ ರಾಜ್ಯ ಸಂಪನ್ಮೂಲದಿಂದ ಮಾತ್ರವಲ್ಲದೆ ಮೇಲಿನ ಯೋಜನೆಗಳ ಅನುದಾನದಿಂದ ಕಡ್ಡಾಯವಾಗಿ ಹಣ ನಿರ್ದೇಶನ ನೀಡಬಹುದು. ಎಡಬ್ಲ್ಯುಸಿ ಕಟ್ಟಡಗಳ ವೆಚ್ಚ ರಾಜ್ಯ ದರಪಟ್ಟಿ(ಎಸ್‌ಒಆರ್) ಮತ್ತು ಎಂಡಬ್ಲ್ಯುಸಿಡಿ ಹೊರಡಿಸಿದ ಮಾರ್ಗದರ್ಶಿ ಸೂತ್ರಕ್ಕೆ ಅನುಗುಣವಾಗಿ ಇರಲಿದೆ. ಈ ಎಲ್ಲ ಪ್ರಯತ್ನಗಳ ಮೂಲಕ ಮತ್ತು ಮುಖ್ಯವಾಗಿ, ಎಂಎನ್‌ಆರ್‌ಇಜಿಎಯನ್ನು ಒಮ್ಮುಖಗೊಳಿಸುವ ವರ್ಧನಾ ಪರಿಣಾಮದ ಮೂಲಕ ರಾಜ್ಯಗಳು ಉಳಿದ ಎಲ್ಲ ಅಂಗನವಾಡಿ ಕಟ್ಟಡಗಳನ್ನು ಪೂರ್ಣಗೊಳಿಸಬಹು ದಾಗಿದೆ. ಎಡಬ್ಲ್ಯುಸಿ ಕಟ್ಟಡಗಳ ನಿರ್ಮಾಣ ದರದ ಪರಿಷ್ಕರಣೆ ಅಂದರೆ, ಘಟಕವೊಂದಕ್ಕೆ 4.5 ಲಕ್ಷ ರೂ. ಎನ್‌ಇಆರ್‌ಗೂ ಅನ್ವಯವಾಗಲಿದೆ. ಈ ಭಾಗದ ವೆಚ್ಚ ಹಂಚಿಕೆಯು 75:25 ಇರಲಿದ್ದು, ಎನ್‌ಇಆರ್‌ನಲ್ಲಿ ಇದು 90.10 ರಂತೆ ಮುಂದುವರಿಯಲಿದೆ. ಎಡಬ್ಲ್ಯುಸಿ ಕಟ್ಟಡಗಳ ನಿರ್ಮಾಣವನ್ನು ಯೋಜಿಸುವಾಗ ಅವು ಶಾಲೆಯ ಪಕ್ಕದಲ್ಲಿರುತ್ತವೆ ಮತ್ತು/ಅಥವಾ ನಿರ್ಮಾಣವನ್ನು ಗುಚ್ಛದಲ್ಲಿ ಮಾಡಲಾಗುತ್ತದೆ; ಗ್ರಾಮಗಳಲ್ಲಿ ಒಂದಕ್ಕಿಂತ ಹೆಚ್ಚು ಎಡಬ್ಲ್ಯುಸಿಗಳಿರಬ ಹುದು ಎಂಬ ವಾಸ್ತವದ ಬಗ್ಗೆ ಗಮನ ನೀಡಬೇಕು ಮತ್ತು ಈ ದೂರವನ್ನು ಕ್ರಮಿಸುವ ಮಗುವಿನ ಸೌಕರ್ಯವನ್ನು ರಾಜಿ ಮಾಡಿಕೊಳ್ಳದಂತೆ ನಿರ್ಮಾಣ ವೆಚ್ಚವನ್ನು ತಾರ್ಕಿಕಗೊಳಿಸಬೇಕಾಗುತ್ತದೆ. ಬಹುತೇಕ ಎಲ್ಲ ರಾಜ್ಯಗಳು ಮಾದರಿ ಅಂಗನವಾಡಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಿದ್ದು, ಅವುಗಳನ್ನು ಸೂಕ್ತವಾಗಿ ಪರಿಗಣಿಸಬೇಕಾಗುತ್ತದೆ. ಎಂಡಬ್ಲ್ಯುಸಿಡಿ ಪ್ರಕಟಿಸಿದ ಮಾರ್ಗದರ್ಶಿ ಸೂತ್ರಗಳ ಪ್ರಕಾರ, ಎಡಬ್ಲ್ಯುಸಿಗಳು ಮಕ್ಕಳಸ್ನೇಹಿಯಾಗಿದ್ದು, ಎಲ್ಲ ಅಗತ್ಯ ಮೂಲಸೌಲಭ್ಯ ಹೊಂದಿರಬೇಕು ಮತ್ತು ವಿಸ್ತಾರ ಕನಿಷ್ಠ 600 ಚದರ ಅಡಿ ಇರಬೇಕು. ಈ ಕುರಿತ ಎಂಡಬ್ಲ್ಯುಸಿಡಿಯ ಪತ್ರವನ್ನು ಅನುಬಂಧ IIರಲ್ಲಿ ನೀಡಲಾಗಿದೆ. ಎಡಬ್ಲ್ಯುಸಿಗಳನ್ನು ಕೆಳಕಂಡಂತೆ ನಿರ್ಮಿಸಬೇಕಾಗುತ್ತದೆ(ಇದು ಇಡೀ ದೇಶಕ್ಕೆ ಅನ್ವಯಿಸುತ್ತದೆ.) ಹಂತಗಳಲ್ಲಿ ಎಡಬ್ಲ್ಯುಸಿಗಳ ನಿರ್ಮಾಣದ ವಿವರ:

| ಸಂಖ್ಯೆ | ವಿವರ | ವರ್ಷ 1 | ವರ್ಷ 2 | ವರ್ಷ 3 | ವರ್ಷ 4 | ವರ್ಷ 5 | ಒಟ್ಟು |
|---|---|---|---|---|---|---|---|
| 1 | ಒಟ್ಟು ನಿರ್ಮಿಸಬೇಕಾದ ಎಡಬ್ಲ್ಯುಸಿಗಳು | 0 | 20,000 | 50,000 | 60,000 | 70,000 | 2,00,000 |
| 2 | ಒಟ್ಟು ಪ್ರಮಾಣದಲ್ಲಿ ಶೇಕಡಾವಾರು | 0 | 10 | 25 | 30 | 35 | 100 |
| 3 | ಇತರ ರಾಜ್ಯಗಳಲ್ಲಿ ನಿರ್ಮಾಣ | 0 | 18,500 | 46,250 | 55,500 | 64,750 | 1,85,000 |

| | | | | | | | |
|---|---|---|---|---|---|---|---|
| 4 | ಎನ್ಇಆರ್ ರಾಜ್ಯಗಳಲ್ಲಿ ನಿರ್ಮಾಣ | 0 | 1,500 | 3,750 | 4,500 | 5,250 | 15,000 |

ರಾಜ್ಯಗಳು ಈ ಯೋಜನಾವಧಿಗೆ ಯೋಜಿತ ಯೋಜನೆಯನ್ನು ಹಂತಹಂತವಾಗಿ ಸಿದ್ದಪಡಿಸಿ ಪ್ರಸ್ತುತಪಡಿಸಬೇಕಿದ್ದು, ಎಡಬ್ಲ್ಯುಸಿಗಳ ಸ್ವಂತ ಹಾಗೂ ಮೀಸಲಿಟ್ಟ ಕಟ್ಟಡಗಳು ಎಷ್ಟು ಇವೆ ಎನ್ನುವ ವಿವರ ನೀಡಬೇಕಾಗುತ್ತದೆ ಮತ್ತು ವಿವಿಧ ಯೋಜನೆಗಳಡಿ ಎಷ್ಟು ಕಟ್ಟಡಗಳನ್ನು ನಿರ್ಮಿಸಲಾಗುತ್ತದೆ ಹಾಗೂ ಉದ್ದೇಶಿತ ಅಗತ್ಯಗಳೆಷ್ಟಿದೆ ಎಂಬುದನ್ನು ತಿಳಿಸಬೇಕಾಗುತ್ತದೆ. (ಬಿ) ಮೇಲ್ದರ್ಜೆಗೇರಿಸುವಿಕೆ ಮತ್ತು ನಿರ್ವಹಣೆ: ಸ್ವಂತ ಕಟ್ಟಡ ಇರುವ ಮತ್ತು ಮೂಲಸೌಲಭ್ಯದ ಕೊರತೆ ಇರುವ ಎಡಬ್ಲ್ಯುಸಿಗಳಿಗೆ ಮಕ್ಕಳಸ್ನೇಹಿ ಕಟ್ಟಡಗಳು, ನೀರಿನ ಪೂರೈಕೆ ಮತ್ತು ಶೌಚಾಲಯಗಳು ಸೇರಿದಂತೆ ಮೇಲ್ದರ್ಜೆಗೇರಿಸುವಿಕೆಗೆ ಅನುದಾನ ನೀಡಲಾಗುತ್ತದೆ. ಈ ಉದ್ದೇಶಕ್ಕಾಗಿ ಕಟ್ಟಡವೊಂದಕ್ಕೆ 1,00,000 ರೂ. (ಎಡಬ್ಲ್ಯುಸಿ ಮತ್ತು ಶಿಶುವಿಹಾರ)ಗಳನ್ನು 75:25 ಅನುಪಾತದಲ್ಲಿ ವೆಚ್ಚ ಹಂಚಿಕೆ ಆಧಾರದಲ್ಲಿ ಐಸಿಡಿಎಸ್ ಮಿಷನ್ ಅಡಿ ಕೊಡಲಾಗುತ್ತದೆ. ಇನ್ನಿತರ ಮಂತ್ರಾಲಯಗಳ ವಿವಿಧ ಕಾರ್ಯಕ್ರಮಗಳಡಿ ನಿರ್ಮಾಣಗೊಂಡಿರುವ ಎಡಬ್ಲ್ಯುಸಿಗಳಿಗೆ ಅದರ ಮೇಲೆ ನೀಡುವಂಥದ್ದು. ಕೆಳಗೆ ಉಲ್ಲೇಖಿಸಿದಂತೆ 2 ಲಕ್ಷ ಎಡಬ್ಲ್ಯುಸಿ ಕಟ್ಟಡಗಳನ್ನು ಮೇಲ್ದರ್ಜೆಗೇರಿಸಲಾಗುತ್ತದೆ.
ಎಡಬ್ಲ್ಯುಸಿಗಳ ಮೇಲ್ದರ್ಜೆಗೇರಿಸುವಿಕೆಯ ಹಂತಹಂತದ ವಿವರ

| ಸಂಖ್ಯೆ | ವಿವರ | ವರ್ಷ 1 | ವರ್ಷ 2 | ವರ್ಷ 3 | ವರ್ಷ 4 | ವರ್ಷ 5 | ಒಟ್ಟು |
|---|---|---|---|---|---|---|---|
| 1 | ಮೇಲ್ದರ್ಜೆಗೇರಿಸುವ ಎಡಬ್ಲ್ಯುಸಿಗಳು | 0 | 30,000 | 50,000 | 60,000 | 60,000 | 2,00,000 |

ಪ್ರಸ್ತುತ ಸರ್ಕಾರ ನಿರ್ಮಿಸಿದ ಮತ್ತು ಮಾಲೀಕತ್ವದ ಎಡಬ್ಲ್ಯುಸಿಗಳ ನಿರ್ವಹಣೆ ಹಾಗೂ ದುರಸ್ತಿಗೆ ಅವಕಾಶವಿಲ್ಲ; ಈ ಉದ್ದೇಶಕ್ಕಾಗಿ ಯಾವುದೇ ಅನುದಾನ ನೀಡುತ್ತಿಲ್ಲ. ಅನುದಾನವಿಲ್ಲದೆ ಇರುವುದರಿಂದ, ಈ ಕಟ್ಟಡಗಳ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಸಣ್ಣ ಮಕ್ಕಳ ಸುರಕ್ಷತೆ ಹಾಗೂ ಒಳಿತಿಗಾಗಿ ಸುರಕ್ಷಿತ, ಸದೃಢ ಮತ್ತು ಉತ್ತಮವಾಗಿ ನಿರ್ವಹಿಸಿದ ಕಟ್ಟಡದ ಅಗತ್ಯವಿದೆ. ಸಣ್ಣ ಪ್ರಮಾಣದ/ದುರಸ್ತಿಗೆ ಅನುದಾನ ನೀಡುವ ಅಗತ್ಯವಿದೆ. ಇದನ್ನು ದೃಷ್ಟಿಯಲ್ಲಿರಿಸಿಕೊಂಡು, ಸವಕಳಿಗೆಂದು ಹಾಗೂ ಐಸಿಡಿಎಸ್ ಮಿಷನ್ ಅಡಿ ಸರ್ಕಾರದ ಮಾಲೀಕತ್ವದ ಎಲ್ಲ ಎಡಬ್ಲ್ಯುಸಿ ಕಟ್ಟಡಗಳಿಗೆ ವಾರ್ಷಿಕ 2,000 ರೂ.(ಒಟ್ಟು ಅಂದಾಜು 7 ಲಕ್ಷ ರೂ.) ಕೊಡಲಾಗುತ್ತದೆ. ಕೇಂದ್ರ-ರಾಜ್ಯದ ಹಂಚಿಕೆಯ ಅನುಪಾತ 75:25. ಬಾಡಿಗೆಗೆ ಪಡೆದ ಕಟ್ಟಡಗಳಿಗೆ ಇದು ಅನ್ವಯಿಸುವುದಿಲ್ಲ. (ಸಿ)ಬಾಡಿಗೆ ಹೆಚ್ಚಳ: ಪ್ರಸ್ತುತ ಅಂದಾಜು 4 ಲಕ್ಷ ಎಡಬ್ಲ್ಯುಸಿಗಳು ಬಾಡಿಗೆ ಕಟ್ಟಡದಲ್ಲಿವೆ ಎಂದು ವರದಿಯಾಗಿದೆ. ಬಾಡಿಗೆ ಗ್ರಾಮೀಣ ಪ್ರದೇಶದಲ್ಲಿ 200 ರೂ. ಮತ್ತು ನಗರ ಪ್ರದೇಶದಲ್ಲಿ 750 ರೂ. ಇದೆ. ಅಗತ್ಯವಿರುವ ಸ್ಥಳಾವಕಾಶ, ವಾತಾವರಣ ಮತ್ತು ಹಾಲಿ ಬಾಡಿಗೆ ದರಗಳನ್ನು ನೋಡಿದರೆ, ಈ ಮೊತ್ತ ಏನೇನೂ ಸಾಲದು. ಈ ಬಾಡಿಗೆಗೆ ಉತ್ತಮ ಕಟ್ಟಡಗಳು ಸಿಗುವುದಿಲ್ಲ ಎಂದು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಹೇಳಿವೆ. ಇದರಿಂದಾಗಿ ಎಡಬ್ಲ್ಯುಸಿಗಳ ಮಾಸಿಕ ಬಾಡಿಗೆಯನ್ನು ಕೆಳಕಂಡಂತೆ ಹೆಚ್ಚಿಸಲು ನಿರ್ಧರಿಸಲಾಯಿತು; * ಗ್ರಾಮೀಣ/ಆದಿವಾಸಿ ಪ್ರದೇಶಗಳಲ್ಲಿರುವ ಎಡಬ್ಲ್ಯುಸಿ/ಸಣ್ಣ ಎಡಬ್ಲ್ಯುಸಿಗಳಿಗೆ 750 ರೂ.ವರೆಗೆ * ನಗರ/ಪಟ್ಟಣದ ವರ್ಗ/ಹಂತವನ್ನು ಆಧರಿಸಿ, ಎಡಬ್ಲ್ಯುಸಿ/ಸಣ್ಣ ಎಡಬ್ಲ್ಯುಸಿಗಳಿಗೆ ಮಾಸಿಕ 3,000 ರೂ. * ಮೆಟ್ರೋಪಾಲಿಟನ್ ನಗರಗಳ ಎಡಬ್ಲ್ಯುಸಿ/ಸಣ್ಣ ಎಡಬ್ಲ್ಯುಸಿಗಳಿಗೆ 5,000 ರೂ.ವರೆಗೆ ಅಗತ್ಯ ಮೂಲಸೌಕರ್ಯದೊಂದಿಗೆ ಕನಿಷ್ಠ 600 ಚದರ ಅಡಿ ಸ್ಥಳಾವಕಾಶವಿರುವ ಕೇಂದ್ರಗಳಿಗೆ ಮಾತ್ರ ಪರಿಷ್ಕರಿಸಿದ ಬಾಡಿಗೆ ಅನ್ವಯವಾಗುತ್ತದೆ. ಮಕ್ಕಳಸ್ನೇಹಿ ಎಡಬ್ಲ್ಯುಸಿಗಳು ಕುಡಿಯುವ ನೀರು ಮತ್ತು

ಶೌಚಾಲಯ ಮತ್ತಿತರ ಸೌಲಭ್ಯಗಳನ್ನು ಹೊಂದಿದ್ದು, ಅವುಗಳ ಮಾನದಂಡಗಳು ಮತ್ತು ಮಾದರಿಗಳು ಯೋಜನೆಯ ಅನುಷ್ಠಾನ ಮಾರ್ಗದರ್ಶಿ ಸೂತ್ರಗಳಲ್ಲಿದ್ದು, ಕಟ್ಟಡಗಳನ್ನು ಬಾಡಿಗೆಗೆ ತೆಗೆದುಕೊಳ್ಳುವಾಗ ಅದನ್ನು ಕಡ್ಡಾಯ ವಾಗಿ ಅನುಸರಿಸಬೇಕಾಗುತ್ತದೆ. ಎಲ್ಲಿ ಅಂಥ ಕಟ್ಟಡ ಮತ್ತು/ಅಥವಾ ಲಭ್ಯವಿಲ್ಲವೋ, ಅಂಥ ಕೇಂದ್ರಗಳನ್ನು ಸ್ಥಳಾಂತರಿಸಬೇಕು ಇಲ್ಲವೇ ಶೌಚಾಲಯವನ್ನು ನಿರ್ಮಿಸಲು ಹಾಗೂ ಕುಡಿಯುವ ನೀರನ್ನು ಒದಗಿಸಲು ಕಟ್ಟಡದ ಮಾಲೀಕನಿಗೆ 6 ತಿಂಗಳು ಕಾಲಾವಕಾಶ ನೀಡಬೇಕು. ಅಲ್ಲಿಯವರೆಗೆ, ಬಾಡಿಗೆಯ ಹೆಚ್ಚುವರಿ ಜಾರಿಗೆ ಬರುವುದಿಲ್ಲ. ಘಟಕವೊಂದರ ಬಾಡಿಗೆಯನ್ನು ಸಿಪಿಡಬ್ಲ್ಯುಡಿ/ಪಿಡಬ್ಲ್ಯುಡಿ/ಬಾಡಿಗೆ ನಿರ್ಧಾರಕರು ಕೊಡುವ ಬಾಡಿಗೆ ಸಂಗತತೆ ಪ್ರಮಾಣಪತ್ರವನ್ನು ಆಧರಿಸಿ ನಿರ್ಧರಿಸಲಾಗುತ್ತದೆ. ಬಾಡಿಗೆಯಲ್ಲಿ ಕೇಂದ್ರ-ರಾಜ್ಯದ ವೆಚ್ಚ ಹಂಚಿಕೊಳ್ಳುವಿಕೆ ಅನುಪಾತ 90:10 ಆಗಿರಲಿದೆ. (ಡಿ)

ಸಿಡಿಪಿಒ ಕಟ್ಟಡಗಳ ಬಾಡಿಗೆ ಹೆಚ್ಚಳ: 7,076 ಐಡಿಎಸ್ ಯೋಜನೆಗಳಿಗೆ ಅನುಮತಿ ನೀಡಲಾಗಿದ್ದು, ಇದರಲ್ಲಿ ಹೆಚ್ಚಿನವು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಸಿಡಿಪಿಒ ಕಟ್ಟಡಗಳಿಗೆ ಗ್ರಾಮಾಂತರ ಪ್ರದೇಶ/ಆದಿವಾಸಿ ಪ್ರದೇಶಗಳಲ್ಲಿ ವಾರ್ಷಿಕ 30,000 ರೂ. ಹಾಗೂ ನಗರ ಪ್ರದೇಶಗಳಲ್ಲಿ 40,000 ರೂ. ಬಾಡಿಗೆ ನೀಡಲಾಗುತ್ತಿದೆ. ಐಸಿಡಿಎಸ್ ಮಿಷನ್ ಅಡಿ ಸಿಡಿಪಿಒ ಕಟ್ಟಡಗಳ ಬಾಡಿಗೆಯನ್ನು ವಾರ್ಷಿಕ 79,200 ರೂ. (ತಿಂಗಳಿಗೆ 6,600 ರೂ.)ಗೆ ಹೆಚ್ಚಿಸಲಾಗಿದ್ದು, ಇದರಲ್ಲಿ ಕೇಂದ್ರ-ರಾಜ್ಯದ ಹಂಚಿಕೆ ಅನುಪಾತ 75:25 ಇರಲಿದೆ. (iii) ಐಸಿಡಿಎಸ್ ಮಿಷನ್ ಅಡಿ ಆರು ಸೇವೆಗಳ ಕಟ್ಟು(ಪ್ಯಾಕೇಜ್) ಮುಂದುವರಿಕೆಯಾಗಲಿದೆ. ಆದರೆ, ಅವುಗಳನ್ನು ಮರುಸಂಘಟಿಸಲಾಗುತ್ತದೆ ಮತ್ತು ಮರುವಿನ್ಯಾಸಗೊಳಿಸಲಾಗುತ್ತದೆ. ಅಂಗನವಾಡಿಗಳು ಉಣಿಸುವ ಕೇಂದ್ರಗಳು ಎನ್ನುವ ದೃಷ್ಟಿಕೋನ ಬದಲಾಗಬೇಕಿದೆ. ಇದಕ್ಕಾಗಿ ಅವುಗಳನ್ನು ಆರಂಭಿಕ ಬಾಲ್ಯಾವಸ್ಥೆಯ ಪಾಲನೆ ಮತ್ತು ಬೆಳವಣಿಗೆ ಕೇಂದ್ರಗಳಾಗಿ ಪರಿವರ್ತಿಸಬೇಕಾಗುತ್ತದೆ. ಈ ಬದಲಾವಣೆಯೊಂದಿಗೆ, ಪ್ರಸ್ತುತ ನೀಡಲಾಗುತ್ತಿರುವ ಸೇವೆಗಳ ಕಟ್ಟನ್ನು ಕೆಳಕಂಡಂತೆ ಪುನರ್ ರೂಪಿಸಲಾಗುತ್ತದೆ;

ಸಂಖ್ಯೆ..................ಘಟಕಗಳು..............ಸೇವೆಗಳು.....................ಪ್ರಮುಖ ಮಧ್ಯಸ್ತಿಕೆಗಳು.....................ನಿರ್ದೇಶಿತ ಗುಂಪು.....................ಸೇವೆ ಪೂರೈಕೆದಾರ

1. ಆರಂಭಿಕ ಬಾಲ್ಯಾವಸ್ಥೆ ಪಾಲನೆ ಶಿಕ್ಷಣ ಮತ್ತು ಬೆಳವಣಿಗೆ(ಇಸಿಸಿಇಡಿ) ಆರಂಭಿಕ ಪಾಲನೆ ಮತ್ತು ಶಿಕ್ಷಣ(ಇಸಿಸಿಇ)/ಶಾಲಾಪೂರ್ವ ಅನೌಪಚಾರಿಕ ಶಿಕ್ಷಣ * ಪೋಷಕರಿಗೆ ಮನೆಯಲ್ಲೇ ಮಾರ್ಗದರ್ಶನ * ಆರಂಭಿಕ ಉತ್ತೇಜನ * ಆರಂಭದಲ್ಲೇ ಪರಿಶೀಲನೆ ಮತ್ತು ಪರಾಮರ್ಶನ * ಐವೈಸಿಎಫ್ ಅನುಕೂಲಕರ ಆಚರಣೆಗಳು *ಮಕ್ಕಳ ಬೆಳವಣಿಗೆ ಮತ್ತು ಪ್ರಗತಿಯ ಮೈಲುಗಲ್ಲುಗಳ ಮಾಸಿಕ ಪರಾಮರ್ಶನ ಮತ್ತು ಉತ್ತೇಜನ * ನಿಗದಿತ ಮಾಸಿಕ ಗ್ರಾಮ ಇಸಿಸಿಇ ದಿನಗಳು..........0-3 ವರ್ಷ...... ಪೋಷಕರು/ಪಾಲಕರು................ಎಡಬ್ಲ್ಯುಡಬ್ಲ್ಯು ಮತ್ತು ದ್ವಿತೀಯ ಎಡಬ್ಲ್ಯುಡಬ್ಲ್ಯು ಹಾಗೂ ಮಕ್ಕಳ ಪಾಲನೆ ಮತ್ತು ಪೋಷಕಾಂಶ ಸಲಹೆಗಾರರು......................ಅನೌಪಚಾರಿಕ ಶಾಲಾ ಪೂರ್ವ ಶಿಕ್ಷಣ ಎ)ಚಟುವಟಿಕೆ ಆಧಾರಿತ ಬಿ)ಅರೆ ಸಂರಚಿತ ಆಟಗಳು ಮತ್ತು ಕಲಿಕಾ ವಿಧಾನ * ಮಕ್ಕಳ ಬೆಳವಣಿಗೆ ಮತ್ತು ಪ್ರಗತಿಯ ಮೈಲುಗಲ್ಲುಗಳ ತ್ರೈಮಾಸಿಕ ಪರಾಮರ್ಶನ ಮತ್ತು ಉತ್ತೇಜನ * ನಿಗದಿತ ಮಾಸಿಕ ಗ್ರಾಮ ಇಸಿಸಿಇ ದಿನಗಳು...ಪೂರಕ ಪೋಷಕಾಂಶ * ನಿಯಮದನ್ವಯ ಬೆಳಗಿನ ಉಪಾಹಾರ, ಬಿಸಿಯೂಟ ಮತ್ತು ಟಿಎಚ್ಆರ್......... ಎಡಬ್ಲ್ಯುಡಬ್ಲ್ಯು.....3-6 ವರ್ಷ ಪೋಷಕರು/ಪಾಲಕರು..... 6 ತಿಂಗಳಿನಿಂದ 3 ವರ್ಷ... ಪಿ ಮತ್ತು ಎಲ್ ತಾಯಂದಿರು.........ಆಶಾ/ಎಎನ್ಎಂ/ಎಂಒ/2ನೇ ಎಡಬ್ಲ್ಯುಡಬ್ಲ್ಯು ಮತ್ತು ಪೋಷಣಾ ಸಲಹೆಗಾರರು....... ಎಡಬ್ಲ್ಯುಡಬ್ಲ್ಯು/ದ್ವಿತೀಯ ಎಡಬ್ಲ್ಯುಡಬ್ಲ್ಯು/ ಎಡಬ್ಲ್ಯುಎಚ್/ಎಸ್ಎಚ್ಜಿ/ಇನ್ನಿತರರು

2. ಪಾಲನೆ ಮತ್ತು ಪೋಷಕಾಂಶ ಸಲಹೆ.......ನವಜಾತ ಮತ್ತು ಎಳೆಯ ಮಕ್ಕಳ ಉಣಿಸುವಿಕೆ(ಐವೈಸಿಎಫ್) ಉತ್ತೇಜನ ಮತ್ತು ಸಲಹೆ.........* ಬೆಳವಣಿಗೆಯ ಪರಾಮರ್ಶನದೊಂದಿಗೆ ತಳಕು ಹಾಕಿಕೊಂಡ ಗರಿಷ್ಠ ಎದೆ ಹಾಲು ಉಣಿಸುವಿಕೆಗೆ ಎದುರುಬದುರು ಸಲಗೆ * ಪೂರಕ ಉಣಿಸುವಿಕೆಗೆ ಮುಖಾಮುಖಿ ಸಲಹೆ * ಆಹಾರ ಸೇವನೆ ಖಾತ್ರಿಗೊಳಿಸಲು ಸಲಹೆ * ಮನೆಗೆ ಭೇಟಿ

ಹಾಗೂ ಅನುಸರಣೆ..........ಪಿ ಮತ್ತು ಎಲ್ ತಾಯಂದಿರು * 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ತಾಯಂದಿರು...............ಎಡಬ್ಲ್ಯುಡಬ್ಲ್ಯು/ದ್ವಿತೀಯ ಎಡಬ್ಲ್ಯುಡಬ್ಲ್ಯು ಮತ್ತು ಪೋಷಣಾ ಸಲಹೆಗಾರರು/ಮೇಲ್ವಿಚಾರಕರು............. ತಾಯಂದಿರ ಪಾಲನೆ ಮತ್ತು ಸಲಹೆ.........* ಗರ್ಭಧಾರಣೆಯ ಆರಂಭದಲ್ಲೇ ನೋಂದಣಿ 3 ಅಥವಾ ಅದಕ್ಕಿಂತ ಅಧಿಕ ಎಎನ್‌ಸಿ, ಸಾಂಸ್ಥಿಕ ಹೆರಿಗೆ ಮತ್ತು ಪಿಎನ್‌ಸಿ * ಮನೆ ಭೇಟಿ ವೇಳೆ ಸಮತೂಕದ ಆಹಾರ, ವಿಶ್ರಾಂತಿ ಮತ್ತು ಐಎಫ್‌ಎ ಅನುಸರಣೆಗೆ ಸಲಹೆ * ತೂಕ ಹೆಚ್ಚಳದ ಪರಾಮರ್ಶನ * ಕಾಂತಿಹೀನತೆ, ಊದಿಕೊಳ್ಳುವಿಕೆ ಮತ್ತು ಯಾವುದೇ ಅಪಾಯದ ಚಿನ್ಹೆಗಳ ಪರೀಕ್ಷೆ * ನವಜಾತ ಶಿಶುವಿನ ಪಾಲನೆಗೆ ಅಗತ್ಯವಾದ ಸಲಹೆ * ಸಲಹೆ ಮತ್ತು ಹಾಲೂಡಿಸುವಿಕೆಗೆ ಬೆಂಬಲ * ಮಕ್ಕಳ ನಡುವಿನ ಅಂತರದ ಬಗ್ಗೆ ಸಲಹೆ.............ಪಿ ಮತ್ತು ಎಲ್ ತಾಯಂದಿರು....... ಆಶಾ/ಎಎನ್‌ಎಂ/ಎಂಒ/ಎರಡನೇ ಎಡಬ್ಲ್ಯು ಡಬ್ಲ್ಯು ಮತ್ತು ಪೋಷಣಾ ಸಲಹೆಗಾರರು..........ಪಾಲನೆ, ಪೋಷಕಾಂಶ, ಆರೋಗ್ಯ ಮತ್ತು ನೈರ್ಮಲ್ಯ ಶಿಕ್ಷಣ........* ಮಾಸಿಕ ಆರೋಗ್ಯ ಮತ್ತು ಪೋಷಕಾಂಶ ಶಿಕ್ಷಣ ಸಭೆಗಳು * ಉಣಿಸುವಿಕೆ, ಆರೋಗ್ಯ, ನೈರ್ಮಲ್ಯ ಮತ್ತು ಮಾನಸಿಕೋ ಸಾಮಾಜಿಕ ಸುಧಾರಿತ ಪಾಲನಾ ಆಚರಣೆಗಳ ಶಿಕ್ಷಣ * ಗರ್ಭದಾರಣೆ, ಹಾಲೂಡಿಸುವಿಕೆ ಮತ್ತು ತಾರುಣ್ಯದಲ್ಲಿ ಪಾಲನೆ ಕುರಿತು ಜ್ಞಾನ ಹಂಚಿಕೊಳ್ಳುವುದು * ಸ್ಥಳೀಯ ಆಹಾರ ಮತ್ತು ಕುಟುಂಬ ಉಣಿಸುವಿಕೆಯ ಉತ್ತೇಜನ * ಸೂಕ್ತ ಆಹಾರದ ಪ್ರದರ್ಶನ * ಪೋಷಕಾಂಶ ಸಪ್ತಾಹ, ಎದೆಹಾಲು ನೀಡುವಿಕೆ ಸಪ್ತಾಹ, ಐಸಿಡಿಎಸ್ ದಿನ ಇತ್ಯಾದಿ ಆಚರಣೆ................ಪಿ ಮತ್ತು ಎಲ್ ತಾಯಿ ಹಾಗೂ ಇನ್ನಿತರ ಪಾಲನೆದಾರರು, ಕುಟುಂಬಗಳು ಮತ್ತು ಸಮುದಾಯ... ಎಡಬ್ಲ್ಯುಡಬ್ಲ್ಯು/ಎರಡನೇ ಎಡಬ್ಲ್ಯುಡಬ್ಲ್ಯು ಮತ್ತು ಪೋಷಕಾಂಶ ಸಲಹೆಗಾರರರು/ಮೇಲ್ವಿಚಾರಕರು...................... ಕಡಿಮೆ ತೂಕದ ಮಕ್ಕಳ ಸಮುದಾಯ ಆಧಾರಿತ ಪಾಲನೆ ಮತ್ತು ನಿರ್ವಹಣೆ...* ಎಲ್ಲ ಅರ್ಹ ಮಕ್ಕಳನ್ನು ತೂಕ ಹಾಕುವುದು ಮತ್ತು ಕಡಿಮೆ ತೂಕದ ಮಕ್ಕಳನ್ನು ಪತ್ತೆ ಹಚ್ಚುವುದು * ವೈದ್ಯಕೀಯ ಗಮನ ಅಗತ್ಯವಿರುವ ಮಕ್ಕಳನ್ನು ಎನ್‌ಆರ್‌ಸಿಗಳು/ ಎಂಡಿಸಿಗಳಿಗೆ ಕಳಿಸುವುದು * ತೀವ್ರ ಹಾಗೂ ಮಧ್ಯಂತರ ಕಡಿಮೆ ತೂಕದ ಮಕ್ಕಳಿಗೆ 12 ದಿನಗಳ ಪೋಷಕಾಂಶ ಸಲಹೆ ಹಾಗೂ ಪಾಲನೆ ಸಭೆಗಳು(ಸ್ನೇಹ ಶಿಬಿರ) * 18 ದಿನ ಮನೆಯಲ್ಲಿ ಪಾಲನೆ ಮತ್ತು ಮನೆಗಳಿಗೆ ಭೇಟಿ ಸಮಯದಲ್ಲಿ ಅನುಸರಣೆ * 12 ದಿನ ಮತ್ತು 18 ದಿನಗಳ ಬಳಿಕ ತೂಕ ಹೆಚ್ಚಳದ ಪರಾಮರ್ಶನ......ಮಧ್ಯಸ್ಥ ಹಾಗೂ ತೀವ್ರ ಕಡಿಮೆ ತೂಕದ ಮಕ್ಕಳು ಮತ್ತು ಅವರ ತಾಯಂದಿರು/ಪಾಲನೆ ಮಾಡುವವರು.................ಅನುವು ಮಾಡಿಕೊಡುವವರಾಗಿ ಆಶಾ ಮತ್ತು ಎಎನ್‌ಎಂಗಳು/ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್/ಮೇಲ್ವಿಚಾರಕರು/ತಾಯಂದಿರ ಗುಂಪುಗಳು/ಪಿಆರ್‌ಐಗಳು/ಎಸ್‌ಎಚ್‌ಜಿಗಳು/ಎಂಒ

3. ಆರೋಗ್ಯ ಸೇವೆಗಳು.....................ಲಸಿಕೀಕರಣ ಮತ್ತು ಸೂಕ್ಷ್ಮ ಪೋಷಕಾಂಶಗಳನ್ನು ಪೂರಕವಾಗಿ ನೀಡುವಿಕೆ...........* ನಿಯತ ನಿರ್ದಿಷ್ಟ ಮಾಸಿಕ ವಿಎಚ್‌ಎನ್‌ಡಿ * ಪ್ರಾಥಮಿಕ ಲಸಿಕೀಕರಣ * ಬೂಸ್ಟರ್ ಗಳು * ಗರ್ಭಿಣಿಯರಿಗೆ ಟಿಟಿ * ಪೂರಕ ವಿಟಮಿನ್ ಎ ನೀಡುವುದು(9 ತಿಂಗಳಿನಿಂದ 5 ವರ್ಷ) * ನವಜಾತ ಮಕ್ಕಳಿಗೆ ಆರು ತಿಂಗಳ ಬಳಿಕ ಪೂರಕ ಐಎಫ್‌ಎ * ಹೊಟ್ಟೆ ಹುಳು ನಿವಾರಣೆ * ಸಲಹೆ ನೀಡುವಿಕೆ .......................0-3 ವರ್ಷ.... 3-6ವರ್ಷ....... ಪಿ ಮತ್ತು ಪಿಎಲ್ ತಾಯಂದಿರು ಅನುವುದಾರರಾಗಿ ಎಎನ್‌ಎಂ/ಎಂಒ/ಆಶಾ/ಎಡಬ್ಲ್ಯುಡಬ್ಲ್ಯು..............ಆರೋಗ್ಯ ತಪಾಸಣೆ * ಎಎನ್‌ಸಿ/ಪಿಎನ್‌ಸಿ/ಜೆಎಸ್‌ವೈ * ಐಎಂಎನ್‌ಸಿಐ/ಜೆಎಸ್‌ಎಸ್‌ಕೆಗೆ ಬೆಂಬಲ * ವೈದ್ಯಕೀಯ ಗಮನ ಅಗತ್ಯವಿರುವ ತೀವ್ರ ಪೋಷಕಾಂಶ ಕೊರತೆ ಇರುವ ಮಕ್ಕಳನ್ನು ಗುರುತಿಸುವುದು * ಕಡಿಮೆ ತೂಕದ ಮಕ್ಕಳಿಗೆ ಸಮುದಾಯ ಆಧಾರಿತ ಬೆಂಬಲ.......0-3 ವರ್ಷ............ 3-6 ವರ್ಷ........ಅನುವುದಾರರಾಗಿ ಎಎನ್‌ಎಂ/ಎಂಒ/ಆಶಾ/ಎಡಬ್ಲ್ಯುಡಬ್ಲ್ಯುಗಳು........................ಪರಾಮರ್ಶೆ ಸೇವೆಗಳು * ಆರೋಗ್ಯ ಕೇಂದ್ರ/ಎಎನ್‌ಸಿಗೆ ತೀವ್ರ ಕಡಿಮೆ ತೂಕದ ಮಕ್ಕಳನ್ನು ಕಳಿಸುವುದು *ಹೆರಿಗೆ ವೇಳೆ ತೊಡಕುಂಟಾದರೆ ತಜ್ಞರ ಬಳಿ ಕಳುಹಿಸುವುದು * ಅನಾರೋಗ್ಯಪೀಡಿತ ನವಜಾತ ಶಿಶುಗಳನ್ನು ತಜ್ಞರ ಬಳಿ ಕಳುಹಿಸುವುದು * ಅನಾರೋಗ್ಯಪೀಡಿತ ಮಕ್ಕಳನ್ನು ತಜ್ಞರ ಬಳಿ ಕಳುಹಿಸುವುದು .........0-3 ವರ್ಷ.....3-6 ವರ್ಷ....ಪಿ ಮತ್ತು ಎಲ್ ತಾಯಂದಿರು.....ಎಎನ್‌ಎಂ/ಎಂಒ/ಆಶಾ/ಎಡಬ್ಲ್ಯುಡಬ್ಲ್ಯುಗಳು.

4. ಸಮುದಾಯದ ಸಂಘಟನೆ, ಜಾಗೃತಿ, ವಕಾಲತು ಮತ್ತು ಐಇಸಿ........ಐಇಸಿ, ಆಂದೋಲನಗಳು

ಮತ್ತು ಜಾಥಾ............* ಅಧಿಕಾರಗಳು, ಕಾರ್ಯಕ್ರಮಗಳು, ವರ್ತನೆ ಮತ್ತು ಆಚರಣೆ ಬಗ್ಗೆ ಜಾಗೃತಿ ಮೂಡಿಸುವಿಕೆ ಹಾಗೂ ಮಾಹಿತಿ ನೀಡುವಿಕೆ * ಗ್ರಾಮಸಭೆಯ ಸಭೆಗಳಲ್ಲಿ ಮಕ್ಕಳು ಪೋಷಕಾಂಶ ಸ್ಥಿತಿಯನ್ನು ಹಂಚಿಕೊಳ್ಳುವುದು * ವಿಎಚ್ಎಸ್ಎನ್ಸಿಯೊಟ್ಟಿಗೆ ಜೋಡಣೆ * ಸ್ವಯಂಸೇವಾ ಕ್ರಿಯಾ ಗುಂಪುಗಳು * ಗ್ರಾಮ ಸಂಪರ್ಕ ಜಾಥಾಗಳು...... ...............ಕುಟುಂಬಗಳು ಮತ್ತು ಸಮುದಾಯ................ಎಡಬ್ಲ್ಯುಡಬ್ಲ್ಯು/2ನೇ ಎಡಬ್ಲ್ಯುಡಬ್ಲ್ಯು/ ಮೇಲ್ವಿಚಾರಕರು/ಜಿಲ್ಲಾ ಮತ್ತು ಘಟಕ ಸಂಪನ್ಮೂಲ ಕೇಂದ್ರಗಳು/ಐಸಿಡಿಎಸ್ ಆಡಳಿತ ನಿರ್ವಹಣೆಗಾರರು. ಇದರನ್ವಯ ಐಸಿಡಿಎಸ್ ಸೇವೆಗಳ ಕಟ್ಟನ್ನು ಪರಿಷ್ಕರಿಸಲಾಗಿದೆ ಮತ್ತು ಪ್ರತಿಯೊಂದು ಸೇವೆಯ ಕಟ್ಟನ್ನು ಪರಿಶಿಷ್ಟ III ರಲ್ಲಿ ನೀಡಲಾಗಿದೆ. (iv) ಐಪಿಸಿ, ಮನೆಗಳಿಗೆ ತೀವ್ರತರ ಭೇಟಿ ಮೂಲಕ ಗರಿಷ್ಠ ಐವೈಸಿಎಫ್ ಆಚರಣೆಗಳನ್ನು ಉತ್ತೇಜಿಸುವ ಮುಖ್ಯ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸುವ ಹಾಗೂ ಅನುಷ್ಠಾನಗೊಳಿಸುವ ಮೂಲಕ 3 ವರ್ಷಕ್ಕಿಂತ ಕೆಳಗಿನ ಮತ್ತು ಮಕ್ಕಳ ಆರಂಭಿಕ ಪಾಲನೆ ಹಾಗೂ ಕಲಿಕಾ ವಾತಾವರಣದ ಮೇಲೆ ಗುರಿ. ಪೋಷಕಾಂಶ ಸಲಹೆದಾರರು, ಮೇಲ್ವಿಚಾರಕರು ಮತ್ತು ಮುಂದಿನ ಸಾಲಿನ ಕೆಲಸಗಾರರ ಕೌಶಲಮೂಲ ಹಾಗೂ ಜ್ಞಾನದ ಉತ್ತಮಗೊಳಿಸುವಿಕೆ ಸೇರಿದಂತೆ ಅಗತ್ಯವಾದ ಐಇಸಿಗಳನ್ನು ಬಳಸಿಕೊಂಡು ಗ್ರಾಮಗಳಲ್ಲಿ ಪ್ರಚಾರ ನಡೆಸುವುದು. ಭಾರತೀಯ ಎದೆಹಾಲು ಊಡಿಕೆ ಉತ್ತೇಜನ ಕಾರ್ಯಜಾಲ(ಬಿಪಿಎನ್ಐ)ನಂಥ ಐವೈಸಿಎಫ್ ಆಚರಣೆಗಳಲ್ಲಿ ಅನುಭವಿಸುವ ಸ್ವಯಂಸೇವಾ ಸಂಘಟನೆಗಳು/ಸಂಸ್ಥೆಗಳನ್ನು ಇದಕ್ಕಾಗಿ ಬಳಸಿಕೊಳ್ಳಬಹುದು. ಜಂಟಿ ತರಬೇತಿ ಉಪಕ್ರಮ(ಎನ್ಆರ್ಎಚ್ಎಂ ಮತ್ತು ಐಸಿಡಿಎಸ್)ಗಳ ಮೂಲಕ ಬೇರು ಮಟ್ಟದ ಕಾರ್ಯಕರ್ತರ ಸಾಮರ್ಥ್ಯ ನಿರ್ಮಾಣದ ಮೂಲಕ ಗರ್ಭಾವಸ್ಥೆ ಹಾಗೂ ಮೊದಲ 3 ವರ್ಷದಲ್ಲಿ ಸುರಕ್ಷತೆಯ ನಿರಂತರತೆಯನ್ನು ಬಲಪಡಿಸುವುದನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಹೆಚ್ಚು ಹೊರೆ ಇರುವ 200 ಜಿಲ್ಲೆಗಳಲ್ಲಿ ಹೆಚ್ಚುವರಿ ಕೆಲಸಗಾರನ ನೇಮಕ ಅಥವಾ ಆಶಾ ಕಾರ್ಯಕರ್ತರಿಗೆ ಪಾವತಿ/ಪ್ರೋತ್ಸಾಹಧನ(ಹೆಚ್ಚು ಸಂಖ್ಯೆಯಲ್ಲಿ ಇದ್ದರೆ) ಮೂಲಕ, ಜೊತೆಗೆ, ಯುವ ಕಾರ್ಯಕರ್ತರನ್ನು ವಿದ್ಯಾರ್ಥಿವೇತನ ಆಧಾರದಲ್ಲಿ ನೇಮಿಸಿಕೊಳ್ಳುವುದು ಮತ್ತು/ಅಥವಾ ಸಮುದಾಯದ ಮಹಿಳಾ ಕಾರ್ಯಕರ್ತೆಯರನ್ನು ಸಂಘಟಿಸಿ(15-20 ಮನೆಗಳಿಗೆ ಒಬ್ಬರು) ಕುಟುಂಬಗಳ ಸಂಪರ್ಕವನ್ನು ಹಾಗೂ ಆದ್ಯತೆಗನುಗುಣವಾಗಿ ಸೂಕ್ಷ್ಮ ಸಂಪರ್ಕ ಬಿಂದುಗಳಲ್ಲಿ ಮನೆಗಳಿಗೆ ಭೇಟಿಯನ್ನು ಉತ್ತಮಗೊಳಿಸಬಹುದು. ರಾಜ್ಯ ಸರ್ಕಾರವು ಬೇಡಿಕೆ ಬಂದಲ್ಲಿ ಎಪಿಐಪಿಯಿಂದ ಸಮ್ಮತಿ ಪಡೆದುಕೊಂಡು ಇಪಿಸಿ ಮೂಲಕ ಐಸಿಡಿಎಸ್ ಮಿಷನ್ಅಡಿ ಹೆಚ್ಚುವರಿ ಕೆಲಸಗಾರ/ಕೊಂಡಿ ಕೆಲಸಗಾರರನ್ನು ಒದಗಿಸಬಹುದು. ಆಶಾ ಕಾರ್ಯಕರ್ತರು ಸೇರಿದಂತೆ ಕೊಂಡಿ ಕೆಲಸಗಾರರ ಪ್ರೋತ್ಸಾಹಧನವು ಫಲಶ್ರುತಿ ಹಾಗೂ ಆಯವ್ಯದ ಮಿತಿಗಳಿಗೆ ನೇರವಾಗಿ ತಳಕು ಹಾಕಿಕೊಂಡಿರುತ್ತದೆ. ಎನ್ಆರ್ಎಂಎಚ್ ಅಡಿ ಪೋಷಕಾಂಶ ಪುನರ್ವಸತಿ ಕೇಂದ್ರ(ಎನ್ಆರ್ಸಿ)ಗಳಲ್ಲಿ ತೀವ್ರ ಪೋಷಕಾಂಶ ಕೊರತೆ ಸೌಲಭ್ಯಗಳನ್ನು ನಿರ್ವಹಣೆ ಮಾಡಲಾಗುತ್ತದೆ. ಆರ್ಸಿಎಚ್/ಎನ್ಆರ್ಎಚ್ಎಂಗಳಲ್ಲಿ ಐಎಂಎನ್ಸಿಐ ಉಪಕ್ರಮ(ಸಮುದಾಯ ಮತ್ತು ಸೌಲಭ್ಯ ಆಧಾರಿತ)ವನ್ನು ಮನೆ ಆಧಾರಿತ ಅಗತ್ಯ ನವಜಾತ ಶಿಶು ಪಾಳನೆ, ಮಗುವಿನ ಆರೋಗ್ಯ ಮತ್ತು ಪೋಷಕಾಂಶದ ಪ್ರಮುಖ ಮಧ್ಯಸ್ಥಿಕೆಗಳನ್ನು ಹಲವು ರಾಜ್ಯಗಳಲ್ಲಿ ಡಬ್ಲ್ಯುಸಿಡಿ ಮತ್ತು ಆರೋಗ್ಯದ ಜಂಟಿ ಕ್ರಿಯೆಯೊಂದಿಗೆ ಅನುಷ್ಠಾನಗೊಳಿಸಲಾಗಿದೆ. (v)ಆರಂಭಿಕ ಬಾಲ್ಯಾವಸ್ಥೆಯಲ್ಲಿ ಪಾಲನೆ ಮತ್ತು ಶಿಕ್ಷಣ(ಇಸಿಸಿಇ): ಅಂಗನವಾಡಿ ಕೇಂದ್ರ ಗಳಲ್ಲಿ ಆರಂಭಿಕ ಬಾಲ್ಯಾವಸ್ಥೆಯಲ್ಲಿ ಪಾಲನೆ ಹಾಗೂ ಶಿಕ್ಷಣವನ್ನು ಪರಮುಖ ಸೇವೆಯನ್ನಾಗಿಸಿಕೊಂಡು, 4 ಗಂಟೆಗಳ ಕಾಲ ಆರಂಭಿಕ ಬಾಲ್ಯಾವಸ್ಥೆಯ ಶಿಕ್ಷಣ ತರಗತಿಗಳು, ಆನಂತರ ಪೂರಕ ಪೋಷಕಾಂಶ, ಬೆಳವಣಿಗೆಯ ಪರಾಮರ್ಶನ ಹಾಗೂ ಇನ್ನಿತರ ಸಂಬಂಧಿಸಿದ ಮಧ್ಯಸ್ಥಿಕೆಗಳನ್ನು ನಡೆಸಲು ಆಗುವಂತೆ ಬಲಪಡಿಸುವುದು ಗುರಿಯಾಗಿರಲಿದೆ. ಇದಲ್ಲದೆ ತಾಯಿ ಮಗು ಕಾರ್ಡ್ ಕಟ್ಟುಗಳು ಹಾಗೂ ತಡವಾದ ಅಭಿವೃದ್ಧಿ ಮೈಲುಗಲ್ಲುಗಳನ್ನು ಆರಂಭದಲ್ಲೇ ಗುರುತಿಸುವುದು ಮತ್ತು ವಿಶೇಷ ಅಗತ್ಯಗಳಿರುವ ಮಕ್ಕಳಿಗೆ ಆರಮಭದಲ್ಲೇ ಮಧ್ಯಸ್ಥಿಕೆ ವಹಿಸುವ ಮೂಲಕ ಉತ್ತೇಜನ ನೀಡುವುದು ಸೇರಿದಂತೆ

ಇಸಿಸಿಗಳ ವಿಷಯ/ಗುಣಮಟ್ಟದ ಹೆಚ್ಚಳವನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಗುಣಮಟ್ಟದ ಇಸಿಸಿಯ ಅಗತ್ಯ ಮೂಲಾಂಶಗಳನ್ನು ಖಾತ್ರಿಗೊಳಿಸಲು, ಕೆಳಕಂಡ ಪ್ರಮುಖ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ. (1) ನಿಯಂತ್ರಣಗಳು, ಸಂಸ್ಥೆಗಳು ಹಾಗೂ ಮಾದರಿಗಳನ್ನು ರೂಪಿಸುವುದು. (2) ಚಟುವಟಿಕೆಯನ್ನು ಆಧರಿಸಿದ ಮಕ್ಕಳ ಕೇಂದ್ರಗಳು ಹಾಗೂ ವಯಸ್ಸಿಗೆ ಸೂಕ್ತವಾದ, ಮಕ್ಕಳ ಸರ್ವತೋಮುಖ ಬೆಳವಣಿಗೆಯನ್ನು ಗುರಿಯಾಗುಳ್ಳ ವ್ಯಾಸಂಗಕ್ರಮವನ್ನು ಅಭಿವೃದ್ಧಿಪಡಿಸುವುದು ಮತ್ತು ಅನುಷ್ಠಾನಗೊಳಿಸುವುದು(ಸೂಚಿತ ಚಟುವಟಿಕೆಗಳು ಅನುಬಂಧ Iಗಿರಲ್ಲಿ ಇವೆ). (3) ರಾಜ್ಯದ ಸನ್ನಿವೇಶಗಳಿಗೆ ಅನುಗುಣವಾಗಿ ಎಡಬ್ಲ್ಯುಸಿಗಳು ಮತ್ತು ಶಾಲೆಗಳಲ್ಲಿ 5 ವರ್ಷಕ್ಕಿಂತ ಅಧಿಕ ವಯೋಮಾನದ ಮಕ್ಕಳನ್ನು ಶಾಲೆಗೆ ಸಿದ್ಧಗೊಳಿಸಲು ಮಧ್ಯಸ್ಥಿಕೆಗಳನ್ನು ಖಾತ್ರಿಗೊಳಿಸುವುದು (4) ಎಳೆಯ ಮಕ್ಕಳೊಟ್ಟಿಗೆ ಪ್ರಯೋಗಾತ್ಮಕ `ನೇರ' ತರಬೇತಿ ಮೂಲಕ ಕೆಲಸ ಮಾಡಬಲ್ಲ ಚೈತನ್ಯಶೀಲ ಮತ್ತು ಸೂಕ್ತ ತರಬೇತಿ ಪಡೆದ ಗುಣಮಟ್ಟದ ಕೆಲಸಗಾರರ ಲಭ್ಯತೆ. (5) ಪ್ರಬುದ್ಧರು ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ ಅವರುಗಳ ಮುಖಾಮುಖಿಗೆ ಅನುವು ಮಾಡಿಕೊಡುವುದು. (6) ಬೆಂಬಲಿಸುವ, ಮಕ್ಕಳಸ್ನೇಹಿಯಾದ ಕಡಿಮೆ ವೆಚ್ಚದ ಮತ್ತು ಸಂಸ್ಕøತಿ ನಿರ್ದಿಷ್ಟ ಮೂಲಸೌಕರ್ಯದ ಲಭ್ಯತೆ. (7) ಗುಣಮಟ್ಟದ ಸುಧಾರಣೆಯನ್ನು ಖಾತ್ರಿ ಪಡಿಸಲು ಮೇಲ್ವಿಚಾರಣೆ ಮತ್ತು ಪರಾಮರ್ಶೆ (8) ಮೇಲಿನ ವಿಷಯಗಳು ಮತ್ತು ಕಾಳಜಿಗಳನ್ನು ಪ್ರವರ್ತಿಸಬಲ್ಲ ರಾಷ್ಟ್ರೀಯ ಕಾರ್ಯನೀತಿ ಚೌಕಟ್ಟನ್ನು ಅಭಿವೃದ್ಧಿಪಡಿಸುವುದು (9) ಕಾರ್ಯನೀತಿಯ ಅನುಷ್ಠಾನಕ್ಕಾಗಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ವಿಷಯ ನಿರ್ದಿಷ್ಟ ಕ್ರಿಯಾಯೋಜನೆಯ ಸೂತ್ರೀಕರಣ (10) ರಾಷ್ಟ್ರೀಯ/ರಾಜ್ಯ ಇಸಿಡಿ ಮಂಡಳಿಗಳ ರಚನೆ (11) ಇಸಿಸಿಇಯಲ್ಲಿ ತರಬೇತಿ ನೀಡಲು ನೇರ ತರಬೇತಿಗೆ ಒತ್ತು ನೀಡುವ ವಿಶೇಷ ಏಕಮಾನಗಳನ್ನು ಅಭಿವೃದ್ಧಿಪಡಿಸುವುದು. ಪಿಎಸ್‍ಇ ಕಿಟ್‍ನ ರಾಷ್ಟ್ರೀಯ ಪಡಿಯಚ್ಚನ್ನು ಸಿದ್ಧಪಡಿಸಬೇಕು ಮತ್ತು ರಾಜ್ಯಗಳಲ್ಲಿ ಸ್ಥಳೀಯ ಪರಿಸ್ಥಿತಿಗೆ ಹೊಂದಿಕೊಳ್ಳುವ ಪರಿಷ್ಕೃತ ಕಿಟ್‍ನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಕಿಟ್ ಮಕ್ಕಳ ಸಂಪೂರ್ಣ ಬೆಳವಣಿಗೆಯನ್ನು ಉತ್ತೇಜಿಸುವ ಆಟದ ಹಾಗೂ ಕಲಿಕಾ ಸಾಧನಗಳನ್ನು ಒಳಗೊಂಡಿರುತ್ತದೆ. ಎಡಬ್ಲ್ಯುಡಬ್ಲ್ಯುಗಳಿಗೆ ಬೋಧನೆ ಕಲಿಕಾ ಸಾಧನಗಳನ್ನು ಅಭಿವೃದ್ಧಿಪಡಿಸುವ ಹಾಗೂ ವ್ಯಾಸಂಗಕ್ರಮದ ನಿರ್ವಹಣೆಗೆ ಅಗತ್ಯವಾದ ತರಬೇತಿ ಮತ್ತು ಸಂಪನ್ಮೂಲಗಳನ್ನು ಒದಗಿಸಲಾಗುತ್ತದೆ. ಪಿಎಸ್‍ಇ ಕಿಟ್‍ಗಳ ದರವನ್ನು ಕಿಟ್‍ವೊಂದಕ್ಕೆ ಎಡಬ್ಲ್ಯುಸಿಗಳಿಗೆ 3,000 ರೂ. ಹಾಗೂ ಮಿನಿ ಎಡಬ್ಲ್ಯುಸಿಗಳಿಗೆ 1,500 ರೂ. ಎಂದು ದರ ಪರಿಷ್ಕರಿಸಲಾಗಿದೆ. ಇದರಲ್ಲಿ ಕೇಂದ್ರ ಮತ್ತು ರಾಜ್ಯದ ವೆಚ್ಚ ಹಂಚಿಕೆ ಅನುಪಾತ 90:10. ವಿಎಚ್‍ಎನ್‍ಡಿಯಂತೆ ಪ್ರತಿ ತಿಂಗಳು ಗ್ರಾಮದಲ್ಲಿ ಇಪಿಸಿಇ ದಿನವನ್ನು ಆಯೋಜಿಸಬೇಕು. ಬೆಳವಣಿಗೆಗೆ ಸೂಕ್ತವಾದ ಆರಂಭಿಕ ಬಾಲ್ಯಾವಸ್ಥೆಯ ಮಧ್ಯಸ್ಥಿಕೆಗಳು ಮತ್ತು ಇಸಿಸಿಇಯಲ್ಲಿ ಅಜ್ಜ, ಅಜ್ಜಿ, ಹಿರಿಯ ನಾಗರಿಕರು, ಸ್ಥಳೀಯ ಕಲಾವಿದರು ಇನ್ನಿತರನ್ನು ಒಳಗೊಳ್ಳಲು ಸಮುದಾಯದ ಸಹಭಾಗಿತ್ವದಲ್ಲಿ ಚಟುವಟಿಕೆ ಕಾರ್ನರ್(ಮೂಲೆತಾಕು)ಗಳು, ಆಟದ ಸಾಧನಗಳು ಮತ್ತು ಗೊಂಬೆಗಳ ಬ್ಯಾಂಕ್‍ಗಳನ್ನು ಸ್ಥಾಪಿಸುವುದು, ಇಸಿಸಿಇ ಪ್ರದರ್ಶನ, ಪೋಷಕರ ಮುಖಾಮುಖಿ ಇತ್ಯಾದಿಗಳನ್ನು ಹೊಸ ಸೇವಾ ಬಟವಾಡೆ ವೇದಿಕೆಯಾಗಿ ಪರಿಶೀಲಿಸಬಹುದು. ಮಾಸಿಕ ನಿಗದಿತ ಗ್ರಾಮ ಇಸಿಸಿಇ ಆಚರಣೆಗೆ ಎಡಬ್ಲ್ಯುಸಿ ಒಂದಕ್ಕೆ ಐಸಿಡಿಎಸ್ ಮಿಷನ್ ವಾರ್ಷಿಕ 1,000 ರೂ.ನೀಡುತ್ತದೆ. ವಿದ್ಯಾರ್ಥಿಗಳನ್ನು ಮುಖ್ಯವಾಹಿನಿ ಶಾಲೆಗಳಿಗೆ ಸೇರ್ಪಡಿಸಲು ಶಾಲೆಗೆ ಸಿದ್ಧಗೊಳಿಸುವಿಕೆಗೆ ಸಂಬಂಧಿಸಿದ ಮಧ್ಯಸ್ತಿಕೆಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಎಡಬ್ಲ್ಯುಸಿಯನ್ನು ಮೀರಿರುವ ಮಕ್ಕಳ ಅಭಿವೃದ್ಧಿ ಸೇವೆಗಳನ್ನು ಖಾಸಗಿ ಕ್ಷೇತ್ರದ ಶಾಲೆಗಳು (ಪ್ರಾಥಮಿಕ ಪೂರ್ವ ಮತ್ತು ನರ್ಸರಿ ಇತ್ಯಾದಿ), ಎನ್‍ಜಿಒಗಳು ಮತ್ತು ನೆರವು ನೀಡುವ ಸಂಘಟನೆ ಇತ್ಯಾದಿ ಮೂಲಕ ಪರಿಚಯಿಸಲಾಗುತ್ತದೆ. ಮಕ್ಕಳ ನಿರಂತರ, ಸಂಚಿತ ಮತ್ತು ಎಲ್ಲವನ್ನೂ ಒಳಗೊಳ್ಳುವ ಬೆಳವಣಿಗೆಯಲ್ಲಿ ಆರಂಭಿಕ

ವರ್ಷಗಳಾದ 1-6 ಬಹಳ ಮುಖ್ಯವಾಗಿದ್ದು, ಮಾನವಾಭಿವೃದ್ಧಿ ಮತ್ತು ಸಂಚಿತ ಜೀವನಪೂರ್ತಿ ಕಲಿಕೆಗೆ ಬುನಾದಿ ಹಾಕುತ್ತವೆ. ಐಸಿಡಿಎಸ್‌ನಡಿ ಈಗ ನೀಡಲಾಗುತ್ತಿರುವ ಸಮಗ್ರ ಸೇವೆಗಳ ಕಟ್ಟುಗಳು ಆರೋಗ್ಯ, ಪೋಷಕಾಂಶ ಮತ್ತು ಸಂಜ್ಞಾನಾತ್ಮಕ ಪ್ರೇರಣೆ, ದೈಹಿಕ, ಚಾಲನಾ, ಭಾವನಾತ್ಮಕ ಮತ್ತು ಸಾಮಾಜಿಕೋ ವೈಯಕ್ತಿಕ ಅಭಿವೃದ್ಧಿಗೆ ಬೇಕಾದ ಅಗತ್ಯಗಳನ್ನು ಒಳಗೊಂಡಿದೆ.

* ಬಲದುಂಬಿಕೊಂಡ ಮತ್ತು ಪುನರ್ ವಿನ್ಯಾಸಗೊಂಡ ಐಸಿಡಿಎಸ್, ಎಡಬ್ಲ್ಯುಸಿಗಳನ್ನು ಉಣಿಸುವ ಕೇಂದ್ರಗಳು ಎಂದು ಪರಿಗಣಿಸುವ ಬದಲು ಆರಂಭಿಕ ಬಾಲ್ಯಾವಸ್ಥೆಯ ಅಭಿವೃದ್ಧಿಯ ಉತ್ತೇಜನಕ್ಕೆ ಸೂಕ್ತವಾದ ವಾತಾವರಣವನ್ನು ಹೊಂದಿರುವ ಅಭಿವೃದ್ಧಿ ಕೇಂದ್ರ ಎಂಬಂತೆ ಮರುಸ್ಥಾಪಿಸುತ್ತದೆ.

* ಎಂಡಬ್ಲ್ಯುಸಿಡಿ ಆರಂಭಿಕ ಬಾಲ್ಯಾವಸ್ಥೆ ಪಾಲನೆ ಮತ್ತು ಶಿಕ್ಷಣಕ್ಕೆ ರಾಷ್ಟ್ರೀಯ ಕಾರ್ಯನೀತಿಯೊಂದನ್ನು ರೂಪಿಸಬೇಕೆಂದು ರಚಿಸಿದ ಕೋರ್ ಸಮಿತಿ, ಕರಡು ಕಾರ್ಯನೀತಿ, ವ್ಯಾಸಂಗಕ್ರಮ ಚೌಕಟ್ಟಿನ ಮಾದರಿಗಳನ್ನು ಸೂತ್ರೀಕರಿಸಿದೆ ಮತ್ತು ಇದು ಅಂತಿಮಗೊಳ್ಳುವ ಹಂತದಲ್ಲಿದೆ. ವಿಸ್ತೃತ ವೈಜ್ಞಾನಿಕ ಸಂಶೋಧನೆ ಮತ್ತು ಸಂಪನ್ಮೂಲ ಆಧಾರಿತ ಮಾರ್ಗವನ್ನು ಈಗ ಅಂಗೀಕರಿಸಲಾಗಿದ್ದು, ಇದಕ್ಕಾಗಿ ಇಸಿಸಿಡಿ ಮಂಡಳಿಯೊಂದು ಇರಬೇಕೆಂದು ಪ್ರಸ್ತಾಪಿಸಲಾಗಿದೆ. ಅಭಿವೃದ್ಧಿಯಾತ್ಮಕವಾಗಿ ಸೂಕ್ತವಾದ, ಆಟವನ್ನು ಆಧರಿಸಿದ ಮತ್ತು ಮನೆಯಾಧರಿತ ಆರಂಭಿಕ ಉತ್ತೇಜಕ ಕಟ್ಟುಗಳು ಮತ್ತು ಚಟುವಟಿಕೆಯನ್ನು ಆಧರಿಸಿದ ಅಭಿವೃದ್ಧಿಯಾ ತ್ಮಕವಾಗಿ ಸೂಕ್ತವಾದ ಆರಂಭಿಕ ಬಾಲ್ಯಾವಸ್ಥೆಯ ಶೈಕ್ಷಣಿಕ ಪಠ್ಯಕ್ರಮ ಮತ್ತು ವ್ಯಾಸಂಗಕ್ರಮವನ್ನು ಸೃಷ್ಟಿಸುವ ಜೊತೆಗೆ ಅನುಗೊಳಿಸುವಿಕೆ ಮೂಲಕ ಶಾಲೆಗೆ ಸಿದ್ಧಗೊಳಿಸುವಿಕೆಯನ್ನು ತಲುಪಲಾಯಿತು. ವಯಸ್ಸಿಗೆ ಸೂಕ್ತವಾದ ಮಕ್ಕಳ ಮೌಲ್ಯಮಾಪನ ಸಾಧನಗಳನ್ನು ಅಭಿವೃದ್ಧಿಪಡಿಸಿದ್ದಲ್ಲದೆ, ನಿಯೋಜಿಸಲಾಯಿತು ಮತ್ತು ಪರಿಸ್ಥಿತಿಗೆ ಅನುಗುಣವಾಗಿ ಅಳವಡಿಸಿಕೊಳ್ಳಲಾಯಿತು.

* ಬಲದುಂಬಿದ ಮತ್ತು ಮರುವಿನ್ಯಾಸಗೊಂಡ ಐಸಿಡಿಎಸ್‌ನಲ್ಲಿ ಈಗ ಇಸಿಸಿಇ ಗಮನಾರ್ಹವಾಗಿ ಸ್ಥಾನ ಗಳಿಸಿಕೊಂಡಿತು. ಮೇಲೆ ಉಲ್ಲೇಖಿಸಿರುವ ಸ್ಥಿರ ಮಾಸಿಕ ಗ್ರಾಮ ಇಸಿಸಿಇ ದಿನ, ವಕಾಲತು ಮತ್ತು ಜಾಗೃತಿ ಮೂಡಿಸುವಿಕೆ, ಪೋಷಕರು ಮತ್ತು ಸಮುದಾಯದ ವಕಾಲತು ಹಾಗೂ ಒಳಗೊಳ್ಳುವಿಕೆ ಇತ್ಯಾದಿಯನ್ನು ಸಂಘಟಿಸುವಿಕೆಗೆ ಗಮನ ನೀಡಲಾಯಿತು.

* ಚಾಲ್ತಿಯಲ್ಲಿರುವ ಇಸಿಇ ವಿತರಣೆ ವ್ಯವಸ್ಥೆಯಲ್ಲಿ ಈಗಾಗಲೇ ಶೇ.98 ರಷ್ಟು ಎಡಬ್ಲ್ಯುಡಬ್ಲ್ಯುಗಳು ಮಕ್ಕಳಿಗೆ ಪಿಎಸ್‌ಇಯನ್ನು ಕಲಿಸುವಲ್ಲಿ ತರಬೇತಿ ಪಡೆದಿದ್ದಾರೆ. ಆದ್ದರಿಂದ ಎಡಬ್ಲ್ಯುಡಬ್ಲ್ಯುಗಳು ಡಿಎಸ್‌ಸಿ ಮಕ್ಕಳನ್ನು ನಿರ್ವಹಿಸಲು ಶಕ್ತರಾಗಿದ್ದಾರೆ. ಸಿಎಂಯು ಅಂಕಿಅಂಶ (2011)ದ ಪ್ರಕಾರ, ಶೇ.91 ರಷ್ಟು ಎಡಬ್ಲ್ಯುಡಬ್ಲ್ಯುಗಳು ಮೆಟ್ರಿಕ್/ಹೈಸ್ಕೂಲ್‌ಗಿಂತ ಹೆಚ್ಚು ವ್ಯಾಸಂಗ ಮಾಡಿದ್ದಾರೆ. ಪಂಜಾಬ್, ಅಸ್ಸಾಂ, ಒರಿಸ್ಸಾ, ಉತ್ತರಾಖಂಡ, ಮಣಿಪುರ, ಮಹಾರಾಷ್ಟ್ರ, ಗುಜರಾತ್ ಮತ್ತು ಬಿಹಾರದ ಶೇ.25ಕ್ಕೂ ಅಧಿಕ ಮಂದಿ ಪದವೀಧರ/ಸ್ನಾತಕೋತ್ತರ ಪದವೀಧರರು, ಹೊಸ ಎಡಬ್ಲ್ಯುಡಬ್ಲ್ಯುಗಳ ಅರ್ಹತೆ ಸಾಮಾನ್ಯವಾಗಿ ಮಾಧ್ಯಮಿಕ ಹಂತ ಮತ್ತು ಅದಕ್ಕಿಂತ ಹೆಚ್ಚು ಇರುವುದನ್ನು ಗಮನಿಸಲಾಗಿದೆ. ಗೌರವಧನದ ಹೆಚ್ಚಳ ಹಾಗೂ ಶೇ.25 ರಷ್ಟು ಎಡಬ್ಲ್ಯುಡಬ್ಲ್ಯುಗಳು ಪದೋನ್ನತಿ ಪಡೆದು ಮೇಲ್ವಿಚಾರಕರ ಹುದ್ದೆಗೆ ಬಡ್ತಿ ಹೊಂದು ವುದರಿಂದ, ಈ ಪ್ರವೃತ್ತಿ ಹೆಚ್ಚಿದೆ. ಐಸಿಡಿಎಸ್‌ನ ಮರುವಿನ್ಯಾಸದ ಬಳಿಕ ಹೂಡಿಕೆ ಹೆಚ್ಚಳದಿಂದ ಪರಿಣಾಮಗಳು ಹೆಚ್ಚುತ್ತ ಹೋಗಲಿದೆ ಮತ್ತು ಉನ್ನತ ಫಲಿತಾಂಶದ ಖಾತ್ರಿ ನೀಡಲಿದೆ. ಹೆಚ್ಚುವರಿ ಕೆಲಸಗಾರರು ಸೂಕ್ತ ಅರ್ಹತೆ ಹೊಂದಿರುವವರನ್ನು ಪೂರೈಸಲಿದ್ದು, ಅವರ ಕೌಶಲಗಳನ್ನು ಬಳಸಿಕೊಳ್ಳಬಹುದಾಗಿದೆ. ಹಲವಾರು ರಾಜ್ಯಗಳು (ಆಂಧ್ರಪ್ರದೇಶ, ತಮಿಳುನಾಡು, ಚತ್ತೀಸ್‌ಗಢ, ರಾಜಸ್ಥಾನ, ಹಿಮಾಚಲ ಪ್ರದೇಶ, ಒರಿಸ್ಸಾ, ಮಧ್ಯಪ್ರದೇಶ ಮತ್ತು ಕೇರಳ) ಈಗಾಗಲೇ ಐಸಿಡಿಎಸ್ ಅಡಿ ರಾಜ್ಯ ನಿರ್ದಿಷ್ಟ ಶಾಲಾಪೂರ್ವ ಪಠ್ಯಕ್ರಮ ಹಾಗೂ ಚಟುವಟಿಕೆ ಕೋಶವನ್ನು ಅಭಿವೃದ್ಧಿಪಡಿಸಿವೆ. ಇನ್ನುಳಿದ ರಾಜ್ಯಗಳು ಕೂಡ ಐಸಿಡಿಎಸ್ ಅಡಿ ಪಿಎಸ್‌ಸಿ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯನ್ನು ಆರಂಭಿಸಿವೆ. ಕಾರ್ಯನಿರ್ದಿಷ್ಟ ಪಠ್ಯಕ್ರಮವು ಮಾರ್ಗದರ್ಶಿ ಸಿದ್ಧಾಂತಗಳು ಹಾಗೂ ವಿಷಯಗಳು ರಾಷ್ಟ್ರೀಯ ಆರಂಭಿಕ ಬಾಲ್ಯಾವಸ್ಥೆಯ ಶಿಕ್ಷಣದ ಪ್ರಮುಖ ಪಠ್ಯಕ್ರಮ ಹಾಗೂ ಚೌಕಟ್ಟಿಗೆ ಅನುಗುಣವಾಗಿದೆ ಎಂದು ನಿರೀಕ್ಷಿಸಲಾಗಿದೆ. ಸಾರ್ವತ್ರೀಕರಣದ ನಂತರ ಎಡಬ್ಲ್ಯುಸಿಗಳ ವ್ಯಾಪ್ತಿಯು 4 ಲಕ್ಷ ವಸತಿ ಪ್ರದೇಶಗಳಿಗೆ

ವಿಸ್ತರಿಸಲಿದೆ. ಇದು ಎಳೆಯ ಮಕ್ಕಳು ತಮ್ಮದೇ ಸಾಮಾಜಿಕ ವ್ಯವಸ್ಥೆಯಲ್ಲಿ ಆರಂಭಿಕ ಬಾಲ್ಯಾವಸ್ಥೆಯ ಪಾಲನೆ ಮತ್ತು ಶಿಕ್ಷಣ(ಇಸಿಇ)ಸೇವೆಗಳನ್ನು ಬಳಸಿಕೊಳ್ಳಲು ಸುಲಭ ಪ್ರವೇಶಾವಕಾಶ ನೀಡಲಿದೆ. ಶೇ.80 ಕ್ಕೂ ಹೆಚ್ಚು ಎಡಬ್ಲ್ಯುಡಬ್ಲ್ಯುಗಳು ಸ್ಥಳೀಯ ಗ್ರಾಮ/ವಸತಿ ಪ್ರದೇಶದಲ್ಲಿ ಇವೆ (ಸಿಎಂಯು 2011). ಎಡಬ್ಲ್ಯುಡಬ್ಲ್ಯುಗಳು ನಿರ್ದೇಶಿತ ಫಲಾನುಭವಿಗಳಿಗೆ ಸನಿಹದಲ್ಲಿದ್ದರೆ, ಸ್ಥಳೀಯವಾಗಿ ಪ್ರತಿಕ್ರಿಯಾತ್ಮಕ ಒಳಸುರಿಗಳನ್ನು ನೀಡುತ್ತವೆ ಮತ್ತು ಪೋಷಕರು ಹಾಗೂ ಸಮುದಾಯದೊಂದಿಗೆ ಆಗಾಗ ಮುಖಾಮುಖಿಯಾಗಲು ಅವಕಾಶ ನೀಡುತ್ತದೆ.

* ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಎಡಬ್ಲ್ಯುಡಬ್ಲ್ಯುಗಳಲ್ಲಿ ಪ್ರಸ್ತುತ ಕೊಡಮಾಡುತ್ತಿರುವ ಅನೌಪಚಾರಿಕ ಶಾಲಾಪೂರ್ವ ಶಿಕ್ಷಣವು ಮಗುವಿಗೆ ಅಗತ್ಯವಾದ ಪ್ರಬುದ್ಧಗೊಳಿಸುವ ಹಾಗೂ ಅನುಭ ವಾತ್ಮಕ ಸಜ್ಜುಗೊಳ್ಳುವಿಕೆಯನ್ನು ಒದಗಿಸಲಿದ್ದು, ಕಲಿಕೆಯಲ್ಲಿ ಆಸಕ್ತಿ ಹಾಗೂ ಸಿದ್ಧತೆಯನ್ನು ಸೃಷ್ಟಿಸುತ್ತದೆ. ಮಕ್ಕಳು ಒಂದನೇ ತರಗತಿಗೆ ಪ್ರವೇಶಿಸುವ ಮುನ್ನ ಸಮಗ್ರ ಪಾಲನಾ ಕಟ್ಟುಗಳು ಹಾಗೂ ಅನೌಪಚಾರಿಕ ಆರಂಭಿಕ ಬಾಲ್ಯಾವಸ್ಥೆಯ ಶಿಕ್ಷಣ ಸೇವೆಯನ್ನು ಒದಗಿಸುವ ಪ್ರಾಮುಖ್ಯತೆಯನ್ನು ಅಂತಾರಾಷ್ಟ್ರೀಯ ಅಧ್ಯಯನಗಳು ಕೂಡಾ ಗುರುತಿಸಿವೆ. ಅಭಿವೃದ್ಧಿಯಾತ್ಮಕ ಮನಶಾಸ್ತ್ರಜ್ಞರು ಕೂಡ ಆರಂಭಿಕ ಬಾಲ್ಯಾವಸ್ಥೆಯ ಶಿಕ್ಷಣವನ್ನು ಮಕ್ಕಳಸ್ನೇಹಿ ವಾತಾವರಣದಲ್ಲಿ ನೀಡುವ ಮೂಲಕ ಮಕ್ಕಳ ಸಂಪೂರ್ಣಾತ್ಮಕ ಬೆಳವಣಿಗೆಯನ್ನು ಉತ್ತೇಜಿಸುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ. * 6 ವರ್ಷಕ್ಕಿಂತ ಮೊದಲು ಮಕ್ಕಳನ್ನು ಔಪಚಾರಿಕ ವ್ಯವಸ್ಥೆಯಲ್ಲಿ ತೊಡಗಿಸಿದರೆ, ಅದು ಆರಂಭಿಕ ವರ್ಷಗಳಲ್ಲೇ ಶಿಕ್ಷಣದ `ಔಪಚಾರೀಕರಣ'ಕ್ಕೆ ದಾರಿ ಮಾಡಿಕೊಡಲಿದೆ. ವಿನ್ಯಾಸಗೊಳಿಸಿದ ವೇಳಾಪಟ್ಟಿ ಮತ್ತು ಪಠ್ಯಕ್ರಮವು ಅನುದ್ದೇಶಪೂರ್ವಕವಾಗಿ ಹಾನಿಗೆ ದಾರಿ ಮಾಡಿಕೊಡಲಿದೆ. ಜೊತೆಗೆ, ಮಕ್ಕಳು ತೀವ್ರವಾಗಿ ಅಗತ್ಯವಿರುವ ಉತ್ತಮ ಆರೋಗ್ಯ, ಪೋಷಕಾಂಶ ಮತ್ತು ಮಾನಸಿಕೋ-ಸಾಮಾಜಿಕ ಉತ್ತೇಜನದಂಥ ಒಳಸುರಿಗಳಿಗೆ ತೆರೆದುಕೊಳ್ಳುವಿಕೆಯನ್ನು ಕಳೆದುಕೊಳ್ಳುತ್ತಾರೆ.

(Gi) ಪೂರಕ ಪೋಷಕಾಂಶ ಕಾರ್ಯಕ್ರಮದ ಸುಧಾರಣೆ: ಡಬ್ಲ್ಯುಸಿಡಿ ಮಂತ್ರಾಲಯ 24.2.2009ರಂದು ಪ್ರಕಟಿಸಿದ ಉಣಿಸುವಿಕೆ ಮತ್ತು ಪೋಷಕಾಂಶ ನಿಯಮಗಳ ಪರಿಷ್ಕೃತ ಪ್ರಮಾಣಕಗಳ ಪ್ರಕಾರ, ಅಂಗನವಾಡಿ ಕೇಂದ್ರಗಳು ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಿಗೆ ಬೆಳಗ್ಗೆ ತಿಂಡಿ, ಊಟ ಮತ್ತು ಮನೆಗೆ ಕೊಂಡೊಯ್ಯುವ ದಿನಸಿ(ಟಿಎಚ್ಆರ್) ನೀಡುವುದನ್ನು ಮುಂದುವರಿಸುತ್ತವೆ. 2008ರ ದರ ಪರಿಷ್ಕರಣೆ ಬಳಿಕ ಕೇಂದ್ರ ಹಾಗೂ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ವೆಚ್ಚ ಹಂಚಿಕೆ ಅನುಪಾತ 50:50 ಹಾಗೂ ಎನ್ಇಆರ್‌ಗಳಲ್ಲಿ 90:10 ಇದೆ. ಆಹಾರ ಪದಾರ್ಥಗಳ ಬೆಲೆ ತೀವ್ರವಾಗಿ ಹೆಚ್ಚಿರುವುದರಿಂದ, ಬೆಳಗಿನ ತಿಂಡಿ, ಬಿಸಿಯೂಟ, ಅಗತ್ಯ ಪೋಷಕಾಂಶಗಳಿಗೆ ಪ್ರಸ್ತುತ ನೀಡಲಾಗುತ್ತಿರುವ 4, 5 ಮತ್ತು 6 ರೂ. ಬಹಳ ಕಡಿಮೆ ಇದೆ. ಆಹಾರ ಮತ್ತು ಇಂಧನ ವೆಚ್ಚ ಹೆಚ್ಚಳವು ಒಡ್ಡಿರುವ ಸವಾಲನ್ನು ಎದು ರಿಸಲು ಗ್ರಾಮೀಣ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ-ಆರ್ಎಲ್)ವನ್ನು 1986-87ನ್ನು ಆಧಾರ ವರ್ಷವನ್ನಾಗಿ ಪರಿಗಣಿಸಿ, ಎಸ್ಎನ್‌ಪಿ ಹಣಕಾಸು ಪ್ರಮಾಣಕಗಳನ್ನು ಪರಿಷ್ಕರಿಸಲಾಗಿದೆ. ಪರಿಷ್ಕೃತ ದರ ಹಾಗೂ ಜಾರಿ ಯೋಜನೆಯನ್ನು ಖಂಡ 7ರಲ್ಲಿ ವಿವರಿಸಲಾಗಿದೆ.

ಮಕ್ಕಳಿಗೆ ಹಾಲೂಡಿಸುವಿಕೆ, ರೆಸಿಪಿಗಳಿಗೆ ಮಾರ್ಗದರ್ಶಿ ಸೂತ್ರಗಳು ಹಾಗೂ ಪೋಷಕಾಂಶ ಪ್ರಮಾಣಕಗಳ ಪಾಲನೆಯಲ್ಲಿ ವಾಣಿಜ್ಯಿಕ ಹಸ್ತಕ್ಷೇಪವನ್ನು ತಡೆಯಲು, ಗುಣಮಟ್ಟದ ಪರಾಮರ್ಶನ ಮತ್ತು ಗುಣಮಟ್ಟದ ಮಾದರಿಗಳ ಅನುಸರಣೆ, ತಿಂಗಳೊಂದಕ್ಕೆ 25 ದಿನ ವಿತರಣೆಯನ್ನು ಖಾತ್ರಿಗೊಳಿಸಲು ಸೂಕ್ತವಾದ ಮತ್ತು ಅಗತ್ಯವಿರುವ ಕಟ್ಟುಪಾಡುಗಳನ್ನು ವಿಧಿಸಲಾಗುತ್ತದೆ. ಪ್ರಶಸ್ತ ಹಾಗೂ ಸುಧಾರಿತ ಟಿಎಚ್ಆರ್ ನಿರ್ವಹಣೆಯನ್ನು ಒಳಗೊಂಡ ಲೋಪರಹಿತ ವಿತರಣೆ ವ್ಯವಸ್ಥೆಗೆ ಪ್ರಾಧಾನ್ಯ ನೀಡಲಾಗುತ್ತದೆ. 3 ರಿಂದ 6 ವರ್ಷ ವಯೋಮಿತಿಯ ಮಕ್ಕಳಿಗೆ ಸಂಬಂಧಿಸಿದಂತೆ, ಬೆಳಗಿನ ತಿಂಡಿ ಹಾಗೂ ಮಧ್ಯಾಹ್ನದ ಬಿಸಿಯೂಟದ ನಡುವೆ 2 ರಿಂದ 3 ಗಂಟೆ ಅಂತರವನ್ನು ಕಾಯ್ದುಕೊಳ್ಳಲಾಗುತ್ತದೆ.

ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಎಸ್ಎನ್‌ಪಿ ವಿತರಣೆಗೆ ನಾನಾ ಮಾದರಿಗಳನ್ನು

ಉದಾಹರಣೆಗೆ, ಆಂಧ್ರಪ್ರದೇಶ, ರಾಜಸ್ಥಾನ, ಒರಿಸ್ಸಾ ಮತ್ತು ಮಧ್ಯಪ್ರದೇಶದಲ್ಲಿ ಎಸ್ಎಚ್‌ಜಿಗಳ ಬಳಕೆ, ದಿಲ್ಲಿಯಲ್ಲಿ ಎಸ್ಎನ್‌ಪಿ ಮತ್ತು ಎಂಡಿಎಂಗೆ ಒಟ್ಟಿಗೆ ಆಹಾರ ಬೇಯಿಸಲು ಕೇಂದ್ರೀಕೃತ ಅಡುಗೆಮನೆ ಮತ್ತು ಸಂಜಾ ಅಡುಗೆ ಒಲೆಯನ್ನು ಬಳಸಲಾಗುತ್ತಿದೆ. ಐಸಿಡಿಎಸ್ ಮಿಷನ್ ಅಡಿ ಎಸ್ಎನ್‌ಪಿ ವಿತರಣೆಯನ್ನು ತಾರ್ಕಿಕಗೊಳಿಸಲು ಮತ್ತು ಸರಳಗೊಳಿಸಿ ಹೆಚ್ಚು ಸಮರ್ಥವಾಗಿಸಲು ನಾವೀನ್ಯತೆಯ ವಿವಿಧ ಮಾದರಿಗಳನ್ನು ಬಳಸಿಕೊಳ್ಳಲು ಪ್ರಯತ್ನ ಮಾಡಬೇಕಿದೆ. ಎಲ್ಲ ಶರತ್ತುಗಳು ಹಾಗೂ ಗುಣಮಟ್ಟದ ಮಾದರಿಗಳನ್ನು ಅನುಸರಿಸುವ ಅಧಿಕೃತ ಉತ್ಪಾದಕರನ್ನೇ ಬಳಸಿಕೊಳ್ಳಬೇಕು. ಆದರೆ, ಇದೆಲ್ಲರಲ್ಲಿ ಸುರಕ್ಷತೆ ಮತ್ತು ಗುಣಮಟ್ಟ ಮಾದರಿಗೆ ಅನುಸರಣೆ (ಆಹಾರ ಸುರಕ್ಷತೆ ಮತ್ತು ಮಾದರಿಗಳ ಕಾಯಿದೆ 2006) ಹಾಗೂ 24.02.2009ರ ಎಂಡಬ್ಲ್ಯುಸಿಡಿಯ ಮಾರ್ಗದರ್ಶಿ ಸೂತ್ರಗಳು ಪ್ರಮುಖವಾದವು. ರಾಜ್ಯ ಸರ್ಕಾರ/ರಾಜ್ಯದ ಸಂಸ್ಥೆಗಳು ಮತ್ತು/ಅಥವಾ ಸಹಕಾರ ಸಂಸ್ಥೆಗಳು, ಎಸ್ಎಚ್‌ಜಿ ಒಕ್ಕೂಟಗಳು/ಉತ್ಪಾದಕರನ್ನು ಫಲಕಾರಿ ಹಾಗೂ ಪೋಷಕಾಂಶಭರಿತ ಆಹಾರ ತಯಾರಿಕೆಯಲ್ಲಿ ಬಳಸಿಕೊಳ್ಳಬಹುದು.

(ಗಿII) ಮೂರು ವರ್ಷದೊಳಗಿನ ಮಕ್ಕಳ ತಾಯಂದಿರಿಗೆ ಪಾಲನೆ ಮತ್ತು ಪೋಷಕಾಂಶ ಸಲಹಾ ಸೇವೆಯನ್ನು ಒಂದು ಮುಖ್ಯ ಸೇವೆ ಎಂದು ಪರಿಚಯಿಸಲಾಗಿದೆ. ಇದರಲ್ಲಿ ಡಬ್ಲ್ಯುಎಚ್‌ಒನ ಬೆಳವಣಿಗೆ ರೇಖಾ ಪಟ್ಟಿಯನ್ನು ಹಾಗೂ ಕುಟುಂಬದ ಬಳಿ ಇರುವ ತಾಯಿ ಮತ್ತು ಮಗುವಿನ ಸಂರಕ್ಷಣ ಕಾರ್ಡ್‌ನ್ನು ಬಳಸಿಕೊಂಡು, ಎಳೆಯ ಮಗುವಿನ ಉತ್ತೇಜನ ಮತ್ತು ಪರಾಮರ್ಶನ ಸೇರಿದೆ. ಬೆಳವಣಿಗೆಯಲ್ಲಿ ಲೋಪ ಗುರುತಿಸುವುದು ಮತ್ತು ಪಾಲಕರಿಗೆ ಸೂಕ್ತ ಸಲಹೆ ಮೂಲಕ, ವಿಶೇಷವಾಗಿ ನವಜಾತ ಮತ್ತು ಎಳೆಯ ಮಗುವಿಗೆ ಆಹಾರ ನೀಡುವಿಕೆ ಹಾಗೂ ಆರೋಗ್ಯ ರಕ್ಷಣೆಯನ್ನು ದೃಢಪಡಿಸಬೇಕು. ಪೋಷಕಾಂಶ ಹಾಗೂ ಆರೋಗ್ಯ ಶಿಕ್ಷಣ ಸೇವೆಗಳನ್ನು ಮಗುವಿನ ಸಮಗ್ರ ಬೆಳವಣಿಗೆ, ಆರೋಗ್ಯ ಮತ್ತು ಪೋಷಕಾಂಶ ಸೇವೆಗಳಲ್ಲಿ ಪೋಷಕರು ಮತ್ತು ಸಾಮುದಾಯಿಕ ಶಿಕ್ಷಣವನ್ನು ಸೇರಿಸಿ ಇದಕ್ಕನುಗುಣವಾಗಿ ಮರುವ್ಯಾಖ್ಯಾನಿಸಲಾಗುತ್ತದೆ. ಪಶ್ಚಿಮ ಬಂಗಾಳ ಹಾಗೂ ಒರಿಸ್ಸಾದಲ್ಲಿ ಈ ವಿಧಾನವನ್ನು ಅಳವಡಿಸಿಕೊಳ್ಳಲಾಗಿದ್ದು, ಪೋಷಕಾಂಶ ಕೊರತೆ ದರದಲ್ಲಿ ಕುಸಿತವನ್ನು ಹಾಗೂ ನಿರಂತರ ಪಾಲನಾ ಆಚರಣೆಗಳಿಂದಾಗಿ ಪೋಷಕಾಂಶ ಕೊರತೆಯನ್ನು ತಡೆಯುವಲ್ಲಿ ಯಶಸ್ವಿಯಾಗಲಿದೆ. 3 ವರ್ಷದ ಕೆಳಗಿನ ಮಕ್ಕಳನ್ನು ಗುರಿಯಾಗಿಸಿಕೊಂಡು ಮತ್ತು ಗರ್ಭಿಣಿಯರು, ಹಾಲುಣಿಸುವ ತಾಯಂದಿರು ಮತ್ತು 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಕುಟುಂಬದೊಂದಿಗೆ ಸಂಪರ್ಕ, ಪಾಲನೆ ಮತ್ತು ಪೋಷಕಾಂಶ ಸಲಹೆಗಳನ್ನು ನೀಡಲು ನೆಲಮಟ್ಟದಲ್ಲಿ ಮಾನವ ಸಂಪನ್ಮೂಲವನ್ನು ಹೆಚ್ಚಿಸುವ ಅಗತ್ಯವಿದ್ದು, ಎಡಬ್ಲ್ಯುಸಿಗಳಲ್ಲಿ ಪಾಲನೆ ಮತ್ತು ಪೋಷಕಾಂಶ ಸಲಹೆಗಾರರು/ಹೆಚ್ಚುವರಿ ಎಡಬ್ಲ್ಯುಸಿಗಳನ್ನು ಪರಿಚಯಿಸಬೇಕಿದೆ. ಎರಡನೇ ಎಡಬ್ಲ್ಯುಡಬ್ಲ್ಯು ನೇಮಕದಿಂದ ಹಾಲಿ ಎಡಬ್ಲ್ಯುಡಬ್ಲ್ಯುಗಳಲ್ಲಿ ಕೇಂದ್ರ ಆಧಾರಿತ ಆರಂಭಿಕ ಕಲಿಕೆ ಮತ್ತು ಪೂರಕ ಪೋಷಕಾಂಶ ಚಟುವಟಿಕೆಗಳನ್ನು ಉತ್ತಮಗೊಳಿಸುವೆಡೆಗೆ ಗಮನ ನೀಡಬಹುದು. 3 ರಿಂದ 6 ವರ್ಷದ ಮಕ್ಕಳಿಗೆ ಸಂಬಂಧಿಸಿದ ಹಾಗೂ ಎಸ್ಎಸ್ಎ ಜೊತೆಗೆ ಸಂಬಂಧವನ್ನು ಬಲಪಡಿಸುವುದು ಮತ್ತು ಕೇಂದ್ರ ಆಧಾರಿತ ಚಟುವಟಿಕೆಗಳಿಗೆ ಗಮನ ನೀಡುವುದು ಮತ್ತು ಸಮುದಾಯದ ಬೆಂಬಲವನ್ನು ಸಂಘಟಿಸುವುದು ಹಾಗೂ ಎಸ್ಎಬಿಎಲ್ಎ ಕಾರ್ಯಕ್ರಮಕ್ಕೆ ಹೆಚ್ಚು ಗಮನ ನೀಡಬಹುದು. ಇದಕ್ಕೆ ಅನುಗುಣವಾಗಿ ಆಯ್ಕೆಮಾಡಿಕೊಂಡ ಹೆಚ್ಚು ಹೊರೆ ಇರುವ ಜಿಲ್ಲೆಗಳಲ್ಲಿ ಹೆಚ್ಚುವರಿ ಎಡಬ್ಲ್ಯುಡಬ್ಲ್ಯು ಮತ್ತು ಪೋಷಕಾಂಶ ಸಲಹೆಗಾರ ನೇಮಕ ಅವಕಾಶ ಕಲ್ಪಿಸಲಾಯಿತು. ರಾಜ್ಯ ಸರ್ಕಾರ ಇವರನ್ನು ಎಪಿಐಪಿಗಳ ಮೂಲಕ ಬೇಡಿಕೆ ಇದ್ದಲ್ಲಿ ನೇಮಿಸುತ್ತಿತ್ತು. ನಿರ್ದಿಷ್ಟವಾಗಿ ಹೇಳಬೇಕೆಂದರೆ, ಹೆಚ್ಚುವರಿ ಎಡಬ್ಲ್ಯುಡಬ್ಲ್ಯು ಮತ್ತು ಪೋಷಕಾಂಶ ಸಲಹೆಗಾರರ ಜವಾಬ್ದಾರಿ ಏನೆಂದರೆ,

* ಗರ್ಭಿಣಿಯರು ಮತ್ತು ಹಾಲುಣಿಸುತ್ತಿರುವ ತಾಯಂದಿರು ಹಾಗೂ 3 ವರ್ಷ ಕೆಳಗಿನ ಮಕ್ಕಳ ಪ್ರಧಾನ ಕೆಲಸಗಾರ
* ನವಜಾತ ಮತ್ತು ಎಳೆಯ ಮಕ್ಕಳ ಹಾಲುಣಿಸುವಿಕೆ ರೀತಿಗಳು ಮುಖ್ಯವಾಗಿ, ಜೀವನದ ಮೊದಲ ಆರು ತಿಂಗಳಿನಲ್ಲಿ ಆರಂಭಿಕ ಮತ್ತು ವಿಶೇಷವಾಗಿ ಹಾಲೂಡಿಸುವಿಕೆಗೆ ಬೆಂಬಲ, ರಕ್ಷಣೆ ಮತ್ತು ಉತ್ತೇಜನ ನೀಡುವುದು

* ನವಜಾತ ಮತ್ತು ಎಳೆಯ ಮಕ್ಕಳಿಗೆ ಉಣಿಸುವಿಕೆ (ಎಂಡಬ್ಲ್ಯುಸಿಡಿ 2006)ಯ ರಾಷ್ಟ್ರೀಯ ಮಾರ್ಗದರ್ಶಿ ಸೂತ್ರಗಳ ಪರಿಣಾಮಕಾರಿ ಕಾರ್ಯಾಚರಣೆ ಹಾಗೂ ನವಜಾತ ಮಕ್ಕಳಿಗೆ ಎದೆ ಹಾಲಿನ ಪ್ರತಿಯಾಗಿ ಬಾಟಲಿಯಲ್ಲಿ ಉಣಿಸುವಿಕೆ ಮತ್ತು ತತ್ಕ್ಷಣದ ಆಹಾರಗಳು (ಉತ್ಪಾದನೆ, ಪೂರೈಕೆ ಮತ್ತು ವಿತರಣೆಯ ನಿಯಂತ್ರಣ) ಕಾಯಿದೆ 1992 ಮತ್ತು ತಿದ್ದುಪಡಿ ಕಾಯಿದೆ, ಐಎಂಎಸ್ ಆಕ್ಟ್, ಐಎಂಎನ್‌ಸಿಐಯ ಪರಿಣಾಮಕಾರಿ ಅನುಷ್ಠಾನಕ್ಕೆ ಪಾಲು ಸಲ್ಲಿಸುವುದು
* ಕುಟುಂಬದ ಹಂತದಲ್ಲಿ ಪೋಷಕಾಂಶ ಸಲಹೆ ಲಭ್ಯವಾಗುವಂತೆ ಮಾಡುವುದು
* ಎಳೆಯ ಮಕ್ಕಳ ಬೆಳವಣಿಗೆ ಮತ್ತು ಪ್ರಗತಿಯ ಉತ್ತೇಜನ ಮತ್ತು ಪರಾಮರ್ಶನ
* ನೂತನ ತಾಯಿ ಮತ್ತು ಮಕ್ಕಳ ಜಂಟಿ ಸಂರಕ್ಷಣಾ ಕಾರ್ಡ್‌ನ ಸಂಪೂರ್ಣ ಬಳಕೆ ಮತ್ತು ಅನುಸರಣೆಯನ್ನು ಖಾತ್ರಿಗೊಳಿಸುವುದು
* ಸಮುದಾಯ ಆಧಾರಿತ ಮಕ್ಕಳ ಪಾಲನಾ ಏರ್ಪಾಟುಗಳು ಮತ್ತು ಮಕ್ಕಳ ಪಾಲನಾ ಅವಕಾಶ ಕ್ರಮಗಳೊಂದಿಗೆ ಜೋಡಣೆಯನ್ನು ಬೆಂಬಲಿಸುವುದು
* ಆಶಾ ಮತ್ತು ಎಎನ್‌ಎಂಗಳೊಂದಿಗೆ ಮೂರು ವರ್ಷದೊಳಗಿನ ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದ ಸೇವೆಗಳನ್ನು ಹೊಂದಾಣಿಕೆ ಮಾಡಿಸುವುದು
* ಎಡಬ್ಲ್ಯುಸಿಯಲ್ಲಿ ಎಡಬ್ಲ್ಯುಡಬ್ಲ್ಯು ಮತ್ತು ಆಶಾ ಜೊತೆ ಜಂಟಿಯಾಗಿ ಸ್ನೇಹ ಶಿಬಿರ ಆಯೋಜಿಸುವುದು
* ಪೋಷಕಾಂಶ ಕೊರತೆ ಮತ್ತು ರಕ್ತಹೀನತೆಯ ಅಂತರ್ ಪೀಳಿಗೆ ವೃತ್ತವನ್ನು ಪ್ರವರ್ತಿಸುವ ಮಾಡುವ ಯೋಜನೆ ಐಜಿಎಂಎಸ್‌ವೈ ಜೊತೆಗೆ ತಾಯಂದಿರನ್ನು ಜೋಡಿಸಲು ನೆರವಾಗುವುದು
* ಇಸಿಡಿಯ ಪಾಲನಾ ಕಟ್ಟು ಮತ್ತು ಪ್ರೋತ್ಸಾಹಗಳನ್ನು ಆರಂಭದಲ್ಲೇ ಉತ್ತೇಜಿಸುವುದು
* ಆರಂಭದಲ್ಲೇ ಪರೀಕ್ಷೆ/ಅಂತರ್ ವೈಯಕ್ತಿಕ ಸಂವಹನ
* ಗರ್ಭಿಣಿ ಮತ್ತು ಹಾಲೂಡಿಸುವ ತಾಯಂದಿರಿಗೆ ಸಂಬಂಧಿಸಿದಂತೆ ಸಮುದಾಯ/ಕುಟುಂಬದ ಜೊತೆಗೆ ಮುಖಾಮುಖಿ

ಪ್ರತಿಯಾಗಿ ರಾಜ್ಯದ ಸ್ಥಿತಿಯನ್ನು ಆಧರಿಸಿ(ನಿರ್ದಿಷ್ಟವಾಗಿ ಅರ್ಹತೆ, ಕೌಶಲ ಮತ್ತು ಸಾಮರ್ಥ್ಯ) ಹೆಚ್ಚುವರಿ ಕೆಲಸಗಾರ ಇಸಿಸಿಇ ಮೇಲೆ ಗಮನ ನೀಡಬಹುದು ಮತ್ತು ಇನ್ನೊಬ್ಬರು 3 ವರ್ಷಕ್ಕಿಂತ ಸಣ್ಣ ವಯಸ್ಸಿನ ಮಕ್ಕಳ ನಿಗಾ ವಹಿಸಬಹುದು.

ಇಷ್ಟಲ್ಲದೆ ಉಳಿದ ಜಿಲ್ಲೆಗಳಲ್ಲಿ ಆಶಾ ಕಾರ್ಯಕರ್ತೆ/ರ್ತ (ಹೆಚ್ಚುವರಿ ಇರುವಲ್ಲಿ) ರನ್ನೂ ವೇತನ/ಪ್ರೋತ್ಸಾಹಧನ, ಯುವಜನರು/ಇನ್ನಿತರ ಸ್ವಯಂಸೇವಕರನ್ನು ಶಿಷ್ಯವೇತನದ ಆಧಾರದಲ್ಲಿ ಮತ್ತು/ಅಥವಾ ಸಮುದಾ ಯದ ಮಹಿಳಾ ಕಾರ್ಯಕರ್ತೆಯರನ್ನು ಸಂಘಟಿಸುವ ಮೂಲಕ (4-5 ಎಡಬ್ಲ್ಯುಸಿಗಳ ಗುಚ್ಛದಲ್ಲಿ) ಕುಟುಂಬಗಳ ಸಂಪರ್ಕ ಮತ್ತು ಆದ್ಯತೆಯ ಮೇರೆಗೆ ಮನೆ ಭೇಟಿ ಮಾಡಬಹುದೇ ಎಂಬುದನ್ನೂ ಶೋಧಿಸ ಬೇಕು. ಆಶಾ ಕಾರ್ಯಕರ್ತರು ಸೇರಿದಂತೆ ಜೋಡಣೆ ಕೆಲಸಗಾರರ ಪ್ರೋತ್ಸಾಹಧನವನ್ನು ಫಲಿತಾಂಶಕ್ಕೆ ನೇರವಾಗಿ ಜೋಡಿಸುವ ಮೂಲಕ ಹಾಗೂ ಒಟ್ಟಾರೆ ಆಯವ್ಯಯದ ಮಿತಿಗಳನ್ನು ಆಧರಿಸಿ ನಿರ್ಧರಿಸಬಹುದು.

(ಗiii) ತೀವ್ರ ಮತ್ತು ಸೌಮ್ಯ ರೀತಿಯ ಕಡಿಮೆ ತೂಕದ ಮಕ್ಕಳ ನಿರ್ವಹಣೆ: ಸಮುದಾಯ ಆಧಾರಿತ ಮಧ್ಯಸ್ಥಿಕೆ ಮತ್ತು ಸ್ನೇಹ ಶಿಬಿರಗಳ ಮೂಲಕ ತೀವ್ರ ಹಾಗೂ ಸೌಮ್ಯ ರೀತಿಯ ಕಡಿಮೆ ತೂಕವಿರುವ ಮಕ್ಕಳನ್ನು ಗುರುತಿಸಲು ಹಾಗೂ ನಿರ್ವಹಿಸಲು, ವಿಶೇಷ ಮತ್ತು ಪ್ರಾಮಾಣಿಕ ಪ್ರಯತ್ನ ನಡೆಯಬೇಕಾಗುತ್ತದೆ. ತೀವ್ರ ಪೋಷಕಾಂಶ ಕೊರತೆಯಿರುವ ಮಕ್ಕಳನ್ನು ವೈದ್ಯಕೀಯ ಗಮನ ನೀಡುವಿಕೆಗೆ ಎನ್‌ಆರ್‌ಎಚ್‌ಎಂ ಅಡಿ ಸ್ಥಾಪಿಸಿರುವ ಎನ್‌ಆರ್‌ಸಿ/ಎಂಟಿಸಿಗಳಿಗೆ ಕಳಿಸಬೇಕಾಗುತ್ತದೆ. ಈಗಾಗಲೇ ತೀವ್ರ ಪೋಷಕಾಂಶ ಕೊರತೆ ಅನುಭವಿಸುತ್ತಿರುವ ಕೆಲವು ರಾಜ್ಯಗಳು ಆರೋಗ್ಯ ಕೇಂದ್ರಗಳಲ್ಲಿ ಪಾಲನೆ ಮತ್ತು ಉಪಚಾರವನ್ನು ಐಸಿಡಿಎಸ್ ಮತ್ತು ಎನ್‌ಆರ್‌ಎಚ್‌ಎಂ ನಡುವಿನ ಬಲಿಷ್ಠ ಸಂಯೋಜನೆಯಿಂದ ಪರಿಣಾಮಕಾರಿಯಾಗಿ ನೀಡಲಾಗುತ್ತದೆ.

ಐಸಿಡಿಎಸ್ ಮಿಷನ್ ಅಡಿ ಗ್ರಾಮ ಪೋಷಕಾಂಶ ಸಲಹೆ ಮತ್ತು ಮಕ್ಕಳ ಪಾಲನೆ ಸಭೆ (ಸ್ನೇಹ ಶಿಬಿರ)ಗಳನ್ನು ಸಮುದಾಯ ಆಧಾರಿತ ಸೌಮ್ಯ ಹಾಗೂ ತೀವ್ರ ಪೋಷಕಾಂಶ ಕೊರತೆಯನ್ನು ತಡೆಯುವ ಹಾಗೂ ನಿರ್ವಹಿಸುವ ಚಟುವಟಿಕೆಯಂತೆ ವಿನ್ಯಾಸಗೊಳಿಸಲಾಗಿದೆ. ಈ ಸ್ನೇಹ ಶಿಬಿರಗಳು

4-5 ಅಂಗನವಾಡಿ ಕೇಂದ್ರಗಳ ಗುಚ್ಚದಲ್ಲಿ ಆಯ್ಕೆ ಮಾಡಿಕೊಂಡ ಒಂದರಲ್ಲಿ ನಡೆಯುತ್ತದೆ. ಸ್ನೇಹ ಶಿಬಿರಗಳನ್ನು ಸೌಮ್ಯ ಮತ್ತು ತೀವ್ರ ಪೋಷಕಾಂಶ ಕೊರತೆ ಇರುವ ಮಕ್ಕಳು ಹೆಚ್ಚು ಇರುವ ಸ್ಥಳವನ್ನು ಆಯ್ಕೆ ಮಾಡಿಕೊಂಡು ಅಲ್ಲಿ ನಡೆಸಲಾಗುತ್ತದೆ. ಸ್ನೇಹ ಶಿಬಿರಗಳ ಒಟ್ಟಾರೆ ಗುರಿಗಳೆಂದರೆ, ಪೋಷಕಾಂಶ ಕೊರತೆ ಇರುವ ಮಕ್ಕಳ ಶೀಘ್ರ ಪುನರ್ವಸತಿ, ಕುಟುಂಬಗಳು ಪುನರ್ವಸತಿಯನ್ನು ಸುಸ್ಥಿರವಾಗಿಸುವಂತೆ ಸಬಲಗೊಳಿಸುವುದು ಮತ್ತು ಮಕ್ಕಳ ಪಾಲನೆ, ಉಣಿಸುವಿಕೆ ಮತ್ತು ಆರೋಗ್ಯ ರಕ್ಷಣೆಯಲ್ಲಿ ಸಮುದಾಯದ ವರ್ತನೆಯನ್ನು ಬದಲಿಸುವ ಮೂಲಕ ಭವಿಷ್ಯದಲ್ಲಿ ಪೋಷಕಾಂಶ ಕೊರತೆಯನ್ನು ತಡೆಯುವುದು. ಮುಖ್ಯ ಕಾರ್ಯತಂತ್ರಗಳೆಂದರೆ 1. ಹೊಸ ಮಾರ್ಗ ಕುರಿತು ಅಂಗನವಾಡಿ ಕೆಲಸಗಾರರು ಮತ್ತು ಮೇಲ್ವಿಚಾರಕರನ್ನು ಅನುಗೊಳಿಸು ವುದು. 2. ಬೆಳವಣಿಗೆ ರೇಖಾಚಿತ್ರಗಳು ಮತ್ತು ತಾಯಿ ಹಾಗೂ ಮಕ್ಕಳ ಕಾರ್ಡ್ ಬಳಸಿಕೊಂಡು ತೂಕದ ಪರಾಮರ್ಶನ ಮತ್ತು ಅನುಸರಣೆ 3. ಸಮಸ್ಯೆಯ ತೀವ್ರತೆಯನ್ನು ಸಮುದಾಯದೊಟ್ಟಿಗೆ ಹಂಚಿಕೊಳ್ಳು ವುದು/ ಅನುಗೊಳಿಸುವಿಕೆ 4. ಬಡ ಜನವಸತಿಗಳಲ್ಲಿ ಆರೋಗ್ಯವಂತ ಮಕ್ಕಳ ಮನೆಗಳಲ್ಲಿರುವ ಮಕ್ಕಳ ಧನಾತ್ಮಕ ಆಚರಣೆಗಳನ್ನು ಪ್ರಚುರಪಡಿಸುವುದು ಮತ್ತು 5. ಸುರಕ್ಷತೆ ಮತ್ತು ಸಲಹಾ ಸಭೆಗಳನ್ನು ಹಮ್ಮಿಕೊಳ್ಳುವುದು. ಪ್ರತಿಯೊಂದು ಸ್ನೇಹಶಿಬಿರ 12 ದಿನಗಳ ಮಾಸಿಕ ಸಭೆಗಳನ್ನು ಹೊಂದಿರಲಿದ್ದು, ಆನಂತರ 18 ದಿನ ಗೃಹಾಧರಿತ ಆಚರಣೆಗಳನ್ನು ಒಳಗೊಂಡಿರುತ್ತದೆ. 12 ದಿನಗಳ ಮಾಸಿಕ ಸಭೆಗಳಲ್ಲಿ ಸಮುದಾಯದಲ್ಲಿರುವ ಉತ್ತಮ ಆಚರಣೆಗಳನ್ನು ಸೌಮ್ಯ ಮತ್ತು ತೀವ್ರ ಕಡಿಮೆ ತೂಕದ ಮಕ್ಕಳು ಪಾಲಕರು, `ಕ್ರಿಯೆ ಮೂಲಕ ಕಲಿಕೆ' ಪ್ರಕ್ರಿಯೆಯಿಂದ ಕಲಿಯುತ್ತಾರೆ. ಈ ಉಪಕ್ರಮವು ಅಗತ್ಯವನ್ನು ಆಧರಿಸುವಂತದ್ದು ಮತ್ತು ಅಗತ್ಯವಿದ್ದಲ್ಲಿ ಎಸ್ಎನ್‌ಪಿಯಿಂದ ಹೆಚ್ಚುವರಿ ಅನುದಾನ ಪಡೆದುಕೊಳ್ಳಬಹುದು. ಸ್ನೇಹ ಶಿಬಿರಗಳಿಗೆ ಬರುವ ಎನ್‌ಎಚ್‌ಆರ್‌ಎಂಅಡಿ ಎಎನ್‌ಎಂ/ವೈದ್ಯರು ಕಡಿಮೆ ತೂಕದ ಮಕ್ಕಳ ಆರೋಗ್ಯ ಪರೀಕ್ಷೆಗೆ ಜವಾಬ್ದಾರರಾಗಿರುತ್ತಾರೆ. ಮಕ್ಕಳು ಸ್ನೇಹ ಶಿಬಿರಕ್ಕೆ ಹಾಜರಾಗುತ್ತಿದ್ದು, ಯಾವುದೇ ಸುಧಾರಣೆಯನ್ನು ತೋರಿಸದಿದ್ದರೆ ಎನ್‌ಎಚ್‌ಆರ್‌ಎಂಅಡಿ ಮಕ್ಕಳನ್ನು ನೋಡಿಕೊಳ್ಳುವ ವೈದ್ಯ/ಅಥವಾ ಎನ್‌ಆರ್‌ಎಂ ಅಂಥ ಮಗುವಿಗೆ ಯಾವ ಅಥವಾ ಎಲ್ಲಿ ಚಿಕಿತ್ಸೆ ನೀಡಬೇಕು ಎಂಬುದ್ನು ನಿರ್ಧರಿಸುವ ಜವಾಬ್ದಾರಿ ಹೊಂದಿರುತ್ತಾರೆ. ಮತ್ತು, ಮಗುವನ್ನು ಸೂಕ್ತ ಆರೋಗ್ಯ ಹಾಗೂ ರಕ್ಷಣೆ/ಉಪಚಾರ ವ್ಯವಸ್ಥೆಯೊಡನೆ ಜೋಡಣೆಗೊಳಿಸುವ, ಸ್ನೇಹ ಶಿಬಿರವನ್ನು ಆಯ್ದ ಸ್ಥಳಗಳಲ್ಲಿ ಸ್ಥಾಪಿಸುವ ಮತ್ತು ಈ ಯೋಜನೆಯಡಿಯ ವಿಧಾನಗಳನ್ನು ಅನುಬಂಧ ಗಿ ರಲ್ಲಿ ನೀಡಲಾಗಿದೆ. (iಫಿ) ವಿಶೇಷ ಅಗತ್ಯಗಳ ಮಕ್ಕಳ ಬಗ್ಗೆ ಗಮನಹರಿಸುವುದು: ಐಸಿಡಿಎಸ್ ಮಿಷನ್ ಎಡಬ್ಲ್ಯುಸಿಗಳ ಮೂಲಕ ವಿಶೇಷ ಅಗತ್ಯಗಳಿರುವ ಮಕ್ಕಳ ಸಮಗ್ರ ಮತ್ತು ಎಲ್ಲರನ್ನೂ ಒಳಗೊಂಡ ಆರಂಭಿಕ ಬಾಲ್ಯಾವಸ್ಥೆಯ ಪಾಲನೆ ಮತ್ತು ಬೆಳವಣಿಗೆಯ ಸೇವೆಗಳನ್ನು ಒದಗಿಸುತ್ತದೆ. ಐಸಿಡಿಎಸ್ ಮಿಷನ್ ವಿಶೇಷ ಅಗತ್ಯಗಳಿರುವ ಮಕ್ಕಳನ್ನು ಆರಂಭದಲ್ಲೇ ಗುರುತಿಸುವುದು, ಮೌಲ್ಯಮಾಪನ ಮತ್ತು ನಿರ್ಣಯಿಸುವಿಕೆ, ಪಾಲನೆ ಮತ್ತು ಸಲಹಾ ಸೇವೆಗಳಲ್ಲದೆ ಕುಟುಂಬ ಮತ್ತು ಸಮುದಾಯ ಆಧಾರಿತ ಪುನರ್ವಸತಿ ಸೇವೆಗಳನ್ನು ಆರೋಗ್ಯ, ಶಿಕ್ಷಣ ಮತ್ತು ಸಮಾಜ ಕಲ್ಯಾಣ ಮತ್ತಿತರ ಇಲಾಖೆಗಳೊಟ್ಟಿಗೆ ಸೇರಿಕೊಂಡು ನೀಡುತ್ತದೆ. ಐಸಿಡಿಎಸ್ ಮಿಷನ್‌ನಿಂದ ವಿವಿಧ ಅಗತ್ಯಗಳನ್ನು ಆಧರಿಸಿದ ಮಧ್ಯಸ್ಥಿಕೆಗಳು/ಸೇವೆಗಳ ಬದಲು ಮಗುವೊಂದಕ್ಕೆ 2,000 ರೂ.(ಯಾವುದೇ ನಿರ್ಬಂಧಗಳಿಲ್ಲದ ಅನುದಾನ) ನೀಡಲಾಗುತ್ತದೆ. ಕೆಲವು ಪ್ರಮುಖ ಸೇವೆ/ ಮಧ್ಯಸ್ಥಿಕೆಗಳೆಂದರೆ., ಬಿ) ವಿಶೇಷ ಅಗತ್ಯಗಳಿರುವ ಮಕ್ಕಳನ್ನು ಪ್ರಸ್ತುತ ಸೇವಾ ಪೂರೈಕೆದಾರರೊಟ್ಟಿಗೆ ಜೋಡಣೆ: ಪ್ರತಿ ಜಿಲ್ಲೆಯ ಜಿಲ್ಲಾ ಮಿಷನ್ ನಿರ್ದೇಶನಾಲಯವು ಆರೋಗ್ಯ, ಶಿಕ್ಷಣ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಸಲಹೆ ಪಡೆದು ಪ್ರತಿಯೊಂದು ಜಿಲ್ಲೆಯಲ್ಲೂ ಜಿಲ್ಲಾ ಹಂತದ ಗುರಿಗಳಿರುವ ಬಿಂದುಗಳ ಏಕತ್ರ ಸಂಯೋಜನೆಯೊಂದನ್ನು ಅಭಿವೃದ್ಧಿಪಡಿಸಬೇಕು. ಅದರಲ್ಲೂ ನಿರ್ದಿಷ್ಟವಾಗಿ ವೈಕಲ್ಯಗಳಿರುವ ಮಕ್ಕಳನ್ನು ಎಸ್‌ಎಸ್‌ಎ ಯೋಜನೆಯಡಿ ಜಿಲ್ಲಾ ದೈಹಿಕ ನ್ಯೂನತೆ ಪುನರ್ವಸತಿ ಕೇಂದ್ರ (ಡಿಆರ್‌ಸಿ), ವಲಯ/ಗುಚ್ಚ ಸಂಪನ್ಮೂಲ ಕೇಂದ್ರ(ಎಸ್‌ಎಸ್‌ಸಿ) ಮತ್ತು ಇಂಥ ಯಾವುದೇ ಸಂಸ್ಥೆಗಳು/ಮಧ್ಯಸ್ತಿಕೆ ವಹಿಸಬಲ್ಲ ಕೇಂದ್ರಗಳೊಟ್ಟಿಗೆ ಸಂಯೋಜನೆಗೊಳಿಸಿ, ಜಿಲ್ಲೆ/ರಾಜ್ಯ ಹಂತದಲ್ಲಿ

ಅನುಷ್ಠಾನಗೊಳಿಸಬೇಕು. ಎ) ವಿಶೇಷ ಅಗತ್ಯಗಳಿರುವ ಮಕ್ಕಳನ್ನು ಗುರುತಿಸುವುದು: ವಿಶೇಷ ಅಗತ್ಯವಿರುವ ಮಕ್ಕಳನ್ನು ಅದರಲ್ಲೂ ವಿಶೇಷವಾಗಿ ವೈಕಲ್ಯಗಳಿರುವ ಮಕ್ಕಳನ್ನು ಎಳವೆಯಲ್ಲೇ ಗುರುತಿಸುವಿಕೆ ಹಾಗೂ ಪತ್ತೆ ಹಚ್ಚುವುದನ್ನು ಖಾತ್ರಿ ಪಡಿಸಲು ಆರೋಗ್ಯ, ಸಮಾಜಕಲ್ಯಾಣ, ಶಿಕ್ಷಣ ಇತ್ಯಾದಿ ಇಲಾಖೆಗಳೊಟ್ಟಿಗೆ ಸಂಯೋಜಿಸಿ, ಪರೀಕ್ಷೆ, ಪತ್ತೆ ಹಚ್ಚುವಿಕೆ ಮತ್ತು ಪುನರ್ವಸತಿ ಸೇವೆಗಳು ಲಭ್ಯವಾಗುವಂತೆ ಮಾಡಬೇಕು. ಗುರುತಿಸಲ್ಪಟ್ಟ ಪ್ರತಿ ಯೊಂದು ಮಗುವಿನ ಔಪಚಾರಿಕ ಮತ್ತು ಕ್ರಿಯಾಶೀಲ ಮೌಲ್ಯಮಾಪನವನ್ನು ಎಸ್‌ಎಸ್‌ಎ(ವಲಯ ಹಂತದ ತಂಡ)/ ಡಿಡಿಆರ್ಸಿ(ಜಿಲ್ಲಾ ಮಟ್ಟದ ಸಂಸ್ಥೆ)ಯ ಸಂಯೋಜನೆಯೊಂದಿಗೆ ಖಾತ್ರಿಗೊಳಿಸಬೇಕು. ಒಂದು ವೇಳೆ ಎಸ್‌ಎಸ್‌ಎ(ವಲಯ ಹಂತದ ತಂಡ) ನಿರ್ದಿಷ್ಟ ವಲಯದಲ್ಲಿ ಇಲ್ಲವಾದರೆ, ಎಡಬ್ಲ್ಯುಡಬ್ಲ್ಯು ಸಂಬಂಧಪಟ್ಟ ಪಿಎಚ್‌ಸಿ/ಸಿಎಚ್‌ಸಿ/ಡಿಡಿಆರ್ಸಿ ಜೊತೆ ಸಂಪರ್ಕ ಸಾಧಿಸಬೇಕು ಮತ್ತು ಮೌಲ್ಯಮಾಪನವನ್ನು ಖಾತ್ರಿಪಡಿಸಬೇಕು. ಇದನ್ನು ಆಧರಿಸಿ ವಿಶೇಷ ಅಗತ್ಯಗಳಿರುವ ಪ್ರತಿಯೊಂದು ಮಗುವಿನ ಸೂಕ್ತ ಮಧ್ಯಸ್ಥಿಕೆ ಮತ್ತು ಮಗುವಿನ ಒಳಗೊಳ್ಳುವಿಕೆಯನ್ನು ಖಾತ್ರಿ ಪಡಿಸಬಹುದು. ಒಂದು ವೇಳೆ ಮೌಲ್ಯಮಾಪನ ವಲಯ ಅಥವಾ ಜಿಲ್ಲಾ ಮಟ್ಟದಲ್ಲೂ ಲಭ್ಯವಿಲ್ಲದೆ ಹೋದಲ್ಲಿ, ಆಗ ಎಡಬ್ಲ್ಯುಡಬ್ಲ್ಯು ಎನ್‌ಆರ್‌ಎಚ್‌ಎಂ ತಂಡದ ವೈದ್ಯಾಧಿಕಾರಿ/ಎನ್‌ಎಂ ಸಲಹೆ ಪಡೆದು, ವಿಶೇಷ ಅಗತ್ಯಗಳಿರುವ ಮಗುವನ್ನು ಖಾಸಗಿ ಸಂಸ್ಥೆ /ಸೌಲಭ್ಯ (ಸಂಬಂಧಿಸಿದ ಮೇಲ್ವಿಚಾರಕ ಮತ್ತು ಸಿಡಿಪಿಒಗೆ ಮಾಹಿತಿ ನೀಡಿ)ಕ್ಕೆ ಕಳಿಸಬಹುದು. ಇಂಥ ಪ್ರಕರಣಗಳಲ್ಲಿ ಮೌಲ್ಯಮಾಪನ/ಪರೀಕ್ಷೆಯ ವೆಚ್ಚವನ್ನು ಸಿಡಿಪಿಒ/ಡಿಪಿಒ ತಮ್ಮ ಬಳಿ ವಿಶೇಷ ಅಗತ್ಯಗಳಿರುವ ಮಕ್ಕಳಿಗಾಗಿ ಮೀಸಲಾದ ವೆಚ್ಚ ಅಂದರೆ, ಮಗುವೊಂದಕ್ಕೆ 2,000 ರೂ.ಗಳನ್ನು ಸಂಬಂಧಿಸಿದ ಎಡಬ್ಲ್ಯುಸಿಯ ಎಎಲ್‌ಎಂಸಿಯ ನಿರ್ದಿಷ್ಟ ಶಿಫಾರಸಿನ ನಂತರ ಬಿಡುಗಡೆಗೊಳಿಸಬಹುದು. ಸಿ) ಎಡಬ್ಲ್ಯುಡಬ್ಲ್ಯುಗಳು, ಜೋಡಣೆ(ಲಿಂಕ್) ಕೆಲಸಗಾರರು ಮತ್ತು ಕುಟುಂಬಗಳಿಗೆ ತರಬೇತಿ ಹಾಗೂ ಸಂವೇದನೆ ಬೆಳೆಸುವುದು: ಎಡಬ್ಲ್ಯುಡಬ್ಲ್ಯುಗಳು ಮತ್ತು ಲಿಂಕ್ ಕೆಲಸಗಾರರು (ಆಶಾ ಸೇರಿದಂತೆ) ಹಾಗೂ ಕುಟುಂಬಗಳು/ಪೋಷಕರಿಗೆ ಆರಂಭದಲ್ಲೇ ಮುನ್ಸೂಚನೆಗಳನ್ನು ಗುರುತಿಸಲು, ಆರಂಭಿಕ ಕ್ರಿಯೆಯ ಅಗತ್ಯ ಮತ್ತು ಹೆಚ್ಚುವರಿ ನೆರವು/ಸೇವೆಗಳು ಬೇಕಿದ್ದಲ್ಲಿ ಎಲ್ಲಿಗೆ ಹೋಗಬೇಕು ಎಂಬ ಮಾಹಿತಿ ಕೊಡಬೇಕು. ವಿಶೇಷ ಚೇತನ ಮಕ್ಕಳ ಪೋಷಕರಿಗೆ ಅಂಥ ಮಕ್ಕಳನ್ನು ಹೇಗೆ ಬೆಳೆಸುವುದು ಮತ್ತು ಅವರ ಉಳಿವಿಗೆ ಅಗತ್ಯವಾದ ಮೂಲಭೂತ ಹಾಗೂ ನಿಭಾವಣೆ ಕೌಶಲಗಳನ್ನು ಕಲಿಸಲು ಸಲಹೆ ಮತ್ತು ತರಬೇತಿ ನೀಡ ಲಾಗುತ್ತದೆ. ಮಿಷನ್‌ನಡಿ ವಕಾಲತು ಮತ್ತು ಇಸಿಇ ಆಂದೋಲನವು ವಿಶೇಷ ಅಗತ್ಯಗಳಿರುವ ಮಕ್ಕಳ ಕುಟುಂಬಗಳು ಹಾಗೂ ಸಮುದಾಯಕ್ಕೆ ಶಿಕ್ಷಣ ನೀಡಲು, ಅವರಿಗೆ ಸಂಬಂಧಿಸಿದ ವಿಷಯಗಳು ಹಾಗೂ ಮಕ್ಕಳಿಗೆ ಬೆಂಬಲ ಮತ್ತು ಪುನರ್ವಸತಿ ಸೇವೆಗಳನ್ನು ಹೇಗೆ ಪಡೆದುಕೊಳ್ಳುವುದು ಮತ್ತು ಅವರಿಗೆ ಆ ಪರಿಸರ ಒಳಗೊಳ್ಳುವಂತಿದೆಯೇ ಎಂಬುದನ್ನು ಖಾತ್ರಿಪಡಿಸುವಿಕೆಯನ್ನು ಗುರಿಯಾಗಿಸಿಕೊಂಡಿರುತ್ತದೆ. ಡಿ) ಸಹಾಯಕ ಸಾಧನಗಳು/ವಿಶೇಷ ಶಿಕ್ಷಣ ಕಿಟ್/ಪುಸ್ತಕಗಳು: ಸಹಾಯಕ ಸಾಧನಗಳು/ವಿಶೇಷ ಶಿಕ್ಷಣ ಚಟುವಟಿಕೆ ಕಿಟ್/ ಪುಸ್ತಕಗಳ ಅಗತ್ಯವಿರುವ ವಿಶೇಷ ಮಕ್ಕಳನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ರಾಜ್ಯ ಸಮಾಜ ಕಲ್ಯಾಣ ಇಲಾಖೆಗಳು, ರಾಷ್ಟ್ರೀಯ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳು ಮತ್ತಿತರವುಗಳಲ್ಲಿ ಇರುವ ಅಗತ್ಯ ಯೋಜನೆಗಳೊಡನೆ ಸಂಯೋಜಿಸಲಾಗುತ್ತದೆ. ಸಂಬಂಧಪಟ್ಟ ವರಿಗೆ(ಎಡಬ್ಲ್ಯುಡಬ್ಲ್ಯು ಮತ್ತು ಮೇಲ್ವಿಚಾರಕ) ವಿಶೇಷ ಅಗತ್ಯಗಳಿರುವ ಪ್ರತಿಯೊಂದು ಮಗುವಿಗೂ ಈ ಸೌಲಭ್ಯಗಳು ಸಿಕ್ಕಿರುವುದನ್ನು ಖಾತ್ರಿ ಪಡಿಸುವ ಜವಾಬ್ದಾರಿ ಇರುತ್ತದೆ. ಇ) ಪ್ರವೇಶಾವಕಾಶದ ಸುಧಾರಣೆ: ಎಡಬ್ಲ್ಯುಸಿ ಕಟ್ಟಡಗಳಲ್ಲಿ ರ್ಯಾಂಪ್ ಇತ್ಯಾದಿಗಳನ್ನು ನಿರ್ಮಿಸುವ ಮೂಲಕ ವಿನ್ಯಾಸಕ್ಕೆ ಸಂಬಂಧಿಸಿದ ಅಡೆತಡೆಗಳನ್ನು ನಿವಾರಿಸಿ, ವಿಶೇಷ ಚೇತನ ಮಕ್ಕಳಿಗೆ ಸುಲಭ ಪ್ರವೇಶಾವಕಾಶವನ್ನು ಖಾತ್ರಿಗೊಳಿಸಲು ಐಸಿಡಿಎಸ್ ಮಿಷನ್ ಪ್ರಯತ್ನಿಸುತ್ತದೆ. ಎಡಬ್ಲ್ಯುಸಿಗಳಲ್ಲಿ ವಿಶೇಷ ಅಗತ್ಯಗಳಿರುವ ಮಕ್ಕಳಿಗೆ ಸೂಕ್ತ ಚಟುವಟಿಕೆ ಕಿಟ್ ಸೇರಿದಂತೆ ವಿಕಲಚೇತನಸ್ನೇಹಿ ವಾತಾವರಣವನ್ನು ನಿರ್ಮಿಸುವ ಮೂಲಕ ಸುಲಭ ಪ್ರವೇಶಾವಕಾಶವನ್ನು

ಖಾತ್ರಿಗೊಳಿಸಲು ಪ್ರಯತ್ನ ನಡೆಸಲಾಗುತ್ತದೆ. ಹಾಲಿ ಎಡಬ್ಲ್ಯುಸಿಗಳಲ್ಲಿ ರ್ಯಾಂಪ್ ನಿರ್ಮಿಸಲು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಸೂಕ್ತ ಕಾರ್ಯಕ್ರಮವೊಂದರಿಂದ ಸಾಧನೋಪಾಯ ಅನುದಾನ ಬಳಸಿಕೊಳ್ಳಲಾಗುತ್ತದೆ. ಇಷ್ಟಲ್ಲದೇ, ಐಸಿಡಿಎಸ್ ಮಿಷನ್ ಅಡಿ ಸುಧಾರಣೆ/ಮೇಲ್ದರ್ಜೆಗೇರಿಸುವಿಕೆಗೆ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ರ್ಯಾಂಪ್‌ಗಳ ನಿರ್ಮಾಣ ಹಾಗೂ ಇನ್ನಿತರ ಅಡೆತಡೆಗಳನ್ನು ನಿವಾರಿಸುವ ಸೌಲಭ್ಯ/ಪ್ರವೇಶಾವಕಾಶ ನೀಡುವುದು ಅತ್ಯಗತ್ಯ ಭಾಗವಾಗಲಿದೆ. ಎಲ್ಲ ಹೊಸ ಎಡಬ್ಲ್ಯುಡಬ್ಲ್ಯು ಕಟ್ಟಡಗಳಲ್ಲಿ ಪ್ರವೇಶಾವಕಾಶ ನೀಡುವಿಕೆ ಅಂಶಗಳನ್ನು ವಿನ್ಯಾಸದಲ್ಲೇ ಏಕತ್ರಗೊಳಿಸಿ, ವಿಶೇಷಚೇತನ ಮಕ್ಕಳಿಗೆ ಯಾವುದೇ ಅಡೆತಡೆ ಇಲ್ಲದೆ ಪ್ರವೇಶಾವಕಾಶ ದೊರೆಯುವಂತೆ ಇರಬೇಕು.

ಎಫ್) ಪರ್ಯಾಲೋಚನೆ ಸೇವೆಗಳು: ಆರೋಗ್ಯ ಶಿಕ್ಷಣ ಮತ್ತು ಸಮಾಜ ಕಲ್ಯಾಣದಂಥ ಇಲಾಖೆಗಳೊಡನೆ ಆಶಾದ ನೆರವಿನೊಂದಿಗೆ ಮೊದಲೇ ಗುರುತಿಸಲಾದ ಪರ್ಯಾಲೋಚನ ವ್ಯವಸ್ಥೆಗಳನ್ನು ಎಡಬ್ಲ್ಯುಡಬ್ಲ್ಯು ಗಳಿಗಾಗಿ ಸ್ಥಾಪಿಸಿ, ಇನ್ನಷ್ಟು ಪಾಲನೆಗಾಗಿ ಅಂಥ ಮಕ್ಕಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಹೆಚ್‌ಸಿ), ಸಮುದಾಯ ಆರೋಗ್ಯ ಕೇಂದ್ರ (ಸಿಹೆಚ್‌ಸಿ), ಪೋಷಕಾಂಶ ಪುನರ್ವಸತಿ ಕೇಂದ್ರ (ಎನ್‌ಆರ್‌ಸಿ), ಜಿಲ್ಲಾ ವೈಕಲ್ಯ ಪುನರ್ವಸತಿ ಕೇಂದ್ರ (ಡಿಡಿಆರ್‌ಸಿ) ಅಥವಾ ಇನ್ನಾವುದೇ ತೃತೀಯ ಪಾಲನಾ ಸೌಲಭ್ಯಕ್ಕೆ ಕಳಿಸಬಹುದು. ಮೇಲ್ವಿಚಾರಕರು ಇಂಥ ಪ್ರಯತ್ನಗಳಲ್ಲಿ ಬೆಂಬಲ ನೀಡುತ್ತಾರೆ. ಇವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಮೇಲುಸ್ತುವಾರಿ ಮಾಡಲು ವಿಸ್ತೃತ ಮಾರ್ಗದರ್ಶಿ ಸೂತ್ರಗಳನ್ನು ಐಸಿಡಿಎಸ್ ಅಭಿವೃದ್ಧಿಪಡಿಸಿದೆ.

(ಫಿ) ಮಾನವ ಸಂಪನ್ಮೂಲದ ಬಲವರ್ಧನೆ: ಐಸಿಡಿಎಸ್ ಅಡಿ ಮಾನವ ಸಂಪನ್ಮೂಲವನ್ನು ಬಲಪಡಿಸಲು ಸಮಗ್ರ ಮಾನವ ಸಂಪನ್ಮೂಲ ಕಾರ್ಯನೀತಿಯನ್ನು ರೂಪಿಸಲಾಗಿದ್ದು, ಅದು ಸಿಬ್ಬಂದಿಗಳ ಮುಖ್ಯವಾಗಿ, ಅಂಗನವಾಡಿ ಹಂತದಲ್ಲಿ ಪಾರದರ್ಶಕ ನೇಮಕ ಮತ್ತು ಆಯ್ಕೆ ಕಾರ್ಯನೀತಿಯನ್ನು ಗುರಿಯಾಗಿಸಿಕೊಂಡಿರುತ್ತದೆ ಮತ್ತು ಐಸಿಡಿಎಸ್‌ಗೆ ಪ್ರತ್ಯೇಕ ಶ್ರೇಣಿ ಇಲ್ಲದೆ ಇರುವ ರಾಜ್ಯಗಳಲ್ಲಿ ಅಂಥ ಶ್ರೇಣಿಯನ್ನು ಸೃಷ್ಟಿ ಸುತ್ತದೆ. ಇದರಿಂದ ರಾಜ್ಯಗಳು ಎಲ್ಲ ಹಂತದ ಹುದ್ದೆಗಳನ್ನು ಭರ್ತಿ ಮಾಡಬೇಕಾಗುತ್ತದೆ. ಖಾಲಿ ಇರುವ ಹುದ್ದೆಗಳನ್ನು ಕಡಿಮೆ ಅವಧಿಗಾದಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ರಾಜ್ಯಗಳಿಗೆ ಅವಕಾಶ ಮಾಡಿಕೊಡುವುದು ಮತ್ತು ಐಸಿಡಿಎಸ್ ಸಿಬ್ಬಂದಿಗೆ ಕಲ್ಯಾಣ ಯೋಜನೆಗಳನ್ನು ಅಂದರೆ, ಪಿಂಚಣಿ ಯೋಜನೆಯನ್ನು ಪರಿಚಯಿಸುವುದನ್ನು ಪರಿಗಣಿಸಲಾಗುತ್ತದೆ. ಈ ಕಾರ್ಯನೀತಿಯು ಎಡಬ್ಲ್ಯುಡಬ್ಲ್ಯು ಮತ್ತು ಎಡಬ್ಲ್ಯುಎಚ್‌ಗಳಿಗೆ ಕನಿಷ್ಠ ವಿದ್ಯಾರ್ಹತೆ ಮತ್ತು ವಯೋಮಿತಿಯನ್ನು ನಿಗದಿಪಡಿಸುತ್ತದೆ. ಮಾನವ ಸಂಪನ್ಮೂಲದ ಉತ್ತಮ ನಿರ್ವಹಣೆ ಹಾಗೂ ಪ್ರಸ್ತುತ ಸಿಬ್ಬಂದಿಯನ್ನು ಉತ್ತೇಜಿಸಲು ಕೆಳಕಂಡ ನಿರ್ದಿ ಷ್ಠ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಎ) ಪಾರದರ್ಶಕ ನೇಮಕ ಮತ್ತು ಆಯ್ಕೆ ಕಾರ್ಯನೀತಿಯನ್ನು ರೂಪಿಸುವುದು: ಎಡಬ್ಲ್ಯುಡಬ್ಲ್ಯು ಮತ್ತು ಎಡಬ್ಲ್ಯುಎಚ್‌ಗಳ ಆಯ್ಕೆ/ನೇಮಕ ವಿಧಾನ/ರೀತಿನೀತಿಗಳು/ಆಯ್ಕೆ ಸಮಿತಿಯ ರಚನೆ ಇತ್ಯಾದಿಗೆ ಮಾದರಿ ಮಾರ್ಗದರ್ಶಿ ಸೂತ್ರಗಳು ಸೇರಿದಂತೆ ಕರಡು ಸಿದ್ಧಪಡಿಸುವುದು. ಪ್ರಸ್ತುತ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಸಮಾನ ಮತ್ತು ಪಾರದರ್ಶಕ ಮಾನವ ಸಂಪನ್ಮೂಲ ಕಾರ್ಯನೀತಿಯನ್ನು ಅನುಸರಿಸದೆ ಇರುವು ದರಿಂದ, ನೇಮಕಗಳಲ್ಲಿ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ದೂರುಗಳು ಕೇಳಿಬಂದಿದೆ. ಬೇರೆ ಬೇರೆ ಹುದ್ದೆಗೆ ನೇಮಕ ನಿಯಮಗಳು ರಾಜ್ಯದಿಂದ ರಾಜ್ಯಕ್ಕೆ ಬದಲಾಗುವುದರಿಂದ, ಇವು ಸಿಬ್ಬಂದಿಯನ್ನು ನೇಮಕ ಮಾಡುವವರ ನೈತಿಕ ಸ್ಥೈರ್ಯವನ್ನು ಕುಂದಿಸುತ್ತಿವೆ. ಮಾರ್ಗದರ್ಶಿ ಸೂತ್ರಗಳನ್ನು ನೀಡಿದ್ದರೂ, ಆಯ್ಕೆ ಸಮಿತಿಗಳ ರಚನೆ ಸಮಾನವಾಗಿಲ್ಲ. ಆದ್ದರಿಂದ, ಎಲ್ಲ ರಾಜ್ಯಗಳೂ ನಿರ್ದಿಷ್ಟ ಬದಲಾವಣೆಗಳಿರುವ ಮಾದರಿ ಆಯ್ಕೆ ಸಮಿತಿಯೊಂದನ್ನು ಸಮಾನವಾಗಿ ರಚಿಸಬೇಕಿದ್ದು, ಇದಕ್ಕೆ ಎನ್‌ಎಂಎಸ್‌ಜಿ ಅನುಮತಿ ನೀಡಬೇಕಿದೆ. ಎಲ್ಲ ಅಗತ್ಯ ಮಾರ್ಗದರ್ಶಿ ಸೂತ್ರಗಳು ಇತ್ಯಾದಿಗಳು ಇಪಿಸಿ/ಎನ್‌ಎಂಎಸ್‌ಜಿ ಮೇಲುಸ್ತು ವಾರಿ ಹಾಗೂ ನಿಯಂತ್ರಣದಲ್ಲಿ ಸಿದ್ಧವಾಗಿರಬೇಕು ಮತ್ತು ಅದನ್ನು ಈ ಸಮಿತಿ ಅಂಗೀಕರಿಸಿದ ಬಳಿಕ ಪ್ರಕಟಿಸಬೇಕು.

ಬಿ) ಐಸಿಡಿಎಸ್‌ಗೆ ಪ್ರತ್ಯೇಕ ಶ್ರೇಣಿ: ಐಸಿಡಿಎಸ್‌ಗೆ ಯಾವ ರಾಜ್ಯದಲ್ಲಿ ಪ್ರತ್ಯೇಕ ಶ್ರೇಣಿ ಇಲ್ಲವೋ ಅಂಥ

ರಾಜ್ಯಗಳಲ್ಲಿ ಐಸಿಡಿಎಸ್ ಮಿಷನ್ ಅಡಿ ಪ್ರತ್ಯೇಕ ಶ್ರೇಣಿಯನ್ನು ಪರಿಚಯಿಸಬೇಕು. ಐಸಿಡಿಎಸ್‌ಗೆ ಪ್ರತ್ಯೇಕ ಶ್ರೇಣಿ ಇಲ್ಲದೆ ಇರುವುದರಿಂದ, ನಾನಾ ಹುದ್ದೆಗಳಲ್ಲಿ ಇರುವವರನ್ನು ಕೆಲಕಾಲಾನಂತರ ಸರ್ಕಾರ ಬೇರೆ ಇಲಾಖೆಗೆ ವರ್ಗಾಯಿಸುತ್ತದೆ. ಆಗಾಗ ನೇಮಕ ಮತ್ತು ವರ್ಗಾವಣೆಯಿಂದಾಗಿ ಅವರುಗಳು ಕಾರ್ಯಕ್ರಮವನ್ನು ಮೆಚ್ಚಲಾರರು ಮತ್ತು ಅಗತ್ಯವಿರುವಂತೆ ಅನುಷ್ಠಾನಗೊಳಿಸಲಾರರು. ಅನುಭವ ತೋರಿಸುವುದೇನೆಂದರೆ, ಸಿಡಿಪಿಒ ಹುದ್ದೆಯನ್ನು ಅಲಂಕರಿಸುವ ಅಧಿಕಾರಿಗಳನ್ನು ಸಂಬಂಧಿಸಿದ ಬೇರೆ ಇಲಾಖೆಗಳಿಂದ ವರ್ಗ ಮಾಡ ಲಾಗಿರುತ್ತದೆ ಮತ್ತು ಮಕ್ಕಳ ಅಭಿವೃದ್ಧಿಗೆ ಯಾವುದೇ ಸಂಬಂಧ/ಅನುಭವ ಇಲ್ಲದ ರಾಜ್ಯದ ಇಲಾಖೆಗಳ ಅಧಿಕಾರಿಗಳನ್ನು ನೇಮಿಸಲಾಗುತ್ತದೆ. ಕಾರ್ಯಕ್ರಮದ ಸಮರ್ಪಕ ಅನುಷ್ಠಾನ ಮತ್ತು ಮಕ್ಕಳ ಅಭಿವೃದ್ಧಿಗೆ ಅನುಭವಿಗಳನ್ನು ಹುದ್ದೆಗೆ ಆಯ್ಕೆ ಮಾಡಬೇಕಾಗುತ್ತದೆ. ಇದಕ್ಕಾಗಿ ಐಸಿಡಿಎಸ್ ಯೋಜನೆಗೆ ಶ್ರೇಣಿಯೊಂದು ಬೇಕಿದೆ. ಸಮರ್ಪಿಸಿಕೊಂಡ ಶ್ರೇಣಿಯು ಅವರ ನೇಮಕ/ಬಡ್ತಿ/ನಿಯೋಜನೆಯನ್ನು ಜೋಡಿಸುವ ಮೂಲ ಕ ಶ್ರೇಣಿಯವರನ್ನು ಬೇರ್ಯಾವುದೇ ಶ್ರೇಣಿಗೆ, ರಾಜ್ಯದ ನಿಯಮಗಳಿಗೆ ಅನುಗುಣವಾಗಿ ಡೆಪ್ಯುಟೇಷನ್ ಹೊರತುಪಡಿಸಿ, ವರ್ಗಾಯಿಸದಂತೆ ಸೂಕ್ತ ನಿಯಮ ಹಾಗೂ ಮಾರ್ಗದರ್ಶಿ ಸೂತ್ರಗಳನ್ನು ಪರಿಚಯಿಸಿ, ಖಾತ್ರಿ ಗೊಳಿಸಬೇಕಿದೆ. ಈ ರೀತಿ ಮಾಡುವಾಗ ಅರ್ಹತೆ, ಕೌಶಲಗಳ ಸುಧಾರಿಸುವಿಕೆಯಲ್ಲದೆ ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳಲ್ಲಿ ಜ್ಞಾನವನ್ನು ತಳಕು ಹಾಕಬೇಕಿದೆ. ಸಿ) ರಾಜ್ಯಗಳಿಗೆ ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ; ಪೂರ್ಣಾವಧಿ ಸಿಬ್ಬಂದಿ ನೇಮಕ ಆಗುವವರೆಗೆ ಯಾವುದೇ ಹಂತದಲ್ಲಾದರೂ ಕೆಲಸ ಅಡೆತಡೆಯಿಲ್ಲದೆ ಮುಂದುವರಿಯಲು ಖಾಲಿ ಇರುವ ಹುದ್ದೆಗಳನ್ನು ಹೊರಗುತ್ತಿಗೆ/ನೇಮಕ ಏಜೆನ್ಸಿಗಳ ಮೂಲಕ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ರಾಜ್ಯಗಳಿಗೆ ಅನುಮತಿ ನೀಡಬೇಕು. ಕ್ಷೇತ್ರಾಧರಿತ ಯಾವುದೇ ಯೋಜನೆಗಳ ಯಶಸ್ಸು ಆಡಳಿತ ಹಾಗೂ ಕಾರ್ಯಕ್ರಮವನ್ನು ನಡೆಸಲು ಅಗತ್ಯವಾದ ಪರಿಣಾಮಕಾರಿ ಮಾನವ ಸಂಪನ್ಮೂಲದ ಲಭ್ಯತೆಯನ್ನು ಆಧರಿಸಿರುತ್ತದೆ. ಐಸಿಡಿಎಸ್ ಕಾರ್ಯಕ್ರಮ ಯಶಸ್ಸಾಗಬೇಕೆಂದರೆ, ಎಲ್ಲ ಕಾರ್ಯಾಚರಣೆ ಹುದ್ದೆಗಳು ಭರ್ತಿಯಾಗ ಬೇಕಾದ ಅಗತ್ಯವಿದೆ. ಸ್ಥಾನಿಕನ ಹುದ್ದೆಗಳನ್ವಯ ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್ ಸೇರಿದಂತೆ ಐಸಿಡಿಎಸ್ ಕಾರ್ಯಕ್ರಮಕ್ಕೆ ಮಂಜೂರಾದ ವಿವಿಧ ಹುದ್ದೆಗಳಲ್ಲಿ ಶೇ.15 ರಷ್ಟು ಖಾಲಿಯಿವೆ. ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಈ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಿರುವಷ್ಟು ಪ್ರಯತ್ನ ಮಾಡುತ್ತಿದ್ದರೂ, ಹಲವು ಪ್ರಾಯೋಗಿಕ ಸಮಸ್ಯೆಗಳಿವೆ. ಉದಾಹರಣೆಗೆ, ಸಿಬ್ಬಂದಿ ನೇಮಕ ಮಂಡಳಿಗಳು ಹುದ್ದೆಗಳನ್ನೂ ಭರ್ತಿ ಮಾಡಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿರುವುದು, ರಾಜಕೀಯ ಹಸ್ತಕ್ಷೇಪ, ಆಯ್ಕೆ ಮಂಡಳಿಗಳನ್ನು ನೇಮಕ ಮಾಡದೇ ಇರುವುದು. ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ದೂರು, ನ್ಯಾಯಾಲ ಯದಲ್ಲಿ ಪ್ರಕರಣ ದಾಖಲಿಸಿರುವುದು ಇತ್ಯಾದಿಗಳಿಂದ ಅನಗತ್ಯ ವಿಳಂಬ ಆಗುತ್ತಿದೆ. ಹುದ್ದೆಗಳನ್ನು ಅದರಲ್ಲೂ ವಿಶೇಷವಾಗಿ ಮುಂಚೂಣಿ ಕಾರ್ಯಕರ್ತರ ಹುದ್ದೆಗಳನ್ನು ತುಂಬದೆ ಇರುವುದು ಕಾರ್ಯಕ್ರಮದ ಫಲಿತಾಂಶದ ಮೇಲೆ ನೇರ ಪರಿಣಾಮ ಬೀರುತ್ತದೆ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಸೇವೆಗಳ ವಿತರಣೆಯನ್ನು ಭಾದಿಸುತ್ತದೆ. ಎಡಬ್ಲ್ಯುಸಿಗೆ ಬರುವ ಮಕ್ಕಳ ಬೆಳವಣಿಗೆ ಮತ್ತು ಪ್ರಗತಿಯ ಮೇಲೆ ಮಾನವ ಸಂಪನ್ಮೂಲದ ಕೊರತೆಯು ಪರಿಣಾಮ ಬೀರಲು ಅವಕಾಶ ನೀಡುವುದು ಸರಿಯಲ್ಲ. ಆದ್ದರಿಂದ, ಈ ಸಂಕಷ್ಟವನ್ನು ನಿಭಾಯಿಸಲು ಕೆಲಸಕ್ಕೆ ಯಾವುದೇ ಅಡೆತಡೆ ಉಂಟಾಗುವುದನ್ನು ತಪ್ಪಿಸಲು ಹಾಗೂ ಪೂರ್ಣಾವಧಿ ನೇಮಕ ಆಗುವವರೆಗೆ ರಾಜ್ಯ ಸರ್ಕಾರಗಳು ತಾತ್ಕಾಲಿಕ ಮತ್ತು ಮಧ್ಯಂತರ ವ್ಯವಸ್ಥೆಯಾಗಿ ಖಾಲಿ ಹುದ್ದೆಗಳನ್ನು ಗುತ್ತಿಗೆ ಮೂಲಕ ಹೊರಗಿನ ನೇಮಕ ಏಜೆನ್ಸಿಗಳ ಮೂಲಕ ನೇಮಕ ಮಾಡಿಕೊಳ್ಳಲು ಅಧಿಕಾರ ನೀಡಬೇಕು. ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಇಂಥ ಹುದ್ದೆಗಳನ್ನು ತಾತ್ಕಾಲಿಕವಾಗಿ ಡೆಪ್ಯುಟೇಷನ್ ಆಧಾರದಲ್ಲಿ ನೇಮಿಸಿಕೊಳ್ಳಲು ಸಾಧ್ಯವಿದೆಯೇ ಎಂಬುದನ್ನು ಶೋಧಿಸಬೇಕು. ಡಿ) ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳಿಗೆ ಕನಿಷ್ಠ ವಿದ್ಯಾರ್ಹತೆ ಮೆಟ್ರಿಕ್ಯುಲೇಷನ್ ಮತ್ತು ವಯೋಮಿತಿ (18-35) ನಿಗದಿ: ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳು ಐಸಿಡಿಎಸ್ ಯೋಜನೆಯ ಮುಂಚೂಣಿ ಕೆಲಸ

ಗಾರರಾಗಿರುದ್ದಾರೆ ಮತ್ತು ಅವರು ಸೇವೆಗಳನ್ನು ಪರಿಣಾಮಕಾರಿಯಾಗಿ ವಿತರಣೆ ಮಾಡುತ್ತಾರೆ ಎಂದು ನಿರೀಕ್ಷಿಸಲಾಗಿದೆ. ಗುಣಮಟ್ಟದ ಸೇವೆಯ ವಿತರಣೆಯು ಜ್ಞಾನ, ಕೌಶಲ, ಅನುಭವ ಮತ್ತು ಶಿಕ್ಷಣವನ್ನು ಆಧರಿಸಿದೆ. ಉದಾಹರಣೆಗೆ, ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್ ಕಾರ್ಯಕ್ರಮದ ಆರು ಘಟಕಗಳಲ್ಲಿ ಒಂದು- 3-6 ವರ್ಷ ವಯೋಮಾನದವರಿಗೆ ನೀಡಬೇಕಾದ ಶಾಲಾಪೂರ್ವ ಅನೌಪಚಾರಿಕ ಶಿಕ್ಷಣ. ಶೈಕ್ಷಣಿಕ ಅರ್ಹತೆಯಿಲ್ಲದ ಎಡಬ್ಲ್ಯುಡಬ್ಲ್ಯುಗಳು ಶಾಲಾಪೂರ್ವ ಅನೌಪಚಾರಿಕ ಶಿಕ್ಷಣವನ್ನು ಒದಗಿಸುತ್ತಾರೆ ಎಂದು ನಿರೀಕ್ಷಿಸಲಾಗದು ಮತ್ತು ಅಂಥವರು ಫಲಾನುಭವಿಗಳಲ್ಲಿ ಆತ್ಮವಿಶ್ವಾಸವನ್ನು ಹೊಮ್ಮಿಸುವುದು ಸಾಧ್ಯವಿಲ್ಲ. ಆದ್ದರಿಂದ ಐಸಿಡಿಎಸ್ ಮಿಷನ್ ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳಿಗೆ ಮೆಟ್ರಿಕ್ಯುಲೇಷನ್ ಕನಿಷ್ಠ ವಿದ್ಯಾರ್ಹತೆ ಎಂದು ನಿಗದಿಗೊಳಿಸಿ, ಗರಿಷ್ಠ ವಯೋಮಿತಿಯನ್ನು 44ರಿಂದ 35ಕ್ಕೆ ಇಳಿಸಬೇಕಿದೆ.

ಇ) 65 ವರ್ಷ ನಂತರ ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳ ಬಿಡುಗಡೆ: ಪ್ರಸ್ತುತ ಮಾರ್ಗಸೂಚಿಗಳು ನಿವೃತ್ತಿಗೆ ಸಮಾನ ವಯೋಮಿತಿಯನ್ನು ನಿಗದಿಪಡಿಸಿಲ್ಲ. ಬದಲಾಗಿ ನಿರ್ಧಾರವನ್ನು ರಾಜ್ಯ ಸರ್ಕಾರಗಳಿಗೆ ಬಿಟ್ಟಿವೆ. ಆದ್ದರಿಂದ ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳ ಸೇವೆಯನ್ನು ಅಂತ್ಯಗೊಳಿಸಲು ವರ್ಷವನ್ನು ನಿಗದಿಗೊಳಿಸಿಲ್ಲ. ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳಿಗೆ 65 ವರ್ಷ ಗರಿಷ್ಠ ವಯೋಮಿತಿ ಎಂದು ನಿಗದಿಗೊಳಿಸುವುದನ್ನು ಬಹುತೇಕ ರಾಜ್ಯ ಸರ್ಕಾರಗಳು ಹಲವು ವೇದಿಕೆಯಲ್ಲಿ ಬೆಂಬಲಿಸಿವೆ. ಇದನ್ನು ಗಮನದಲ್ಲಿರಿಸಿಕೊಂಡು ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳ ಸೇವೆಯನ್ನು 65 ವರ್ಷಕ್ಕೆ ಅಂತ್ಯಗೊಳಿಸಲು ಸಮಾನ ಕಾರ್ಯನೀತಿ ನಿರ್ಧಾರವನ್ನು ತೆಗೆದುಕೊಳ್ಳಬೇಕಿದೆ ಮತ್ತು ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಇದನ್ನು ಅನುಷ್ಠಾನಗೊಳಿಸುವುದನ್ನು ಇಪಿಸಿ ಖಾತ್ರಿಪಡಿಸಬೇಕಿದೆ.

ಎಫ್) ಗುಚ್ಛ ಕಛೇರಿ ತೆರೆಯುವುದು: ಮಿಷನ್ ಅಡಿ ಮೇಲ್ವಿಚಾರಣೆಯನ್ನು ಬಲಪಡಿಸುವ ಉದ್ದೇಶದಿಂದ 1,725 ಎಡಬ್ಲ್ಯುಸಿಗಳ ಗುಚ್ಛವನ್ನು ನಿರ್ವಹಿಸಲು ಆಯಕಟ್ಟಿನ ಸ್ಥಳದಲ್ಲಿ ಗುಚ್ಛ ಕಚೇರಿಯೊಂದನ್ನು ತೆರೆಯಬೇಕು. ಪ್ರತಿಯೊಂದು ಗುಚ್ಛ ಕಛೇರಿಯಲ್ಲಿ ಮೇಲ್ವಿಚಾರಕರೊಬ್ಬರನ್ನು ನೇಮಿಸಿ, ಅವರು ತಮ್ಮ ವ್ಯಾಪ್ತಿಯಲ್ಲಿನ ಎಡಬ್ಲ್ಯುಸಿಗಳನ್ನು ಗುಚ್ಛ ಕಛೇರಿಯಿಂದ ಮೇಲ್ವಿಚಾರಣೆ ನಡೆಸಬೇಕು. ಪ್ರಸ್ತುತ ಮೇಲ್ವಿ ಚಾರಕರಿಗೆ ಯಾವುದೇ ನಿರ್ದಿಷ್ಟ ಕಚೇರಿಯನ್ನು ನಿಗದಿಪಡಿಸಿಲ್ಲ ಮತ್ತು ಆಕೆ/ಆತ ತನ್ನ ಕೆಲಸವನ್ನು ಕ್ಷೇತ್ರಕಾರ್ಯದ ಮೂಲಕ ಮಾಡುತ್ತಿದ್ದಾರೆ. ಮೇಲ್ವಿಚಾರಕರನ್ನು ಆಯಕಟ್ಟಿನ ಪ್ರದೇಶದಲ್ಲಿ ಇರಿಸಿದರೆ, ಎಡಬ್ಲ್ಯುಸಿಗಳ ಕೆಲಸದ ಮೇಲ್ವಿಚಾರಣೆ ಮತ್ತು ಪರಾಮರ್ಶೆ ಸುಲಭವಾಗಲಿದೆ ಮತ್ತು ಎಡಬ್ಲ್ಯುಡಬ್ಲ್ಯುಗಳಿಗೆ ಯಾವುದೇ ಸಲಹೆ/ಮಾರ್ಗದರ್ಶನಕ್ಕೆ ಲಭ್ಯವಿರುತ್ತಾರೆ. ಅಲ್ಲದೆ, ಹೆಚ್ಚುವರಿ ಪೋಷಕಾಂಶ ಸಂಯೋಜಕ ಮತ್ತು ಇಸಿಸಿಇ ಸಂಯೋಜಕರನ್ನು ಪ್ರತಿಯೊಂದು ಯೋಜನೆಗೂ ನೇಮಿಸಬಹುದಾಗಿದ್ದು, ಅವರು ಯೋಜನೆ/ವಿಭಾಗ ಹಂತದಲ್ಲಿ ಮುಖ್ಯ ತರಬೇತುದಾರರಂತೆ ಕಾರ್ಯನಿರ್ವಹಿಸಿ ತಾಯಂದಿರು ಮತ್ತು ಮಕ್ಕಳ ಪೋಷಕಾಂಶ ಮತ್ತು ಬೆಳವಣಿಗೆ ಹಾಗೂ ಇಸಿಸಿಇಯನ್ನು ಪ್ರೋತ್ಸಾಹಿಸುತ್ತಾರೆ.

ಜಿ) ಮಿನಿ ಎಡಬ್ಲ್ಯುಸಿಗಳ ಎಡಬ್ಲ್ಯುಡಬ್ಲ್ಯುಗಳ ಗೌರವಧನ ಹೆಚ್ಚಳ : ಮಿನಿ ಎಡಬ್ಲ್ಯುಸಿಗಳನ್ನು ಒಬ್ಬರು ಎಡಬ್ಲ್ಯುಡಬ್ಲ್ಯು ನಿರ್ವಹಿಸುತ್ತಾರೆ ಮತ್ತು ಅಲ್ಲಿ ಎಡಬ್ಲ್ಯುಎಚ್ ಎಂಬ ಹುದ್ದೆ ಇರುವುದಿಲ್ಲ. ಬಹುಪಾಲು ಎಡಬ್ಲ್ಯುಸಿಗಳು ದೂರದ ಪ್ರದೇಶದಲ್ಲಿ ಕಡಿಮೆ ಜನಸಂಖ್ಯೆಯ ಆದಿವಾಸಿ ವಿಭಾಗಗಳ ಹಾಡಿಗಳು/ಗ್ರಾಮಗಳಲ್ಲಿ ಮತ್ತು ಬೆಟ್ಟಗುಡ್ಡ ಪ್ರದೇಶಗಳಲ್ಲಿ ಇದ್ದು, ಅವುಗಳನ್ನು ತಲುಪುವುದು ಬಹಳ ಕಷ್ಟ. ಮಿನಿ ಎಡಬ್ಲ್ಯುಸಿಯ ಕೆಲಸಗಾರ ಎಡಬ್ಲ್ಯುಎಚ್ ನೆರವಿಲ್ಲದೆ ಆರು ಸೇವೆಗಳನ್ನು ನಿರ್ವಹಿಸುತ್ತಾರೆ. ಆದರೆ, ಅವರು ಎಡಬ್ಲ್ಯುಎಚ್‌ಗಳ ಎಲ್ಲ ಕೆಲಗಳನ್ನು ಏಕಾಂಗಿಯಾಗಿ ಮಾಡಬೇಕಿದ್ದರೂ, ಮಿನಿ ಎಡಬ್ಲ್ಯುಸಿ ಕೆಲಸಗಾರರಿಗೆ ನೀಡುವ ಗೌರವಧನವು ಎಡಬ್ಲ್ಯುಎಚ್‌ಗೆ ನೀಡುವ ಗೌರವಧನದಷ್ಟೇ ಇದೆ.

ಅವರು ಎಡಬ್ಲ್ಯುಎಚ್‌ಗಳ ಎಲ್ಲ ಕೆಲಗಳನ್ನು ಏಕಾಂಗಿಯಾಗಿ ಮಾಡಬೇಕಿದ್ದರೂ, ಮಿನಿ ಎಡಬ್ಲ್ಯುಸಿಗಳ ಎಡಬ್ಲ್ಯುಡಬ್ಲ್ಯುಗಳ ಕೆಲಸದ ಅವಧಿ ಮತ್ತು ಜವಾಬ್ದಾರಿ ಮತ್ತು ಅವರು ಕೆಲಸ ನಿರ್ವಹಿಸುವ ಕಠಿಣ ಪರಿಸರ ಮತ್ತು ಏಕಾಂಗಿಯಾಗಿ ಕಾರ್ಯ ನಿರ್ವಹಿಸುವುದನ್ನು ಪರಿಗಣಿಸಿದರೆ, ಅವರ ಗೌರವಧನ

ಹೆಚ್ಚಳ ಸಮರ್ಥನೀಯ. ಅವರ ಗೌರವಧನ ಕನಿಷ್ಠಪಕ್ಷ ಖಾಯಂ ಎಡಬ್ಲ್ಯುಸಿಗಳ ಎಡಬ್ಲ್ಯುಡಬ್ಲ್ಯುಗಳಿಗೆ ನೀಡಲಾದ ಹೆಚ್ಚಳಕ್ಕೆ ಸಮನಾಗಿರಬೇಕು. ಇದರಿಂದಾಗಿ ಮಿನಿ ಎಡಬ್ಲ್ಯುಸಿಗಳ ಎಡಬ್ಲ್ಯುಡಬ್ಲ್ಯುಗಳ ಗೌರವಧನನ್ನು 1,500 ರೂ.ನಿಂದ 2,250 ರೂ.ಗೆ ಹೆಚ್ಚಿಸಲಾಯಿತು. ವಿಧಿಸಿದ ಶರತ್ತೆಂದರೆ, ಮಿನಿ ಎಡಬ್ಲ್ಯುಸಿ ಗಳ ಶೈಕ್ಷಣಿಕ ವಿದ್ಯಾರ್ಹತೆ ಖಾಯಂ ಎಡಬ್ಲ್ಯುಸಿಗಳಷ್ಟೇ ಇರಬೇಕು. ಇದರ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 90:10ರ ಅನುಪಾತದಲ್ಲಿ ಭರಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಆಡಳಿತಾತ್ಮಕ ಅನುಮತಿ ಮತ್ತು ಆದೇಶ ಹೊರಡಿಸಬೇಕಿದೆ. (ಎಚ್)ಎಡಬ್ಲ್ಯುಡಬ್ಲ್ಯುಗಳನ್ನು ಮೇಲ್ವಿಚಾರಕರೆಂದು ನೇಮಿಸುವಿಕೆಯಲ್ಲಿ ತಾರ್ಕೀಕರಣ: ಕಾರ್ಯನೀತಿಯ ನಿರ್ಧಾರದಂತೆ ಐಸಿಡಿಎಸ್ ಮಿಷನ್‌ನ ಶೇ.25ರಷ್ಟು ಮೇಲ್ವಿಚಾರಕರ ಹುದ್ದೆಯನ್ನು ಅಪೇಕ್ಷಿತ ಶೈಕ್ಷಣಿಕ ಅರ್ಹತೆ ಮತ್ತು ವಯೋಮಾನ ಮಾನದಂಡಗಳು ಇದ್ದಲ್ಲಿ ಸಾಮಾನ್ಯ ಸೂತ್ರದ ಪ್ರಕಾರ ಭರ್ತಿ ಮಾಡಬೇಕು. ಶೇ.25ರಷ್ಟು ಖಾಲಿ ಹುದ್ದೆಗಳನ್ನು ಅರ್ಹತೆ, ಸೇವಾ ದಾಖಲೆ ಮತ್ತು ಹೆಚ್ಚುವರಿ ಅರ್ಹತೆಯನ್ನು ಪರಿಗಣಿಸಿ ಭರ್ತಿ ಮಾಡಬೇಕು. ವಿಸ್ತೃತ ಮಾನದಂಡಗಳನ್ನು ಎನ್‌ಎಂಎಸ್‌ಜಿಯ ಅನುಮೋದನೆ ಬಳಿಕ ಪ್ರಕಟಪಡಿಸಬೇಕು. (ಐ) ಸಮವಸ್ತ್ರದ ವೆಚ್ಚದ ಪರಿಷ್ಕರಣೆ : ಎಡಬ್ಲ್ಯುಡಬ್ಲ್ಯು ಮತ್ತು ಎಡಬ್ಲ್ಯುಎಚ್‌ಗಳ ಸಮವಸ್ತ್ರದ ವೆಚ್ಚವನ್ನು ಹಾಲಿ 400 ರೂ.(ವಾರ್ಷಿಕ 2 ಸೀರೆ/ಸೂಟ್) ಇಂದ 600 ರೂ.(2 ಸೀರೆ/ಸೂಟ್)ಗೆ ಪರಿಷ್ಕರಿಸಲಾಗಿದ್ದು, ಬಿಲ್ಲೆ(ಬ್ಯಾಡ್ಜ್) ವೆಚ್ಚ ಮೊದಲಿನಂತೆಯೇ ಇರಲಿದೆ. ಅಂದರೆ, ಒಂದು ಬಿಲ್ಲೆಗೆ 25 ರೂ. ಈ ವೆಚ್ಚದ ಭರಿಸುವಿಕೆಯನ್ನು ಕೇಂದ್ರ-ರಾಜ್ಯ 90:10 ರಿಂದ 75:25ಕ್ಕೆ ಪರಿಷ್ಕರಿಸಲಾಗಿದೆ. ಜೆ) ಹೊಸ ಹುದ್ದೆಗಳು ಸೇರಿದಂತೆ ಖಾಯಂ ಹಾಗೂ ಗುತ್ತಿಗೆ ಸಿಬ್ಬಂದಿಗಳನ್ನು ಎಲ್ಲ ಹಂತದಲ್ಲಿ ಮಾನವ ಸಂಪನ್ಮೂಲ ಸ್ವರೂಪದ ವರ್ಧನೆ ಮಾಡಲಾಗುತ್ತದೆ. ಐಸಿಡಿಎಸ್ ಮಿಷನ್‌ನ ಅಡಿ ಅಂಗೀಕೃತವಾದ ಎಲ್ಲ ಹಂತಗಳ ಮಾನವ ಸಂಪನ್ಮೂಲ ವರ್ಧನೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ. ಐಸಿಡಿಎಸ್ ಮಿಷನ್‌ನ ಎಲ್ಲ ಹಂತಗಳ ಸ್ವರೂಪ ಮತ್ತು ಎಷ್ಟು ಸಂಖ್ಯೆಯಲ್ಲಿ ಹುದ್ದೆಗಳನ್ನು ಸೃಷ್ಟಿಸಲಾಗುತ್ತದೆ ಎಂಬ ವಿವರವನ್ನು ಈ ದಾಖಲೆಯ ವಿಭಾಗ 5ರಲ್ಲಿ ನೀಡಲಾಗಿದೆ. ಹಂತ...........ಉಪ ಹಂತ...........ಪ್ರತಿ ಹಂತದಲ್ಲಿ ಸಿಬ್ಬಂದಿ/ಘಟಕವೊಂದಕ್ಕೆ ಹುದ್ದೆಗಳು............ಪ್ರತಿ ಹಂತದಲ್ಲೂ ಹೆಚ್ಚುವರಿ ಸಿಬ್ಬಂದಿ ರಾಷ್ಟ್ರೀಯ.........ಮಿಷನ್ ನಿರ್ದೇಶನಾಲಯ...... 15........... ಯೋಜನಾ ನಿರ್ವಾಹಕ 5, ಸಹಾಯಕ 5, ಡೇಟಾ ಎಂಟ್ರಿ ಆಪರೇಟರ್ 5 ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರ........34.........ಸಲಹೆಗಾರರು 8, ಹಿರಿಯ ಸಲಹೆಗಾರ 10, ಸಲಹೆಗಾರ 10, ಡೇಟಾ ವಿಶ್ಲೇಷಕ 2, ಡೇಟಾ ಎಂಟ್ರಿ ಆಪರೇಟರ್ 4 ತರಬೇತಿ ಸಂಪನ್ಮೂಲ ಕೇಂದ್ರ(ಟಿಆರ್‌ಸಿ)(5 ಕೇಂದ್ರಗಳು).........4.......ತರಬೇತಿ ಅಧಿಕಾರಿ 1, ಸಹಾಯಕ 1, ತರಬೇತಿ ವಿಧಾನ ಪರಿಣತ 1, ಪಠ್ಯಕ್ರಮ ವಿಧಾನ ಪರಿಣತ 1 ರಾಜ್ಯ...... ದೊಡ್ಡ ರಾಜ್ಯಗಳು 17/ಸಣ್ಣ ರಾಜ್ಯಗಳು 11......21.....26..... ಕಾರ್ಯನಿರ್ವಾಹಕ 4, ಹಿರಿಯ ಸಲಹೆಗಾರರು 10, ಸಲಹೆಗಾರರು 10, ಡೇಟಾ ಎಂಟ್ರಿ ಆಪರೇಟರ್ 2. 15......ಕಾರ್ಯನಿರ್ವಾಹಕ 3, ಹಿರಿಯ ಸಲಹೆಗಾರರು 5, ಡೇಟಾ ಎಂಟ್ರಿ ಆಪರೇಟರ್ 2 ಕೇಂದ್ರಾಡಳಿತ ಪ್ರದೇಶಗಳು......... 3............. ಕಾರ್ಯನಿರ್ವಾಹಕ 1, ಹಿರಿಯ ಸಲಹೆಗಾರ 1, ಸಲಹೆಗಾರ 1 ಜಿಲ್ಲೆ............ ಜಿಲ್ಲಾ ತಂಡ......... 6................ ಜಿಲ್ಲಾ ಸಂಯೋಜಕ 5, ಡೇಟಾ ಎಂಟ್ರಿ ಆಪರೇಟರ್ 1 ಯೋಜನಾ ಐಸಿಡಿಎಸ್ ಸಮಿತಿ........... 3......... ಎಂ ಮತ್ತು ಇ ಹಾಗೂ ಪೋಷಕಾಂಶ ಸರ್ವೇಕ್ಷಣಾ ಸಂಯೋಜಕ 1, ಪೋಷಕಾಂಶ ಆರೋಗ್ಯ ಸಂಗ್ರಹಕಾರ 1, ಇಸಿಸಿಇ ಸಂಯೋಜಕ 1 ವಲಯ ಐಸಿಡಿಎಸ್ ಸಂಪನ್ಮೂಲ ಕೇಂದ್ರ(ಬಿಐಆರ್‌ಸಿ)#.......3........... ಸಲಹೆಗಾರ 1, ಪ್ಯಾರಾ ಸಲಹೆಗಾರ 1, ಹೊರಚಾಚು ಕೆಲಸಗಾರ ಮತ್ತು ಸಹಾಯಕ ಆಪರೇಟರ್ 1 ಗುಚ್ಛ ಮೇಲ್ವಿಚಾರಕರು (ಎಡಬ್ಲ್ಯುಸಿಗಳ ಸಂಖ್ಯೆಯನ್ನು ಆಧರಿಸಿ) ಟಿಪ್ಪಣಿ: ಮೇಲ್ವಿಚಾರಕ ಹುದ್ದೆ (ಸೇರಿಸಿಲ್ಲ) ಎಂದಿನಂತೆ ಮುಂದುವರಿಯಲಿದೆ. * ರಾಜ್ಯ ಮಟ್ಟದಲ್ಲಿ ಒಟ್ಟು ಖಾಯಂ ಹುದ್ದೆಗಳು

# ತೀವ್ರ ಕಾರ್ಯಭಾರ ಇರುವ 200 ಜಿಲ್ಲೆಗಳಲ್ಲಿರುವ ಶೇ. 10ರಷ್ಟು ಯೋಜನೆಗಳಲ್ಲಿ ಮಾತ್ರ ಮೇಲಿನ ಕೋಷ್ಟಕದಲ್ಲಿ ಉಲ್ಲೇಖಿಸಿದ ಹುದ್ದೆಗಳು ಅಂತಿಮ ಆಡಳಿತಾತ್ಮಕ ಅನುಮೋದನೆ ಹಾಗೂ ಪ್ರತ್ಯೇಕ ಮತ್ತು ಇಪಿಸಿ(ರಾಜ್ಯ ನಿರ್ದಿಷ್ಟ)ಯ ಎಪಿಐಪಿಗಳ ಅನುಮೋದನೆಯನ್ನು ಆಧರಿಸಿ ನೀಡಲಾಗುತ್ತದೆ.  ಐಸಿಡಿಎಸ್ ಮಿಷನ್ ಅಡಿ ಸಿಬ್ಬಂದಿ ನೇಮಕವನ್ನು ಮೊದಲ ವರ್ಷ(2012-13)200 ತೀವ್ರ ಕಾರ್ಯಭಾರ ಇರುವ ಜಿಲ್ಲೆಗಳಿಂದ ಆರಂಭಿಸಿ, 3 ವರ್ಷಗಳಲ್ಲಿ ಕ್ರಮಬದ್ಧವಾಗಿ ಮುಕ್ತಾಯಗೊಳಿಸಲಾಗುತ್ತದೆ. 2ನೇ ವರ್ಷದಲ್ಲಿ (2013-14) ವಿಶೇಷ ವರ್ಗ(ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ಸೇರಿದಂತೆ)ಕ್ಕೆ ಸೇರಿದ ಹೆಚ್ಚುವರಿ 200 ಜಿಲ್ಲೆಗಳು ಹಾಗೂ ಎನ್ಇಆರ್ ಹಾಗೂ ಉಳಿದ 243 ಜಿಲ್ಲೆಗಳನ್ನು 12ನೇ ಪಂಚವಾರ್ಷಿಕ ಯೋಜನೆಯ 3ನೇ ವರ್ಷ (2014-15) ಮುಕ್ತಾಯಗೊಳಿಸಲಾಗುತ್ತದೆ. ಆರಂಭದ 2 ವರ್ಷದಲ್ಲಿ ಅನುಷ್ಠಾನ ಯೋಜನೆಯಲ್ಲಿ ಸೇರ್ಪಡೆಯಾಗದ ರಾಜ್ಯಗಳಿಗೆ ರಾಜ್ಯ ಮಿಷನ್ ನಿರ್ದೇಶನಾಲಯಗಳು ರಚನೆ ಆಗಿ ಕಾರ್ಯಾರಂಭ ಮಾಡುವವರೆಗೆ ಇಬ್ಬರು ತಾಂತ್ರಿಕ ಸಿಬ್ಬಂದಿಯನ್ನು ನೀಡಲಾಗುತ್ತದೆ(ಮೇಲಿನ ಕೋಷ್ಟಕದಲ್ಲಿ ಉಲ್ಲೇಖಿಸಿದ ಮಂಜೂರಾದ ಒಟ್ಟು ಹುದ್ದೆಗಳಲ್ಲಿ). (ಫಿI) ಮಕ್ಕಳ ಬೆಳವಣಿಗೆ ಸೇವೆಗಳಲ್ಲಿ ವೃತ್ತಿಪರತೆ ಮೂಲಕ ಸಾಮರ್ಥ್ಯ ನಿರ್ಮಾಣ: ಎಲ್ಲ ಹಂತಗಳ ಎಲ್ಲ ಸೇವಾ ಪೂರೈಕೆದಾರರು ಮತ್ತು ಸಿಬ್ಬಂದಿಗಳಿಗೆ ತರಬೇತಿ, ಅಗತ್ಯ ಮೌಲ್ಯಮಾಪನ, ನಿಯತವಾಗಿ ತರಬೇತಿ ಹಾಗೂ ಸಾಮರ್ಥ್ಯ ನಿರ್ಮಾಣವನ್ನು ಖಾತ್ರಿಗೊಳಿಸುವ ಮೂಲಕ ಮಕ್ಕಳ ಪಾಲನೆ ಮತ್ತು ಬೆಳವಣಿಗೆ ಮಾನದಂಡಗಳ ಜ್ಞಾನ ಮತ್ತು ಕೌಶಲಗಳನ್ನು ವರ್ಧಿಸುವುದು ಮತ್ತು ಸನ್ನದ್ಧಗೊಳಿಸುವಿಕೆಯನ್ನು ಖಾತ್ರಿಪಡಿಸಬೇಕು. ದೂರಕಲಿಕಾ ವೃತ್ತಿಪರ ಕೋರ್ಸ್‌ಗಳನ್ನು ಮಾಡಲು ಪ್ರೋತ್ಸಾಹಿಸಬಹುದು. ಎನ್ಐಪಿಸಿಸಿಡಿ, ಎಂಎಲ್‌ಟಿಸಿಗಳು ಮತ್ತು ಎಡಬ್ಲ್ಯುಟಿಸಿಗಳನ್ನು ಎಲ್ಲ ಹಂತದಲ್ಲೂ ಸಾಮರ್ಥ್ಯ ನಿರ್ಮಾಣ ಮತ್ತು ತರಬೇತಿ ನೀಡಲು ಬಳಸಿಕೊಳ್ಳಬಹುದು. ಎಂಎಲ್‌ಟಿಸಿಗಳು ಹಾಗೂ ಎಡಬ್ಲ್ಯುಟಿಸಿಗಳು ತಮ್ಮ ಪ್ರಾಯೋಗಿಕ ಕ್ಷೇತ್ರದಲ್ಲಿ ಮಾದರಿ ಐಸಿಡಿಎಸ್ ಯೋಜನೆಗಳು/ಎಡಬ್ಲ್ಯುಸಿಗಳನ್ನು ನಡೆಸುವ ಅಗತ್ಯವಿದೆ. ತಮಿಳುನಾಡು, ರಾಜಸ್ಥಾನ ಮತ್ತು ಉತ್ತರಪ್ರದೇಶ ರಾಜ್ಯಗಳು ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ಎಸ್ಐಆರ್ಡಿ) ಮತ್ತು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಗೃಹ ಸಮಾಜ ವಿಜ್ಞಾನ ಕಾಲೇಜುಗಳು ಇತ್ಯಾದಿಗಳೊಟ್ಟಿಗೆ ಸೇರಿಕೊಂಡು ರಾಜ್ಯ ತರಬೇತಿ ಸಂಸ್ಥೆ, ವೃತ್ತಿಪರ ತರಬೇತಿದಾರರ ಶ್ರೇಣಿ, ಮೊಬೈಲ್ ತರಬೇತಿ ತಂಡಗಳ ರಚನೆ ಸೇರಿದಂತೆ ಹಲವು ಉಪಕ್ರಮಗಳನ್ನು ಕೈಗೊಂಡಿವೆ. ತರಬೇತಿಯಲ್ಲಿ ಇಂಥ ಅನ್ವೇಷಕ ಪ್ರವೃತ್ತಿಯನ್ನು ಬಳಸಿಕೊಂಡು, ಐಸಿಡಿಎಸ್ ಮಿಷನ್ ಪ್ರಸ್ತುತದ ತರಬೇತಿ ಕಾರ್ಯಯೋಜನೆಯನ್ನು ಮರುರೂಪಿಸಲು ಪ್ರಯತ್ನಿಸಬೇಕಿದೆ. ಇದಕ್ಕಾಗಿ ಮಕ್ಕಳ ಅಭಿವೃದ್ಧಿ ಸಂಪನ್ಮೂಲ ಕೇಂದ್ರವನ್ನು ಎನ್ಐಪಿಸಿಸಿಡಿ ಮತ್ತು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶದಲ್ಲಿ ರಾಜ್ಯ ಮಕ್ಕಳ ಅಭಿವೃದ್ಧಿ ಸಂಪನ್ಮೂಲ ಕೇಂದ್ರವನ್ನು ವಿಸ್ತೃತ ಅನುಭವ ಮತ್ತು ಸಾಮರ್ಥ್ಯಗಳಿರುವ ಪ್ರತಿಷ್ಠಿತ ಸ್ವಯಂಸೇವಾ ಸಂಘಟನೆಗಳು /ಸಂಸ್ಥೆಗಳು, ಗೃಹ/ಸಮಾಜ ವಿಜ್ಞಾನ ಕಾಲೇಜುಗಳ ಸಹಯೋಗದಲ್ಲಿ ಆರಂಭಿಸಬೇಕಿದೆ. (ಫಿII) ಸಾಮೂಹಿಕ ಒಡೆತನದ ಉತ್ತೇಜನ: ಸಮುದಾಯ ವಿಶೇಷವಾಗಿ ಪೋಷಕರು ಹಾಗೂ ಕುಟುಂಬಗಳನ್ನು ಸಂಘಟಿಸುವುದು ಮತ್ತು ಒಳಗೊಳ್ಳುವ ಮೂಲಕ ತಾಯಿ ಮತ್ತು ಮಗುವಿನ ಆರೋಗ್ಯ, ಪೋಷಕಾಂಶ ಪೂರೈಕೆ ಮತ್ತು ಬೆಳವಣಿಗೆಯನ್ನು ಖಾತ್ರಿಗೊಳಿಸುವುದು ಉದ್ದೇಶ. ಐಸಿಡಿಎಸ್‌ನ ಅನುಷ್ಠಾನದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು ಅತ್ಯಂತ ಪರಿಣಾಮಕಾರಿ ಮಾದರಿಗಳು/ ಮಾರ್ಗಗಳನ್ನು ರೂಪಿಸಲು ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ಆಡಳಿತಕ್ಕೆ ನಮನೀಯತೆ ನೀಡಲಾಗುತ್ತದೆ. ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೋಷಕಾಂಶ ಸಮಿತಿ(ವಿಎಚ್ಎಸ್ಎಸ್‌ಸಿ)ಗಳನ್ನು ಗ್ರಾಮ ಮತ್ತು ಸ್ಥಳೀಯ ಹಂತದಲ್ಲಿ ಐಸಿಡಿಎಸ್ ಕಾರ್ಯಕ್ರಮಗಳನ್ನು ನಿರ್ವಹಣೆ ಮತ್ತು ಮೇಲುಸ್ತುವಾರಿಗೆ ಸಕ್ರಿಯವಾಗಿ ಬಳಸಿಕೊಳ್ಳಲಾಗುವುದು. ಇವನ್ನು ಪಂಚಾಯಿತಿಯ ಉಪಸಮಿತಿಗಳೆಂದು ಗುರುತಿಸಲಾಗುತ್ತದೆ. ಎಲ್ಲಾ ಗ್ರಾಮದಲ್ಲೂ ಎಲ್ಲ ಎಡಬ್ಲ್ಯುಸಿಗಳ ಕಾರ್ಯನಿರ್ವಹಣೆಯನ್ನು

ನೋಡಿಕೊಳ್ಳಲು ಸಮುದಾಯದ ಪ್ರತಿನಿಧಿಗಳು,ಪಿಆರ್‌ಐಗಳ ಸದಸ್ಯರು ಮತ್ತು ಗ್ರಾಮಮಟ್ಟದ ಅಧಿಕಾರಿಗಳಿರುವ ವಿಎಚ್‌ಎಸ್‌ಎಸ್‌ಸಿಯ ಒಂದು ಉಪಸಮಿತಿ(ತಾಯಿ ಮತ್ತು ಮಗುವಿನ ಪೋಷಕಾಂಶ ಸಮಿತಿ)ಯನ್ನು ರಚಿಸಬೇಕು. ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಪಾತ್ರವನ್ನು ವಿಸ್ತರಿಸಿ, ಅದಕ್ಕೆ `ಪೋಷಕಾಂಶ ಪೂರೈಕೆ'ಯನ್ನು ಸೇರಿಸಿರುವ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ 25ನೇ ಜುಲೈ 2011 ರ ಆದೇಶ ಅನುಬಂಧ ⅠⅠ ರಲ್ಲಿ ಇದೆ. ಇತ್ತೀಚೆಗೆ ಎಂಡಬ್ಲ್ಯುಸಿಡಿ ರಚಿಸಿರುವ ಅಂಗನವಾಡಿ ಹಂತದ ಮೇಲ್ವಿಚಾರಣೆ ಮತ್ತು ಬೆಂಬಲ ಸಮಿತಿ(ಎಎಲ್‌ಎಂಎಸ್‌ಸಿ) ಯನ್ನು ವಿಎಚ್‌ಎಸ್‌ಎಸ್‌ಸಿಯೊಟ್ಟಿಗೆ ಸಾವಯವವಾಗಿ ಜೋಡಿಸಿ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಎಡಬ್ಲ್ಯುಸಿಗಳು/ಎಡಬ್ಲ್ಯುಡಬ್ಲ್ಯುಗಳನ್ನು ಸದಸ್ಯರೆಂದು ಸೇರ್ಪಡೆಗೊಳಿಸಬೇಕು. ಹಲವು ಅನ್ವೇಷಕ ಯೋಜನೆಗಳು ಉದಾಹರಣೆಗೆ ದುಲಾರ್, ಐಎನ್‌ಹೆಚ್‌ಪಿ ಸ್ಥಳೀಯರನ್ನು ಬಳಸಿಕೊಂಡು ನಿರ್ದೇಶಿತ ಕುಟುಂಬ ಗಳ ವರ್ತನೆಯಲ್ಲಿ ಬದಲಾವಣೆ ತಂದಿವೆ. ಈ ಗುಂಪುಗಳು ಪೋಷಕಾಂಶ ಕೊರತೆಯ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಕಣ್ಣಿಗೆ ಕಾಣುವಂತೆ ಮಾಡುತ್ತವೆ ಮತ್ತು ಸಮಸ್ಯೆಯನ್ನು ಬಗೆಹರಿಸಲು ಸಮುದಾಯದ ಪ್ರತಿಕ್ರಿಯೆಯನ್ನು ಸೃಷ್ಟಿಸುತ್ತವೆ.

2.2.2 ನಿರ್ವಹಣೆಯಲ್ಲಿ ಸುಧಾರಣೆ:

ಮೇಲೆ ಹೇಳಿದ ಕಾರ್ಯಕ್ರಮ ಸಂಬಂಧಿತ ಸುಧಾರಣೆಗಳನ್ನು ಬೆಂಬಲಿಸಲು ಕೇಂದ್ರದಿಂದ ಹಿಡಿದು ಎಡಬ್ಲ್ಯುಸಿ ಹಂತದವರೆಗೆ ಕಾರ್ಯಕ್ರಮ ನಿರ್ವಹಣೆ, ಮೇಲ್ವಿಚಾರಣೆ ಮತ್ತು ಪರಾಮರ್ಶನಕ್ಕೆ ಸಂಬಂಧಿಸಿದ ಹಲವು ಸುಧಾರಣೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವುಗಳ ಗುರಿ ಏನೆಂದರೆ;

(i) ವಿಕೇಂದ್ರೀಕೃತ ಯೋಜನೆ, ನಿರ್ವಹಣೆ ಮತ್ತು ಹೊಂದಿಕೊಳ್ಳುವ ವಿನ್ಯಾಸ: ಅಗತ್ಯಗಳ ಮೌಲ್ಯಮಾಪನ ಮಾಡಿದ ಮತ್ತು ಸ್ಥಳೀಯ ನಕ್ಷೆಯನ್ನು ಸಿದ್ಧಪಡಿಸಿದ ಬಳಿಕ ವಾರ್ಷಿಕ ಕಾರ್ಯಕ್ರಮ ಅನುಷ್ಠಾನ ಯೋಜನೆ(ಎಪಿಐಪಿ)ಗಳ ಮೂಲಕ ರಾಜ್ಯ, ಜಿಲ್ಲೆ, ಯೋಜನೆ ಹಾಗೂ ಸ್ಥಳೀಯ ಮಟ್ಟದಲ್ಲಿ ನಿರ್ದಿಷ್ಟ ಅಗತ್ಯಗಳನ್ನು ಗುರುತಿಸುವುದು ಇದರ ಉದ್ದೇಶ. ಇದು ಅನುಷ್ಠಾನದಲ್ಲಿ ಹೊಂದಿಕೊಳ್ಳುವಿಕೆಯಿರುವ ರಾಜ್ಯ ಹಾಗೂ ಜಿಲ್ಲಾ ನಿರ್ದಿಷ್ಟ ಕಾರ್ಯಯೋಜನೆ(ಪಿಐಪಿ)ಗಳನ್ನು ಸಮಯಕ್ಕೆ ಸರಿಯಾಗಿ ಸೇವೆಗಳ ವಿತರಣೆ, ಶೀಘ್ರವಾಗಿ ಮತ್ತು ಸಮಯಕ್ಕೆ ಸರಿಯಾಗಿ ಅನುದಾನ/ಮಾನವ ಸಂಪನ್ಮೂಲದ ಲಭ್ಯತೆಯೂ ಸೇರಿದಂತೆ ವಿಕೇಂದ್ರೀಕೃತ ವಾಗಿ ಯೋಜಿಸುವುದು ಮತ್ತು ನಿರ್ವಹಣೆಯನ್ನು ಖಾತ್ರಿಗೊಳಿಸುತ್ತದೆ.

ತಮ್ಮ ರಾಜ್ಯಗಳಲ್ಲಿ ಮುಖ್ಯ ಐಸಿಡಿಎಸ್ ಸೇವೆಗಳನ್ನು ಪರಿಣಾಮಕಾರಿಯಾಗಿ ವಿತರಿಸಲು ಅನ್ವೇಷಕ ಮಾದರಿಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಮೂಲಕ ಅನುಷ್ಠಾನದಲ್ಲಿ ಹೊಂದಿಸಿಕೊಳ್ಳುವಿಕೆಯನ್ನು ರಾಜ್ಯಗಳಿಗೆ ಕೊಡಲಾಗುತ್ತದೆ. ಅಷ್ಟಲ್ಲದೆ ಐಸಿಡಿಎಸ್‌ನ ಮುಖ್ಯ ಸೇವೆಗಳನ್ನು ವಿತರಿಸುವಾಗ ರಾಜ್ಯ ಸರ್ಕಾರಗಳಿಗೆ ಕಾರ್ಯಕ್ರಮದ ಹಣಕಾಸು ಮಿತಿಯೊಳಗೆ ಸ್ಥಳೀಯ ಅಗತ್ಯಗಳನ್ನು ಆಧರಿಸಿದ ಗುರಿನಿರ್ದೇಶಿತ ಮಧ್ಯಸ್ತಿಕೆಯನ್ನು ಮಾಡಲು ಅವಕಾಶವಿರುತ್ತದೆ. ರಾಜ್ಯಗಳು ಎಲ್ಲ ವಿಷಯಗಳಲ್ಲೂ ಅಗತ್ಯವಿರುವ ಬದಲಾವಣೆಗಳನ್ನು ಅಂದರೆ, ಮಾನವ ಸಂಪನ್ಮೂಲ, ಸಾರಿಗೆ ಮತ್ತು ಸಂಚಾರ, ಕಾರ್ಯಕ್ರಮ ಅನುಷ್ಠಾನ, ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಜನಸಂಖ್ಯಾ ನಿಯಮಗಳ ಪರಿಷ್ಕರಣೆ ಇತ್ಯಾದಿಗಳಲ್ಲಿ ಮಾರ್ಪಾಟು ಮಾಡಲು ಅವಕಾಶವಿರುತ್ತದೆ. ಆದರೆ, ಈ ಹೊಂದಾಣಿಕೆಯು ಕಾರ್ಯಕ್ರಮದ ಅನುಷ್ಠಾನವನ್ನು ಇನ್ನಷ್ಟು ಪರಿಣಾಮಕಾರಿಯಾಗು ವಂತೆ ಮಾಡುವ ಗುರಿ ಹೊಂದಿದ್ದು, ಒಟ್ಟಾರೆ ವೆಚ್ಚ ನಿಗದಿಪಡಿಸಿದ ವೆಚ್ಚವನ್ನು ಮೀರಬಾರದು. ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಇಂಥ ಎಲ್ಲ ಸರಕುಗಳನ್ನು

ಎಪಿಐಪಿಯೊಳಗೆ ಸೇರ್ಪಡೆಗೊಳಿಸಬೇಕು ಮತ್ತು ಉನ್ನತಾಧಿಕಾರ ಕಾರ್ಯಕ್ರಮ ಸಮಿತಿಯಿಂದ ಅಂಗೀಕಾರ ಪಡೆಯಬೇಕು.

(ii) ಒಮ್ಮುಖತೆಯನ್ನು ಖಾತ್ರಿಗೊಳಿಸುವುದು: ಪಿಆರ್‌ಐಗಳು, ಸಮುದಾಯಗಳು ಮತ್ತು ನಾಗರಿಕ ಸಮಾಜದೊಟ್ಟಿಗೆ ಸಹಯೋಗವನ್ನು ಬಲಪಡಿಸಿಕೊಳ್ಳುವ ಮೂಲಕ ನೆಲಮಟ್ಟ ಮತ್ತು ಹೊರತಲುಪುವಿಕೆಯನ್ನು ಉತ್ತಮಗೊಳಿಸಿಕೊಳ್ಳುವುದು. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದೊಟ್ಟಿಗೆ ಅದರಲ್ಲೂ ಎನ್‌ಆರ್‌ಎಚ್‌ಎಂ(ಪುನರುತ್ಪತ್ತಿ ಮತ್ತು ಮಕ್ಕಳ ಆರೋಗ್ಯ, ಆರ್‌ಸಿಎಚ್)ಕಾರ್ಯಕ್ರಮ, ಸರ್ವ ಶಿಕ್ಷಾ ಅಭಿಯಾನ (ಎಸ್‌ಎಸ್‌ಎ), ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ (ಎಂಜಿಎನ್‌ಆರ್‌ಇಜಿಎಸ್) ಮತ್ತು ಇನ್ನಿತರ ಕಾರ್ಯಕ್ರಮಗಳು ಹಾಗೂ ಮಂತ್ರಾಲಯಗಳೊಂದಿಗೆ ಹೆಚ್ಚಿನ ಒಮ್ಮುಖತೆ ಸಾಧಿಸುವುದು (ಅನುಬಂಧ ।ಫಿ ಮತ್ತು ।ಫಿಂ ನೋಡಿ).

ನೆಲಮಟ್ಟದಲ್ಲಿ ಪ್ರತಿ ತಿಂಗಳು ನಿಶ್ಚಿತ ದಿನದಂದು ವಿಎಚ್‌ಎನ್‌ಡಿ, ಇಸಿಸಿಇ ಮತ್ತು ಇತರ ಸಮಾರಂಭಗಳು ಆರೋಗ್ಯ ಮತ್ತು ಪೋಷಕಾಂಶ ಸೇವೆಗಳನ್ನು ಒಮ್ಮುಖಗೊಳಿಸುವ ಪ್ರಮುಖ ವೇದಿಕೆಗಳಾಗಲಿವೆ. ನೆಲಮಟ್ಟದಲ್ಲಿ ಉತ್ತಮ ಫಲಿತಾಂಶ ನೀಡಿದ ಒಮ್ಮುಖತೆಯ ಮಾದರಿ ಉಪಕ್ರಮಗಳೆಂದರೆ, ಜಂಟಿ ತರಬೇತಿ, ವಿಎಚ್‌ಎನ್‌ಡಿಗಳು ಮತ್ತು ಸಮಗ್ರ ಐಇಡಿಗಳಿಗೆ ಸೂಕ್ಷ್ಮಯೋಜನೆ, ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಇತರ ರಾಜ್ಯಗಳಲ್ಲಿ ತೀವ್ರ ಪೋಷಕಾಂಶ ಕೊರತೆಯ ನಿರ್ವಹಣೆ. ಜೊತೆಗೆ, ವಿವಿಧ ಕ್ಷೇತ್ರಗಳ ಪ್ರಾತಿನಿಧ್ಯವಿರುವ ಗ್ರಾಮೀಣ ಆರೋಗ್ಯ ನೈರ್ಮಲ್ಯ ಮತ್ತು ಪೋಷಕಾಂಶ ಸಮಿತಿ (ವಿಎಚ್‌ಎಸ್‌ಎನ್‌ಸಿ)ಗಳು ನೆಲಮಟ್ಟದಲ್ಲಿ ಒಮ್ಮುಖತೆ ಕ್ರಿಯೆಯ ಪ್ರಮುಖ ಉದಾಹರಣೆಗಳಲ್ಲೊಂದು.

(iii) (ಎ) ನಿರ್ವಹಣೆಯ ಬಲಪಡಿಸುವಿಕೆ-ಪಿಆರ್‌ಐ ಮತ್ತು ಯುಎಲ್‌ಬಿಗಳ ಒಳಗೊಳ್ಳುವಿಕೆ: ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳ ಮೂಲಕ ಪಿಆರ್‌ಐ ಮತ್ತು ಯುಎಲ್‌ಬಿಗಳಿಗೆ ಅಧಿಕಾರವನ್ನು ನೀಡಲಾಗಿದೆ. ರಾಜ್ಯಗಳು ತಮ್ಮ ಅನುಸರಣೆ ಶಾಸನಗಳ ಮೂಲಕ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರವನ್ನು ಹಂಚಬೇಕಿದೆ. ಐಸಿಡಿಎಸ್‌ನ ಅನುಷ್ಠಾನದಲ್ಲಿ ಪಿಆರ್‌ಐ ಮತ್ತು ಯುಎಲ್‌ಬಿಗಳನ್ನು ಒಳಗೊಳ್ಳುವಂತೆ ರಾಜ್ಯಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಪಿಆರ್‌ಐಗಳ ಒಳಗೊಳ್ಳುವಿಕೆಗೆ ಸಂಬಂಧಿಸಿದಂತೆ ರಾಜ್ಯವಾರು ಮಾಹಿತಿಯನ್ನು ಅನುಬಂಧ ಗಿ। ೦ ಯಲ್ಲಿ ನೀಡಲಾಗಿದೆ. ಜೊತೆಗೆ, ಐದು ಹಂತಗಳ ಮೇಲ್ವಿಚಾರಣೆ ವ್ಯವಸ್ಥೆಯಡಿ ಪಿಆರ್‌ಐ ಮತ್ತು ಯುಎಲ್‌ಬಿಗಳ ಒಳಗೊಳ್ಳುವಿಕೆ ಮತ್ತು ಸಹಭಾಗಿತ್ವದಲ್ಲಿ ಸೂಕ್ತವಾದ ಪ್ರಮುಖ ಸ್ಥಾನವನ್ನು ಐಸಿಡಿಎಸ್ ಕಾರ್ಯನಿರ್ವಹಣೆಯಲ್ಲಿ ನೀಡಲಾಗಿದೆ (ಅನುಬಂಧ xx ನೋಡಿ). ಜತೆಗೆ ಮೇಲ್ವಿಚಾರಣೆ, ಭೇಟಿ ಇತ್ಯಾದಿಯ ಮಾರ್ಗದರ್ಶಿ ಸೂತ್ರಗಳು ಕೂಡ ಪಿಆರ್‌ಐ ಮತ್ತು ಯುಎಲ್‌ಬಿಗಳ ಪಾತ್ರವನ್ನು ಒಳಗೊಂಡಿವೆ.

(iii)(ಬಿ) ನಾಗರಿಕ ಸಮಾಜದ ಸಹಭಾಗಿತ್ವ : ಪರಿಷ್ಕೃತ ಐಸಿಡಿಎಸ್ ನಾಗರಿಕ ಸಮಾಜ ಕಾರ್ಯಜಾಲಗಳು, ಸರಕಾರೇತರ ಸಂಸ್ಥೆಗಳು (ಎನ್‌ಜಿಒ), ಸಮುದಾಯ ಆಧಾರಿತ ಸಂಸ್ಥೆಗಳು (ಸಿಬಿಒ) ಮತ್ತು ಸ್ವಯಂ ಸೇವಾ ಗುಂಪುಗಳಿಗೆ ಪ್ರಮುಖ ಪಾತ್ರವನ್ನು ನೀಡುತ್ತದೆ. ಇಂಥ ಸಂಸ್ಥೆಗಳು/ಸಂಘಟನೆಗಳನ್ನು ಒಳಗೊಳ್ಳಲು ಅಗತ್ಯವಾದ ಸಮಗ್ರ ಮಾರ್ಗದರ್ಶಿ ಸೂತ್ರವನ್ನು ಡಬ್ಲ್ಯುಸಿಡಿ ಮಂತ್ರಾಲಯ ಅಭಿವೃದ್ಧಿಗೊಳಿಸುತ್ತದೆ. ಇಂಥ ಸಂಸ್ಥೆ/ಸಂಘಟನೆಗಳನ್ನು ಐಸಿಡಿಎಸ್‌ನ ಯೋಜನೆ, ನಿರ್ವಹಣೆ ಮತ್ತು ಸೇವಾವಿತರಣೆಯ ನಾನಾ ಹಂತಗಳಲ್ಲಿ ಒಳಗೊಳ್ಳಲು ಪ್ರಯತ್ನ ನಡೆಸಲಾಗಿದೆ. ವಕಾಲತು ವಹಿಸುವಿಕೆಯಲ್ಲದೆ ನಾನಾ ಹಂತಗಳಲ್ಲಿ ಸಾಮರ್ಥ್ಯ ಬಲಪಡಿಸುವಿಕೆ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರದ ಮೌಲ್ಯಮಾಪನ, ಮಕ್ಕಳ ಅಭಿವೃದ್ಧಿಗೆ ಅನ್ವೇಷಕ ಮಾರ್ಗಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಸಮುದಾಯದ ಸಂಘಟನೆಗಳು ಮತ್ತು ಪಿಆರ್‌ಐಗಳ ಜೊತೆಗೆ ಕಾರ್ಯನಿರ್ವಹಿಸುವುದರಲ್ಲಿ ಅವುಗಳನ್ನು ಒಳಗೊಳ್ಳಲಾಗುತ್ತದೆ.

ಮೇಲಿನ ಎಲ್ಲದಕ್ಕೆ ಪ್ರತಿಯೊಂದು ರಾಜ್ಯದಲ್ಲಿ ಶೇ.10ರಷ್ಟು ಯೋಜನೆಗಳನ್ನು ಎಂಒಯು ಮಾರ್ಗದಲ್ಲಿ ಅನುಷ್ಠಾನಗೊಳಿಸಬೇಕು ಎಂದು ಶಿಫಾರಸು ಮಾಡಲಾಗಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಇದನ್ನು ನಿಗದಿಗೊಳಿಸಿದ ಹಣಕಾಸು ಮಿತಿಯೊಳಗೆ ಅಭಿವೃದ್ಧಿಪಡಿಸಲು ಅಗತ್ಯವಾದ ಶಾಸನಾತ್ಮಕ ವಿಧಾನಗಳನ್ನು ಅಭಿವೃದ್ಧಿಪಡಿಸಬೇಕಿದೆ.

(IV) ಐಸಿಡಿಎಸ್ ನಿರ್ವಹಣೆ ಮಾಹಿತಿ ವ್ಯವಸ್ಥೆ (ಎಂಐಎಸ್) ಬಲಪಡಿಸುವಿಕೆ: ಐಸಿಡಿಎಸ್‌ನಲ್ಲಿ ಅಂತರ್ಗತವಾದ ಪರಾಮರ್ಶನ ವ್ಯವಸ್ಥೆಯಿದ್ದು, ಅದರ ಮೂಲಕ ಎಡಬ್ಲ್ಯುಸಿಗಳಿಂದ ವಿಭಾಗ, ಜಿಲ್ಲಾ ಮುಖ್ಯ ಕಚೇರಿ, ರಾಜ್ಯ ನಿರ್ದೇಶನಾಲಯಕ್ಕೆ ನಿಯತಕಾಲಿಕ ವರದಿಗಳು ಮತ್ತು ವಾಪಸಾತಿಗಳು(ಎಂಪಿಆರ್‌ಗಳು) ಮೇಲ್ಮುಖವಾಗಿ ಸಲ್ಲಿಕೆಯಾಗುತ್ತವೆ. ಆದರೆ, ಈ ಪರಾಮರ್ಶನ ವ್ಯವಸ್ಥೆಯು ವ್ಯಾಪ್ತಿ ಬಗ್ಗೆ ಸಜ್ಜುಗೊಂಡಿ ದೆಯೇ ಹೊರತು ಫಲಶೃತಿಯ ಮಾನಕಗಳಿಗಲ್ಲ. ಪರಿಷ್ಕೃತ ಪರಾಮರ್ಶನ ವ್ಯವಸ್ಥೆಯು ವಾಸ್ತವ ಕಾಲವನ್ನು ಆಧರಿಸಿದ ಅಂಕಿ ಅಂಶದ ಸಂಗ್ರಹ ಮತ್ತು ಪೂರೈಸುವಿಕೆಯನ್ನು ಗುರಿಯಾಗಿರಿಸಿಕೊಳ್ಳಲಿದ್ದು, ಕಾರ್ಯ ಕ್ರಮಾತ್ಮಕ ಕ್ರಿಯೆಗಳು ಮತ್ತು ಸಕಾಲಿಕ ಮಧ್ಯಪ್ರವೇಶವನ್ನು ಒಳಗೊಂಡಿರುತ್ತದೆ.

(V) ಮಾಹಿತಿ, ಸಂವಹನ ತಂತ್ರಜ್ಞಾನ (ಐಸಿಟಿ) ಬಳಕೆ: ಮಾಹಿತಿ ಮೂಲಾಧಾರ ಮತ್ತು ಮಾಹಿತಿಯ ಹಂಚಿಕೆ ಹಾಗೂ ಪ್ರಸರಣವನ್ನು ಬಲಪಡಿಸಲು, ಐಸಿಡಿಎಸ್‌ಅಡಿ ಐಸಿಟಿಯ ಬಳಕೆಯನ್ನು ಉತ್ತೇಜಿಸಬೇಕಿದೆ. ಈ ಹಂತದಲ್ಲಿ ಅಂತರ್ಜಾಲದ ವ್ಯಾಪ್ತಿ ನಿಯಮಿತವಾಗಿರುವುದರಿಂದ ಮತ್ತು ಮೊಬೈಲ್ ಫೋನ್‌ಗಳು ದೇಶದ ಹಳ್ಳಿಗಳನ್ನು ತಲುಪಿರುವುದರಿಂದ, ಐಸಿಡಿಎಸ್‌ನ್ನು ಮೊಬೈಲ್‌ಫೋನ್ ಮೂಲಸೌಲಭ್ಯದೊಡನೆ ಜೋಡಿಸಲು ಪ್ರಯತ್ನಿಸಬೇಕಿದೆ.

(VI) ಸಬಲಗೊಂಡ ಮತ್ತು ಪುನರ್ವಿನ್ಯಾಸಗೊಂಡ ಐಸಿಡಿಎಸ್‌ನ ಅನುಷ್ಠಾನಕ್ಕೆ ಭಾರತ ಸರ್ಕಾರ ಅಗತ್ಯವಿರುವಷ್ಟು ಅನುದಾನ ಲಭ್ಯವಿರುವಂತೆ ನೋಡಿಕೊಳ್ಳಬೇಕಿದೆ. ರಾಜ್ಯ ಸರ್ಕಾರಗಳು ಪಿಐಪಿ ಪದ್ಧತಿಗೆ ಬದಲಾಗಲು, ಎಸ್‌ಎನ್‌ಪಿಯ ವೆಚ್ಚ ಹೆಚ್ಚಳ, 200 ತೀವ್ರ ಹೊರೆಯಿರುವ ಜಿಲ್ಲೆಗಳ ಎಲ್ಲ ಎಡಬ್ಲ್ಯುಸಿಗಳಲ್ಲಿ ಹೆಚ್ಚುವರಿ ಎಡಬ್ಲ್ಯುಡಬ್ಲ್ಯು ನೇಮಕ, ಇಸಿಸಿಇ ಭಾಗದ ಬಲವರ್ಧನೆ, ಎಡಬ್ಲ್ಯುಸಿಗಳ ನಿರ್ಮಾಣಕ್ಕೆ ಅನುದಾನ, ಹೊಂದಿಕೊಳ್ಳುವ ಪ್ರಾಯೋಗಿಕ ಮಾದರಿಗಳನ್ನು ಅಭಿವೃದ್ಧಿಪಡಿಸಲು ಹಾಗೂ ಅನುಷ್ಠಾನಗೊಳಿಸಲು ಅಗತ್ಯವಿರುವ ಹೆಚ್ಚುವರಿ ಮಾನವ ಸಂಪನ್ಮೂಲವನ್ನು ನೇಮಿಸಿಕೊಳ್ಳಲು ರಾಜ್ಯ ಸರ್ಕಾರಗಳಿಗೆ ಹೆಚ್ಚುವರಿ ಹಣಕಾಸು ಸಂಪನ್ಮೂಲಗಳನ್ನು ಒದಗಿಸಬೇಕಾಗುತ್ತದೆ.

ಅಗತ್ಯವನ್ನು ಆಧರಿಸಿದ ಜಿಲ್ಲಾ ಹಂತದ ಯೋಜನೆಯಲ್ಲಿ ಸ್ಥಳೀಯ ಅನ್ವೇಷಣೆಗಳನ್ನು ಉತ್ತೇಜಿಸಲು ಯಾವುದೇ ಕಟ್ಟುಪಾಡುಗಳಿಲ್ಲದ/ಹೊಂದಿಕೊಳ್ಳುವ ಅನುದಾನ ಲಭ್ಯವಿರುವಂತೆ ಮಾಡಬೇಕು. ಅನುದಾನದ ಹರಿವನ್ನು ಸುಧಾರಿಸಬೇಕಿದ್ದು, ಸಮಯಕ್ಕೆ ಸರಿಯಾಗಿ ಹಣ ಬಿಡುಗಡೆ ಹಾಗೂ ಐಸಿಡಿಎಸ್‌ಗಳ ಹಣಕಾಸು ನಿರ್ವಹಣೆಯಲ್ಲಿರುವ ಯಾವುದೇ ಅಡೆತಡೆಗಳನ್ನು ನಿವಾರಿಸಬೇಕಿದೆ.

2.2.3: ಸಾಂಸ್ಥಿಕ ಸುಧಾರಣೆಗಳು: ಮೇಲೆ ಹೇಳಿದ ಕಾರ್ಯಕ್ರಮ ಸಂಬಂಧಿತ ಹಾಗೂ ನಿರ್ವಹಣಾ ಸುಧಾರಣೆಗಳಿಗೆ ಎಲ್ಲ ಹಂತಗಳಲ್ಲೂ ದೃಢವಾದ ಸಾಂಸ್ಥಿಕ ಸಂರಚನೆಗಳು ಹಾಗೂ ಸಂಯೋಜನೆಗಳ ಅಗತ್ಯವಿದೆ. ಅವುಗಳೆಂದರೆ,

(i) ಮಿಷನ್ ಕ್ರಿಯಾರೀತಿಯಲ್ಲಿ ಐಸಿಡಿಎಸ್ : ಹಾಲಿ ಸೇವಾವಿತರಣೆ ವ್ಯವಸ್ಥೆಯನ್ನು ಬಲಗೊಳಿಸಬೇಕೆಂದರೆ, ಐಸಿಡಿಎಸ್‌ನ್ನು ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಕ್ರಿಯಾರೀತಿಯಲ್ಲಿ ಪರಿಚಯಿಸಬೇಕಾಗುತ್ತದೆ. ಮಿಷನ್‌ನ ಬೇರೆ ಬೇರೆ ಹಂತಗಳಲ್ಲಿ ಅಗತ್ಯ ಮಾನವ ಮತ್ತು ಹಣಕಾಸು ಸಂಪನ್ಮೂಲ ಇರಲಿದೆ ಮತ್ತು ಕ್ರಿಯೆಗೆ ಸಬಲಗೊಳ್ಳಲಿವೆ. ಎಲ್ಲ ಹಂತಗಳಲ್ಲಿ ಮತ್ತು ವ್ಯವಸ್ಥೆಗಳಲ್ಲಿ

ಅಂದರೆ, ಹಣಕಾಸು, ಮಾನವ ಸಂಪನ್ಮೂಲ, ಶೇಖರಣೆ ಮತ್ತು ಸಾಗಣೆ, ಕಾರ್ಯಕ್ರಮ ಮತ್ತು ಕಾರ್ಯಾಚರಣೆ ಮೇಲ್ವಿಚಾರಣೆ ಇತ್ಯಾದಿಗೆ ಸಂಬಂಧಿಸಿದಂತೆ ಸ್ಪಷ್ಟವಾದ ಸ್ವರೂಪ ಹೊಂದಿರಲಿದೆ. ರಾಜ್ಯ ನಿರ್ದಿಷ್ಟ ಯೋಜನೆಗಳಿಗೆ ಒಳಸುರಿ, ಪರಿಮಾಣಗ ಳು, ಪ್ರಕ್ರಿಯೆಗಳು, ಹೊರಸುರಿಗಳು ಮತ್ತು ಫಲಶ್ರುತಿಗಳ ಅನುಷ್ಠಾನ ಹಾಗೂ ಯೋಜಿಸುವಿಕೆಗೆ ಮಿಷನ್ ಬೆಂಬಲ ನೀಡಲಿದೆ. ಎಂಬಿಯು ಮತ್ತು ಎಪಿಐಪಿಗಳ ಮೂಲಕ ಸಾಧನಗಳ ಕಾರ್ಯಕ್ರಮಾತ್ಮಕ ಮತ್ತು ಸಂಪನ್ಮೂಲ ಕಟ್ಟುಪಾಡುಗಳನ್ನು ಹಂಚಿಕೊಳ್ಳುವುದನ್ನು ಖಾತ್ರಿಪಡಿಸುತ್ತದೆ. ಇದು ಐಸಿಡಿಎಸ್ ಮಿಷನ್‌ಗೆ ಶೀಘ್ರವಾಗಿ ತಾಂತ್ರಿಕ ಹಾಗೂ ನಿರ್ವಹಣೆ ಬೆಂಬಲವನ್ನು ನೇಮಿಸಿಕೊಳ್ಳಲು ಅನುವಾಗುತ್ತದೆ. ಅದಕ್ಕಿಂತ ಮುಖ್ಯವಾಗಿ, ಐಸಿಡಿಎಸ್‌ನ ಸಾಮುದಾಯಿಕ ಜವಾಬ್ದಾರಿಯಿಂದಾಗಿ ಗುಣಮಟ್ಟದ ಸೇವೆಯ ವಿತರಣೆಗೆ ಅವರು ಉತ್ತರದಾಯಿಯಾಗಿರುತ್ತಾರೆ. ಮಿಷನ್‌ನ ಕೆಲಸವನ್ನು ನಡೆಸಲು ರಾಜ್ಯ ಮಕ್ಕಳ ಅಭಿವೃದ್ಧಿ ಸೊಸೈಟಿಗಳನ್ನು ಸ್ಥಾಪಿಸಲಾಗುತ್ತಿದ್ದು, ಇವು ಜಿಲ್ಲಾ ಘಟಕಗಳನ್ನು ಸ್ಥಾಪಿಸುವ ಅಧಿಕಾರವನ್ನು ಹೊಂದಿವೆ.

(ii) ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆ ವ್ಯವಸ್ಥೆಗಳು : ಐಸಿಡಿಎಸ್‌ಗೆ ಒಟ್ಟಾರೆಯಾಗಿ ಎಂಡಬ್ಲ್ಯುಸಿಡಿಯ ಸಚಿವ(ಹಂಗಾಮಿ)ರ ನೇತೃತ್ವದ ರಾಷ್ಟ್ರೀಯ ಮಿಷನ್ ಚಾಲನಾ ಗುಂಪು ಮಾರ್ಗದರ್ಶನ ಮಾಡುತ್ತದೆ. ಐಸಿಡಿಎಸ್ ಕಾರ್ಯಾಚರಣೆಯನ್ನು ರಾಷ್ಟ್ರ ಮಟ್ಟದಲ್ಲಿ ಮೇಲ್ವಿಚಾರಣೆ ಮತ್ತು ಪರಾಮರ್ಶನ ಮಾಡುವುದು ಎಂಡಬ್ಲ್ಯುಸಿಡಿ ಕಾರ್ಯದರ್ಶಿಯವರ ಅಧ್ಯಕ್ಷತೆಯ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿ. ಅದೇ ರೀತಿ ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿ ನೇತೃತ್ವದ ರಾಜ್ಯ ಮಿಷನ್ ಚಾಲನಾ ಗುಂಪು ಐಸಿಡಿಎಸ್ ಕಾರ್ಯಕ್ರಮವನ್ನು ಮುನ್ನಡೆಸುತ್ತದೆ. ಮುಖ್ಯ ಕಾರ್ಯದರ್ಶಿ ನೇತೃತ್ವದ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿಯು ಐಸಿಡಿಎಸ್ ಕಾರ್ಯಕ್ರಮದ ಮೇಲ್ವಿಚಾರಣೆ ಹಾಗೂ ಪರಾಮರ್ಶನ ಮಾಡುತ್ತದೆ. ಜಿಲ್ಲೆ ಮತ್ತು ಘಟಕ ಹಂತದಲ್ಲಿ ಸಲಹಾ ಸಮಿತಿಗಳನ್ನು ಸೃಷ್ಟಿಸಲಾಗಿದೆ.

(iii) ಪಿಆರ್‌ಐಗಳ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು: ರಾಜ್ಯಗಳು ಐಸಿಡಿಎಸ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ಬೇರುಮಟ್ಟದ ನಾಯಕತ್ವವನ್ನು ಪ್ರೋತ್ಸಾಹಿಸಬೇಕು ಮತ್ತು ಚಾಲನಾ ಪಾತ್ರವನ್ನು ವಹಿಸಬೇಕೆಂದು ಪ್ರೇರೇಪಿಸಲಾಗುತ್ತದೆ.

ರಾಜ್ಯಗಳು ನಿರ್ದಿಷ್ಟವಾಗಿ ಮಾಡಬೇಕಾದ್ದು ಏನೆಂದರೆ;

(ಎ) ಸೇವೆಗಳು ಮತ್ತು ಅಧಿಕಾರವನ್ನು ಖಾತ್ರಿಗೊಳಿಸಲು ಸುಲಭಗೊಳಿಸುವ ಹಾಗೂ ನೆರವಾಗುವ ಮೇಲ್ವಿಚಾರಣೆಯನ್ನು ಬೆಂಬಲಿಸಬೇಕು ಮತ್ತು ಎಡಬ್ಲ್ಯುಸಿಗಳ ಮುಖ್ಯವಾದ ಮತ್ತು ಅತಿ ಅವಶ್ಯವಾದ ಅಗತ್ಯಗಳ ನಡುವಿನ ಸ್ಥಳೀಯ ಅಂತರವನ್ನು ಬೆಂಬಲಿಸಬೇಕು.

ಬಿ) ಆರಂಭಿಕ ಬಾಲ್ಯಾವಸ್ಥೆ ಹಾಗೂ ತಾಯಂದಿರ ಪಾಲನೆ ಹಾಗೂ ಬೆಂಬಲ ವ್ಯವಸ್ಥೆಗಳ ಅಗತ್ಯದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಂಡು, ಅದಕ್ಕೆ ಸಮ್ಮತಿ ನೀಡಬೇಕು ಹಾಗೂ ತಾರತಮ್ಯ, ಹಿಂಸೆ ಮತ್ತು ಪಕ್ಷಪಾತರಹಿತ ಸಬಲಗೊಳಿಸುವ ಹಾಗೂ ಖಾತರಿ ನೀಡುವ ವಾತಾವರಣವನ್ನು ರೂಪಿಸಲು ಕೆಲಸ ಮಾಡಬೇಕು; ಜ್ಞಾನ, ಕರ್ತವ್ಯಪ್ರಜ್ಞೆ ಮತ್ತು ಉದ್ದೇಶದಿಂದ ಸಾಮಾಜಿಕ ಅಡೆತಡೆಗಳನ್ನು ನಿವಾರಿಸಲು ಕಾರ್ಯನಿರ್ವಹಿಸಬೇಕು.

ಸಿ) ಪಿಆರ್‌ಐ ಮತ್ತು ಯುಎಲ್‌ಬಿಗಳ ಒಳಗೊಳ್ಳುವಿಕೆ, ಸಹಭಾಗಿತ್ವ ಮತ್ತು ಉತ್ತರದಾಯಿತ್ವವನ್ನು ಖಾತ್ರಿಪಡಿಸುವ ಮಾನಕಗಳೊಟ್ಟಿಗೆ ಅವುಗಳಿಗೆ ಹೆಚ್ಚು ಜವಾಬ್ದಾರಿ ಮತ್ತು ಅಧಿಕ ಅವಕಾಶಗಳನ್ನು ನೀಡುವುದು.

++++++++++++++++++++++++++++++++++++

## 3. ಐಸಿಡಿಎಸ್ ಮಿಷನ್

### 3.1 ಐಸಿಡಿಎಸ್ ಮಿಷನ್ ಏಕೆ?

ಅಗತ್ಯವಿರುವಷ್ಟು ಹಣಕಾಸು ಮತ್ತು ಮಾನವ ಸಂಪನ್ಮೂಲವನ್ನು ಹೂಡಿಕೆ ಮಾಡದ ಕಾರಣ, ವರ್ಷಗಳು ಕಳೆದಂತೆ ಐಸಿಡಿಎಸ್ ಬಹುವಾಗಿ ಚರ್ಚಿತ, ವಾದವಿವಾದಕ್ಕೆ ಕಾರಣವಾದ ಮತ್ತು ತಾಯಂದಿರು ಮತ್ತು ಮಕ್ಕಳಲ್ಲಿ ಪೋಷಕಾಂಶ ಕೊರತೆಯಂಥ ಭಾರಿ ಸವಾಲು ಎದುರಿಸುವಲ್ಲಿ ವಿಫಲವಾಗಿದೆ ಎಂದು ದೂಷಿಸಲ್ಪಟ್ಟ ಕಾರ್ಯಕ್ರಮವಾಗಿ ಪರಿಣಮಿಸಿದೆ. ಐಸಿಡಿಎಸ್ ಕಾರ್ಯಕ್ರಮದಲ್ಲಿ ಸಮಯಕ್ಕೆ ಸರಿಯಾಗಿ ಮತ್ತು ಸಮರ್ಪಕವಾಗಿ ಸಂಪನ್ಮೂಲಗಳನ್ನು ಹೂಡಿಕೆ ಮಾಡಿ ಬಲಪಡಿಸಿದಲ್ಲಿ, ಅದು ಮೂರು ವರ್ಷದೊಳಗಿನ ಮಕ್ಕಳಲ್ಲಿ ಪೋಷಕಾಂಶ ಕೊರತೆಯನ್ನು ಕಡಿಮೆ ಮಾಡುವ ಹಾಗೂ ಆರು ವರ್ಷದೊಳಗಿನ ಮಕ್ಕಳಲ್ಲಿ ಆರಂಭಿಕ ಕಲಿಕೆಯನ್ನು ಮತ್ತು ಕಲಿಕಾ ಫಲಿತಾಂಶಗಳನ್ನು ವರ್ಧಿಸುವ ಸಾಮರ್ಥ್ಯವನ್ನು ಹೊಂದಿದೆ ಎಂಬುದು ಈಗ ಗುರುತಿಸಲ್ಪಟ್ಟಿದೆ.

ಐಸಿಡಿಎಸ್ ಅನುಷ್ಠಾನದ ಮುನ್ನೋಟವನ್ನು ಅರ್ಥ ಮಾಡಿಕೊಳ್ಳಲು, ಅದನ್ನು ಎನ್‌ಆರ್‌ಎಚ್‌ಎಮ್ ಮತ್ತು ಎಸ್‌ಎಸ್‌ಎಗಳಂತೆ ಹೊಂದಿಕೊಳ್ಳುವ ಒಂದು ಮಿಷನ್‌ನಂತೆ ಅನುಷ್ಠಾನಗೊಳಿಸುವುದು ಈ ಹಂತದಲ್ಲಿ ಮುಖ್ಯ ಅದ್ಯತೆಯಾಗಬೇಕಿದೆ. ರಾಜ್ಯ ಸರ್ಕಾರಗಳು, ಸಂಬಂಧಿಸಿದ ಮಂತ್ರಾಲಯಗಳು, ಯೋಜನಾ ಆಯೋಗ, ದೇಶದಾದ್ಯಂತದ ನಾಗರಿಕ ಸಮಾಜದ ಮತ್ತು ಸ್ವಯಂಸೇವಾ ಸಂಘಟನೆಗಳೊಡನೆ ಸರಣಿಯೋಪಾದಿಯ ಸಲಹಾ ಸಭೆಗಳು ಹಾಗೂ ಮಾತುಕತೆಯ ಬಳಿಕ ಮಿಷನ್ ಮಾದರಿಯ ಐಸಿಡಿಎಸ್‌ಗೆ ಚಾಲನೆ ನೀಡಲಾಗಿದೆ. ಇತ್ತೀಚೆಗೆ ಆರಂಭಿಸಿದ ವಾರ್ಷಿಕ ಕಾರ್ಯಕ್ರಮ ಅನುಷ್ಠಾನ ಯೋಜನೆ(ಎಪಿಐಪಿ)ಗಳು ಮತ್ತು ಸಂಬಂಧಿಸಿದ ಚರ್ಚೆಗಳು ಕೂಡ ಐಸಿಡಿಎಸ್‌ನ್ನು ಹೊಂದಿಕೊಳ್ಳಬಲ್ಲ ಮಿಷನ್ ಮಾದರಿಯಲ್ಲಿ ಅನುಷ್ಠಾನಗೊಳಿಸುವ ಅಗತ್ಯವನ್ನು ಎತ್ತಿಹಿಡಿದಿವೆ. ಎನ್‌ಆರ್‌ಎಚ್‌ಎಮ್ ಮತ್ತು ಎಸ್‌ಎಸ್‌ಎಯನ್ನು ಮಿಷನ್ ಮಾದರಿಯಲ್ಲಿ ಅನುಷ್ಠಾನಗೊಳಿಸುವಾಗ ಕಲಿತ ಪಾಠಗಳು ಮತ್ತು ಅನುಭವಗಳು, ಐಸಿಡಿಎಸ್‌ನ್ನು ಮಿಷನ್ ಮಾದರಿಯಲ್ಲಿ ಅನುಷ್ಠಾನಗೊಳಿಸಿದರೆ ಆಗಬಹುದಾದ ಉಪಯೋಗಗಳನ್ನು ತೋರಿಸಿಕೊಟ್ಟಿವೆ. ಅವುಗಳೆಂದರೆ;

* ಕಾರ್ಯಕ್ರಮವನ್ನು ಯೋಜಿಸುವುದು, ನಿರ್ವಹಣೆ, ಮೇಲ್ವಿಚಾರಣೆ ಮತ್ತು ಪರಾಮರ್ಶನದಲ್ಲಿ ಸುಧಾರಿಸಿದ ಲಕ್ಷ್ಯ

* ಎಲ್ಲ ಹಂತದಲ್ಲೂ ಕಾರ್ಯಾಚರಣೆ ಮತ್ತು ಉತ್ತರದಾಯಿತ್ವದ ಸುಧಾರಣೆ

* ವಿಕೇಂದ್ರೀಕೃತ, ಅಡೆತಡೆಗಳಿಲ್ಲದ ನೇರ ಹರಿವಿನ ಮತ್ತು ಉತ್ತರದಾಯಿ ಹಣಕಾಸು ನಿರ್ವಹಣೆ ವ್ಯವಸ್ಥೆಗಳು-ಉತ್ತಮಗೊಂಡ ಅನುದಾನ ಹರಿವಿನ ಸಂಯೋಜನೆ

* ವಿವಿಧ ಹಂತಗಳಲ್ಲಿ ಫಲಿತಾಂಶವನ್ನು ಆಧರಿಸಿದ ಪರಾಮರ್ಶನ ಸೂಚಕಗಳು

* ಸಮಯದ ಚೌಕಟ್ಟಿನಲ್ಲಿರುವ ಗುರಿಗಳು, ಫಲಶ್ರುತಿಗಳು

* ರಾಜ್ಯದ ಮಾಲೀಕತ್ವ ಮತ್ತು ಸ್ಥಳೀಯ ಪರಿಹಾರಗಳು

* ಸ್ಪಷ್ಟವಾಗಿ ರೂಪಿಸಿದ ಎಂಒಯುಗಳ ಮೂಲಕ ಫಲಿತಾಂಶವನ್ನು ಆಧರಿಸಿದ ಅನುದಾನ ನೀಡಿಕೆಗೆ ರಾಜ್ಯಗಳೊಟ್ಟಿಗೆ ಹೆಚ್ಚಿನ ತೊಡಗಿಸಿಕೊಳ್ಳುವಿಕೆ

* ವಿಕೇಂದ್ರೀಕೃತ ಯೋಜನೆ-ರಾಜ್ಯ, ಜಿಲ್ಲೆ, ವಲಯ, ಗ್ರಾಮೀಣವಸತಿ

* ವಿವಿಧ ಕ್ಷೇತ್ರಗಳನ್ನು ಒಟ್ಟಿಗೆ ತರುವ ಮೂಲಕ ಒಮ್ಮುಖ ಕ್ರಿಯೆಗಳು

*        ಸ್ಪಷ್ಟ ಹಾಗೂ ಹೊಂದಿಸಿಕೊಳ್ಳಬಹುದಾದ ಅನುಷ್ಠಾನ ಚೌಕಟ್ಟು

*        ಸುಸ್ಥಿರ ಅನುದಾನ- 5 ವರ್ಷಕ್ಕೂ ಅಧಿಕ ಕಾಲ, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಂದ ಹೆಚ್ಚು ಬದ್ಧತೆ

*        ವೃತ್ತಿಪರರು ಮತ್ತು ಸ್ವಯಂಸಹಾಯ ಗುಂಪುಗಳ ಒಳಗೊಳ್ಳುವಿಕೆ

*        ಕ್ರಮಬದ್ಧವಾದ ಮತ್ತು ಸ್ಪಷ್ಟವಾಗಿ ವಿವರಿಸಿದ ಸೇವಾ ಮಾನದಂಡಗಳು

*        ಮಾನದಂಡಗಳು-ಅಧಿಕಾರಗಳಿಗೆ ಅನುಗುಣವಾಗಿ ಕಂದರಗಳನ್ನು ಪ್ರವರ್ತಿಸುವಿಕೆ

*        ಸ್ಥಳೀಯ ಕ್ರಿಯೆಗಳ ಬಲಗೊಳಿಸುವಿಕೆ-ವಿತರಣೆ ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳಾ ಎಸ್‌ಎಚ್‌ಜಿಗಳು ಮತ್ತು ತಾಯಂದಿರ ಸಮಿತಿಗಳ ಸಹಭಾಗಿತ್ವದ ಹೆಚ್ಚಳ

*        ಪಿಆರ್‌ಐಗಳಿಗೆ ಪ್ರಾಶಸ್ತ್ಯ, ಸಮುದಾಯಾಧರಿತ ಸಂಘಟನೆಗಳು ಮತ್ತು ಸ್ವಯಂಸೇವಾಸಂಸ್ಥೆಗಳೊಟ್ಟಿಗೆ ಸಹಭಾಗಿತ್ವ

*        ಎಲ್ಲ ಹಂತಗಳಲ್ಲಿ ಯೋಜಿಸುವಿಕೆ, ನಿರ್ವಹಣೆ, ಪರಾಮರ್ಶನ ಮತ್ತು ಮೇಲ್ವಿಚಾರಣೆಗೆ ಸಮಗ್ರ ಮಾರ್ಗದರ್ಶಿ ಸೂತ್ರಗಳು ಹಾಗೂ ಸಾಧನಗಳು

3.2. ಮುನ್ನೋಟ

ಸ್ಥಿತ್ಯಂತರಗೊಂಡ ಐಸಿಡಿಎಸ್ 6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪೋಷಣೆ, ರಕ್ಷಣೆ, ಮಕ್ಕಳಸ್ನೇಹಿ ಹಾಗೂ ಲಿಂಗ ಸೂಕ್ಷ್ಮತೆಯಿರುವ ಕುಟುಂಬ, ಸಮುದಾಯ, ಕಾರ್ಯಕ್ರಮ ಮತ್ತು ಕಾರ್ಯನೀತಿ ಪರಿಸರದಲ್ಲಿ ಒಟ್ಟಾರೆ ದೈಹಿಕ, ಮಾನಸಿಕ, ಸಾಮಾಜಿಕ, ಸಂಜ್ಞಾನಾತ್ಮಕ ಮತ್ತು ಭಾವನಾತ್ಮಕ ಬೆಳವಣಿಗೆಯನ್ನು ಖಾತ್ರಿಪಡಿಸುವುದಲ್ಲದೆ, 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಹೆಚ್ಚು ಪ್ರಾಧಾನ್ಯ ನೀಡುತ್ತದೆ ಮತ್ತು ಆರಂಭಿಕ ಬಾಲ್ಯಾವಸ್ಥೆಯ ಪಾಲನೆ, ಬೆಳವಣಿಗೆ ಮತ್ತು ಕಲಿಕೆಯನ್ನು ಗರಿಷ್ಠ ಪ್ರಮಾಣದಲ್ಲಿ ಉತ್ತೇಜಿಸುತ್ತದೆ.

3.3. ಗುರಿಗಳು

(i) ಪೋಷಕಾಂಶ ಕೊರತೆಯನ್ನು ಆದಷ್ಟು ಮೊದಲೇ ತಡೆಯುವುದು ಮತ್ತು ಕಡಿಮೆಗೊಳಿಸುವುದು. ಬೆಳವಣಿಗೆ ಮತ್ತು ಅಭಿವೃದ್ಧಿಯ ಕೊರತೆಗಳು ಸಂಚಿತವಾದವು ಮತ್ತು ಮರುಕಳಿಕೆ ಸಾಧ್ಯವಿಲ್ಲದಂಥವು ಎಂಬುದನ್ನು ಗುರುತಿಸುವುದು.

(ii) ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು, ಗರ್ಭಿಣಿಯರು ಹಾಗೂ ಹಾಲುಣಿಸುವ ತಾಯಂದಿರನ್ನು ಗುರಿಯಾಗಿರಿಸಿಕೊಂಡು, ಮಕ್ಕಳ ಉಳಿವು, ಪೋಷಣೆ, ಬೆಳವಣಿಗೆ ಮತ್ತು ಕಲಿತಾ ಫಲಿತಾಂಶಗಳನ್ನು ವರ್ಧಿಸುವುದು.

(iii) ಮಕ್ಕಳ ಆರಂಭಿಕ ಬೆಳವಣಿಗೆಗೆ ಸಮಗ್ರ ಮಾರ್ಗ-ಮಕ್ಕಳ ಭೌತಿಕ/ಚಾಲನಾ, ಸಂಜ್ಞಾನಾತ್ಮಕ, ಭಾವನಾತ್ಮಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಸಂಪೂರ್ಣಾತ್ಮಕವಾಗಿ ಪ್ರವರ್ತಿಸುವ ಮೂಲಕ ಯಾವುದೇ ತಾರತಮ್ಯವಿಲ್ಲದೆ ಅವರನ್ನು ಸಂಪೂರ್ಣ ಬೆಳವಣಿಗೆ ಸಾಮರ್ಥ್ಯ ಮತ್ತು ಸಕ್ರಿಯ ಕಲಿಕಾ ಚಟುವಟಿಕೆಯನ್ನು ಗಳಿಸಿಕೊಳ್ಳಲು ಸಬಲಗೊಳಿಸುವುದು.

(iv) ಸೇವಾಕರ್ತರು ಮತ್ತು ಸಮುದಾಯ ಕಾರ್ಯಕರ್ತರು ಹೆಚ್ಚು ಸಂಕಷ್ಟಕ್ಕೀಡಾಗಬಹುದಾದ ವಯಸ್ಸು ಹಾಗೂ ಹೆಚ್ಚು ಹೊರತಾಗಿರುವ ಸಮುದಾಯದ ಗುಂಪುಗಳನ್ನು ತಲುಪುವ ಅಗತ್ಯವಿದೆ ಎಂಬುದನ್ನು ಗುರುತಿಸಿ, ಕುಟುಂಬ ಮತ್ತು ಸಾಮುದಾಯಿಕ ಮಾರ್ಗಗಳನ್ನು ಕೇಂದ್ರದಿಂದ ವಿಸ್ತರಿಸುವುದು.

(v) ಮಕ್ಕಳ ಪಾಲನೆಯಲ್ಲಿ ಸ್ಥಳೀಯ ಪರಿಸ್ಥಿತಿಗೆ ಸೂಕ್ತವಾದ ಹಾಗೂ ಸ್ಥಳೀಯ ಅನ್ವೇಷಣೆ ಮತ್ತು ಸಾಮರ್ಥ್ಯದ ಮೇಲೆ ಕಟ್ಟಲ್ಪಟ್ಟ ವಿಕೇಂದ್ರೀಕೃತ, ಹೊಂದಿಕೊಳ್ಳಬಲ್ಲ ಮತ್ತು ಸ್ಥಳೀಯ ಸಮುದಾಯಾಧರಿತ ಪ್ರತಿಕ್ರಿಯಾತ್ಮಕ ಮಾರ್ಗಗಳನ್ನು ಪ್ರೋತ್ಸಾಹಿಸುವುದು.

(vi) ಅತ್ಯಂತ ದುರ್ಬಲ ಮತ್ತು ಅನುಕೂಲರಹಿತ ಸಮುದಾಯದ ಗುಂಪುಗಳನ್ನು ಮುಟ್ಟಲು ಸಮಾನತೆಯನ್ನು ಒಳಗೊಂಡ ಮಾರ್ಗಗಳನ್ನು ಒಳಸುವುದು; ಉದಾಹರಣೆಗೆ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ವರ್ಗಗಳು, ಅಲ್ಪಸಂಖ್ಯಾತರು ಇತ್ಯಾದಿ.

(vii) ಎಳೆಯ ಮಕ್ಕಳು, ಹೆಣ್ಣುಮಕ್ಕಳು ಮತ್ತು ಮಹಿಳೆಯರ ಅಂತರ್ಸಂಬಂಧವಿರುವ ಅಗತ್ಯಗಳನ್ನು ಪೂರೈಸಲು ಲಿಂಗಸೂಕ್ಷ್ಮ ಜೀವನವೃತ್ತ ಮಾರ್ಗದ ಮೂಲಕ ಒಮ್ಮುಖತೆಯನ್ನು ಬಲಪಡಿಸುವುದು.

(viii) ಸಾಮಾಜಿಕ ಬದಲಾವಣೆಯ ಚಾಲಕ ಶಕ್ತಿಯಾಗಿ, ಮಹಿಳೆಯರ ಸಬಲೀಕರಣದೊಂದಿಗೆ ಹಕ್ಕುಗಳನ್ನು ಆಧರಿಸಿದ ಮಾರ್ಗವನ್ನು ಉತ್ತೇಜಿಸುವುದು.

(ix) ವೆಚ್ಚದ ಲೆಕ್ಕಾಚಾರದಿಂದ ಮಕ್ಕಳಿಗೆ ಸಂಬಂಧಿಸಿದ ಫಲಿತಾಂಶಗಳೆಡೆಗೆ ಚಲನೆ ಹಾಗೂ ಐಸಿಡಿಎಸ್‌ನ ಗುಣಮಟ್ಟದ ಸಾರ್ವತ್ರೀಕರಣವನ್ನು ಖಾತ್ರಿಗೊಳಿಸುವುದು

(x) ಉತ್ತಮ ಆಡಳಿತ, ಉತ್ತರದಾಯಿತ್ವ ಹಾಗೂ ಸಮೂಹದ ಸಹಭಾಗಿತ್ವವನ್ನು ವರ್ಧಿಸುವುದು.

3.4. ಐಸಿಡಿಎಸ್ ಮಿಷನ್ ಉದ್ದೇಶ

(i) ಅಗತ್ಯ ಸೇವೆಗಳನ್ನು ಸಾಂಸ್ಥೀಕರಿಸುವುದು ಮತ್ತು ಎಲ್ಲ ಹಂತಗಳಲ್ಲೂ ಸಂರಚನೆಗಳನ್ನು ಬಲಪಡಿಸುವುದು. ಹೇಗೆಂದರೆ.,

* ಐಸಿಡಿಎಸ್‌ನ್ನು ಮಿಷನ್ ಮಾದರಿಯಲ್ಲಿ ಅನುಷ್ಠಾನಗೊಳಿಸಿ ಪೋಷಕಾಂಶ ಕೊರತೆಯನ್ನು ತಡೆಯುವುದು ಮತ್ತು ಮಕ್ಕಳಿಗೆ ಉತ್ತಮ ಆರಂಭಿಕ ಜೀವನದ ಖಾತ್ರಿ ನೀಡುವುದು.

* ಎಡಬ್ಲ್ಯುಸಿ ಮತ್ತು ಐಸಿಡಿಎಸ್‌ನ್ನು ಆರೋಗ್ಯ, ಪೋಷಕಾಂಶ ಮತ್ತು ಸ್ಥಿತ್ಯಂತರಗೊಂಡ ಆರಂಭಿಕ ಕಲಿಕೆಯ ಮೊದಲ ವೇದಿಕೆಯಾಗಿ ಬಲಗೊಳಿಸುವುದು-ಆರಂಭಿಕ ಬಾಲ್ಯಾವಸ್ಥೆಯ ಅಭಿವೃದ್ಧಿ ಕೇಂದ್ರ (ಅಂಗನವಾಡಿ-ಬಾಲವಿಕಾಸ ಕೇಂದ್ರ)

* ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಮೇಲೆ ಲಕ್ಷ್ಯ

* ಮಕ್ಕಳ ಆರಂಭಿಕ ಪಾಲನೆ ಮತ್ತು ಕಲಿಕಾ ಪರಿಸರದ ಕಡೆಗೆ ಲಕ್ಷ್ಯ ವಹಿಸುವುದು

* ವೆಚ್ಚದ ಬದಲು ಮಕ್ಕಳಿಗೆ ಸಂಬಂಧಿಸಿದ ಫಲಿತಗಳೆಡೆಗೆ ಚಲನೆ

* ವಿಕೇಂದ್ರೀಕೃತ ಮತ್ತು ಸಮುದಾಯ ಆಧಾರಿತ ಸ್ಥಳೀಯ ಪ್ರತಿಕ್ರಿಯಾತ್ಮಕ ಮಕ್ಕಳ ಪಾಲನೆ ಮಾರ್ಗಗಳನ್ನು ಪೋಷಿಸುವುದು

(ii) ಎಲ್ಲ ಹಂತಗಳಲ್ಲಿ ಸಾಮರ್ಥ್ಯ ವರ್ಧನೆ :

* ತರಬೇತಿಯ ಲಂಬ ಸಮಗ್ರತೆ ಮೂಲಕ ಎಲ್ಲ ಸಿಬ್ಬಂದಿ/ಕಾರ್ಯನಿರ್ವಹಿಸುವವರ ಕ್ಷೇತ್ರಾಧರಿತ ಜಂಟಿ ಕ್ರಿಯೆ ಹಾಗೂ ತಂಡವಾಗಿ ಕಾರ್ಯ ನಿರ್ವಹಿಸುವ ಮೂಲಕ ನಿರೀಕ್ಷಿತ ಫಲಿತಾಂಶ ಮತ್ತು ಉದ್ದೇಶವನ್ನು ಸಾಧಿಸುವುದು

* ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ರಾಷ್ಟ್ರೀಯ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದು

(iii) ಎಲ್ಲ ಹಂತದಲ್ಲೂ ಸೂಕ್ತವಾದ ಅಂತರ್ ವಿಭಾಗೀಯ ಪ್ರತಿಕ್ರಿಯೆಯನ್ನು ಖಾತ್ರಿಗೊಳಿಸುವುದು

* ನೆಲ ಮಟ್ಟದಲ್ಲಿ ಒಮ್ಮುಖತೆಯನ್ನು ಖಾತ್ರಿಗೊಳಿಸಲು ಪಂಚಾಯಿತಿ ರಾಜ್ ಸಂಸ್ಥೆಗಳು (ಪಿಆರ್ಐಗಳು), ಸಮುದಾಯಗಳು ಮತ್ತು ನಾಗರಿಕ ಸಮಾಜದೊಟ್ಟಿಗೆ ಸಹಭಾಗಿತ್ವವನ್ನು ಬಲಪಡಿಸುವ ಮೂಲಕ ಮಕ್ಕಳ ಅಭಿವೃದ್ಧಿ ಸೇವೆಗಳ ಗುಣಮಟ್ಟ ಹಾಗೂ ವ್ಯಾಪ್ತಿಯನ್ನು ಉತ್ತಮಪಡಿಸುವುದು.

* ಸಂಬಂಧಪಟ್ಟ ಎಲ್ಲ ವ್ಯವಸ್ಥೆಗಳೊಡನೆ ಅಂದರೆ, ಸರ್ಕಾರದ ಇಲಾಖೆಗಳು ಹಾಗೂ ಸ್ವಯಂಸೇವಾ ಸಂಘಟನೆಗಳೊಡನೆ ಸಹಯೋಗದಿಂದ ಮತ್ತು ಕಾರ್ಯಜಾಲ ರೂಪಿಸಿಕೊಂಡು, ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದಿಂದ ಮಕ್ಕಳಿಗೆ ಸೇವೆಗಳನ್ನು ಪೂರೈಸುವುದು.

(iv) ಸಾರ್ವಜನಿಕರಲ್ಲಿ ಜಾಗೃತಿ ಮತ್ತು ಪಾಲ್ಗೊಳ್ಳುವಿಕೆ ಹೆಚ್ಚಳ :

* ತಾಯಂದಿರು ಮತ್ತು ಮಕ್ಕಳ ಪಾಲನೆ, ಪೋಷಕಾಂಶ ಪೂರೈಕೆ ಮತ್ತು ಆರೋಗ್ಯ ಶಿಕ್ಷಣ

* ಮಕ್ಕಳು ಮತ್ತು ಕುಟುಂಬಗಳ ದೌರ್ಬಲ್ಯ ಮತ್ತು ಪರಿಸ್ಥಿತಿ ಬಗ್ಗೆ ಎಲ್ಲ ಹಂತಗಳಲ್ಲೂ ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸುವುದು

* ಐಸಿಡಿಎಸ್ಅಡಿ ಆರು ಮುಖ್ಯ ಮಕ್ಕಳ ಅಭಿವೃದ್ಧಿ ಸೇವೆಗಳ ಲಭ್ಯತೆ ಬಗ್ಗೆ ಸಾರ್ವಜನಿಕರು ಹಾಗೂ ಫಲಾನುಭವಿ ಗುಂಪಿಗೆ ಮಾಹಿತಿ ನೀಡುವುದು

* ಸಾಮಾಜಿಕ ಸಂಘಟನೆ ಮತ್ತು ಸ್ವಯಂಪ್ರೇರಿತ ಕ್ರಿಯೆಯನ್ನು ಉತ್ತೇಜಿಸುವುದು

(ⅵ) ಮಕ್ಕಳ ಅಭಿವೃದ್ಧಿ ಸೇವೆಗಳ ಅಂಕಿ ಅಂಶ ಮತ್ತು ಜ್ಞಾನಾಧಾರವನ್ನು ಸೃಷ್ಟಿಸುವುದು:

* ಐಸಿಡಿಎಸ್ ನಿರ್ವಹಣೆ ಮಾಹಿತಿ ವ್ಯವಸ್ಥೆ (ಎಂಐಎಸ್)ಯನ್ನು ಬಲಪಡಿಸುವುದು

* ಮಾಹಿತಿ, ಸಂವಹನ ತಂತ್ರಜ್ಞಾನ (ಐಸಿಟಿ)ವನ್ನು ಮಾಹಿತಿ ಮೂಲವಾಗಿ ಹಾಗೂ ಮಾಹಿತಿಯ ಹಂಚಿಕೆ ಮತ್ತು ಪ್ರಸರಣದಲ್ಲಿ ಬಳಸುವುದು

* ಸಂಶೋಧನೆ ಮತ್ತು ದಾಖಲೀಕರಣ ಕೈಗೆತ್ತಿಕೊಳ್ಳುವುದು

3.5 ಸಾಧನೆಯ ಸೂಚಕಗಳು

ಗುರಿಗಳು ಮತ್ತು ಉದ್ದೇಶಗಳನ್ನು ಸಾಧಿಸಿದ ಮುಖ್ಯ ಸೂಚಕಗಳೆಂದರೆ.,

* ಕಡಿಮೆ ತೂಕದ ಮಕ್ಕಳ ಸಂಖ್ಯೆಯಲ್ಲಿ ಕುಸಿತ

* ಐವೈಸಿಎಫ್‌ನ ಸುಧಾರಣೆ

* ಆರೋಗ್ಯ ಇಲಾಖೆಯೊಟ್ಟಿಗೆ ಸಂಯೋಜನೆಯಿಂದ ರಕ್ತಹೀನತೆ, ಐಎಂಆರ್ ಮತ್ತು ಎಂಎಂಆರ್ ಕಡಿಮೆಗೊಳಿಸಲು ನೆರವು

* ಕಡಿಮೆ ತೂಕದ ಮಕ್ಕಳ ಜನನದಲ್ಲಿ ಕುಸಿತ

* ಆರಂಭಿಕ ಕಲಿಕಾ ಫಲಿತಾಂಶಗಳ ಸುಧಾರಣೆ

ಫಲಿತಾಂಶಗಳಿಗೆ ಬಂದರೆ, ಹುಟ್ಟಿದ ಒಂದು ಗಂಟೆಯೊಳಗೆ ಎದೆ ಹಾಲು ಉಣಿಸುವಿಕೆ, ಆರು ತಿಂಗಳವರೆಗೆ ವಿಶೇಷವಾಗಿ ಹಾಲೂಡಿಸುವಿಕೆ, ಆರು ತಿಂಗಳ ಬಳಿಕ ಪೂರಕ ಆಹಾರ ನೀಡುವಿಕೆ, ಮಕ್ಕಳನ್ನು ತೂಕ ಹಾಕುವಿಕೆಯ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸುವ ಗುರಿ ಹೊಂದಿದೆ. ಅಷ್ಟಲ್ಲದೆ, ಐಸಿಡಿಎಸ್ ತಡೆ ಕ್ರಮಗಳು ಮತ್ತು ಸಲಹೆ ಪಡೆದುಕೊಳ್ಳುತ್ತಿರುವ ಗರ್ಭಿಣಿಯರು ಹಾಗೂ ಹಾಲುಣಿಸುತ್ತಿರುವ ಮಕ್ಕಳ ಶೇಕಡಾವಾರು ಹೆಚ್ಚಳ, ಎಂಸಿಪಿ ಮತ್ತು ಪ್ರಗತಿ ಕಾರ್ಡ್ ಬಳಕೆ, ವಯೋಮಾನಕ್ಕೆ ಅನುಗುಣವಾಗಿ ಅಭಿವೃದ್ಧಿ ಮೈಲುಗಲ್ಲುಗಳನ್ನು ದಾಟುವುದು ಹಾಗೂ ಆರಂಭಿಕ ಉತ್ತೇಜನ ವಿಧಾನಗಳನ್ನು ಸಾಧಿಸುವ ಗುರಿ ಹೊಂದಿದೆ.

ಐಸಿಡಿಎಸ್ ಸೇವೆಗಳ ವಿತರಣೆ ಮತ್ತು ಗುಣಮಟ್ಟದ ಜಾಡು ಹಿಡಿಯಲು ಉಪಕ್ರಮಗಳ ನಿಶ್ಚಯಾಂಕಗಳನ್ನು ಸೂತ್ರೀಕರಿಸಿದೆ. ಈ ನಿಶ್ಚಯಾಂಕಗಳು ಪೂರಕ ಪೋಷಕಾಂಶಗಳನ್ನು ಪಡೆಯುತ್ತಿರುವ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ನೋಂದಾಯಿತ ಮಕ್ಕಳ ಶೇಕಡಾವಾರು, ಪೂರಕ ಪೋಷಕಾಂಶಗಳನ್ನು ಪಡೆಯುತ್ತಿರುವ ನೋಂದಾಯಿತ ಗರ್ಭಿಣಿ ಮತ್ತು ಹಾಲುಣಿಸುತ್ತಿರುವ ತಾಯಂದಿರು, ಪ್ರತಿ ತಿಂಗಳು ತೂಕ ಮಾಡಲ್ಪಡುತ್ತಿರುವ 3 ವರ್ಷಕ್ಕಿಂತ ಕಡಿಮೆ ವಯೋಮಾನದ ನೋಂದಾಯಿತ ಮಕ್ಕಳು, ಪ್ರತಿ ತಿಂಗಳು ವಿಎಚ್‌ಎನ್‌ಡಿ ಆಯೋಜಿಸುತ್ತಿರುವ ಎಎನ್‌ಡಬ್ಲ್ಯುಗಳ ಶೇಕಡಾವಾರು, ನಿಯತವಾಗಿ ಆರೋಗ್ಯತಪಾಸಣೆ ಹಮ್ಮಿಕೊಳ್ಳುತ್ತಿರುವ ಎಡಬ್ಲ್ಯುಸಿಗಳ ಶೇಕಡಾವಾರು, ಪ್ರತಿದಿನ ಕನಿಷ್ಠ ಆರು ಗಂಟೆ ಕಾಲ ತೆರೆದಿರುವ ಎಡಬ್ಲ್ಯುಸಿಗಳ ಶೇಕಡಾವಾರು, ನಿಶ್ಚಿತ ದಿನದಂದು ಇಸಿಸಿಇ ದಿನಾಚರಣೆ ಹಮ್ಮಿಕೊಳ್ಳುತ್ತಿರುವ ಎಡಬ್ಲ್ಯುಸಿ ಗಳ ಶೇಕಡಾವಾರು ಇತ್ಯಾದಿ ನಿರ್ದಿಷ್ಟ ಪರಿಣಾಮ, ಫಲಶ್ರುತಿ ಮತ್ತು ಉಪಕ್ರಮದ ನಿಶ್ಚಯಾಂಕಗಳನ್ನು ಅನುಬಂಧ ೧IIರಲ್ಲಿ ನೀಡಲಾಗಿದೆ.

3.6 ಪ್ರಮುಖ ಕಾರ್ಯತಂತ್ರಗಳು

ಐಸಿಡಿಎಸ್ ಮಿಷನ್‌ನ ಪ್ರಮುಖ ಕಾರ್ಯತಂತ್ರಗಳನ್ನು ಕಾರ್ಯಕ್ರಮಾತ್ಮಕ, ನಿರ್ವಹಣೆ ಮತ್ತು ಸಾಂಸ್ಥಿಕ ಸುಧಾರಣೆಗಳಿಂದ ಪಡೆದುಕೊಂಡಿದ್ದು, ಇವನ್ನು ಐಸಿಡಿಎಸ್ ಪುನರ್ವಿನ್ಯಾಸ ಕುರಿತ ಅಧ್ಯಾಯದಲ್ಲಿ ಮೇಲೆ ಚರ್ಚಿಸಿದ್ದೇವೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ, ಐಸಿಡಿಎಸ್‌ನ ಪ್ರಮುಖ ಕಾರ್ಯತಂತ್ರಗಳು ಒಳಗೊಂಡಿರುವುದು.,

(i) ತಾಯಂದಿರು ಹಾಗೂ ಎಳೆಯ ಮಕ್ಕಳ ಸಾಧನೆಯನ್ನು ವೇಗೋತ್ಕರ್ಷಗೊಳಿಸುವ ಸ್ಪಷ್ಟ ಗುರಿಯುಳ್ಳ ಐಸಿಡಿಎಸ್‌ನ್ನು ಒಂದು ಕಾರ್ಯಕ್ರಮವಾಗಿ ಬಲಪಡಿಸುವುದು. ಇದರಲ್ಲಿ ಮಕ್ಕಳ ಆರಂಭಿಕ ಬೆಳವಣಿಗೆಯನ್ನು ಕೇಂದ್ರ ಸ್ಥಾನದಲ್ಲಿ ಮರುಸ್ಥಾಪನೆ ಮಾಡಲಾಗಿರುತ್ತದೆ. ಮಿಷನ್ ತಾಯಂದಿರು ಮತ್ತು ಮಕ್ಕಳಲ್ಲಿ ಪೋಷಕಾಂಶ ಕೊರತೆ ಹಾಗೂ ಸಂಬಂಧಿಸಿದ ಸಾವಿನ ಪ್ರಮಾಣವನ್ನು ವೇಗವಾಗಿ ಕಡಿಮೆಗೊಳಿಸಲು ಮತ್ತು ಎಳೆಯ ಮಕ್ಕಳನ್ನು ಪೋಷಿಸುವ ಮತ್ತು

ರಕ್ಷಿಸುವ ಪರಿಸರದಲ್ಲಿ ಅವರ ಆರಂಭಿಕ ಬೆಳವಣಿಗೆಯನ್ನು ಹಾಗೂ ಕಲಿಕಾ ಫಲಿತಾಂಶಗಳನ್ನು ವರ್ಧಿಸುತ್ತದೆ.

(ii) ಕಾರ್ಯಕ್ರಮಾತ್ಮಕ ನಿರ್ವಹಣೆ ಮತ್ತು ಸಾಂಸ್ಥಿಕ ಸುಧಾರಣೆಗೆ ಸ್ಪಷ್ಟವಾದ ಕಾಲಾವಧಿಯ ಚೌಕಟ್ಟನ್ನು ಹಾಕಿ ಅನುಷ್ಠಾನ ಚೌಕಟ್ಟನ್ನು ಅಭಿವೃದ್ಧಿಪಡಿಸುವುದು. ಮಕ್ಕಳ ಸಮಗ್ರ ಆರಂಭಿಕ ಬೆಳವಣಿಗೆಯ ಮೇಲು ಸ್ತುವಾರಿ ಮಾಡಬಲ್ಲ ಘೋಷಿತ ಫಲಿತಾಂಶವನ್ನು ಸಾಧಿಸಲು ಜೀವನ ಆವೃತ್ತ ಮಾರ್ಗವನ್ನು ಬಳಸಿಕೊಳ್ಳುವುದು

(iii) ಕೇಂದ್ರ, ರಾಜ್ಯ, ಪಿಆರ್‌ಐಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಸಮುದಾಯಗಳ ನಡುವೆ ಸಹಭಾಗಿತ್ವವನ್ನು ಬಲಪಡಿಸುವುದು; ಸ್ಥಳೀಯ ಉಪಕ್ರಮಗಳು ಮತ್ತು ಅನ್ವೇಷಣೆಯನ್ನು ಆಧರಿಸಿ ನಿರ್ಮಿಸಿದ ಮತ್ತು ಗುರುತಿಸುವ, ಎನ್‌ಎಚ್‌ಆರ್‌ಎಂ, ಎಸ್‌ಎಸ್‌ಎ, ಟಿಎಸ್‌ಸಿ, ನರೇಗಾ ಮತ್ತು ಇನ್ನಿತರ ಕಾರ್ಯಕ್ರಮಗಳೊಟ್ಟಿಗೆ ಒಮ್ಮುಖತೆಯನ್ನು ಪೋಷಿಸುವುದು

(iv) ನವೀನ ಮಾದರಿಗಳು/ಪ್ರಾಯೋಗಿಕ ಮಾದರಿಗಳನ್ನು ಆಧರಿಸಿದ ನಿರ್ದಿಷ್ಟವಾದ, ಸ್ಥಳೀಯವಾಗಿ ಸೂಕ್ತವಾದ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸಲು ರಾಜ್ಯಗಳು/ಜಿಲ್ಲೆಗಳು ಮತ್ತು ಸಮುದಾಯಗಳಿಗೆ ನೆರವಾಗು ವುದು. ವಿಕೇಂದ್ರೀಕೃತ, ಹೊಂದಿಕೊಳ್ಳಬಹುದಾದ, ಸ್ಥಳೀಯವಾಗಿ ಸೂಕ್ತವಾದ ಯೋಜನೆಗಳನ್ನು ಮೊದಲು ರಾಜ್ಯ ಮಟ್ಟದಲ್ಲಿ ಮತ್ತು ಆನಂತರ ಕ್ರಮೇಣ ಜಿಲ್ಲಾ ಹಂತದ ಕ್ರಿಯಾಯೋಜನೆಗಳಿಗೆ ವಿಸ್ತರಿಸುವುದು

(ⅴ) ಸಮುದಾಯದ ಮಾಲೀಕತ್ವದ ಮಾನ್ಯತಾ ಪ್ರಕ್ರಿಯೆಗಳು, ಅತ್ಯುತ್ತಮ ಆಚರಣೆಗಳು ಮತ್ತು ಅನುಷ್ಠಾನದ ಅನುಭವದಲ್ಲಿ ಕಲಿತ ಪಾಠಗಳ ಮೂಲಕ ಬಲಿಷ್ಠ ಪರಾಮರ್ಶನ ಮತ್ತು ಮೌಲ್ಯಮಾಪನ ಕಾರ್ಯಗಳು, ಉತ್ತರದಾಯಿತ್ವ ಮತ್ತು ಪಾರದರ್ಶತೆಯ ಬೆಂಬಲದಿಂದ ಐಸಿಡಿಎಸ್ ವ್ಯವಸ್ಥೆಯನ್ನು ಒಂದು ಕಲಿಕಾ ಸಂಘಟನೆಯಾಗಿ ಸ್ಥಿತ್ಯಂತರಗೊಳಿಸುವುದು

(ⅵ) ಎಡಬ್ಲ್ಯುಸಿಗಳ ನಿರ್ವಹಣೆ, ಯೋಜನೆ ಹಾಗೂ ಪರಾಮರ್ಶನದಲ್ಲಿ ಪಿಆರ್‌ಐಗಳು ಮತ್ತು ಸ್ಥಳೀಯ ನಗರ ಸಂಸ್ಥೆಗಳ, ಸಮುದಾಯ/ಮಹಿಳಾ ಗುಂಪುಗಳು/ಸ್ವಯಂಸೇವಾ ಸಂಘಟನೆಗಳು, ತಾಯಂದಿರ ಸಮಿತಿಗಳನ್ನು ಒಳಗೊಳ್ಳುವುದು. ಪೋಷಕರು, ಕುಟುಂಬಗಳು, ತಾಯಂದಿರ ಸಮಿತಿಗಳು, ಮಹಿಳಾ ಎಸ್‌ಎಚ್‌ಜಿಗಳು, ಮಹಿಳಾ ಸಮಖ್ಯ, ವಿಎಚ್‌ಎಸ್‌ಎನ್‌ಸಿಗಳು, ವಿಇಸಿ(ಗ್ರಾಮದ ಶಿಕ್ಷಣ ಸಮಿತಿಗಳು)ಗಳು ಹಾಗೂ ಇನ್ನಿತರ ಬೇರು ಮಟ್ಟದ ಸಂಸ್ಥೆಗಳ ಜೊತೆಗೆ ಬಲಪಡಿಸಿದ ಸಹಭಾಗಿತ್ವ ಇದರ ಪ್ರಮುಖ ಅಂಗವಾಗಿ ಇರಲಿವೆ.

(vii) ಕುಟುಂಬ ಪಾಲನೆ ವರ್ತನೆಗಳನ್ನು ಉತ್ತೇಜಿಸುವ ಮತ್ತು ಎಳೆಯ ಮಕ್ಕಳು, ಬಾಲಕಿಯರು ಮತ್ತು ಮಹಿಳೆಯರು, ವಿಶೇಷವಾಗಿ 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಸೂಕ್ಷ್ಮ ಮತ್ತು ದುರ್ಬಲ ಮಕ್ಕಳಿಗೆ ಸುರಕ್ಷಿತ ಸಾಮುದಾಯಿಕ ಪರಿಸರವನ್ನು ಸಮುದಾಯ ಮತ್ತು ಕುಟುಂಬದ ಸಬಲೀಕರಣದ ಮೂಲಕ ಬಲಪಡಿಸುವುದು.

(viii) ಬದಿಗೊತ್ತಲ್ಪಟ್ಟ ಮತ್ತು/ಅಥವಾ ದುರ್ಬಲ ಸಾಮುದಾಯಿಕ ಗುಂಪುಗಳಾದ ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತರು, ವಲಸಿಗರು, ವೈಕಲ್ಯವಿರುವ ಮಕ್ಕಳು, ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳ ತಾರತಮ್ಯವಿಲ್ಲದ ಮತ್ತು ನ್ಯಾಯಬದ್ಧ ಸೇರ್ಪಡೆಗೆ ಮುಖ್ಯವಾದ ಆರಂಭಿಕ ವರ್ಷಗಳಲ್ಲಿ ಸಮಾನತೆಯನ್ನು ಖಾತ್ರಿಗೊಳಿಸುವ, `ಹೆಚ್ಚು ಒಳಗೊಳ್ಳುವ ಬೆಳವಣಿಗೆ'ಗಾಗಿ ಸಾಮಾಜಿಕ ಪ್ರಗತಿಯ ಸಾಧನವಾಗಿ ಕಾರ್ಯನಿರ್ವಹಿಸುವುದು.

(ix) ಎಳೆಯ ಮಕ್ಕಳಿಗಾಗಿ ಸಂಪನ್ಮೂಲ ಕಾರ್ಯಜಾಲವನ್ನು ರಚಿಸುವುದು ಮತ್ತು ಸಾಮರ್ಥ್ಯ ಅಭಿವೃದ್ಧಿಯನ್ನು ಬಲಗೊಳಿಸುವುದು- ನಾನಾ ಕ್ಷೇತ್ರಗಳನ್ನು ಜೋಡಿಸುವುದು, ಉತ್ಕೃಷ್ಟ

ವೃತ್ತಿಪರರು ಮತ್ತು ಸಂಸ್ಥೆಗಳು, ಸ್ವಯಂಸೇವಾ ಸಂಘಟನೆಗಳು ಮತ್ತು ಕ್ರಿಯಾಗುಂಪುಗಳು, ಕಾರ್ಯಕ್ರಮ ಪ್ರವರ್ತಕರು, ಸಮುದಾಯ ಆಧಾರಿತ ಸಂಘಟನೆಗಳು ಮತ್ತು ಪೋಷಕಾಂಶ ಮತ್ತು ಮಕ್ಕಳ ಸಂಪನ್ಮೂಲ ವೇದಿಕೆಗಳು/ ಕೇಂದ್ರಗಳನ್ನು ಜೋಡಿಸುವುದು. ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರ ಮತ್ತು ಎನ್ಐಪಿಸಿಸಿಡಿ, ಅದರ ಪ್ರಾದೇಶಿಕ ಕೇಂದ್ರಗಳು ಮತ್ತು ಆಹಾರ ಮತ್ತು ಪೋಷಕಾಂಶ ಮಂಡಳಿ (ಎಫ್ಎನ್‌ಬಿ)ಯನ್ನು ಸಮಾನವಾಗಿ ಬಲಪಡಿಸುವುದು.

(x) ಅಂಗನವಾಡಿ ಕೇಂದ್ರ (ಎಡಬ್ಲ್ಯುಸಿ)ಗಳ ಮೂಲಕ ಸೇವಾ ವಿತರಣೆ ಮತ್ತು ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು. ಎಲ್ಲ ಎಡಬ್ಲ್ಯುಸಿಗಳನ್ನು ಸಮುದಾಯದ ಮಾಲೀಕತ್ವ ಮತ್ತು ಮಕ್ಕಳಸ್ನೇಹಿ ವಾತಾವರಣದೊಂದಿಗೆ ಗ್ರಾಮದ ಮೊದಲ ನಿಲ್ದಾಣವಾಗಿ ಪರಿವರ್ತಿಸುವುದು.

(xi) ಸುಧಾರಿಸಿದ ಅಗತ್ಯ ಸೇವೆಗಳ ವಿತರಣೆಯನ್ನು ಸಾಂಸ್ಥೀಕರಿಸುವುದು ಮತ್ತು ಬಲಗೊಳಿಸುವುದು ಮತ್ತು ಸೇವೆಗಳ ವಿತರಣೆಯಲ್ಲಿ ಅನ್ವೇಷಣೆಗಳನ್ನು ಮೇಲ್ದರ್ಜೆಗೇರಿಸುವುದು. ಪ್ರತಿ ಎಳೆಯ ಮಗುವನ್ನು ತಲುಪುವ ಬದ್ಧತೆಯನ್ನು ಈಡೇರಿಸಲು ಅಂಗನವಾಡಿ ಕೇಂದ್ರಗಳಿಂದಾಚೆಗೆ ಐಸಿಡಿಎಸ್‌ನ್ನು ವಿಸ್ತರಿಸುವುದು.

(xii) ಐಸಿಡಿಎನ್ ಮಿಷನ್‌ನ ಉದ್ದೇಶ, ಗುರಿಗಳು ಹಾಗೂ ಮುನ್ನೋಟವನ್ನು ಸಾಧಿಸಲು ಸಮಪ್ರಮಾಣದ ಕಾರ್ಯತಂತ್ರಗಳನ್ನು ಆರಂಭಿಸುವುದು.

## 3.7. ಸೇವಾ ಮಾನದಂಡಗಳು

ಐಸಿಡಿಎಸ್ ಮಿಷನ್ ಅಡಿಯಲ್ಲಿ ಸೇವಾ ಮಾನದಂಡಗಳ ಉದ್ದೇಶವೇನೆಂದರೆ, ಎಲ್ಲ ಹಂತದಲ್ಲೂ ಮಕ್ಕಳ ಸಂಪೂರ್ಣ ಅಭಿವೃದ್ಧಿ ಸೇವೆಗಳಲ್ಲಿ ಉತ್ತಮ ಗುಣಮಟ್ಟವನ್ನು ನಿರಂತರವಾಗಿ ಉತ್ತೇಜಿಸುವುದು ಹಾಗೂ ಖಾತ್ರಿಗೊಳಿಸುವುದು. ಅದೇ ಹೊತ್ತಿನಲ್ಲಿ ಗುರಿನಿರ್ದೇಶಿತ ಜನಸಂಖ್ಯೆಯ ಸಾಮರ್ಥ್ಯ ಹಾಗೂ ನಾನಾ ಅಗತ್ಯಗಳನ್ನು ಈಡೇರಿಸುವ ಸೇವೆಗಳನ್ನು ನೀಡುವಂತೆ ಹೊಂದಿಸಿಕೊಳ್ಳುವಿಕೆಯನ್ನು ಕಾಯ್ದುಕೊಳ್ಳುವುದು. ಸಬಲಗೊಂಡ ಮತ್ತು ಪುನರ್ವಿನ್ಯಾಸಗೊಂಡ ಐಸಿಡಿಎಸ್ ಮುಖ್ಯ ಸೇವಾ ಪ್ಯಾಕೇಜ್‌ನ್ನು ಬಹುತೇಕವಾಗಿ ಆಧರಿಸಿರುವ ಸೇವಾ ಮಾನದಂಡಗಳು (ಅನುಬಂಧ III) ಎಲ್ಲ ಹಂತಗಳಲ್ಲೂ ಸೇವಾ ವಿತರಣೆಗೆ ಕಡ್ಡಾಯ ಚೌಕಟ್ಟನ್ನು ಒದಗಿಸುತ್ತವೆ.

++++++++++++++++++++++++++++++++++++++

## 4. ಅನುಷ್ಠಾನಕ್ಕೆ ಕಾರ್ಯತಂತ್ರ

ಪುನರ್ವಿನ್ಯಾಸಗೊಂಡ ಐಸಿಡಿಎಸ್‌ನ್ನು ಯಾವ ಸ್ಫೂರ್ತಿ ಮತ್ತು ಮುನ್ನೋಟದಿಂದ ಪರಿಕಲ್ಪಿಸಲಾಗಿತ್ತೋ, ಅದನ್ನು ಖಾತ್ರಿಗೊಳಿಸಲು ಎನ್ಆರ್ಎಚ್ಎಂ ಮತ್ತು ಎಸ್ಎಸ್ಎಯಂತೆ ಮಿಷನ್ ಮಾದರಿಯಲ್ಲಿ ಮುನ್ನಡೆಸುವ ಅಗತ್ಯವಿದೆ ಮತ್ತು ಆ ಎರಡರ ಅನುಷ್ಠಾನದಲ್ಲಿನ ಅನುಭವಗಳಿಂದ ಕಲಿಯಬೇಕಿದೆ. ಪುನರ್ವಿನ್ಯಾಸಗೊಂಡ ಮತ್ತು ಬಲತುಂಬಿಕೊಂಡ ಐಸಿಡಿಎಸ್‌ನ್ನು 12ನೇ ಪಂಚವಾರ್ಷಿಕ ಯೋಜನೆಯ ಮೊದಲ ವರ್ಷ(2012-13)ದಲ್ಲಿ 200 ತೀವ್ರ ಹೊರೆ ಇರುವ ಜಿಲ್ಲೆಗಳಲ್ಲಿ (ತೀವ್ರ ಹೊರೆ ಇರುವ ಜಿಲ್ಲೆಗಳ ಪಟ್ಟಿ ಅನುಬಂಧ IIIಂ ಯಲ್ಲಿದೆ), 2ನೇ ವರ್ಷದಲ್ಲಿ ಹೆಚ್ಚುವರಿ 200 ಜಿಲ್ಲೆಗಳು ಅಂದರೆ, ಏಪ್ರಿಲ್ 1, 2013ರಿಂದ, ವಿಶೇಷ ವಿಭಾಗದ ಜಿಲ್ಲೆಗಳು (ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ) ಮತ್ತು ಎನ್ಇಆರ್ ಹಾಗೂ ಮೂರನೇ ವರ್ಷ(2014-15)ದಲ್ಲಿ ಏಪ್ರಿಲ್ 2014 ರಿಂದ ಉಳಿದ 243 ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುತ್ತದೆ.

4.1. ಕೇಂದ್ರದ ಹಂತದಲ್ಲಿನ ಕ್ರಮಗಳು: ಕೇಂದ್ರ ಸರ್ಕಾರದ ಮಧ್ಯಸ್ಥಿಕೆಯು ಕಾರ್ಯನೀತಿ/ಮಾನದಂಡಗಳನ್ನು ರೂಪಿಸಿ, ಮುಖ್ಯ ಕ್ಷೇತ್ರಗಳೊಟ್ಟಿಗೆ ಒಮ್ಮುಖತೆ ಸಾಧಿಸುವುದು, ಎಲ್ಲ ಹಂತಗಳಲ್ಲಿ ವಿಕೇಂದ್ರೀಕೃತ ಯೋಜನೆ ಮತ್ತು ಸಾಮರ್ಥ್ಯ ಅಭಿವೃದ್ಧಿಗೆ ಬೆಂಬಲ, ಮೌಲ್ಯಮಾಪನ ಮತ್ತು ಪರಾಮರ್ಶನ, ಸುಧಾರಣೆಯನ್ನು ಮುಂದೊತ್ತಲು ಅಧಿಕ ಮಾನವ ಮತ್ತು ಹಣಕಾಸು ಸಂಪನ್ಮೂಲಗಳನ್ನು ಒದಗಿಸುವುದು ಮತ್ತು ಉತ್ತರದಾಯಿತ್ವ ಹಾಗೂ ರಾಜ್ಯಗಳೊಳಗೆ/ಜಿಲ್ಲೆಗಳೊಳಗೆ ಉತ್ತಮ ಆಚರಣೆಗಳನ್ನು ಹಂಚಿಕೊಳ್ಳುವುದು. ನಿರ್ದಿಷ್ಟವಾಗಿ ಹೇಳಬೇಕೆಂದರೆ, ಕೇಂದ್ರ ಸರ್ಕಾರವು ಕೆಳಕಂಡ ಕ್ಷೇತ್ರಗಳಲ್ಲಿ ಮುಂದಾಳತ್ವದ ಪಾತ್ರವನ್ನು ಮುಂದುವರಿಸುತ್ತದೆ;

* ರಾಜ್ಯಗಳು, ಸಂಬಂಧಿಸಿದ ಕ್ಷೇತ್ರಗಳು, ಸಂಸ್ಥೆಗಳು ಮತ್ತು ಭಾಗಿದಾರರಿಗೆ ಮಕ್ಕಳ ಅಭಿವೃದ್ಧಿಗೆ (ಮತ್ತು ಸಂಬಂಧಿಸಿದ ಕಾರ್ಯಕ್ರಮಗಳೊಟ್ಟಿಗೆ) ಕಾರ್ಯನೀತಿ ಮತ್ತು ಕಾರ್ಯಕ್ರಮಾತ್ಮಕ ಮಾರ್ಗದರ್ಶನ ನೀಡುವುದು

* ವಿಕೇಂದ್ರೀಕರಣ ಮತ್ತು ಸಾಮರ್ಥ್ಯ ನಿರ್ಮಾಣದ ಮೂಲಕ ಹೊಂದಿಕೊಳ್ಳಬಹುದಾದ ಚೌಕಟ್ಟು ಮತ್ತು ಸಾಂದರ್ಭಿಕವಾಗಿ ಸೂಕ್ತವಾದ, ಪರಿಣಾಮಕಾರಿ ಮಕ್ಕಳ ಬೆಳವಣಿಗೆ ಮಧ್ಯಸ್ಥಿಕೆಗಳನ್ನು ಅಭಿವೃದ್ಧಿಪಡಿಸುವುದು

* ಸರ್ಕಾರೇತರ ಭಾಗಿದಾರರು ಅಂದರೆ, ವೃತ್ತಿಪರ ಸಂಸ್ಥೆಗಳು, ರಾಷ್ಟ್ರೀಯ ಮಂಡಳಿಗಳು, ಇನ್ನಿತರ ಸಂಬಂಧಪಟ್ಟ ಉನ್ನತ ಸಂಸ್ಥೆಗಳು ಸೇರಿದಂತೆ ಸಾಂಸ್ಥಿಕ ಸಾಮರ್ಥ್ಯ ಅಭಿವೃದ್ಧಿ. ಮಕ್ಕಳ ಪಾಲನೆಗೆ ಅಗತ್ಯವಿರುವಷ್ಟು ಮತ್ತು ಸುಸ್ಥಿರವಾದ ಮಾನವ ಹಾಗೂ ಹಣಕಾಸು ಸಂಪನ್ಮೂಲ ಹೂಡಿಕೆಯನ್ನು ಖಾತ್ರಿಪಡಿಸುವುದು

* ಪರಿಣಾಮಕಾರಿ ಪರಾಮರ್ಶನ, ಕಾರ್ಯಕ್ರಮದ ಅನುಷ್ಠಾನ ಅನುಭವದ ವಿಶ್ಲೇಷಣೆ, ಹಿಮ್ಮಾಹಿತಿ ಮತ್ತು ಮಧ್ಯಂತರದಲ್ಲಿ ಸರಿಪಡಿಸಿಕೊಳ್ಳುವಿಕೆ, ಕ್ಷೇತ್ರಾಧರಿತ ಸಮಗ್ರ ಪುನರ್ವಿಮರ್ಶೆಗಳನ್ನು ನಡೆಸುವುದು ಮತ್ತು ಅಗತ್ಯವಿರುವ ಸ್ವತಂತ್ರ ಮೌಲ್ಯಮಾಪನ/ಅಧ್ಯಯನಗಳನ್ನು ನಿಯೋಜಿಸುವುದು

* ಸಂಬಂಧಿಸಿದ ಕ್ಷೇತ್ರಗಳು/ಮಂತ್ರಾಲಯಗಳ ಒಮ್ಮುಖತೆ ಮೂಲಕ ಸಬಲಗೊಂಡ ಮತ್ತು ನೆರವಾಗುವ ಕಾರ್ಯನೀತಿ ಪರಿಸರ ಸೃಷ್ಟಿಸುವುದು ಹಾಗೂ ಸಂಪನ್ಮೂಲ ವರ್ಧನೆಗೆ ಅನುವು ಮಾಡಿಕೊಡುವುದು

* ಸಾರ್ವಜನಿಕ ಮಾಹಿತಿ, ಸಾಮಾಜಿಕ ಲೆಕ್ಕ ಪರಿಶೋಧನೆ, ಕುಂದುಕೊರತೆ ನಿವಾರಣೆ ಹಾಗೂ ಇನ್ನಿತರ ಸಾಮಾಜಿಕ ಉತ್ತರದಾಯಿತ್ವ ಕಾರ್ಯತಂತ್ರಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಖಾತ್ರಿಪಡಿಸುವುದು

4.2 ರಾಜ್ಯಗಳಿಗೆ ನಾಯಕತ್ವ ಮತ್ತು ಅನುಷ್ಠಾನದಲ್ಲಿ ಹೆಚ್ಚು ಬದ್ಧತೆ

ಐಸಿಡಿಎಸ್ ಮಿಷನ್ ರಾಜ್ಯಗಳಿಗೆ ಅಗತ್ಯವಿರುವ ಸುಧಾರಣೆಗಳನ್ನು ಕೈಗೊಳ್ಳಲು ಬಲ ತುಂಬುವ ಪ್ರಯತ್ನ. ರಾಜ್ಯಗಳ ನಾಯಕತ್ವ ಮತ್ತು ಅನುಷ್ಠಾನದಲ್ಲಿನ ಪಾತ್ರವನ್ನು ಗುರುತಿಸುತ್ತಲೇ, ಅವು ಏನು ಮಾಡಬೇಕೆಂದು ನಿರೀಕ್ಷಿಸಲಾಗುತ್ತದೆ ಎಂದರೆ.,

*	ಕ್ರಮಬದ್ದ ಚೌಕಟ್ಟಿನಲ್ಲೇ ಹೊಂದಿಸಿಕೊಳ್ಳುವಿಕೆಯನ್ನು ಬಳಸಿಕೊಂಡು, ಸ್ಥಳೀಯ ಅಗತ್ಯಗಳು ಹಾಗೂ ಸಾಮಾಜಿಕೋಸಾಂಸ್ಕøತಿಕ ವೈವಿಧ್ಯಗಳಿಗೆ ಲಕ್ಷ್ಯ ಕೊಡಬೇಕು

*	ಪರಸ್ಪರ ಒಪ್ಪಿಕೊಂಡ ಫಲಿತಾಂಶಗಳು, ಉದ್ದೇಶಗಳು, ಮೈಲುಗಲ್ಲುಗಳು ಮತ್ತು ಮಧ್ಯಸ್ಥಿಕೆಗಳನ್ನು ಚಾಲ್ತಿಯಲ್ಲಿರುವ ರಾಷ್ಟ್ರೀಯ ಕಾರ್ಯನೀತಿ ಚೌಕಟ್ಟಿನಲ್ಲಿ ಮುನ್ನಡೆಸಬೇಕು; ಅದು ಎಂಒಯು ಮತ್ತು ಎಪಿಐಪಿಯಲ್ಲಿ ಪ್ರತಿಫಲನಗೊಳ್ಳಲಿದೆ

*	ಅನ್ವೇಷಕ ಮಾರ್ಗಗಳ ಮೂಲಕ ಎಳೆಯ ಮಕ್ಕಳ ವೈವಿಧ್ಯಮಯ ಬೆಳವಣಿಗೆ ಅಗತ್ಯಗಳನ್ನು ಪೂರೈಸಲು ಹೆಚ್ಚುವರಿ ಸಂಪನ್ಮೂಲಗಳ ನೀಡುವಿಕೆಯನ್ನು ಮುಂದುವರಿಸುವುದು

*	ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗೆ ಪ್ರತ್ಯೇಕ ಇಲಾಖೆಯನ್ನು ರಚಿಸಲು ಕ್ರಮ ತೆಗೆದುಕೊಳ್ಳುವುದು (ಈಗಾಗಲೇ ಇಲ್ಲದೇಇದ್ದಲ್ಲಿ) ಹಾಗೂ ಐಸಿಡಿಎಸ್‍ಗೆ ಮೀಸಲಾದ ಶ್ರೇಣಿಯನ್ನು ಸೃಷ್ಟಿಸಲು ಹಾಗೂ ಸೂಕ್ತ ಮಾನವ ಸಂಪನ್ಮೂಲಗಳನ್ನು ಒದಗಿಸಿ ರಾಜ್ಯದ ವಾಗ್ದಾನಗಳನ್ನು ಪೂರೈಸುವುದು. ಸಂಪನ್ಮೂಲವನ್ನು ಹೆಚ್ಚಿಸುವುದು ಮತ್ತು ಮಿಷನ್‍ನ ಕಾಲಾವಧಿಯಲ್ಲಿ ಮಕ್ಕಳ ಅಭಿವೃದ್ಧಿ ಕ್ಷೇತ್ರಕ್ಕೆ ಪ್ರತಿವರ್ಷ ನಿಗದಿಗೊಳಿಸಿದ ಶೇಕಡಾವಾರು ವೆಚ್ಚವನ್ನು ಹೆಚ್ಚಿಸುವುದು

*	ಹುದ್ದೆಗಳು 60 ದಿನಕ್ಕಿಂತ ದೀರ್ಘಕಾಲ ಖಾಲಿ ಉಳಿದಿದ್ದರೆ, ಮಧ್ಯಂತರ ಗುತ್ತಿಗೆ ಮೂಲಕ/ಹೊರಗಿನ ಏಜೆನ್ಸಿಗಳಿಂದ ಪೂರೈಸುವುದು ಹಾಗೂ ರಾಜ್ಯದ ಪಿಐಪಿಗಳನ್ನು ಅಂತಿಮಗೊಳಿಸಿದಾಗ, ಈ ಬಗ್ಗೆ ಸೂಚನೆ ನೀಡುವುದು

*	ವಿಕೇಂದ್ರೀಕೃತ ಯೋಜನೆ ರೂಪಿಸುವಿಕೆ ಮತ್ತು ಅನುಷ್ಠಾನ ವ್ಯವಸ್ಥೆಗಳ ಮೂಲಕ ಅಗತ್ಯವನ್ನು ಆಧರಿಸಿದ ಹಾಗೂ ಸಮುದಾಯದ ಮಾಲೀಕತ್ವವನ್ನು ಖಾತ್ರಿಗೊಳಿಸಿದ ಜಿಲ್ಲಾ ಮಕ್ಕಳ ಅಭಿವೃದ್ಧಿ ಕ್ರಿಯಾಯೋಜನೆಗಳು ಮಕ್ಕಳ ಅಭಿವೃದ್ಧಿ ಕ್ಷೇತ್ರದ ಮಧ್ಯಸ್ಥಿಕೆಯ ಆಧಾರವಾಗಿರಲಿವೆ; ಸಂಬಂಧಿಸಿದ ಕ್ಷೇತ್ರಗಳ ಮಧ್ಯಸ್ಥಿಕೆಯನ್ನು ಒಮ್ಮುಖಗೊಳಿಸಲಿವೆ.

*	ಮಿಷನ್ ಮತ್ತು ಇನ್ನಿತರ ಸಂಬಂಧಿತ ಸಂರಚನೆಗಳು/ಸಾಂಸ್ಥಿಕ ಕಾರ್ಯತಂತ್ರಗಳ ರಚನೆ ಮತ್ತು ನಿಗದಿಪಡಿಸಿದಂತೆ ತರಬೇತಿ ಸಾಮರ್ಥ್ಯದ ವರ್ಧನೆ

*	ಮಕ್ಕಳ ಪಾಲನೆ, ಸೇವೆಗಳಲ್ಲಿ ರಾಜ್ಯಗಳ ಪರಿಸ್ಥಿತಿ, ವ್ಯಾಪ್ತಿಯ ಸುಧಾರಣೆ, ವ್ಯಾಪಿಸುವಿಕೆ, ಗುಣಮಟ್ಟ, ಮೇಲ್ವಿಚಾರಣೆ, ಪರಾಮರ್ಶನ ಮತ್ತು ಪರಿಣಮಕಾರಿತ್ವವನ್ನು ಆಧರಿಸಿ, ಪಿಆರ್‍ಐ ಮತ್ತು ಯುಎಲ್‍ಬಿಗಳಿಗೆ ಕಾಲಕ್ರಮೇಣ ಅಗತ್ಯವಿರುವಷ್ಟು ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರವನ್ನು ನೀಡುವುದು

4.3 ರಾಜ್ಯ/ಜಿಲ್ಲೆ/ವಿಭಾಗ ಮತ್ತು ಗ್ರಾಮಗಳ ಮಟ್ಟದಲ್ಲಿ ಐಸಿಡಿಎಸ್ ಮಿಷನ್‍ನ ಚಟುವಟಿಕೆಗಳ ನಿರ್ವಹಣೆ:

ಐಸಿಡಿಎಸ್ ಮಿಷನ್‍ನ ಕಾರ್ಯಗಳ ವಿಕೇಂದ್ರೀಕರಣದ ಯಶಸ್ಸು ಎಲ್ಲ ಹಂತಗಳಲ್ಲಿ ನಿರ್ವಹಣೆ ಸಾಮರ್ಥ್ಯದ ಮೇಲೆ ಅವಲಂಬಿತಲಾಗಿದೆ. ರಾಜ್ಯ/ಜಿಲ್ಲೆ/ವಿಭಾಗ ಮತ್ತು ಗ್ರಾಮ ಮಟ್ಟದಲ್ಲಿ ಐಸಿಡಿಎಸ್ ಮಿಷನ್‍ಗಳು.,

*	ತಾಂತ್ರಿಕ ಸಾಮರ್ಥ್ಯವಿರುವ ಹೆಚ್ಚುವರಿ ಮಾನವ ಸಂಪನ್ಮೂಲ(ಗುತ್ತಿಗೆ ಆಧಾರದಲ್ಲಿ)ವನ್ನು ನೇಮಿಸಿಕೊಂಡು, ಮಾನವ ಸಂಪನ್ಮೂಲ ಮತ್ತು ಸಾಮರ್ಥ್ಯದ ವರ್ಧನೆ ಮಾಡಬೇಕು; ಮಕ್ಕಳ ಆರಂಭಿಕ ಬೆಳವಣಿಗೆ, ಪೋಷಕಾಂಶ ಮತ್ತು ನಿರ್ವಹಣೆಗೆ ವಿಕೇಂದ್ರೀಕೃತ, ಸಹಭಾಗಿತ್ವದ ಜಿಲ್ಲಾ

ಯೋಜನೆ, ಸಾಮುದಾಯಿಕ ಪ್ರಕ್ರಿಯೆಗಳ ಸುಧಾರಣೆ, ಸಂವಹನ ಮತ್ತು ತರಬೇತಿ, ಸಂಗ್ರಹ ಮತ್ತು ರವಾನೆ, ಹಣಕಾಸು ನಿರ್ವಹಣೆ, ಮಾಹಿತಿ ತಂತ್ರಜ್ಞಾನದ ಬಳಕೆ, ನಿರ್ವಹಣೆ ಮಾಹಿತಿ ವ್ಯವಸ್ಥೆಯ ಸುಧಾರಣೆ ಮತ್ತು ಮೌಲ್ಯಮಾಪನದ ಕೌಶಲಗಳ ವರ್ಧನೆ

* ವಿಭಾಗ/ಯೋಜನೆ ಹಂತದಲ್ಲಿ ಬಲಿಷ್ಠ ನಿರ್ವಹಣೆ ಸಾಮರ್ಥ್ಯದ ಸ್ಥಾಪಿಸುವಿಕೆಯು ಗ್ರಾಮಗಳು ಮತ್ತು ಜಿಲ್ಲೆಗಳ ನಡುವೆ ಅತ್ಯಗತ್ಯವಾದ ಕೊಂಡಿ ಆಗಲಿದೆ

* ರಾಜ್ಯ, ಜಿಲ್ಲೆ, ವಿಭಾಗ/ಯೋಜನಾ ಹಂತದ ಅಧಿಕಾರಿಗಳು (1) ಯೋಜನೆ ರೂಪಿಸುವುದು (2) ಸಮುದಾಯದಲ್ಲಿ ಜಾಗೃತಿ ಮತ್ತು ಸಂಘಟನೆ (3) ಗ್ರಾಮಗಳ ಹಂತದಲ್ಲಿ ಸಾಮರ್ಥ್ಯ ನಿರ್ಮಾಣ (4) ಅಂತರ್ ಕ್ಷೇತ್ರೀಯ, ಮುಖ್ಯವಾಗಿ, ಎನ್‌ಆರ್‌ಎಚ್‌ಎಂ, ಎಸ್‌ಎಸ್‌ಎ, ಟಿಎಸ್‌ಸಿ ಒಟ್ಟಿಗೆ ಒಮ್ಮುಖತೆಗೆ ಅನುವು ಮಾಡಿಕೊಡುವುದು ಮತ್ತು (5) ಮೇಲ್ವಿಚಾರಣೆ ಮತ್ತು ಹಿಮ್ಮಾಹಿತಿಗೆ ಜವಾಬ್ದಾರರಾಗಿರುತ್ತಾರೆ

* ಜಿಲ್ಲಾ ಹಂತದಲ್ಲಿ ನಿರ್ವಹಣೆ ಸಾಮರ್ಥ್ಯವನ್ನು ಬೆಳೆಸಲು ಪ್ರಗತಿಪರ ಡಿಪಿಒಗಳು ಮತ್ತು ಅವರ ತಾಂತ್ರಿಕ ಬೆಂಬಲ ಘಟಕಗಳು ವೃತ್ತಿಪರವಾಗಿ ಸನ್ನದ್ಧವಾಗಲು ನೆರವಾಗಬೇಕು.

* ಎಲ್ಲ ಹಂತದ ನಿರ್ವಹಣೆ ಸಂರಚನೆಗಳನ್ನು ವಿವಿಧ ಸಮಿತಿಗಳು/ಮಿಷನ್ ಸಂರಚನೆಗಳಿಗೆ, ಉದಾ; ರಾಷ್ಟ್ರೀಯ ಹಂತದ ಮಿಷನ್/ಸಂಚಾಲನ ಗುಂಪು, ರಾಜ್ಯ ಮಟ್ಟದ ಮಿಷನ್ ಹಾಗೂ ಜಿಲ್ಲೆ/ವಿಭಾಗ/ಗ್ರಾಮ ಮಟ್ಟದ ಕಾರ್ಯತಂತ್ರಗಳನ್ನು ಉತ್ತರದಾಯಿಯಾಗಿ ಮಾಡಬೇಕು

* ಈಶಾನ್ಯ ರಾಜ್ಯಗಳ ಜಿಲ್ಲೆ ಮತ್ತು ಪ್ರಾಂತೀಯ ಮಂಡಳಿಗಳನ್ನು ಆದಿವಾಸಿ ಮಂಡಳಿ (ಆರನೇ ಶೆಡ್ಯೂಲ್ ಅನ್ವಯ)ಗಳ ಸಲಹೆಯೊಂದಿಗೆ ಐಸಿಡಿಎಸ್ ಮಿಷನ್ ಮಂಡಳಿಗಳು ಮತ್ತು ಜಿಲ್ಲೆ/ವಿಭಾಗ ಮತ್ತು ಗ್ರಾಮ ಮಟ್ಟದ ಪ್ರಾತಿನಿಧ್ಯ ಮತ್ತು ಸಂರಚನೆಯನ್ನು ಸಬಲಗೊಳಿಸಬೇಕು

* ಕೆಲಸದ ಪರಿಸರವನ್ನು ಉತ್ತಮಗೊಳಿಸಲು ನಿರ್ವಹಣೆಗೆಂದು ನೀಡಲಾದ ಮೊತ್ತದ ಬಳಸುವಿಕೆಯನ್ನು ಉತ್ತೇಜಿಸಬೇಕು. ಇಂಥ ಸುಧಾರಣೆಗಳು ಉತ್ತಮ ಫಲಿತಾಂಶಕ್ಕೆ ನೇರವಾಗಿ ದಾರಿ ಮಾಡಿಕೊಡುತ್ತವೆ

* ಐಸಿಡಿಎಸ್ ಮಿಷನ್‌ನ 68 ಸೇವೆಗಳನ್ನು ಪರಿಣಾಮಕಾರಿಯಾಗಿ ವಿತರಿಸಲು ಸೂಕ್ತವಾದ ಸಾಂಸ್ಥಿಕ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕು

* ಮಾರ್ಗದರ್ಶನ ಸೂತ್ರಗಳು ಹಾಗೂ ಹಣಕಾಸು ನಿಯಮಗಳ ಅನುಷ್ಠಾನದ ಮೂಲಕ ಎಲ್ಲ ಹಂತದಲ್ಲಿ ಕೆಲಸ, ಹಣಕಾಸಿನ ಹರಿವು, ಅಧಿಕಾರ, ಲೆಕ್ಕ ಪರಿಶೋಧನೆ, ಲೆಕ್ಕಪತ್ರ ಇರಿಸುವುದು ಇತ್ಯಾದಿಯಲ್ಲಿ ಸ್ಪಷ್ಟತೆ ನೀಡಬೇಕು

* ನಿರ್ವಹಣೆ ಸಂರಚನೆ ಹಾಗೂ ಅಧಿಕಾರ ಮತ್ತು ಕೆಲಸ ಕಾರ್ಯದ ಸಂಯೋಜನೆಯಲ್ಲಿ ಮಧ್ಯಂತರ ಸರಿಪಡಿಸುವಿಕೆ ಅಗತ್ಯವಿದೆಯೇ ಎಂಬುದನ್ನು ಕಂಡುಕೊಳ್ಳಲು ಪುನರ್ವಿಮರ್ಶೆ ಮಾಡುವುದು

* ಅಗತ್ಯಕ್ಕೆ ಅನುಗುಣವಾಗಿ ರಾಜ್ಯ, ಜಿಲ್ಲೆ, ವಿಭಾಗ/ಯೋಜನಾ ಹಂತದಲ್ಲಿ ನಿರ್ವಹಣೆ ಸಾಮರ್ಥ್ಯವನ್ನು ಬಲಪಡಿಸುವ ಪ್ರಯತ್ನ

* ಎಡಬ್ಲ್ಯುಸಿಗಳಲ್ಲಿ ಸಿಡಿಪಿಒ ಮತ್ತು ಮೇಲ್ವಿಚಾರಕರ ನಡುವಿನ ಅನುಪಾತದ ಮೌಲ್ಯಮಾಪನವನ್ನು ಆದ್ಯತೆ ಮೇಲೆ ಖಾತ್ರಿಗೊಳಿಸಬೇಕು. ಮೇಲ್ವಿಚಾರಕರ ಮರುವ್ಯಾಖ್ಯಾನಿಸಿದ ಪಾತ್ರದನ್ವಯ ಎಡಬ್ಲ್ಯುಡಬ್ಲ್ಯು ಮತ್ತು ಆಶಾಗಳಿಗೆ ಬೆಂಬಲ ನೀಡುವಿಕೆಯನ್ನು

ಗಮನದಲ್ಲಿರಿಸಿಕೊಂಡು, ಹೆಚ್ಚುವರಿ ಎಡಬ್ಲ್ಯುಡಬ್ಲ್ಯು ಮತ್ತು ಮಕ್ಕಳ ಪಾಲನೆ ಹಾಗೂ ಪೋಷಣೆ ಸಲಹೆಗಾರ ಹಾಗೂ ಜೋಡಣೆ ಕೆಲಸಗಾರರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬೇಕು

* ವಿಭಾಗ ಹಂತದಲ್ಲಿ ಸಿಬ್ಬಂದಿಗಳ ಚಲನಶೀಲತೆಯನ್ನು ಹಾಗೂ ಸಂವಹನವನ್ನು ವೃತ್ತೀಯ ಅನುಭವ ಬಳಸಿಕೊಂಡು ಸುಧಾರಿಸಲು ಬೆಂಬಲ ನೀಡುವುದು (ಮೊಬೈಲ್ ವೆಚ್ಚವನ್ನು ಭರಿಸುವ ಮೂಲಕ)

* ಯೋಜನೆಯಡಿ ಲಭ್ಯವಿರುವ ಎನ್ಐಸಿ ಸಂಪರ್ಕವನ್ನು ಪಂಚಾಯಿತಿ ಸೇರಿದಂತೆ ಜಿಲ್ಲೆ/ವಿಭಾಗ/ ಗ್ರಾಮಗಳ ಹಂತದಲ್ಲಿ ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುವುದು

4.4 ಇತರ ಮಂತ್ರಾಲಯ/ಇಲಾಖೆಗಳೊಟ್ಟಿಗೆ ಒಮ್ಮುಖತೆ

ಆರಂಭಿಕ ಬಾಲ್ಯಾವಸ್ಥೆಯ ಪ್ರಗತಿಯ ಸೂಚಕಗಳು ಮಾನಸಿಕೋಸಾಮಾಜಿಕ ಪಾಲನೆ, ಆರಂಭಿಕ ಕಲಿಕಾ ಪರಿಸರ ಮತ್ತು ಪಾಲಕರೊಡನೆ ಮುಖಾಮುಖಿಯ ಗುಣಮಟ್ಟ, ಪೋಷಣೆ ಮಾತ್ರವಲ್ಲದೆ ಆರೋಗ್ಯ, ಕುಡಿಯುವ ನೀರು, ನೈರ್ಮಲ್ಯ, ಮಹಿಳಾ ಸಾಕ್ಷರತೆ, ಸಬಲೀಕರಣ ಇತ್ಯಾದಿಯನ್ನು ಆಧರಿಸಿರುತ್ತವೆ. ಐಸಿಡಿಎಸ್ ಮಿಷನ್ ಅಡಿ ಕಾರ್ಯಕ್ರಮಾತ್ಮಕ ಮತ್ತು ವಸ್ತುವಿಗೆ ಸಂಬಂಧಿಸಿದ ಬಹುಕ್ಷೇತ್ರಗಳ ಒಮ್ಮುಖತೆಯ ಕ್ರಿಯೆಗಳ ವಿಸ್ತೃತ ಪಡಿಯಚ್ಚನ್ನು ಅನುಬಂಧ ।ಫಿ ಮತ್ತು ।ಫಿಂಯಲ್ಲಿ ಅಳವಡಿಸಲಾಗಿದೆ. ಮಕ್ಕಳ ಅಭಿವೃದ್ಧಿಯ ವಿಶಾಲವಾದ ನಿರ್ಧಾರಕಗಳ ಪ್ರಾಮುಖ್ಯತೆಯನ್ನು ಪರಿಗಣಿಸಿ, ಐಸಿಡಿಎಸ್ ಮಿಷನ್ ಜಿಲ್ಲಾ ಯೋಜನೆಯ ನೆರಳಿನಲ್ಲಿ ಒಮ್ಮುಖತೆಯ ಮಧ್ಯಪ್ರವೇಶ ಮಾರ್ಗವನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತದೆ. ಅದು ಖಾತ್ರಿಪಡಿಸುವುದೇನೆಂದರೆ.,

* ಗ್ರಾಮ/ವಾಸಸ್ಥಳಗಳ ಹಂತದ ಎಎಲ್ಎಂಸಿಗಳ ಎಡಬ್ಲ್ಯುಸಿಯು ಮಕ್ಕಳ ಅಭಿವೃದ್ಧಿ ಕ್ರಿಯೆಗಳ ಒಮ್ಮುಖ ಬಿಂದು ಆಗಿರುತ್ತದೆ.

* ಐಸಿಡಿಎಸ್ ಮಿಷನ್ ಕ್ರಮೇಣ ಗ್ರಾಮೀಣ ಆರೋಗ್ಯ ನೈರ್ಮಲ್ಯ ಮತ್ತು ಪೋಷಕಾಂಶ ಸಮಿತಿ(ವಿಎಚ್ಎಸ್ಎಸ್ಸಿ)ಯೆಡೆಗೆ ಮುನ್ನಡೆಯಲಿದ್ದು, ಗ್ರಾಮಗಳ ಹಂತದಲ್ಲಿ ಒಮ್ಮುಖತೆಯ ಸಾಂಸ್ಥಿಕ ಕಾರ್ಯತಂತ್ರ ಆಗಲಿದೆ. ಎನ್ಆರ್ಎಚ್ಎಂ ಅಡಿ ಹಾಲಿ 4.97 ಲಕ್ಷ ವಿಎಚ್ಎಸ್ಎಸ್ಸಿಗಳಿದ್ದು, ಅವನ್ನು ವಿಸ್ತರಿಸಲಾಗುತ್ತದೆ.

* ಸಮಗ್ರ ಕ್ರಿಯೆಯ ಗಳಿಕೆಗಳು ಜಿಲ್ಲಾ ಮಕ್ಕಳ ಅಭಿವೃದ್ಧಿ ಯೋಜನೆಗಳು ಮತ್ತು ಪ್ರಕ್ರಿಯೆಗಳಲ್ಲಿ ಪ್ರತಿಫಲಿಸುವಂತೆ ಪಿಆರ್ಐ ಮತ್ತು ಯುಎಲ್ಬಿಗಳ ಒಳಗೊಳ್ಳುವಿಕೆಯನ್ನು ಖಾತ್ರಿಪಡಿಸುವುದು.

* ಮಕ್ಕಳ ಗ್ರಾಮ ಮಟ್ಟದ ಅಭಿವೃದ್ಧಿ ಯೋಜನೆ/ವಿಭಾಗ ಯೋಜನೆ/ಜಿಲ್ಲಾ ಯೋಜನೆಗಳ ಒಮ್ಮುಖ ಕ್ರಿಯೆಗಾಗಿ ವೇಗವರ್ಧಕ ಸಂಪನ್ಮೂಲಗಳನ್ನು ಒದಗಿಸಲು ಅವಕಾಶ

* ಎಡಬ್ಲ್ಯುಡಬ್ಲ್ಯು, ಆಶಾ, ಸಮುದಾಯ/ಮಹಿಳಾ ಗುಂಪುಗಳು/ವಿಎಚ್ಎಸ್ಎನ್ಸಿಗಳು ಮತ್ತು ಪಿಆರ್ಐಗಳನ್ನು ಸೇರಿಸಿಕೊಂಡು ಆರೋಗ್ಯ ಹೊರಚಾಚು ಸೇವೆಗಳು, ಕುಡಿಯುವ ನೀರು, ನೈರ್ಮಲ್ಯ, ಶಾಲಾ ಜೋಡಣೆಗಳು ಮತ್ತು ಸಂಬಂಧಿಸಿದ ವಿಷಯಗಳು ಒಳಗೊಳ್ಳುವಂತೆ ಐಸಿಡಿಎಸ್ ಮಿಷನ್‌ನ ಜಂಟಿ ಗೃಹ ಸಮೀಕ್ಷೆ ಮತ್ತು ಗ್ರಾಮ ಸೂಕ್ಷ್ಮ ಯೋಜನೆ ಚಟುವಟಿಕೆ

* ಅಂತರ್ ಸಂಬಂಧಿ ಕಾರ್ಯಕ್ರಮಗಳ ಎಪಿಐಪಿಗಳು ಕಾರ್ಯಕ್ರಮಾತ್ಮಕ ಮತ್ತು ಸಾಂಸ್ಥಿಕ ಅಡ್ಡ ಜೋಡಣೆಗಳು ಮತ್ತು ವಾಗ್ದಾನಗಳನ್ನು ಒಳಗೊಂಡಿರಬೇಕು.

* ಜಿಲ್ಲಾ ಐಸಿಡಿಎಸ್ ಮಿಷನ್ ಯೋಜನೆಗಳ ಮೌಲ್ಯಾಂಕನದ ಖಾತ್ರಿ ಮೂಲಕ ಎಳೆಯ ಮಕ್ಕಳ ಆರೋಗ್ಯ ಬೆಳವಣಿಗೆ ಮತ್ತು ಪ್ರಗತಿಯನ್ನು ಒಮ್ಮುಖ ಸಮುದಾಯಕ ಕ್ರಿಯೆಗಳ ಮೂಲಕ ಮನದಟ್ಟು ಮಾಡಿಕೊಡಬೇಕು.

4.5(ಎ) ಸ್ಥಳೀಯ ಸಂಸ್ಥೆಗಳ ಪಾತ್ರ

ಈಗಾಗಲೇ ಹೇಳಿದಂತೆ, ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳ ಮೂಲಕ ಪಿಆರ್‌ಐ ಮತ್ತು ಯುಎಲ್‌ಬಿಗಳಿಗೆ ಅಧಿಕಾರವನ್ನು ನೀಡಲಾಗಿದೆ. ಐಸಿಡಿಎಸ್‌ನ ಅನುಷ್ಠಾನದಲ್ಲಿ ಪಿಆರ್‌ಐ ಮತ್ತು ಯುಎಲ್‌ಬಿಗಳನ್ನು ಒಳಗೊಳ್ಳಲು ಉತ್ತೇಜಿಸಲಾಗುತ್ತದೆ. ಬೇರೆ ಬೇರೆ ರಾಜ್ಯಗಳ ಸ್ಥಳೀಯ ಸಂಸ್ಥೆಗಳಲ್ಲಿ ಪಾಲ್ಗೊಳ್ಳುವಿಕೆಯ ಪ್ರಸ್ತುತ ಹಂತವನ್ನು ಅನುಬಂಧ 6ಎ ನಲ್ಲಿ ಚರ್ಚಿಸಲಾಗಿದೆ. ಐಸಿಡಿಎಸ್ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡು ಮೇಲ್ವಿಚಾರಣೆ ಮತ್ತು ಉಸ್ತುವಾರಿಗೆ ಮಾರ್ಗದರ್ಶನ ಸೂತ್ರಗಳನ್ನು ರೂಪಿಸಿದೆ. ಅಷ್ಟಲ್ಲದೆ, ರಾಜ್ಯಗಳು ಸಾಧ್ಯವಿರುವಲ್ಲೆಲ್ಲ ಐಸಿಡಿಎಸ್‌ನ ಅನುಷ್ಠಾನಕ್ಕೆ ಪಿಆರ್‌ಐ ಮತ್ತು ಯುಎಲ್‌ಬಿಗಳ ಬೆಂಬಲ ಪಡೆದುಕೊಳ್ಳಬೇಕೆಂದು ಪ್ರೇರೇಪಿಸಲಾಗಿದೆ.

4.5(ಬಿ): ಸ್ಥಳೀಯ ಸಂಸ್ಥೆಗಳು ಮತ್ತು ಸ್ವಯಂಸೇವಾ ಕ್ರಿಯೆಗಳ ಪಾತ್ರ

ಈ ಮೊದಲು ಉಲ್ಲೇಖಿಸಿದಂತೆ, ಐಸಿಡಿಎಸ್ ಮಿಷನ್ ನಾಗರಿಕ ಸಮಾಜ, ಕಾರ್ಯಜಾಲಗಳು, ಸ್ವಯಂಸೇವಾ ಸಂಘಟನೆ(ಎನ್‌ಜಿಒ)ಗಳು ಮತ್ತು ಸ್ವಯಂಸೇವಾ ಕ್ರಿಯೆಗೆ ಪ್ರಮುಖ ಪಾತ್ರವನ್ನು ನೀಡಲು ಆಲೋಚಿಸಿದೆ. ಕೆಲವು ರಾಜ್ಯಗಳಲ್ಲಿ ಈಗಾಗಲೇ ಎನ್‌ಜಿಒಗಳೊಂದಿಗೆ ಸಹಭಾಗಿತ್ವವನ್ನು ಸ್ಥಾಪಿಸಲಾಗಿದೆ ಮತ್ತು ಸಹಭಾಗಿತ್ವವು (i) ಸೇವಾ ನಿರ್ವಹಣೆ ಮತ್ತು ಹೊರಚಾಚುಗಳನ್ನು ವಿಸ್ತರಿಸುವುದು (ii) ಸೇವೆಯ ಗುಣಮಟ್ಟವನ್ನು ಪುಷ್ಟೀಕರಿಸುವುದು ಮತ್ತು (iii) ನಿರ್ದಿಷ್ಟ ಭಾಗಗಳಾದ ತರಬೇತಿ, ಸಂವಹನ ಮತ್ತು ಸಮುದಾಯದ ಸಂಘಟನೆ ಹಾಗೂ ಪರಾಮರ್ಶನವನ್ನು ಬಲಪಡಿಸಿದೆ. ಐಸಿಡಿಎಸ್ ಮಿಷನ್‌ನ ವಿತರಣೆ ವ್ಯವಸ್ಥೆಯ ವಿವಿಧ ಹಂತಗಳಲ್ಲಿ ಎನ್‌ಜಿಒಗಳನ್ನು ಒಳಗೊಳ್ಳಲು ಪ್ರಯತ್ನ ನಡೆಸಬೇಕಿದೆ. ಇದಕ್ಕಾಗಿ ಪ್ರತಿಯೊಂದು ರಾಜ್ಯದಲ್ಲಿ ಯೋಜನೆಗಳ ಶೇ.10ರಷ್ಟನ್ನು ಇಂಥ ಏಜೆನ್ಸಿಗಳು/ಸಂಸ್ಥೆಗಳೊಟ್ಟಿಗೆ ಅನುಷ್ಠಾನಗೊಳಿಸುವುದನ್ನು ಎಂಒಯು ಅಡಿ ಕಡ್ಡಾಯಗೊಳಿಸಲಾಗಿದೆ. ಮಾರ್ಗದರ್ಶಿ ಸೂತ್ರಗಳು ಹಾಗೂ ಇನ್ನಿತರ ಶಾಸನಾತ್ಮಕ ಸಾಧನಗಳ ವಕಾಲತು ಮಾತ್ರವಲ್ಲದೆ, ಎನ್‌ಜಿಒಗಳನ್ನು ಕಾರ್ಯಕ್ರಮ ನಿರ್ವಹಣೆ, ಮಕ್ಕಳ ಅಭಿವೃದ್ದಿ ಕ್ಷೇತ್ರದ ನಾನಾ ಹಂತಗಳಲ್ಲಿ ಸಾಮರ್ಥ್ಯ ಬಲಪಡಿಸುವಿಕೆ ಹಾಗೂ ಪರಾಮರ್ಶೆ, ಮಕ್ಕಳ ಅಭಿವೃದ್ಧಿಗೆ ನವೀನ ಮಾರ್ಗಗಳನ್ನು ಶೋಧಿಸುವುದು ಮತ್ತು ಪಿಆರ್‌ಐಗಳು ಹಾಗೂ ಸಮುದಾಯದ ಸಂಘಟನೆಗಳೊಂದಿಗೆ ಕಾರ್ಯನಿರ್ವಹಿಸುವಿಕೆಯಲ್ಲಿ ಒಳಗೊಳ್ಳಬೇಕಾಗುತ್ತದೆ. ಐಸಿಡಿಎಸ್ ಮಿಷನ್‌ಅಡಿ ಎನ್‌ಜಿಒ/ಸ್ವಯಂಸೇವಾ ಸಂಸ್ಥೆಗಳನ್ನು ಹೇಗೆ ಒಳಗೊಳ್ಳಬಹುದು ಎಂಬುದರ ರೂಪರೇಷೆಯನ್ನು ಅನುಬಂಧ ಫಿ ನಲ್ಲಿ ಕೊಡಲಾಗಿದೆ.

ಪ್ರತಿ ರಾಜ್ಯದಲ್ಲೂ ಗರಿಷ್ಠ ಶೇ.10ರಷ್ಟು ಯೋಜನೆಗಳ ಅನುಷ್ಠಾನವನ್ನು ನೀಡಬೇಕೆಂಬ ಕಟ್ಟಳೆಯನ್ನು ಶಿಫಾರಸು ಮಾಡಲಾಗಿದೆ. ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ತಮ್ಮ ಆರ್ಥಿಕ ಜವಾಬ್ದಾರಿಗಳು ನಿಗದಿಪಡಿಸಿದ ಚೌಕಟ್ಟಿನೊಳಗೆ ಇರುವಂತೆ ತೊಡಗಿಸಿಕೊಳ್ಳಲು ಅಗತ್ಯವಾದ ಶಾಸನಾತ್ಮಕ ಸಾಧನಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಿದೆ.

4.6 ಮಾನವ ಸಂಪನ್ಮೂಲಗಳನ್ನು ಬಲಗೊಳಿಸುವಿಕೆ

ಐಸಿಡಿಎಸ್ ಕಾರ್ಯಕ್ರಮವನ್ನು ವಿಸ್ತರಿಸಲು, ಅದರ ಉದ್ದೇಶವನ್ನು ಸಾಧಿಸಲು ಸೇರ್ಪಡೆಗೊಳಿಸಬೇಕಾದ ಅಗತ್ಯವಾದ ಬಹುಮುಖಿ ಚಟುವಟಿಕೆಗಳೆಂದರೆ,

* ಅಗತ್ಯವನ್ನು ಆಧರಿಸಿದ ತರಬೇತಿ ಮತ್ತು ದೀರ್ಘಕಾಲೀನ ಮಾನವಸಂಪನ್ಮೂಲ ಕಾರ್ಯನೀತಿಯನ್ನು ವಿನ್ಯಾಸಗೊಳಿಸಬೇಕಿದ್ದು, ಅದು ಸ್ಫೂರ್ತಿ, ಮಾನ್ಯತೆ, ಅಭಿವೃದ್ಧಿಗೆ ದಾರಿಗಳು ಹಾಗೂ ಎಲ್ಲರಿಗೂ ಪ್ರಯೋಜನ ಗಳನ್ನು ವರ್ಧಿಸಬೇಕು.

* ಕಾರ್ಯಕ್ರಮದ ಅನುಷ್ಠಾನದ ಎಲ್ಲ ಹಂತಗಳಲ್ಲಿ ಅಗತ್ಯ ತಾಂತ್ರಿಕ ಬೆಂಬಲ ನೀಡುವುದು.

* ಪರಿಷ್ಕೃತ ಜನಸಂಖ್ಯಾ ಮಟ್ಟ, ಹೆಚ್ಚುವರಿ ಎಡಬ್ಲ್ಯುಡಬ್ಲ್ಯು ಮತ್ತು ಪೋಷಕಾಂಶ ಸಲಹೆಗಾರನ ಅಗತ್ಯ, ಸ್ಥಳೀಯ ಮಹಿಳಾ/ಸಮುದಾಯದ ಕಾರ್ಯಕರ್ತರು/ಆಶಾ ಸಿಬ್ಬಂದಿಯನ್ನು ಜೋಡಣೆ ಕಾರ್ಯಕರ್ತರಂತೆ ಬಳಸುವುದು ಮತ್ತು ಅವರಿಗೆ ವೇತನ ಪಾವತಿ ಇತ್ಯಾದಿಯನ್ನು ಪರಿಗಣಿಸಿ, ಎಡಬ್ಲ್ಯುಡಬ್ಲ್ಯುಗಳ ಮೇಲಿನ ಕೆಲಸದ ಹೊರೆಯನ್ನು ತಾರ್ಕಿಕೀಕರಣಗೊಳಿಸಲು ಅಗತ್ಯವನ್ನು ಆಧರಿಸಿದ ಮೌಲ್ಯಮಾಪನ ಕೈಗೊಳ್ಳು ವುದು

* ರಾಜ್ಯ ಸರ್ಕಾರ ಮಿಷನ್ ಅಡಿಯ ಎಪಿಐಪಿ ಹಾಗೂ ಇಪಿಸಿಯ ಅಂಗೀಕಾರ ಪಡೆದು ಸ್ಥಳೀಯ ಬೇಡಿಕೆಯನ್ನು ಆಧರಿಸಿ ಮತ್ತು ಆರಂಭದಲ್ಲಿ 200 ತೀವ್ರ ಹೊರೆ ಇರುವ ಜಿಲ್ಲೆಗಳಲ್ಲಿ ಹೆಚ್ಚುವರಿ ಎಡಬ್ಲ್ಯುಡಬ್ಲ್ಯು ಮತ್ತು ಪೋಷಕಾಂಶ ಸಲಹೆಗಾರನನ್ನು ನೇಮಿಸುವುದು.

* ಒಮ್ಮುಖತೆ ಮತ್ತು ಸಹಭಾಗಿತ್ವದ ಮೂಲಕ ಮಾನವ ಸಂಪನ್ಮೂಲದ ಲಭ್ಯತೆಯನ್ನು ಹೆಚ್ಚಿಸುವುದು.

* ಗ್ರಾಮ ಮಟ್ಟದಲ್ಲಿ ತರಬೇತಿ ಪಡೆದ ಕಾರ್ಯಕರ್ತೆ, ಆಶಾ ಹಾಗೂ ಪ್ರತಿಯೊಂದು ಉಪ ಆರೋಗ್ಯ ಕೇಂದ್ರದಲ್ಲಿ ಒಬ್ಬರು ಎಎನ್‌ಎಂ ಹಾಗೂ ಹೆಚ್ಚು ಅಗತ್ಯಗಳಿರುವ ರಾಜ್ಯಗಳಲ್ಲಿ ಎನ್‌ಆರ್‌ಎಚ್‌ಎಂನಿಂದ ಹೆಚ್ಚುವರಿ ಎಎನ್‌ಎಂನ್ನು ಒದಗಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು

* ಇಸಿಸಿಇ ಶರತ್ತುಗಳು ಹಾಗೂ ಶಾಲೆಗೆ ಸಿದ್ಧಗೊಳಿಸುವ ಪ್ಯಾಕೇಜ್ ಮೂಲಕ ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಫಲಿತಾಂಶಗಳು ಸಾಧನೆಯಾಗಿವೆ/ಉತ್ತಮಗೊಂಡಿವೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು.

* ಮಕ್ಕಳ ಪಾಲನೆಗೆ ಶಿಶುವಿಹಾರಗಳಿಗೆ ಎಂನರೇಗಾ ಅಡಿ ವೇತನಸಹಿತ ಕೆಲಸಗಾರರೊಬ್ಬರನ್ನು ಪೂರೈಸುವುದನ್ನು ಖಾತ್ರಿಪಡಿಸಿಕೊಳ್ಳುವುದು.

* ಮಕ್ಕಳ ಆರಂಭಿಕ ಪಾಲನೆ ಮತ್ತು ಬೆಳವಣಿಗೆ ಉಪಕ್ರಮಗಳು ಮತ್ತು ಈ ಪ್ರಕ್ರಿಯೆಯಲ್ಲಿ ಪಿಆರ್‌ಐಗಳು, ಸಮುದಾಯಗಳು ಹಾಗೂ ಪೋಷಕರ ಒಳಗೊಳ್ಳುವಿಕೆಯನ್ನು ಬೆಂಬಲಿಸಲು ಜಂಟಿ ತರಬೇತಿ ಹಾಗೂ ಸೂಕ್ತ ಅನುಗೊಳಿಸುವಿಕೆಯನ್ನು ಖಾತ್ರಿಪಡಿಸುವುದು.

## 4.7 ತರಬೇತಿ ಮತ್ತು ಸಾಮರ್ಥ್ಯ ಅಭಿವೃದ್ಧಿ

ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ ಬಹಳ ಮುಖ್ಯವಾಗಿದ್ದು, ಕಾರ್ಯಕ್ರಮದ ಗುರಿಗಳ ಸಾಧಿಸುವಿಕೆಯು ಮಕ್ಕಳ ಪಾಲನೆಯ ಸುಧಾರಿತ ವಿಧಾನಗಳು ಮತ್ತು ಅಂಗನವಾಡಿ ಸೇವೆಗಳ ಪರಿಣಾಮಕಾರಿ ಹಾಗೂ ಕ್ಷಮತೆಯ ವಿತರಣೆಗೆ ಸಂಬಂಧಿಸಿದಂತೆ ಸಮುದಾಯಗಳು ಹಾಗೂ ಕುಟುಂಬಗಳನ್ನು ಸಬಲಗೊಳಿಸುವ ಮುಂಚೂಣಿ ಕಾರ್ಯಕರ್ತರ ಪರಿಣಾಮಕಾರಿತ್ವವನ್ನು ಆಧರಿಸಿದೆ. ಐಸಿಡಿಎಸ್ ಮಿಷನ್ ಮಾಡುವುದೇನೆಂದರೆ.,

*        ತರಬೇತಿ ಅಗತ್ಯಗಳ ಮೌಲ್ಯಮಾಪನ ನಡೆದಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುತ್ತದೆ ಮತ್ತು ಅದನ್ನು ಆಧರಿಸಿ ಎಲ್ಲ ಹಂತಗಳಲ್ಲಿ ಮುಂಚೂಣಿಯ ಕೆಲಸಗಾರರು ಮತ್ತು ಇನ್ನಿತರ ಭಾಗಿದಾರರಾದ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರು ಮತ್ತು ಕುಟುಂಬ ಹಾಗೂ ಸಮುದಾಯಗಳ ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣಕ್ಕೆ ಸಮಗ್ರ ಯೋಜನೆ ರೂಪಿಸುವುದು.

*        ಪ್ರಾಂತೀಯ ಕೇಂದ್ರಗಳು ಸೇರಿದಂತೆ ಎನ್‌ಐಪಿಸಿಸಿಡಿಯಲ್ಲಿ ಸಂಪನ್ಮೂಲ ತರಬೇತಿ ಕೋಶವನ್ನು ಸೃಷ್ಟಿಸುವುದು.

*        ಮಧ್ಯಮ ಹಂತದಲ್ಲಿ ಮತ್ತು ಎಡಬ್ಲ್ಯುಡಬ್ಲ್ಯು ತರಬೇತಿ ಕೇಂದ್ರಗಳು ಸೇರಿದಂತೆ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಎಎನ್‌ಎಂ ತರಬೇತಿ ಕೇಂದ್ರಗಳು, ರಾಜ್ಯ ಮತ್ತು ಜಿಲ್ಲಾ ಹಂತದ ಶಿಕ್ಷಣ ತರಬೇತಿ ಕೇಂದ್ರಗಳು (ಎಸ್‌ಸಿಇಆರ್‌ಟಿ, ಡಿಐಇಟಿ), ಎಸ್‌ಐಆರ್‌ಡಿ ಮತ್ತು ವಿಸ್ತರಣಾ ತರಬೇತಿ ಕೇಂದ್ರಗಳು(ಇಟಿಸಿಗಳು), ಗೃಹ ವಿಜ್ಞಾನ, ನರ್ಸಿಂಗ್, ವೈದ್ಯಕೀಯ ಕಾಲೇಜು ಮತ್ತು ಆಡಳಿತ ನಿರ್ವಹಣೆ ಸಂಸ್ಥೆಗಳು/ ಶಾಲೆಗಳಲ್ಲಿ ಇರುವ ತರಬೇತಿ ಮೂಲಸೌಲಭ್ಯಗಳನ್ನು ಹತ್ತಿರದಿಂದ ಪರೀಕ್ಷಿಸಲು ಹಾಗೂ ತರಬೇತಿ/ಸೂಕ್ಷ್ಮತೆ ಕಲಿಸುವಿಕೆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಅಗತ್ಯವಾದ ಹೂಡಿಕೆಯನ್ನು ಗುರುತಿಸಲು ರಾಜ್ಯಗಳಿಗೆ ಅನುವು ಮಾಡಿಕೊಡಬೇಕು.

*        ಪಿಆರ್‌ಐಗಳು/ಸಮುದಾಯ ಸೇರಿದಂತೆ ಎಲ್ಲ ಹಂತಗಳಲ್ಲಿ ಸಾಮರ್ಥ್ಯ ನಿರ್ಮಾಣಕ್ಕೆ ಬೆಂಬಲ ನೀಡಲು ಸಮಗ್ರ ಮಾನವ ಸಂಪನ್ಮೂಲ ನಿರ್ವಹಣೆ ಕಾರ್ಯನೀತಿಯನ್ನು ಅಭಿವೃದ್ಧಿಪಡಿಸಬೇಕು ಹಾಗೂ ಅನುಷ್ಠಾನಗೊಳಿಸಬೇಕು.

*        ತಮ್ಮ ಕಾರ್ಯಾಚರಣೆ ಪ್ರದೇಶಗಳಲ್ಲಿ ಎಂಎಲ್‌ಟಿಸಿಗಳು ಹಾಗೂ ಎಡಬ್ಲ್ಯುಟಿಸಿಗಳು ಮಾದರಿ ಐಸಿಡಿಎಸ್ ಯೋಜನೆಗಳು/ಎಡಬ್ಲ್ಯುಸಿಗಳನ್ನು ನಡೆಸುವುದು ಅತ್ಯಗತ್ಯ ಆಗಬೇಕು.

*        ಎಲ್ಲ ಹಂತಗಳಲ್ಲಿ ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ ಕಾರ್ಯತಂತ್ರವನ್ನು ಹಾಗೂ ಲಭ್ಯವಿರುವ ಮೂಲಸೌಕರ್ಯ ಸಂರಚನೆಗಳನ್ನು ಬಲಗೊಳಿಸಬೇಕು ಮತ್ತು ಪುನರ್ರಚಿಸಬೇಕು.

ಐಸಿಡಿಎಸ್ ಮಿಷನ್‌ಅಡಿ ಎಲ್ಲ ಹಂತಗಳಲ್ಲಿ ತರಬೇತಿ ಹಾಗೂ ಸಾಮರ್ಥ್ಯ ನಿರ್ಮಾಣವನ್ನು ಬಲಗೊಳಿಸುವ ರೂಪರೇಷೆಯನ್ನು ಅನುಬಂಧ ೫।ಯಲ್ಲಿ ಕೊಡಲಾಗಿದೆ.

4.8 ಸಾಕ್ಷ್ಯಾಧಾರಿತ ಅನ್ವೇಷಣಾತ್ಮಕ ಮಧ್ಯಸ್ಥಿಕೆಗಳನ್ನು ಹೆಚ್ಚಿಸುವುದು ಮತ್ತು ಬಲಪಡಿಸುವುದು:

ರಾಜ್ಯಗಳಲ್ಲಿ ಐಸಿಡಿಎಸ್ ಕಾಲಕ್ರಮೇಣ ಸಂದರ್ಭಕ್ಕೆ ತಕ್ಕಂತೆ ಹೊರಹೊಮ್ಮಿದೆ ಮತ್ತು ರಾಜ್ಯ ಸರ್ಕಾರಗಳು ಅನುಷ್ಠಾನಗೊಳಿಸಿದ ಅನ್ವೇಷಕ ಪ್ರವೃತ್ತಿಯ ಹಾಗೂ ಯಶಸ್ವಿ ಮಾದರಿಗಳು ಅತ್ಯುತ್ತಮ ಫಲಿತಾಂಶ ನೀಡಿರುವ ಹಲವು ಉದಾಹರಣೆಗಳಿವೆ. ಅವುಗಳು ಇನ್ನಷ್ಟು ಮೇಲ್ದರ್ಜೆಗೆ ಏರುವ ಸಾಮರ್ಥ್ಯ ಹೊಂದಿವೆ. ಇನ್ನಿತರ ಅನ್ವೇಷಣೆಗಳಾದ ವರ್ಗೀಕರಣಗೊಂಡ ಉತ್ತಮ ಆಚರಣೆಗಳು/ಸಮರ್ಥ ಉತ್ತಮ ಆಚರಣೆಗಳನ್ನು ಇನ್ನಿತರ ರಾಜ್ಯಗಳು ಮಾರ್ಗದರ್ಶನಕ್ಕೆ ಬಳಸಿಕೊಳ್ಳಬಹುದು ಅಥವಾ ಕೇಂದ್ರೀಯ ಅನುದಾನದಡಿ ಇನ್ನಷ್ಟು ಮೇಲಿನ ಹಂತಕ್ಕೆ ಏರಿಸಬಹುದು. ಇಂಥ ಮಧ್ಯಸ್ಥಿಕೆಗಳ ರಾಜ್ಯವಾರು ಪಟ್ಟಿ ಹಾಗೂ ಅದರ ಲಕ್ಷ್ಯ ಕ್ಷೇತ್ರಗಳನ್ನು ಅನುಬಂಧ ೫॥ ರಲ್ಲಿ ವಿವರವಾಗಿ ನೀಡಲಾಗಿದೆ. ಐಸಿಡಿಎಸ್ ಈ ವಿಭಾಗದಡಿ ರಾಜ್ಯ ಸರ್ಕಾರಗಳಿಗೆ ಹೊಂದಾಣಿಕೆಗಳಿಗೆ ಅವಕಾಶ ಕೊಡಲಿದ್ದು, ಮಕ್ಕಳ ಅಭಿವೃದ್ಧಿ ಸೇವೆಗಳ ಲಭ್ಯತೆ, ಪ್ರವೇಶಾವಕಾಶ ಹಾಗೂ ಗುಣಮಟ್ಟವನ್ನು, ವಿಶೇಷವಾಗಿ, ಯಾವ ಮಧ್ಯಸ್ಥಿಕೆಗಳು ಐಸಿಡಿಎಸ್‌ನ ಪ್ರಸ್ತುತ ಭಾಗವಾಗಿಲ್ಲವೋ ಅಂಥವನ್ನು ಉತ್ತಮಗೊಳಿಸಬಲ್ಲ ಸೂಕ್ತ ಅನ್ವೇಷಕ ಮಧ್ಯಸ್ಥಿಕೆಗಳಿಗೆ ಅವಕಾಶ

ಮಾಡಿ ಕೊಡಲಿದೆ. ರಾಜ್ಯ ಐಸಿಡಿಎಸ್ ಮಿಷನ್ ತನ್ನ ಬಳಿ ಇಂಥ ಅನ್ವೇಷಕ ಮಧ್ಯಸ್ತಿಕೆಗಳನ್ನು ಬೆಂಬಲಿಸಲು ಯಾವುದೇ ಕಟ್ಟುಪಾಡುಗಳಿಲ್ಲದ ಅನುದಾನವನ್ನು ಹೊಂದಿರಬೇಕು.

ಈ ವಿಭಾಗದಡಿ ಅಳವಡಿಸಿಕೊಳ್ಳಬಹುದಾದ ಕೆಲವು ಪ್ರಮುಖ ಅನ್ವೇಷಣಾತ್ಮಕ ಮಧ್ಯಸ್ತಿಕೆಗಳೆಂದರೆ.,

(i) ಅಂಗನವಾಡಿ ಮತ್ತು ಶಿಶುವಿಹಾರ/ದಿನ ಪಾಲನಾ ಕೇಂದ್ರ(ಡೇ ಕೇರ್ ಸೆಂಟರ್): ಜಿಲ್ಲಾ ಮಕ್ಕಳ ಪಾಲನೆ ಅಗತ್ಯಗಳ ಮೌಲ್ಯಮಾಪನ ಮತ್ತು ಜಿಲ್ಲಾ ಯೋಜನೆಯನ್ನು ಆಧರಿಸಿ, ಎಡಬ್ಲ್ಯುಸಿಗಳನ್ನು ಎಡಬ್ಲ್ಯುಸಿ+ ಶಿಶುವಿಹಾರವಾಗಿ ಮಾಡುವುದು, ನರೇಗಾ ಶಿಶುವಿಹಾರಗಳಿಗೆ ಹೆಚ್ಚು ಹೊಂದಿಸಿಕೊಳ್ಳುವಿಕೆಗೆ ಅವಕಾಶ ನೀಡುವುದು, ಪ್ರಮುಖ ಕೆಲಸದ ಸ್ಥಳಗಳಲ್ಲಿ ಶಿಶುವಿಹಾರಗಳು, ಕೃಷಿ ಕ್ಷೇತ್ರ/ಅಡವಿಗಳಲ್ಲಿ ಸಮುದಾಯ ಆಧಾರಿತ ಸ್ವಯಂಸೇವಾ ಮಕ್ಕಳ ಪಾಲನೆ ವ್ಯವಸ್ಥೆಗಳು, ಮಹಿಳೆಯರ ಕೆಲಸ ಮತ್ತು ಅದರ ಅವಧಿಗೆ ಹೊಂದಿಕೊಳ್ಳುವಂತೆ ಸ್ಪಂದಿಸುವುದು, ಎನ್‌ಜಿಒಗಳಿಂದ ವೇಗವರ್ಧಕ ಬೆಂಬಲವೂ ಸೇರಿದಂತೆ ವಿವಿಧ ಶಿಶುವಿಹಾರಗಳನ್ನು ಮಾರ್ಗದರ್ಶಕದಂತೆ ಮತ್ತು ಇನ್ನಷ್ಟು ಮೇಲಿನ ಹಂತಕ್ಕೆ ಏರುವಂತೆ ಮಾಡುವ ಮೂಲಕ ಐಸಿಡಿಎಸ್ ಸೇವೆಗಳನ್ನು ಮರುವ್ಯಾಖ್ಯಾನಿಸಬೇಕು. ರಾಜ್ಯಗಳಿಗೆ ಶಿಶುವಿಹಾರಗಳ ಸ್ಥಾಪನೆಗೆ ಅವಕಾಶ, ದೀರ್ಘಕಾಲೀನ ದೈನಂದಿನ ಪಾಲನೆ ಬೆಂಬಲ ಮತ್ತು ಮಹಿಳೆಯರ ಕೆಲಸ ಮತ್ತು ಸಮಯಕ್ಕೆ ಹೊಂದಿಕೊಳ್ಳುವಂತೆ ಸಮಯದಲ್ಲಿ ಬದಲಾವಣೆ ಮತ್ತಿತರ ಅವಕಾಶ ನೀಡಬೇಕು. ಇದರಲ್ಲಿ ಕೇಂದ್ರ ಹಾಗೂ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ವೆಚ್ಚ ಹಂಚಿಕೆ ಅನುಪಾತ 75:25 ಆಗಿರಲಿದೆ. ಅಂಗನವಾಡಿ+ಶಿಶುವಿಹಾರಗಳ ಹೆಚ್ಚುವರಿ ಅಗತ್ಯದ ಬಗ್ಗೆ ಅನುಬಂಧ-I ನ್ನು ನೋಡಿ.

4.9 ಸಂಗ್ರಹಣೆ ಸೇರಿದಂತೆ ಸಾಗಣೆ ನಿರ್ವಹಣೆ:

ಐಸಿಡಿಎಸ್ ಮಿಷನ್ ಚೌಕಟ್ಟಿನಲ್ಲಿ ಪೂರಕ ಪೋಷಕಾಂಶಗಳನ್ನು ಸಮಯಕ್ಕೆ ಸರಿಯಾಗಿ ಪೂರೈಸುವುದು, ಕಿಟ್ ಎ ಪೂರೈಕೆ, ಲಸಿಕೆಗಳು, ವೈದ್ಯಕೀಯ ಕಿಟ್‌ಗಳು, ಶಾಲಾಪೂರ್ವ ಆಟ/ಕಲಿಕಾ ಕಿಟ್‌ಗಳು, ತೂಕದ ತಕ್ಕಡಿ, ತಾಯಿ ಮಕ್ಕಳ ಕಾರ್ಡ್‌ಗಳು, ಸಮುದಾಯದ ರೇಖಾಚಿತ್ರಗಳು, ದಾಖಲೆ ಪುಸ್ತಕ, ಅವುಗಳ ನಿರ್ವಹಣೆ ಮತ್ತು ಖಾಲಿಯಾದಲ್ಲಿ ಮರುಪೂರೈಕೆ ಹಾಗೂ ಸಾಗಣೆ ನಿರ್ವಹಣೆಗಳು ಬಹಳ ಮುಖ್ಯ. ಐಸಿಡಿಎಸ್ ಮಿಷನ್ ಅಡಿ ಪೂರಕ ಪೋಷಕಾಂಶ ಅಂಶವನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ರಾಜ್ಯಗಳ ಸಾಮರ್ಥ್ಯವನ್ನು ಬಲಪಡಿಸಲಾಗುತ್ತದೆ ಹಾಗೂ ಸರಕುಗಳು ಮತ್ತು ಸೇವೆಗಳ ಶೇಖರಣೆ, ವಿತರಣೆ ಮತ್ತು ಮರುದುಂಬುವಿಕೆ ಸಾಮರ್ಥ್ಯವನ್ನು ಬಲಪಡಿಸಲಾಗುತ್ತದೆ. ಐಸಿಡಿಎಸ್ ಮಿಷನ್ ಅಡಿ ಸಾಗಣೆ ಮತ್ತು ಶೇಖರಣೆ ನಿರ್ವಹಣೆಯ ವಿವರವಾದ ಮಾರ್ಗದರ್ಶನ ಸೂತ್ರಗಳು ಡಬ್ಲ್ಯುಸಿಡಿ ಮಂತ್ರಾಲಯ ಅಭಿವೃದ್ಧಿಪಡಿಸಿದ ಅನುಷ್ಠಾನ ಕೈಪಿಡಿಯಲ್ಲಿದೆ.

4.10 ಪರಾಮರ್ಶನ/ಉತ್ತರದಾಯಿತ್ವ ಚೌಕಟ್ಟು:

* ಐಸಿಡಿಎಸ್ ಮಿಷನ್ ಮೂರು ಹಂತದ ಪ್ರಕ್ರಿಯೆಗಳ ಮೂಲಕ ಉತ್ತರದಾಯಿತ್ವದ ಚೌಕಟ್ಟನ್ನು ಪ್ರಸ್ತಾಪಿಸಿದೆ. ಐಸಿಡಿಎಸ್‌ನ (i) ಸಮುದಾಯ ಆಧಾರಿತ ಮೇಲ್ವಿಚಾರಣೆ ಮತ್ತು ಮಾನ್ಯತೆ (ii) ಆಂತರಿಕ ಮೇಲ್ವಿ ಚಾರಣೆ ಮತ್ತು (iii) ಸಮವರ್ತಿಯಾದ ಬಾಹ್ಯ ಮೇಲ್ವಿಚಾರಣೆ.

* ಎಎಚ್‌ಎಸ್ ಜಿಲ್ಲಾ ಹಂತದ ಗೃಹ ಸಮೀಕ್ಷೆಗಳು ಮತ್ತು ಎನ್‌ಎಫ್‌ಎಚ್‌ಎಸ್‌ಗಳು ಐಸಿಡಿಎಸ್ ಮಿಷನ್‌ನ ಆಧಾರರೇಖೆಗಳಾಗಿರಲಿದ್ದು, ಅವುಗಳಿಂದ ಪ್ರಗತಿಯನ್ನು ಅಳೆಯಲಾಗುತ್ತದೆ.

* ಮಿಷನ್‌ನ ಚಾಲನಾ ಗುಂಪು ಹಾಗೂ ಕೇಂದ್ರ ಮತ್ತು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಹಂತದ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿಗಳು ನಿಯತವಾಗಿ ಪ್ರಗತಿಯ ಮೇಲ್ವಿಚಾರಣೆ ನಡೆಸಲಿವೆ.

* ಸಾರ್ವಜನಿಕ ಕೇಳ್ವಿ ಮತ್ತು ಸಾಮಾಜಿಕ ಲೆಕ್ಕ ಪರೀಕ್ಷೆಯನ್ನು ನಿಯತವಾಗಿ ಆಯೋಜಿಸುವುದರಿಂದ ಐಸಿಡಿಎಸ್ ಮಿಷನ್ ವ್ಯವಸ್ಥೆಯ ನೇರ ಉತ್ತರದಾಯಿತ್ವವು ಬಲಗೊಳ್ಳುತ್ತದೆ.

* ಮಿಷನ್ ತನ್ನ ಪುನರ್ವಿಮರ್ಶೆ, ಮೇಲ್ವಿಚಾರಣೆ, ಸೈದ್ಧಾಂತಿಕ ಸಮೃದ್ಧಿ ಮತ್ತು ಮಾರ್ಗದರ್ಶನ ಬೆಂಬಲದಲ್ಲಿ ಸ್ವಯಂಕ್ರಿಯಾ ತಂಡಗಳು, ಎನ್‌ಜಿಒಗಳು, ಸಂಪನ್ಮೂಲ ಸಂಸ್ಥೆಗಳು, ಇನ್ನಿತರ ಕ್ಷೇತ್ರಗಳು ಮತ್ತು ಸ್ಥಳೀಯ ಸಮುದಾಯಗಳನ್ನು ಒಳಗೊಂಡಿರಲಿದೆ.

* ಮಕ್ಕಳಿಗೆ ಗುಣಮಟ್ಟದ ಅಭಿವೃದ್ಧಿ ಸೇವೆಗಳನ್ನು ಒದಗಿಸುವಲ್ಲಿ ಐಸಿಡಿಎಸ್ ಮಿಷನ್‌ನ ವಿವಿಧ ಚಟುವಟಿಕೆಗಳ ಪರಿಣಾಮಕಾರಿತ್ವದ ಜಾಡನ್ನು ನಿಯತವಾಗಿ ನಡೆಯುವ ಬಾಹ್ಯ, ಗೃಹ ಮತ್ತು ಸೌಕರ್ಯದ ಸಮೀಕ್ಷೆಗಳು ಹಿಡಿಯುತ್ತವೆ.

* ಸಮೀಕ್ಷೆಯಲ್ಲದೆ, ಪ್ರತಿಯೊಂದು ರಾಜ್ಯದಲ್ಲೂ 2 ಬಾರಿ ಮೇಲ್ವಿಚಾರಣೆ ಮಿಶನ್‌ನ್ನು ನಡೆಸಲಾಗುತ್ತದೆ. ಇದು ಫಲಿತಾಂಶದ ಮೇಲ್ವಿಚಾರಣೆಗೆ ನೆರವಾಗಲಿದೆ.

* ಕುಟುಂಬಾಧರಿತ ತಾಯಿ ಮತ್ತು ಮಗು ಸಂರಕ್ಷಣ ಕಾರ್ಡ್ ಮತ್ತು ಐಸಿಡಿಎಸ್ ಎಂಐಎಸ್‌ನ್ನು ಜೋಡಣೆ ಮಾಡಿ, ಜಾಡು ಹಿಡಿಯಬಹುದು.

* ಐಸಿಟಿ ಮತ್ತು ನಕ್ಷೆಯ ಮೂಲಕ ವಾಸ್ತವ ಕಾಲದ ಅಂಕಿಅಂಶಗಳನ್ನು ಬಳಸಿಕೊಂಡು ಕಂಪ್ಯೂಟರ್ ಆಧಾರಿತ ಎಂಐಎಸ್ ದ್ವಾರಾ ಮೇಲ್ವಿಚಾರಣೆ ಚಟುವಟಿಕೆಗಳನ್ನು ಬಲಪಡಿಸಬಹುದು(ಐಸಿಡಿಎಸ್ ಅಡಿ ಎಂಐಎಸ್ ಸೇರಿದಂತೆ ಪರಾಮರ್ಶನ ಹಾಗೂ ಮೌಲ್ಯಮಾಪನ ವ್ಯವಸ್ಥೆಗಳನ್ನು ಹೇಗೆ ಬಲಪಡಿಸಬಹುದು ಎಂಬುದನ್ನು ವಿಭಾಗ 8ರಲ್ಲಿ ವಿವರವಾಗಿ ಚರ್ಚಿಸಲಾಗಿದೆ).

++++++++++++++++++++++++++++++++++++++++++++

5. ಐಸಿಡಿಎಸ್ ಮಿಷನ್‌ನ ಸಾಂಸ್ಥಿಕ ಏರ್ಪಾಟುಗಳು

ಯಾವುದೇ ಕಾರ್ಯಕ್ರಮ ಯಶಸ್ವಿಯಾಗಬೇಕೆಂದರೆ ಕ್ಷಮತೆಯ, ಪರಿಣಾಮಕಾರಿಯಾದ ಹಾಗೂ ಉತ್ತರದಾಯಿಯಾದ ಅನುಷ್ಠಾನ ವ್ಯವಸ್ಥೆ ಅಗತ್ಯವಿದೆ. ಮಿಷನ್ ಮಾದರಿಯ ಐಸಿಡಿಎಸ್‌ಗೆ ಕೇಂದ್ರ ಮಟ್ಟದಿಂದ ನೆಲ ಹಂತದವರೆಗೆ ಪ್ರಬಲ ಅನುಷ್ಠಾನ, ಮೇಲ್ವಿಚಾರಣೆ ಹಾಗೂ ಮೇಲುಸ್ತುವಾರಿ ಕಾರ್ಯತಂತ್ರ ಬೇಕಾಗುತ್ತದೆ. ಐಸಿಡಿಎಸ್ ಮಿಷನ್ ಎಲ್ಲ ಹಂತಗಳಲ್ಲೂ ಇಂಥ ವ್ಯವಸ್ಥೆಯನ್ನು ಸೃಷ್ಟಿಸುವ ಕುರಿತು ಆಲೋಚಿಸುತ್ತದೆ. ರಾಷ್ಟ್ರೀಯ ಐಸಿಡಿಎಸ್ ಮಿಷನ್ ನಿರ್ದೇಶನಾಲಯವನ್ನು ಹಾಗೂ ರಾಜ್ಯಗಳಲ್ಲಿ ಜಿಲ್ಲಾ ಘಟಕಗಳನ್ನು ಸ್ಥಾಪಿಸುವ ಅಧಿಕಾರವಿರುವ ಮಕ್ಕಳ ಅಭಿವೃದ್ಧಿ ಸೊಸೈಟಿಗಳನ್ನು ರಚಿಸುವ ಮೂಲಕ ಹಾಲಿ ಸೇವಾ ವಿತರಣೆ ಕಾರ್ಯತಂತ್ರವನ್ನು ಬಲಪಡಿಸಲಾಗುತ್ತದೆ. ಈ ಮಿಷನ್‌ಗಳು ಐಸಿಡಿಎಸ್‌ನ ಪರಿಣಾಮಕಾರಿ ಅನುಷ್ಠಾನಕ್ಕೆ ಜವಾಬ್ದಾರಿ ಆಗಿರಲಿವೆ. ಎಲ್ಲ ಹಂತಗಳಲ್ಲೂ ಸಲಹಾ ಸಮಿತಿಗಳನ್ನು ರಚಿಸಲಾಗುತ್ತಿದ್ದು, ಇವು ಐಸಿಡಿಎಸ್ ಮಿಷನ್‌ನ ಮೇಲ್ವಿಚಾರಣೆ ಹಾಗೂ ಮಾರ್ಗದರ್ಶನ ಮಾಡಲಿವೆ. ರಾಷ್ಟ್ರೀಯ ಮಟ್ಟದಲ್ಲಿ ಉನ್ನತಾಧಿಕಾರ ಸಮಿತಿಯನ್ನು ರಚಿಸಲಾಗುತ್ತದೆ ಮತ್ತು ಈ ಸಮಿತಿಗೆ ವ್ಯವಸ್ಥೆ ವೇಗವಾಗಿ ಕಾರ್ಯನಿರ್ವಹಿಸುವಂತೆ ಮತ್ತು ನಿರ್ಧಾರದ ಕೊರತೆಯಿಂದಾಗಿ ಕೆಲಸ ಸ್ಥಗಿತಗೊಳ್ಳದಂತೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ನೀಡಲಾಗುತ್ತದೆ. ಐಸಿಡಿಎಸ್‌ನ ಸಾಂಸ್ಥಿಕ ವ್ಯವಸ್ಥೆಗಳು ದೇಶದಲ್ಲಿ

ಪೋಷಕಾಂಶ ಕೊರತೆ ನಿವಾರಣೆಗೆ ಸಂಬಂಧಿಸಿದ ಸಂಸ್ಥೆಗಳೊಂದಿಗೆ ಮೇಳೈಸಿ ಕೆಲಸ ಮಾಡುತ್ತವೆ. ಐಸಿಡಿಎಸ್ ಮಿಷನ್‌ನಡಿ ಸಾಂಸ್ಥಿಕ ವ್ಯವಸ್ಥೆಯ ಸ್ಥೂಲದೃಷ್ಟಿ ಕೆಳಕಂಡಂತೆ ಇರಲಿದೆ;

ಬೇರೆ ಬೇರೆ ಹಂತಗಳಲ್ಲಿ ಪೋಷಕಾಂಶ ಮಂಡಳಿಗಳು.............................................................................................. ಐಸಿಡಿಎಸ್ ಸಾಂಸ್ಥಿಕ ರಚನೆ

ದೇಶದ ಪೋಷಕಾಂಶ ಸವಾಲು ಕುರಿತ ಪ್ರಧಾನ ಮಂತ್ರಿಯವರ ರಾಷ್ಟ್ರೀಯ ಮಂಡಳಿ...................ರಾಷ್ಟ್ರೀಯ ಮಿಷನ್ ಚಾಲನಾ ಗುಂಪು

ರಾಷ್ಟ್ರೀಯ ಪೋಷಕಾಂಶ ಮಂಡಳಿಯ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿ...............

ಎಂಡಬ್ಲ್ಯುಸಿಡಿ ರಾಜ್ಯ ಸಚಿವ(ಪ್ರಭಾರಿ) ನೇತೃತ್ವದ ರಾಷ್ಟ್ರೀಯ ಪೋಷಕಾಂಶ ಮಂಡಳಿಯ ನೇತೃತ್ವದ ಕಾರ್ಯನಿರ್ವಾಹಕ ಮಂಡಳಿ................ಉನ್ನತಾಧಿಕಾರ ಕಾರ್ಯಕ್ರಮ ಸಮಿತಿ

ಯೋಜನಾ ಆಯೋಗದ ಎಂಡಬ್ಲ್ಯುಸಿಡಿ ಮತ್ತು ಕಾರ್ಯನೀತಿ ಬೆಂಬಲ ಘಟಕ.............. ರಾಷ್ಟ್ರೀಯ ಐಸಿಡಿಎಸ್ ಮಿಷನ್ ನಿರ್ದೇಶನಾಲಯ

ಮುಖ್ಯಮಂತ್ರಿ ನೇತೃತ್ವದ ರಾಜ್ಯ ಮಿಷನ್ ಚಾಲನಾ ಗುಂಪು..........ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಶೋಧನಾ ಕೇಂದ್ರದೊಡನೆ ತರಬೇತಿ ಸಂಪನ್ಮೂಲ ಕೇಂದ್ರ(ಎನ್‌ಐಪಿಸಿಸಿಡಿಯಲ್ಲಿ ಉಪಸ್ಥಿತ)

ಮುಖ್ಯ ಕಾರ್ಯದರ್ಶಿ ನೇತೃತ್ವದ ರಾಜ್ಯ ಪೋಷಕಾಂಶ ಮಂಡಳಿಯ ಕಾರ್ಯ ನಿರ್ವಾಹಕ ಸಮಿತಿ............ರಾಜ್ಯ ಮಿಷನ್‌ನ ಚಾಲನಾ ಗುಂಪು

ಡಿಎಂ/ಸಿಇಒ ನೇತೃತ್ವದ ಜಿಲ್ಲಾ ಪೋಷಕಾಂಶ ಮಂಡಳಿ.........ರಾಜ್ಯ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿ.......ರಾಜ್ಯ ಐಸಿಡಿಎಸ್ ಸಂಪನ್ಮೂಲ ಕೇಂದ್ರಗಳು

..................................................................ರಾಜ್ಯ ಮಕ್ಕಳ ಅಭಿವೃದ್ಧಿ ಸೊಸೈಟಿ.................

...................................................................ಜಿಲ್ಲಾ ಐಸಿಡಿಎಸ್ ಮಿಷನ್ ಸೊಸೈಟಿ........ಜಿಲ್ಲಾ ಸಲಹಾ ಸಮಿತಿ

ವಿಭಾಗ.....................ವಿಭಾಗ/ಯೋಜನಾ ಹಂತದ ಐಸಿಡಿಎಸ್ ಸಮಿತಿ...................ವಿಭಾಗ ಸಲಹಾ ಸಮಿತಿ

ಗ್ರಾಮ ಪಂಚಾಯಿತಿ.....................................

ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೋಷಕಾಂಶ ಮಂಡಳಿ(ವಿಎಚ್‌ಎಸ್‌ಎನ್‌ಸಿ)............ವಿಎಚ್‌ಎಸ್‌ಎನ್‌ಸಿ

ಎಎಲ್‌ಎಂಸಿ/ಗ್ರಾಮ ಆರೋಗ್ಯ ಮತ್ತು ಪೋಷಕಾಂಶ ದಿನ(ವಿಎಚ್‌ಎನ್‌ಡಿ).........ಅಂಗನವಾಡಿ ಕೇಂದ್ರಗಳು

5.1 ಕೇಂದ್ರದ ಹಂತದಲ್ಲಿ ಸಾಂಸ್ಥಿಕ ಏರ್ಪಾಟುಗಳು

ಡಬ್ಲ್ಯುಸಿಡಿ ಮಂತ್ರಾಲಯವು ಪುನರ್ರೂಪಿಸಿದ ಮಿಷನ್ ಮಾದರಿಯ ಐಸಿಡಿಎಸ್ ಕಾರ್ಯಯೋಜನೆಯ ಕೇಂದ್ರವಾಗಿ ಮುಂದುವರಿಯಲಿದೆ. ಅದು ತನ್ನ ಪಾತ್ರವನ್ನು (i) ಕಾರ್ಯನೀತಿ

ಮತ್ತು ಕಾರ್ಯಕ್ರಮದ ಅಭಿವೃದ್ಧಿ, ರಾಜ್ಯಗಳಿಗೆ ಐಸಿಡಿಎಸ್ ಯೋಜನೆಯ ಪರಿಣಾಮಕಾರಿ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೇಲುಸ್ತುವಾರಿಗೆ ಮಾರ್ಗದರ್ಶನ ನೀಡುವುದು (ii) ವಿಕೇಂದ್ರೀಕರಣ ಮತ್ತು ಸಾಮರ್ಥ್ಯ ನಿರ್ಮಾಣದ ಮೂಲಕ ಪರಿಣಾಮಕಾರಿ ಮಧ್ಯಸ್ಥಿಕೆಯ ಚೌಕಟ್ಟನ್ನು ರೂಪಿಸುವುದು ಹಾಗೂ (iii) ಸರ್ಕಾರ ಹಾಗೂ ಸರಕಾರೇತರ ಸಂಸ್ಥೆಗಳು ಮತ್ತು ನಾಗರಿಕ ಸಮಾಜ ಸೇರಿದಂತೆ ಭಾಗಿದಾರರೊಂದಿಗೆ ಸಹಭಾಗಿತ್ವವನ್ನು ಬೆಳೆಸಿಕೊಂಡು ಮಕ್ಕಳಿಗೆ ಸಂಬಂಧಿಸಿದ ಫಲಿತಾಂಶಗಳನ್ನು ಸಾಧಿಸುವುದು. ಕೇಂದ್ರ ಸರ್ಕಾರದ ಮಧ್ಯಸ್ಥಿಕೆಯ ಎಲ್ಲ ಹಂತಗಳಲ್ಲಿ ಸಾಮರ್ಥ್ಯ ಅಭಿವೃದ್ಧಿಗೆ ಬೆಂಬಲ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ, ಸುಧಾರಣೆ ಮತ್ತು ಉತ್ತರದಾಯಿತ್ವವನ್ನು ನೀಡಲು ಹೆಚ್ಚು ಆರ್ಥಿಕ ಸಂಪನ್ಮೂಲ ಪೂರೈಸುವಂತೆ ಹಾಗೂ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಉತ್ತಮ ಆಚರಣೆಗಳನ್ನು ಹಂಚಿಕೊಳ್ಳಲಾಗುತ್ತದೆ.

ರಾಜ್ಯಗಳಿಗೆ ನಾಯಕತ್ವ, ಕಾರ್ಯನೀತಿ ಬೆಂಬಲ ಹಾಗೂ ಮಾರ್ಗದರ್ಶನವನ್ನು ನೀಡಲು ಐಸಿಡಿಎಸ್ ಮಿಷನ್‌ನ್ನು ಸಬಲೀಕೃತ ಸಂರಚನೆಗಳಾದ ರಾಷ್ಟ್ರೀಯ ಮಿಷನ್ ಚಾಲನಾ ಗುಂಪು (ಎನ್‌ಎಂಎಸ್‌ಜಿ) ಮತ್ತು ಮಹಿಳೆಯರು ಮತ್ತು ಮಕ್ಕಳ ಇಲಾಖೆಯ ಮಾನ್ಯ ರಾಜ್ಯ ಸಚಿವ ಹಾಗೂ ಎಂಒಎಸ್ ಕಾರ್ಯದರ್ಶಿ ನೇತೃತ್ವದ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿ (ಇಪಿಸಿ)ಗಳನ್ನು ಸ್ಥಾಪಿಸಲಾಗುತ್ತದೆ. ಐಸಿಡಿಎಸ್‌ನ ರಾಷ್ಟ್ರೀಯ ಮಿಷನ್ ನಿರ್ದೇಶನಾಲಯದ ಮಿಷನ್ ನಿರ್ದೇಶಕ-ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ ಹಂತದ ಅಧಿಕಾರಿ, ಮಿಷನ್‌ನ ದಿನನಿತ್ಯದ ಆಡಳಿತ ನಿರ್ವಹಣೆಗೆ ಜವಾಬ್ದಾರರಾಗಿರುತ್ತಾರೆ. ರಾಷ್ಟ್ರೀಯ ಮಿಷನ್ ನಿರ್ದೇಶಕನಿಗೆ ಎನ್‌ಎಂಎಸ್‌ಜಿ ಅಂಗೀಕರಿಸಿದ ಸೂಕ್ತ ಕಾರ್ಯನಿರ್ವಹಣೆ ಮತ್ತು ಹಣಕಾಸು ಅಧಿಕಾರವನ್ನು ಕೊಡಲಾಗಿದ್ದು, ಇದು ಆತ/ಆಕೆ ಪರಿಣಾಮಕಾರಿ ಕಾರ್ಯನಿರ್ವಹಣೆ ಮೂಲಕ ಐಸಿಡಿಎಸ್ ಮಿಷನ್‌ನ ಗುರಿಗಳನ್ನು ಮುಟ್ಟಲು ಸಬಲರನ್ನಾಗಿಸುತ್ತದೆ. ಇಷ್ಟಲ್ಲದೆ, ತಾಂತ್ರಿಕ ನೆರವು, ಪ್ರಸರಣ ಹಾಗೂ ಕಾರ್ಯನಿರ್ವಹಣೆಯ ಉನ್ನತ ಕೇಂದ್ರವಾಗಿ ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸ ಲಾಗುತ್ತಿದ್ದು, ಇದು ರಾಷ್ಟ್ರೀಯ ಮತ್ತು ರಾಜ್ಯ ಮಿಷನ್ ನಿರ್ದೇಶನಾಲಯಗಳಿಗೆ ಐಸಿಡಿಎಸ್ ಯೋಜನೆಯ ಅನುಷ್ಠಾನ, ಉಸ್ತುವಾರಿ ಹಾಗೂ ಮೇಲ್ವಿಚಾರಣೆಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ ನೆರವಾಗಲಿದೆ. ರಾಷ್ಟ್ರೀಯ ಐಸಿಡಿಎಸ್ ನಿರ್ದೇಶನಾಲಯ ಸೇರಿದಂತೆ ರಾಷ್ಟ್ರೀಯ ಮಟ್ಟದಲ್ಲಿ ಸಾಂಸ್ಥಿಕ ಸಂರಚನೆಗಳನ್ನು ಅಳವಡಿಸಲು ರೂಪರೇಷೆಗಳನ್ನು ಅನುಬಂಧ ಫಿIII ರಲ್ಲಿ ನೀಡಲಾಗಿದೆ. ಇದಕ್ಕೆ ಸಂಬಂಧಿಸಿದ ಅನುಷ್ಠಾನ ಮಾರ್ಗದರ್ಶಿ ಸೂತ್ರಗಳೊಟ್ಟಿಗೆ ವಿವರವಾದ ರೂಪರೇಷೆಗಳನ್ನು ಕೊಡಲಾಗುತ್ತದೆ.

5.2 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಹಂತದಲ್ಲಿ ಸಾಂಸ್ಥಿಕ ಏರ್ಪಾಟುಗಳು

ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಐಸಿಡಿಎಸ್ ಮಿಷನ್‌ನ ಪರಿಣಾಮಕಾರಿ ಅನುಷ್ಠಾನಕ್ಕೆ ನಾಯಕತ್ವ, ಕಾರ್ಯನೀತಿ ಬೆಂಬಲ ಹಾಗೂ ಮಾರ್ಗದರ್ಶನವನ್ನು ನೀಡಲು ಮುಖ್ಯಮಂತ್ರಿಯವರ ಅಧ್ಯಕ್ಷತೆ ಹಾಗೂ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಡಬ್ಲ್ಯುಸಿಡಿ ಮಂತ್ರಾಲಯದ ಸಚಿವರು ಉಪಾಧ್ಯಕ್ಷರಾಗಿರುವ ರಾಜ್ಯ ಮಿಷನ್ ಚಾಲನಾ ಗುಂಪು(ಎಸ್‌ಎಂಎಸ್‌ಜಿ) ಮತ್ತು ಮುಖ್ಯ ಕಾರ್ಯದರ್ಶಿ ಅಧ್ಯಕ್ಷ ಹಾಗೂ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಡಬ್ಲ್ಯುಸಿಡಿ ಮಂತ್ರಾಲಯದ ಸಚಿವರ ಉಪಾಧ್ಯಕ್ಷರಾಗಿರುವ ರಾಜ್ಯ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿಯನ್ನು ಪ್ರತ್ಯೇಕವಾಗಿ ರಚಿಸಲಾಗುತ್ತದೆ. ರಾಜ್ಯ ಐಸಿಡಿಎಸ್ ಮಿಷನ್ ಎಳೆಯ ಮಕ್ಕಳ ವೈವಿಧ್ಯಮಯ ಪೋಷಕಾಂಶ ಅಗತ್ಯಗಳು ಮತ್ತು ಅಭಿವೃದ್ಧಿ ಅಗತ್ಯಗಳನ್ನು ಪೂರೈಸಲು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಆಡಳಿತಕ್ಕೆ ಹೆಚ್ಚುವರಿ ಸಂಪನ್ಮೂಲ ನೀಡಲಿದೆ. ರಾಜ್ಯ ಐಸಿಡಿಎಸ್ ಮಿಷನ್‌ಗಳ ಕೆಲಸವನ್ನು ವಿಶೇಷ ಕಾರ್ಯದರ್ಶಿ/ಹೆಚ್ಚುವರಿ ಕಾರ್ಯದರ್ಶಿ(ಜೆಎಜಿಯ ಐಎಎಸ್ ಅಧಿಕಾರಿ/ಆಯ್ಕೆ ಶ್ರೇಣಿ/ಹೆಚ್ಚು

ಶ್ರೇಣಿಯ) ಮಿಷನ್ ನಿರ್ದೇಶಕರಾಗಿರುವ ರಾಜ್ಯ ಮಕ್ಕಳ ಅಭಿವೃದ್ಧಿ ಸೊಸೈಟಿ ಮೂಲಕ ನಿರ್ವಹಿಸಲಾಗುತ್ತದೆ. ರಾಜ್ಯ ಮಿಷನ್ ನಿರ್ದೇಶಕ/ಕಿಗೆ ಐಸಿಡಿಎಸ್ ಮಿಷನ್‌ನ ಗುರಿಯನ್ನು ಪರಿಣಾಮಕಾರಿಯಾಗಿ ಸಾಧಿಸಲು ಎಸ್‌ಎಂಎಸ್‌ಜಿ ಅಂಗೀಕರಿಸಿದ ಅಗತ್ಯವಾದ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರವನ್ನು ನೀಡಲಾಗುತ್ತದೆ. ರಾಜ್ಯ ಮಕ್ಕಳ ಅಭಿವೃದ್ಧಿ ಸೊಸೈಟಿ ಸೇರಿದಂತೆ ರಾಜ್ಯ ಮಟ್ಟದಲ್ಲಿ ಸಾಂಸ್ಥಿಕ ಸಂರಚನೆಗಳನ್ನು ಸ್ಥಾಪಿಸಲು ಅಗತ್ಯವಾದ ರೂಪರೇಷೆಗಳನ್ನು ಅನುಬಂಧ-ಫಿIಗಿ ರಲ್ಲಿ ನೀಡಲಾಗಿದೆ. ಇದಕ್ಕೆ ಸಂಬಂಧಿಸಿದ ವಿಸ್ತೃತ ಮಾರ್ಗದರ್ಶಿ ಸೂತ್ರಗಳನ್ನು ಅನುಷ್ಠಾನ ಮಾರ್ಗದರ್ಶಿ ಸೂತ್ರಗಳೊಡನೆ ನೀಡಲಾಗುತ್ತದೆ.

## 5.3 ಜಿಲ್ಲಾ ಹಂತದಲ್ಲಿ ಸಾಂಸ್ಥಿಕ ಸಂರಚನೆಗಳು

ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್‌ನ ಅಧ್ಯಕ್ಷ ಮುಖ್ಯಸ್ಥನಾಗಿರುವ ಹಾಗೂ ಸಂಬಂಧಿಸಿದ ಜಿಲ್ಲೆಯ ದಂಡಾಧಿಕಾರಿ/ಜಿಲ್ಲಾಧಿಕಾರಿ ಸಹ ಮುಖ್ಯಸ್ಥರಾಗಿರುವ ಜಿಲ್ಲಾ ಐಸಿಡಿಎಸ್ ಮಿಷನ್ ಇರಲಿದೆ. ಜಿಲ್ಲಾ ದಂಡಾಧಿüಕಾರಿ/ಜಿಲ್ಲಾಧಿಕಾರಿ ಮುಖ್ಯಸ್ಥರಾಗಿರುವ ಜಿಲ್ಲೆಗಳಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷ ಸಹಅಧ್ಯಕ್ಷ ಹಾಗೂ ಐಸಿಡಿಎಸ್‌ನ ಜಿಲ್ಲಾ ಕಾರ್ಯಕ್ರಮ ಅಧಿಕಾರಿಯು ಜಿಲ್ಲಾ ಮಿಷನ್‌ನ ನಿರ್ದೇಶಕ ಆಗಿರುತ್ತಾರೆ. ಮಿಷನ್‌ನಲ್ಲಿ ಜನಪ್ರತಿನಿಧಿಗಳಾದ ಸಂಬಂಧಿಸಿದ ಜಿಲ್ಲೆಯ ಸಂಸತ್ ಸದಸ್ಯರು, ಶಾಸಕರು, ಮೇಲ್ಮನೆ ಶಾಸಕರು, ಜಿಲ್ಲಾ ಪರಿಷತ್‌ನ ಸ್ಥಾಯಿ ಸಮಿತಿಗಳ ಅಧ್ಯಕ್ಷರು, ಪಂಚಾಯಿತಿ ಸಮಿತಿಗಳ ಅಧ್ಯಕ್ಷರು ಮತ್ತು ಅಧಿಕೃತ ಪ್ರತಿನಿಧಿಗಳಾಗಿ ಸಂಬಂಧಿಸಿದ ಇಲಾಖೆಯ ಜಿಲ್ಲಾ ಕಾರ್ಯಕ್ರಮ ನಿರ್ವಾಹಕರು, ರಾಜ್ಯದ ಪ್ರತಿನಿಧಿಗಳು, ಎನ್‌ಜಿಒಗಳ ಪ್ರತಿನಿಧಿಗಳು ಮತ್ತು ತಜ್ಞರು ಇರುತ್ತಾರೆ. ಜಿಲ್ಲಾ ಐಸಿಡಿಎಸ್ ಮಿಷನ್ ರಾಜ್ಯ ಮಕ್ಕಳ ಕಲ್ಯಾಣ ಸೊಸೈಟಿಯ ಜಿಲ್ಲಾ ಘಟಕದಂತೆ ಕಾರ್ಯ ನಿರ್ವಹಿಸಲಿದ್ದು, ನಿಗದಿತ ಜಿಲ್ಲೆಯಲ್ಲಿ ಐಸಿಡಿಎಸ್ ಮಿಷನ್‌ನ ಎಲ್ಲ ಜವಾಬ್ದಾರಿಗಳನ್ನು ಹಾಗೂ ಕೆಲಸಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಿದೆ. ಐಸಿಡಿಎಸ್ ಮಿಷನ್‌ನ ಹಂತಗಳ ಯೋಜನೆಯನ್ವಯ ಜಿಲ್ಲಾ ಮಿಷನ್ ಘಟಕವನ್ನು ರಚಿಸಲಾಗುತ್ತದೆ. ಜೊತೆಗೆ, ಜಿಲ್ಲಾ ಐಸಿಡಿಎಸ್ ಕೋಶಗಳು ಚಾಲ್ತಿಯಲ್ಲಿರುವ ಶರತ್ತುಗಳ ಅನ್ವಯ ಕಾರ್ಯನಿರ್ವಹಣೆಯನ್ನು ಮುಂದುವರಿಸು ತ್ತವೆ ಮತ್ತು ಇಂಥ ಕೋಶಗಳಿಲ್ಲದ ಜಿಲ್ಲೆಗಳಲ್ಲಿ ಜಿಲ್ಲಾ ಕೋಶಗಳನ್ನು ರಚಿಸಲಾಗುತ್ತದೆ. ಜಿಲ್ಲಾ ಮಕ್ಕಳ ಅಭಿವೃದ್ಧಿ ಮಿಷನ್‌ನ ರಚನೆ ಸೇರಿದಂತೆ ಜಿಲ್ಲಾ ಹಂತಗಳಲ್ಲಿ ಸಾಂಸ್ಥಿಕ ಸಂರಚನೆಗಳನ್ನು, ಸ್ಥಾಪನೆಯ ರೂಪರೇಷೆಗಳನ್ನು ಅನುಬಂಧ ಫಿಗಿ ರಲ್ಲಿ ನೀಡಲಾಗಿದೆ. ಇದಕ್ಕೆ ಸಂಬಂಧಿಸಿದ ವಿಸ್ತೃತ ಮಾರ್ಗದರ್ಶಿ ಸೂತ್ರಗಳನ್ನು ಅನುಷ್ಠಾನ ಮಾರ್ಗದರ್ಶಿ ಸೂತ್ರಗಳ ಜೊತೆಗೆ ನೀಡಲಾಗುತ್ತದೆ.

## 5.4 ವಿಭಾಗ/ಯೋಜನೆ ಹಂತದಲ್ಲಿ ಸಾಂಸ್ಥಿಕ ವ್ಯವಸ್ಥೆಗಳು

ವಿಭಾಗ/ಯೋಜನೆಯ ಹಂತದಲ್ಲಿ ಎಸ್‌ಡಿಎಂ ಅಥವಾ ಸಂಬಂಧಿಸಿದ ಪಂಚಾಯಿತಿ ಸಮಿತಿಯ ಅಧ್ಯಕ್ಷರ ನೇತೃತ್ವದ ವಿಭಾಗ ಐಸಿಡಿಎಸ್ ಮಿಷನ್ ಸಮಿತಿ ಇರಲಿದೆ. ಸಂಬಂಧಿಸಿದ ವಿಭಾಗ ಅಭಿವೃದ್ಧಿ ಅಧಿಕಾರಿ (ಬಿಡಿಒ) ಈ ಸಮಿತಿಯ ಸಹ-ಅಧ್ಯಕ್ಷ ಹಾಗೂ ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿ (ಸಿಡಿಪಿಒ) ಸಂಚಾಲಕರಾಗಿರುತ್ತಾರೆ. ವಿಭಾಗದ ಸಾರ್ವಜನಿಕ ಪ್ರತಿನಿಧಿಗಳು, ಪಂಚಾಯಿತಿ ಸದಸ್ಯರು ಮತ್ತು ವೈದ್ಯಾಧಿಕಾರಿ, ಶಿಕ್ಷಣಾಧಿಕಾರಿ, ವಿಸ್ತರಣಾಧಿüಕಾರಿ, ಜಲ ಮತ್ತು ನೈರ್ಮಲ್ಯ ಮತ್ತಿತರ ವಿಭಾಗ ಹಂತದ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು, ಇಬ್ಬರು ಅಥವಾ ಮೂವರು ಐಸಿಡಿಎಸ್ ಮೇಲ್ವಿಚಾರಕರು (ಆವರ್ತ ಮಾದರಿ ಯಲ್ಲಿ), ಜಿಲ್ಲಾ ಹಂತದ ಅಧಿಕಾರಿ, ಎನ್‌ಜಿಒಗಳು, ಇಬ್ಬರು ಇಲ್ಲವೇ ಮೂವರು ವೃತ್ತಿಪರರು/ತಜ್ಞರು/ವೃತ್ತಿನಿರತರು ಸದಸ್ಯರಾಗಿರುತ್ತಾರೆ. ಇದಕ್ಕೆ ಸಂಬಂಧಿಸಿದ ವಿಸ್ತೃತ ಮಾರ್ಗದರ್ಶನ ಸೂತ್ರಗಳನ್ನು ಅನುಷ್ಠಾನ ಮಾರ್ಗದರ್ಶಿ ಸೂತ್ರಗಳ ಜೊತೆಗೆ

ನೀಡಲಾಗುತ್ತದೆ. ವಿಭಾಗ ಐಸಿಡಿಎಸ್ ಮಿಷನ್ ಸಮಿತಿಯ ಕಾರ್ಯಗಳನ್ನು ಸಂಬಂಧಿಸಿದ ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿ(ಸಿಡಿಪಿಒ) ನೇತೃತ್ವದ ವಿಭಾಗ ಐಸಿಡಿಎಸ್ ಮಿಷನ್ ತಂಡದ ಮೂಲಕ ನಿರ್ವಹಿಸಲಾಗುತ್ತದೆ. ಆತ/ಆಕೆ ವಿಭಾಗ/ಯೋಜನಾ ಹಂತದಲ್ಲಿ ಐಸಿಡಿಎಸ್ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಗೊಳಿಸುವಿಕೆಯನ್ನು ಖಾತ್ರಿ ಪಡಿಸುವುದಲ್ಲದೆ, ಸಂಬಂಧಿಸಿದ ಕೆಲಸದ ವ್ಯಾಪ್ತಿಯಲ್ಲಿ ಐಸಿಡಿಎಸ್ ಮಿಷನ್‌ನ ಗುರಿಗಳನ್ನು (ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡ ವೃತ್ತಿಪರ ತಂಡದೊಟ್ಟಿಗೆ) ಸಾಧಿಸುವ ಜವಾಬ್ದಾರಿ ಹೊಂದಿರುತ್ತಾರೆ.

ದೇಶದೆಲ್ಲೆಡೆಯ ಒಟ್ಟು ಯೋಜನೆಗಳಲ್ಲಿ ಶೇ.10ರಷ್ಟರಲ್ಲಿ ವಿಭಾಗ ಮತ್ತು ಗ್ರಾಮಗಳ ಹಂತದಲ್ಲಿ ಮಕ್ಕಳು ಹಾಗೂ ಮಹಿಳೆಯರ ಉಳಿವು ಮತ್ತು ಪೋಷಕಾಂಶ ಸೇವನೆಯಲ್ಲಿ ಪ್ರಗತಿಯ ವೇಗ ವರ್ಧಿಸಲು ವಿಭಾಗ ಐಸಿಡಿಎಸ್ ಸಂಪನ್ಮೂಲ ಕೇಂದ್ರ (ಬಿಐಆರ್ಸಿ)ಗಳನ್ನು ಆರಂಭಿಸಲಾಗುತ್ತದೆ. ಇವು ಮಗುವಿನ ಜನನದ ಮೊದಲ ಆರು ತಿಂಗಳು ಹಾಲುಣಿಸುವಿಕೆ ಮತ್ತು ಆರು ತಿಂಗಳ ಬಳಿಕ ಹಾಲುಣಿಸುವಿಕೆ ಜೊತೆಗೆ ಸಮಯಕ್ಕೆ ಸರಿಯಾಗಿ ಮತ್ತು ಸೂಕ್ತ ಪೂರಕ ಆಹಾರ ನೀಡುವುದನ್ನು, ಹಸುಗೂಸು ಮತ್ತು ಎಳೆಯ ಮಕ್ಕಳಿಗೆ ಹಾಲೂಡಿಸುವಿಕೆಯ ಬೆಂಬಲ ಸಲಹಾ ಸೇವೆಗಳನ್ನು ಉತ್ತೇಜಿಸಲು ಬಿಐಆರ್ಸಿಗಳನ್ನು ಆರಂಭಿಸ ಲಾಗುತ್ತದೆ. ಇದರ ಜೊತೆಗೆ ಪೋಷಕಾಂಶ ಪೂರೈಕೆ, ಐವೈಸಿಎಫ್, ಇಸಿಸಿಇ, ಬೆಳವಣಿಗೆ ಮೇಲ್ವಿಚಾರಣೆ ಮತ್ತು ಇನ್ನಿತರ ಸಂಬಂಧಿಸಿದ ಐಸಿಡಿಎಸ್ ಸೇವೆಗಳನ್ನು ಪೂರೈಸುವವರಿಗೆ ಮತ್ತು ಎಲ್ಲ ಸಿಬ್ಬಂದಿಯ ಸಾಮರ್ಥ್ಯ ನಿರ್ಮಾಣ ಹಾಗೂ ತರಬೇತಿಯಲ್ಲದೆ ಇಸಿಸಿಇ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ನಿರ್ದೇಶಿತ ಗಮನ ನೀಡಲಾಗುತ್ತದೆ. ಬಿಐಆರ್ಸಿ ಅಡಿ ಟೆಲಿಫೋನ್ ಮೂಲಕ ಮೂಲಭೂತ ಸಲಹಾ ಸೇವೆಗಳನ್ನು ಒದಗಿಸಲು ನೆರವಾಗುವ ಮತ್ತು ವಿಭಾಗ ಹಂತದಲ್ಲಿ ಸೌಮ್ಯ ಅಥವಾ ತೀವ್ರವಾಗಿ ಪೋಷಕಾಂಶ ಕೊರತೆ ಇರುವ ಮಕ್ಕಳಿಗೆ ತುರ್ತು ಹೊರಚಾಚು ಸೇವೆಯನ್ನು ನೀಡಲು ಪೋಷಕಾಂಶ ಸಹಾಯವಾಣಿಯನ್ನು ರಚಿಸಬಹುದು. ಪೋಷಕಾಂಶ ಸಹಾಯವಾಣಿಯು ತುರ್ತು ಹೊರಚಾಚು ಸೇವೆಯನ್ನು ಜಿಲ್ಲಾ ಮತ್ತು ವಿಭಾಗ ಹಂತಗಳಲ್ಲಿ ಆರೋಗ್ಯ ಇಲಾಖೆಯ ಎನ್‌ಆರ್‌ಎಚ್‌ಎಂ ಸಹಯೋಗದಲ್ಲಿ ಖಾತ್ರಿಗೊಳಿಸಬೇಕು.

ಅಗತ್ಯಗಳು ಹಾಗೂ ಮೂಲಸೌಕರ್ಯಗಳ ಲಭ್ಯತೆಯನ್ನು ಆಧರಿಸಿ ರಾಜ್ಯದ ಯಾವ ವಿಭಾಗಗಳಲ್ಲಿ ಬಿಐಆರ್ಸಿಗಳನ್ನು ಆರಂಭಿಸಬೇಕು ಎಂಬುದನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಳು ಎಪಿಐಪಿಗಳ ಮೂಲಕ ಯೋಜಿಸಿ, ಡಬ್ಲ್ಯುಸಿಡಿ ಮಂತ್ರಾಲಯದ ಕಾರ್ಯದರ್ಶಿಯ ನೇತೃತ್ವದ ಇಸಿಸಿಯಿಂದ ಅಂಗೀಕಾರ ಪಡೆದು ಸ್ಥಾಪಿಸಬಹುದು.

ವಿಭಾಗ ಮಕ್ಕಳ ಅಭಿವೃದ್ಧಿ ಮಿಷನ್‌ನ ಸ್ಥಾಪನೆ ಸೇರಿದಂತೆ ವಿಭಾಗ ಹಂತದಲ್ಲಿ ಸಾಂಸ್ಥಿಕ ಸಂರಚನೆಗಳನ್ನು ಸ್ಥಾಪಿಸಲು ರೂಪರೇಷೆಗಳನ್ನು ಅನುಬಂಧ ಫಿಗ। ರಲ್ಲಿ ಕೊಡಲಾಗಿದೆ.

5.5 ಗ್ರಾಮ/ವಾರ್ಡ್ ಹಂತದಲ್ಲಿ ಸಾಂಸ್ಥಿಕ ವ್ಯವಸ್ಥೆಗಳು:

ಎ) ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೋಷಣಾ ಸಮಿತಿ (ವಿಎಚ್‌ಎಸ್‌ಎನ್‌ಸಿ): ಗ್ರಾಮ ಮತ್ತು ವಾರ್ಡ್(ನಗರ ಪ್ರದೇಶಗಳಲ್ಲಿ) ಹಂತದಲ್ಲಿ ವಿಎಚ್‌ಎಸ್‌ಎನ್‌ಸಿಗಳು ಮಕ್ಕಳ ಅಭಿವೃದ್ಧಿ ಮತ್ತು ಪೋಷಣೆಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳಿಗೆ ಜವಾಬ್ದಾರವಾಗಿದ್ದು, ಎಡಬ್ಲ್ಯುಸಿ ಹಂತದಲ್ಲಿ ನಿರ್ಧಾರಗಳನ್ನು ಕೈಗೊಳ್ಳುವುದಕ್ಕೆ ಅನುವು ಮಾಡುವ ಸಮಿತಿಯಡಿ ಇರುತ್ತವೆ. ವಿಎಚ್‌ಎಸ್‌ಎನ್‌ಸಿಗಳು ಪಿಆರ್‌ಐನ ಉಪಸಮಿತಿಯಂತೆ ಕಾರ್ಯನಿರ್ವಹಿಸುತ್ತವೆ.

ಬಿ) ಅಂಗನವಾಡಿ ಕೇಂದ್ರಗಳು- ಆರೋಗ್ಯ, ಪೋಷಣೆ ಮತ್ತು ಆರಂಭಿಕ ಕಲಿಕೆಯ ಗ್ರಾಮದ ಮೊದಲ ಕೇಂದ್ರ: ಗ್ರಾಮೀಣ ವಾಸಸ್ಥಳಗಳ ಹಂತದಲ್ಲಿ ಎಡಬ್ಲ್ಯುಸಿಗಳು ಎಳೆಯ ಮಕ್ಕಳ ಉಳಿವು, ಬೆಳವಣಿಗೆ ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಕೇಂದ್ರಗಳಾಗಿ ಉಳಿದುಕೊಳ್ಳಲಿವೆ.

ಐಸಿಡಿಎಸ್ ಮಿಷನ್‌ನಲ್ಲಿ ಅಂಗನವಾಡಿ ವೇದಿಕೆಯನ್ನು ಸಬಲಗೊಳಿಸಿ, ಗ್ರಾಮ/ವಸತಿ ಪ್ರದೇಶದ ಆರೋಗ್ಯ, ಪೋಷಣೆ ಮತ್ತು ಆರಂಭಿಕ ಕಲಿಕೆಯ ಮೊದಲ ಬಿಂದುವಾಗಿ ಮುಂದುವರಿಸಲಾಗುತ್ತದೆ. ಇದಕ್ಕಾಗಿ ಮೂಲಸೌಲಭ್ಯ ಮತ್ತು ಸವಲತ್ತುಗಳಿಗೆ ಹೆಚ್ಚುವರಿ ಆರ್ಥಿಕ ಸಂಪನ್ಮೂಲ ನೀಡಿಕೆ, ಆಶಾ ಕಾರ್ಯಕರ್ತೆಯರಿಗೆ ಆಸರೆ ನೀಡುವಿಕೆ ಮತ್ತು ಎಳೆಯ ಮಕ್ಕಳು, ಹದಿವಯಸ್ಕ ಹೆಣ್ಣುಮಕ್ಕಳು ಮತ್ತು ಮಹಿಳೆಯರಿಗೆ ಬಹುಕ್ಷೇತ್ರಿಯ ಮಧ್ಯಸ್ಥಿಕೆಯನ್ನು ಏಕತ್ರಗೊಳಿಸಲಾಗುತ್ತದೆ. ಎಡಬ್ಲ್ಯುಸಿಗಳ ಹಂತದಲ್ಲಿ ನಿಗದಿಪಡಿಸಿದಂತೆ ಎಎಲ್‌ಎಂಸಿಗಳು ನಿರ್ವಹಣೆ ಮತ್ತು ಮೇಲ್ವಿಚಾರಣೆಗೆ ಜವಾಬ್ದಾರರಾಗಿರುತ್ತವೆ.

ಗ್ರಾಮ/ವಾರ್ಡ್ ಹಂತ ಸೇರಿದಂತೆ ಸಾಂಸ್ಥಿಕ ವ್ಯವಸ್ಥೆಯನ್ನು ಸ್ಥಾಪನೆಗೊಳಿಸಲು ಅಗತ್ಯ ರೂಪರೇಷೆಯನ್ನು ಅನುಬಂಧ ಫಿಗII ನೀಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ವಿಸ್ತೃತ ರೂಪರೇಷೆಗಳನ್ನು ಅನುಷ್ಠಾನ ಮಾರ್ಗದರ್ಶಿ ಸೂತ್ರಗಳೊಟ್ಟಿಗೆ ನೀಡಲಾಗುತ್ತದೆ.

+++++++++++++++++++++++++++++++++++++++++++++++++++

6. ರಾಜ್ಯ/ಜಿಲ್ಲಾ ಐಸಿಡಿಎಸ್ ಯೋಜನೆ (ಎಪಿಐಪಿ):

ಅನ್ವೇಷಣಾತ್ಮಕ ಮಾದರಿಗಳು/ಪ್ರಾಯೋಗಿಕ ಮಾದರಿಗಳನ್ನು ಆಧರಿಸಿದ, ನಿರ್ದಿಷ್ಟವಾದ, ವಿಕೇಂದ್ರೀಕೃತ, ಹೊಂದಿಕೊಳ್ಳುವ ಗುಣವುಳ್ಳ, ಸ್ಥಳೀಯವಾಗಿ ಸೂಕ್ತವಾದ ಕಾರ್ಯನೀತಿಗಳನ್ನು ಅಭಿವೃದ್ಧಿಪಡಿಸಲು ಮೊದಲಿಗೆ ರಾಜ್ಯ ಮಟ್ಟದಲ್ಲಿ ಯೋಜನೆಗಳನ್ನು ರೂಪಿಸಬೇಕು ಮತ್ತು ಅದನ್ನು ಜಿಲ್ಲಾ ಮಟ್ಟದ ಕ್ರಿಯಾಯೋಜನೆಗಳಿಗೆ ವಿಸ್ತರಿಸಬೇಕು. ಈ ಕ್ರಿಯಾಯೋಜನೆಗಳು ಮಿಷನ್‌ನ ಉದ್ದೇಶವನ್ನು ಸಾಧಿಸಲು ವಿಭಾಗ ಮತ್ತು ಗ್ರಾಮಾಧರಿತ ಅಗತ್ಯಗಳು ಮತ್ತು ಮಾದರಿಗಳ ಸೂಚಕಗಳನ್ನು ಒಳಗೊಂಡಿದ್ದು, ತಾಯಿ ಮತ್ತು ಮಗುವಿಗೆ ಸಂಬಂಧಿಸಿದ ಫಲಿತಾಂಶಗಳನ್ನು ಸಾಧಿಸಲು ಸೂತ್ರೀಕರಣಗೊಂಡ ಕ್ರಮಬದ್ಧ ಚೌಕಟ್ಟು ಅಗತ್ಯವಿರುವಂತೆ ವಿನ್ಯಾಸಗೊಳಿಸಿರಲಾಗುತ್ತದೆ. ನಿರ್ವಹಣೆ ಮತ್ತು ಸಾಂಸ್ಥಿಕ ಸುಧಾರಣೆಗಳು ರಾಜ್ಯ, ಜಿಲ್ಲೆ ಮತ್ತು ಉಪ ಜಿಲ್ಲಾ ಹಂತದಲ್ಲಿ ಎನ್‌ಆರ್‌ಎಚ್‌ಎಂ ಮತ್ತು ಎಸ್‌ಎಸ್‌ಎ ಸೇರಿದಂತೆ ಪ್ರಮುಖ ಕಾರ್ಯಕ್ರಮಗಳ ವಿಕೇಂದ್ರೀಕೃತ ಯೋಜನೆಗಳನ್ನು ಬೆಂಬಲಿಸುವಂತೆ ಸೂಕ್ತ ಮಾನವ ಸಂಪನ್ಮೂಲವನ್ನು ಅಧಿಕಗೊಳಿಸುತ್ತವೆ.

ರಾಜ್ಯ/ಜಿಲ್ಲಾ ಮಕ್ಕಳ ಅಭಿವೃದ್ಧಿ ಕ್ರಿಯಾಯೋಜನೆಗಳು ಐಸಿಡಿಎಸ್ ಮಿಷನ್‌ನ ಸಮಗ್ರ ಕ್ರಿಯೆಗೆ ಪ್ರಮುಖ ಕಾರ್ಯತಂತ್ರಗಳಾಗಿರಲಿವೆ. ಐಸಿಡಿಎಸ್ ಮಿಷನ್‌ನ ಯಶಸ್ಸು ಸಮುದಾಯವನ್ನು ಆಧರಿಸಿದ ಯೋಜನಾ ಪ್ರಕ್ರಿಯೆಯ ಗುಣಮಟ್ಟವನ್ನು ನೆಚ್ಚಿಕೊಂಡಿರುವುದರಿಂದ, (i) ಸಮುದಾಯವು ತನ್ನ ಮಕ್ಕಳ ಅಗತ್ಯಗಳನ್ನು ಯೋಜಿಸಬಲ್ಲದು ಮತ್ತು (ii) ಅದನ್ನು ಅನುವುಗೊಳಿಸಲು ಸಮುದಾಯಗಳ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದಕ್ಕೆ ಹೊರತಾಗಿ ಹೆಚ್ಚಿನದರ ಅಗತ್ಯವಿದೆ. ಗ್ರಾಮಗಳೊಳಗೆ ಹರಡಿಕೊಂಡ ವಿವಿಧ ವಸತಿಪ್ರದೇಶಗಳು/ಹಾಡಿಗಳು ಮತ್ತು ಸಮುದಾಯದ ಗುಂಪುಗಳು ಇರುವುದರಿಂದ, ಐಸಿಡಿಎಸ್ ಮಿಷನ್ ವಾಸಸ್ಥಳವನ್ನು ಯೋಜನೆಯ ಘಟಕವೆಂದು ಪರಿಗಣಿಸಬೇಕೇ ಹೊರತು ಗ್ರಾಮವನ್ನಲ್ಲ. ನಗರ ಪ್ರದೇಶಗಳಲ್ಲಿ ಬಡಜನರ ವಾಸಸ್ಥಳದಲ್ಲಿರುವ ವಸತಿಗಳ ಗುಚ್ಚವು ಯೋಜನೆಯ ಘಟಕ ಆಗಿರಲಿದೆ. ನಗರ ಪ್ರದೇಶದ ಬಡ ಸಮುದಾಯ ಗಳ ಮಕ್ಕಳಿಗೆ ನಿರ್ದಿಷ್ಟ ಯೋಜನೆಯನ್ನು ಒಂದೋ ಪ್ರತ್ಯೇಕ ಯೋಜನೆಯಾಗಿ ಇಲ್ಲವೇ ಅದನ್ನು ಜಿಲ್ಲಾ ಯೋಜನೆಗಳಲ್ಲಿ ಸಮಗ್ರಗೊಳಿಸಿ ಅವಕಾಶ ಕಲ್ಪಿಸಲಾಗುತ್ತದೆ. ಅಧಿಕಾರಿಗಳು ಗುರುತಿಸಿದ ಜಾಗ/ಮಕ್ಕಳಸ್ನೇಹಿ ಕಟ್ಟಡವನ್ನು ಒದಗಿಸಲು ನಗರ ಯೋಜನೆ ಮತ್ತು ಉಪನಿಯಮಗಳಲ್ಲಿ ಸೂಕ್ತ ಬದಲಾವಣೆ ಮಾಡಬೇಕಾಗುತ್ತದೆ.

ರಾಜ್ಯ/ಜಿಲ್ಲಾ ಮಕ್ಕಳ ಅಭಿವೃದ್ಧಿ ಯೋಜನೆಗಳನ್ನು ಮೇಲಿನ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಸಿದ್ಧಗೊಳಿಸಬೇಕಾಗುತ್ತದೆ. ರಾಜ್ಯವು ಸಂಪನ್ಮೂಲ ಲಭ್ಯತೆ ಮತ್ತು ಆದ್ಯತೆಗೆ ಅನುಗುಣವಾಗಿ ಇಡೀ ಮಿಷನ್ ಅವಧಿಗೆ ಮಾತ್ರವಲ್ಲದೆ ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಜಿಲ್ಲಾ ಮಕ್ಕಳ ಅಭಿವೃದ್ಧಿ ಸೊಸೈಟಿಯು ವಾರ್ಷಿಕ ಯೋಜನೆ ಮತ್ತು ಆಯವ್ಯಯವನ್ನು ಮುಖ್ಯಮಂತ್ರಿ ನೇತೃತ್ವದ ರಾಜ್ಯಮಟ್ಟದ ಐಸಿಡಿಎಸ್ ಮಿಷನ್‌ಗೆ ಶಿಫಾರಸು ಮಾಡುತ್ತದೆ. ಆರಂಭಿಕವಾಗಿ ರಾಜ್ಯ ಯೋಜನೆ ಮಾತ್ರ ಅಗತ್ಯವಿರಲಿದೆ ಹಾಗೂ ಕ್ರಮೇಣ ಅಗತ್ಯವನ್ನು ಆಧರಿಸಿ, ಸಾಮರ್ಥ್ಯ ಮತ್ತು ಅಗತ್ಯಗಳನ್ನು ಪರಿಗಣಿಸಿ ಜಿಲ್ಲಾ ನಿರ್ದಿಷ್ಟ ಯೋಜನೆಗಳನ್ನು ಸಿದ್ಧಪಡಿಸಬಹುದು.

ಮಕ್ಕಳ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಗೊಳಿಸುವಲ್ಲಿನ ಹಂತಗಳು: ರಾಜ್ಯ ಮಕ್ಕಳ ಅಭಿವೃದ್ಧಿ ಸೊಸೈಟಿಯು ರಾಜ್ಯ ಮಟ್ಟದಲ್ಲಿ ಮಿಷನ್ ಮಾದರಿಯಲ್ಲಿ ಐಸಿಡಿಎಸ್‌ನ ಮುನ್ನೋಟಗಳನ್ನು ಸಾಧಿಸುವ ಬದ್ಧತೆ ಹೊಂದಿರುವ ಜಿಲ್ಲೆ ಮತ್ತು ವಿಭಾಗ ಹಂತದ ಮುಖ್ಯ ತಂಡಗಳನ್ನು ಎಚ್ಚರಿಕೆಯಿಂದ ಗುರುತಿಸಬೇಕು. ಸ್ಪರ್ಧಾತ್ಮಕ ಜಿಲ್ಲಾ ಯೋಜನೆ ಮತ್ತು ಹೊಸ ಪೀಳಿಗೆಯ ಐಸಿಡಿಎಸ್ ಯೋಜನೆಗೆ ಸಮುದಾಯದ ಬೆಂಬಲವನ್ನು ಕ್ರೋಢೀಕರಿಸುವ ಸಾಮರ್ಥ್ಯವಿರುವ ವಿಭಾಗ ಹಂತದ ತಂಡಗಳ ಆಯ್ಕೆ ಇದರ ಉದ್ದೇಶ. ರಾಜ್ಯ ಮತ್ತು ಜಿಲ್ಲಾ ಮಕ್ಕಳ ಅಭಿವೃದ್ಧಿ ಯೋಜನೆಗಳನ್ನು ಕೆಳಗಿನ ಪ್ರಕ್ರಿಯೆಗಳನ್ನು ಆಧರಿಸಿ ಅಭಿವೃದ್ಧಿಪಡಿಸಲಾಗುತ್ತದೆ.

ಪ್ರಾರಂಭ * ಯೋಜನಾ ತಂಡಗಳನ್ನು ರಚಿಸುವುದು * ಜನಗಣತಿಯ ಅಂಕಿಅಂಶಗಳ ಅಧ್ಯಯನ * ತರಬೇತಿ ಮಾದರಿಗಳನ್ನು ಸಿದ್ಧಗೊಳಿಸುವುದು * ಸಮರ್ಥ ಸಹಭಾಗಿಗಳನ್ನು ಕ್ರೋಢೀಕರಿಸುವುದು * ತರಬೇತಿ ದಾರರಿಗೆ ತರಬೇತಿ ನೀಡುವುದು * ನಿರ್ಬಂಧರಹಿತ ಅನುದಾನದ ಬಿಡುಗಡೆ.

ಜನಸಂಖ್ಯೆಯ ಎಲ್ಲೆ ಗುರುತಿಸುವಿಕೆ: * ಇಡೀ ಜಿಲ್ಲೆಗೆ/ಗಳಿಗೆ ವ್ಯಾಪಕ ಭೇಟಿ * ಎಡಬ್ಲ್ಯುಸಿ ಮತ್ತು ಮಿನಿ ಎಡಬ್ಲ್ಯುಸಿಗಳಿಗೆ ಜನಸಂಖ್ಯೆಯ ಎಲ್ಲೆ ಗುರುತಿಸುವುದು * ಸಾಧ್ಯವಿರುವಲ್ಲೆಲ್ಲ ಎಡಬ್ಲ್ಯುಸಿಗಳ ಕ್ರೋಢೀಕರಣ.

ಎಡಬ್ಲ್ಯುಸಿಗಳ ಹಂತದಲ್ಲಿ ಸ್ಥಳೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು: * ಗ್ರಾಮಗಳಿಗೆ ವಿಸ್ತೃತ ಸಂಪರ್ಕ ಅಭಿಯಾನ * ವಿಸ್ತೃತ ಸಮುದಾಯ ವಸತಿ ಸಮೀಕ್ಷೆ (1)ದೃಷ್ಟಿಕೋನ ಮತ್ತು ಅಗತ್ಯಗಳು(2) ಪಾಲನಾ ವರ್ತನೆಗಳು ಹಾಗೂ (3) ಲಭ್ಯ ಮೂಲಸೌಲಭ್ಯಗಳ ಬಗ್ಗೆ ಖಚಿತಪಡಿಸಿಕೊಳ್ಳುವುದು * ಸ್ಥಳೀಯ ಪರಿಹಾರಗಳು ಮತ್ತು ಅನ್ವೇಷಣಾತ್ಮಕ ಮಾರ್ಗಗಳು * ಸ್ಥಳೀಯ ಮಹಿಳಾ ಜೋಡಣಾ ಸಿಬ್ಬಂದಿಯನ್ನು ಗುರುತಿಸುವುದು.

ಜಿಲ್ಲಾ ಐಸಿಡಿಎಸ್ ಮಕ್ಕಳ ಅಭಿವೃದ್ಧಿ ಯೋಜನೆ: * ವಿಭಾಗ ಮತ್ತು ಸ್ಥಳೀಯ ಹಂತದ ಮಾಹಿತಿಯನ್ನು ಒಟ್ಟುಗೂಡಿಸಿ (i) ಜಿಲ್ಲಾ ಐಸಿಡಿಎಸ್ ವಾರ್ಷಿಕ ಯೋಜನೆ ಮತ್ತು (ii) ಜಿಲ್ಲಾ ಪಂಚವಾರ್ಷಿಕ ಐಸಿಡಿಎಸ್ ಯೋಜನೆಯನ್ನು ಅಭಿವೃದ್ಧಿಗೊಳಿಸುವುದು.

ರಾಜ್ಯ ಮಕ್ಕಳ ಅಭಿವೃದ್ಧಿ ಯೋಜನೆ : * ರಾಜ್ಯ ಐಸಿಡಿಎಸ್ ವಾರ್ಷಿಕ ಯೋಜನೆಯ ಅಭಿವೃದ್ಧಿ * ರಾಜ್ಯ ಐಸಿಡಿಎಸ್ ಪಂಚವಾರ್ಷಿಕ ಯೋಜನೆಯ ಅಭಿವೃದ್ಧಿ

ನಿರ್ದಿಷ್ಟವಾಗಿ, ಜಿಲ್ಲೆ ಮತ್ತು ರಾಜ್ಯ ಐಸಿಡಿಎಸ್ ಯೋಜನೆಯನ್ನು ಅಭಿವೃದ್ಧಿಪಡಿಸುವಲ್ಲಿ ಯೋಜನಾ ಪ್ರಕ್ರಿಯೆಗಳ ಪ್ರಮುಖ ಹಂತಗಳೆಂದರೆ.,

* ನಾನಾ ಹಂತಗಳ ಯೋಜನಾ ತಂಡಗಳನ್ನು ಅವುಗಳ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ಗುರುತಿಸಿ, ರಚಿಸುವುದು * ಯೋಜನಾ ಚಟುವಟಿಕೆಗಳಿಗೆ ವಿಸ್ತೃತ ನಿಯಮಗಳನ್ನು

ನಿಗದಿಗೊಳಿಸಿದಾಗ, ವೈವಿಧ್ಯತೆ ಮತ್ತು ಅನ್ವೇಷಕತೆಯನ್ನು ಒದಗಿಸುವುದು ಅಗತ್ಯವಾಗಿರಲಿದೆ. ಪ್ರಸ್ತುತ ಐಸಿಡಿಎಸ್ ಸಂರಚನೆಗಳು ಹಾಗೂ ಸಂಬಂಧಿಸಿದ ಇಲಾಖೆಗಳಲ್ಲಿ ಯೋಜನೆ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸೂಕ್ತ ಸಾಮರ್ಥ್ಯದ ಸಿಬ್ಬಂದಿ ಇಲ್ಲದೇ ಇರುವ ಸಾಧ್ಯತೆ ಇದೆ. ಇಂಥ ಪ್ರಕರಣಗಳಲ್ಲಿ ಸರ್ಕಾರಗಳು ರಾಜ್ಯ, ಜಿಲ್ಲೆ ಮತ್ತು ವಿಭಾಗ ಹಂತದಲ್ಲಿ ವೃತ್ತಿಪರರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಬೇಕಾಗುತ್ತದೆ.

* ಅಂಗನವಾಡಿ/ಮಿನಿ ಅಂಗನವಾಡಿಗೆ ಜನಸಂಖ್ಯೆಯನ್ನು ಗುರುತಿಸಲು ಜನಗಣತಿಯ ಮಾಹಿತಿಯನ್ನು ಅಧ್ಯಯನ ಮಾಡಬೇಕು. ಹಾಡಿಗಳು, ಚದುರಿದ ಮರುಭೂಮಿ/ಬೆಟ್ಟ ಪ್ರದೇಶಗಳು ಮತ್ತು ನಗರ ಪ್ರದೇಶ ಗಳು (ಅಧಿಕೃತ ಕೊಳೆಗೇರಿಗಳು ಮತ್ತು ಬಡವರ ಅನಧಿಕೃತ ವಸತಿ ಪ್ರದೇಶಗಳು), ವಲಸೆ ಮತ್ತು/ಅಥವಾ ನಿರ್ಮಾಣ ಕ್ಷೇತ್ರದ ಕಾರ್ಮಿಕರು ಹಾಗೂ ಸಾಮಾಜಿಕವಾಗಿ ಹೊರಗಿರುವ ಗುಂಪುಗಳಲ್ಲಿರುವ ಮಕ್ಕಳನ್ನು ತಲುಪುವುದು ಅಗತ್ಯ.

(i) ದೊಡ್ಡ ನಗರಗಳು ಮತ್ತು ಅಧಿಕ ಸಂಖ್ಯೆಯ ಕೊಳೆಗೇರಿಗಳು ಇರುವ ನಗರಗಳಿಗೆ ಜಿಲ್ಲೆಯ ಸ್ಥಾನಮಾನ ಕೊಡಲು ಮತ್ತು (ii) ಸಣ್ಣ ಪಟ್ಟಣಗಳು ಮತ್ತು ಕಡಿಮೆ ಸಂಖ್ಯೆಯ ಕೊಳೆಗೇರಿಗಳು ಇರುವ ಪಟ್ಟಣಗಳನ್ನು ಹಾಲಿ `ಜಿಲ್ಲೆ'ಯ ಭಾಗವಾಗಿಸುವುದಕ್ಕೆ ಅನುವು ಮಾಡಿಕೊಡಲಿದೆ.

* ಹಾಲಿ ಸಿಬ್ಬಂದಿ ಹಾಗೂ ಯೋಜನಾ ತಂಡದ ನಾನಾ ಹಂತದಲ್ಲಿನ ಪ್ರಮುಖ ಸದಸ್ಯರ ಸಾಮರ್ಥ್ಯ ಬಲಪಡಿಸುವಿಕೆಯನ್ನು ಹೆಚ್ಚಿಸಲು ಅನುಗೊಳಿಸುವಿಕೆ ಮತ್ತು ತರಬೇತಿ ಮಾದರಿಗಳನ್ನು ಅಭಿವೃದ್ಧಿಪಡಿಸಬೇಕಾದ ಅಗತ್ಯವಿದೆ. ಅಲ್ಲದೆ, ಸಮೀಕ್ಷಾ ನಮೂನೆಗಳು, ಗುಂಪು ಚರ್ಚೆ ಮಾರ್ಗದರ್ಶಿಗಳು, ಗ್ರಾಮ ಐಸಿಡಿಎಸ್ ಮಿಷನ್ ದಾಖಲೆ ಪುಸ್ತಕಗಳನ್ನು ಅಭಿವೃದ್ಧಿಪಡಿಸಬೇಕಿದೆ.

* ಐಸಿಡಿಎಸ್ ಸೇರಿದಂತೆ ಇನ್ನಿತರ ಸೇವೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಪಿಆರ್ಐ ಮತ್ತು ಯುಎಲ್‌ಬಿಗಳಿಗೆ ನೀಡಲಾದ ಅಧಿಕಾರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು.

* ಆರೋಗ್ಯ ಕೇಂದ್ರಗಳು, ಶಾಲೆಗಳು, ತರಬೇತಿ ಕೇಂದ್ರಗಳು ಇತ್ಯಾದಿ ಎಡಬ್ಲ್ಯುಸಿಗೆ ಜೋಡಣೆಯಾದ ಸೇವೆಗಳು ಮತ್ತು ಸೌಲಭ್ಯಗಳ ನಕ್ಷೆಯನ್ನು ರಚಿಸುವುದು

* ಐಸಿಡಿಎಸ್ ಮಿಷನ್‌ಗೆ ಪಾಲು ಸಲ್ಲಿಸುವ ಮತ್ತು ಯೋಜನಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬಹುದಾದ ಎನ್‌ಜಿಒಗಳು, ಮಹಿಳಾ ಎಸ್‌ಎಚ್‌ಜಿಗಳು ಹಾಗೂ ಇನ್ನಿತರ ಸಂಘಟನೆಗಳ ಸಮೀಕ್ಷೆ

* ಐಸಿಡಿಎಸ್ ಮಿಷನ್ ಗ್ರಾಮ ಸಂಪರ್ಕ ಅಭಿಯಾನ, ಸಾರ್ವಜನಿಕ ಸಭೆಗಳು ಮತ್ತು ಸಾಮಾಜಿಕ ಕ್ರೋಢೀಕರಣ ಚಟುವಟಿಕೆಗಳನ್ನು ಸಂಘಟಿಸುವ ಮೂಲಕ ಯೋಜನಾ ಉಪಕ್ರಮಗಳು, ಮಕ್ಕಳ ಪಾಲನಾ ಸೇವೆಗಳು ಸಾಮುದಾಯಿಕ ಯಜಮಾನಿಕೆಯನ್ನು ಸೃಷ್ಟಿಸುವ ಪ್ರಕ್ರಿಯೆ ಆಗುವಂತೆ ಮಾಡುವುದು ಮತ್ತು ಅದಕ್ಕಾಗಿ ಸಮುದಾಯದ ಬೆಂಬಲವನ್ನು ಕ್ರೋಢೀಕರಿಸುವುದು.

* ಐಸಿಡಿಎಸ್‌ನಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು ಹಾಗೂ ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು.

* ರಾಜ್ಯ ಐಸಿಡಿಎಸ್ ಮಿಷನ್‌ಗೆ ಜಿಲ್ಲೆ, ವಿಭಾಗ ಮತ್ತು ಗ್ರಾಮ ಮಟ್ಟದಲ್ಲಿ ಯೋಜನೆ ಹಾಗೂ ಸಾಮಾಜಿಕ ಕ್ರೋಢೀಕರಣ ಚಟುವಟಿಕೆಗಳಿಗೆ ಅನುವು ಮಾಡಿಕೊಡಲು ಅನಿರ್ಬಂಧಿತ ಅನುದಾನವನ್ನು ಬಿಡುಗಡೆ ಮಾಡುವುದು.

++++++++++++++++++++++++++++++++++++++++

## 7. ಆರ್ಥಿಕ ಸಂಪನ್ಮೂಲಗಳು ಮತ್ತು ಅನುದಾನಗಳ ಹರಿವು

ಐಸಿಡಿಎಸ್ ಕೇಂದ್ರ ಪ್ರಾಯೋಜಿತ ಮುಂದುವರಿಯುತ್ತಿರುವ ಕಾರ್ಯಕ್ರಮವಾಗಿದ್ದು, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ವೆಚ್ಚವನ್ನು ಹಂಚಿಕೊಳ್ಳುವಿಕೆ ಆಧಾರದ ಮೇಲೆ ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ಆಡಳಿತ ವ್ಯವಸ್ಥೆಯಿಂದ ಅನುಷ್ಠಾನಗೊಳ್ಳುತ್ತಿದೆ. ಸಿಬ್ಬಂದಿ ವೇತನ (ಮಿಷನ್‌ಗೆ ನೇಮಕಗೊಳಿಸುವ ಹೊಸ ಸಿಬ್ಬಂದಿ) ಸೇರಿದಂತೆ ಎಲ್ಲ ನೂತನ ಭಾಗಗಳಿಗೆ ಕೇಂದ್ರ-ರಾಜ್ಯ ಸರ್ಕಾರಗಳು ವೆಚ್ಚವನ್ನು 75:25ರಂತೆ ಹಂಚಿಕೊಳ್ಳುತ್ತಿವೆ(ಎನ್‌ಇಆರ್‌ನಲ್ಲಿ ಇದು 90:10). ಇಷ್ಟಲ್ಲದೆ, ಐಸಿಡಿಎಸ್ ಮಿಷನ್‌ನ ಪ್ರಮುಖ ಆರ್ಥಿಕ ಪ್ರಮಾಣಕಗಳೆಂದರೆ:

7.1 ಅಂಗನವಾಡಿ ಕೇಂದ್ರ (ಎಡಬ್ಲ್ಯುಸಿ)ಗಳ ನಿರ್ಮಾಣ : ಐಸಿಡಿಎಸ್ ಯೋಜನೆಯಡಿ ಉತ್ತಮ ಸೇವೆಗಳನ್ನು ನಿರಂತರವಾಗಿ ಪೂರೈಸಲು ಒಂದು ವೈಶಿಷ್ಟ್ಯಪೂರ್ಣ ಚಟುವಟಿಕೆಯಾಗಿ ಹಂತಹಂತವಾಗಿ ಎಡಬ್ಲ್ಯುಸಿಗಳ ನಿರ್ಮಾಣ ಅತ್ಯಂತ ಅತ್ಯಗತ್ಯವಾದುದಾಗಿದೆ. ಗ್ರಾಮಗಳ ಹಂತದಲ್ಲಿ ಉತ್ತಮ ಗುಣಮಟ್ಟದ ಸೌಲಭ್ಯಗಳಿರುವ ಕಟ್ಟಡ (3-4 ಕೊಠಡಿಗಳು ಇರುವಂಥದ್ದು) ಮತ್ತು ಕುಶಲ ಮಾನವ ಸಂಪನ್ಮೂಲ ಅಗತ್ಯವಿದೆ. ಎಡಬ್ಲ್ಯುಸಿಗಳು ಶಿಶುಸ್ನೇಹಿಯಾಗಿದ್ದು, ಎಲ್ಲ ಮೂಲಸೌಕರ್ಯಗಳನ್ನು ಒಳಗೊಂಡಿರಬೇಕು ಮತ್ತು ಕನಿಷ್ಠ 600 ಚದರ ಅಡಿ ವಿಸ್ತೀರ್ಣ ಹೊಂದಿರಬೇಕು ಎಂದು ಎಂಡಬ್ಲ್ಯುಸಿಡಿ ಮಾರ್ಗದರ್ಶಿ ಸೂತ್ರವನ್ನು ಬಿಡುಗಡೆಗೊಳಿಸಿದೆ. ಈ ಸಂಬಂಧಿತ ಎಂಡಬ್ಲ್ಯುಸಿಡಿಯ ಪತ್ರ ಅನುಬಂಧ II ರಲ್ಲಿ ಇದೆ. ಅಷ್ಟಲ್ಲದೆ, ಹಲವು ರಾಜ್ಯಗಳು ಸ್ಥಳೀಯವಾಗಿ ಸೂಕ್ತವಾದ ವಿನ್ಯಾಸಗಳನ್ನು ಅಭಿವೃದ್ಧಿಪಡಿಸಿ, ಎಡಬ್ಲ್ಯುಸಿಗಳನ್ನು ನಿರ್ಮಿಸಿವೆ. ಎಡಬ್ಲ್ಯುಸಿಯ ನಮೂನೆ ವಿನ್ಯಾಸವನ್ನು ಅನುಬಂಧ II ರಲ್ಲಿ ಕೊಡಲಾಗಿದೆ. ಇನ್ನಷ್ಟು ವಿನ್ಯಾಸಗಳು ತಿತಿತಿ.ತಿeಜ.ಟಿiಛಿ.iಟಿ ನಲ್ಲಿ ಲಭ್ಯವಿವೆ. ಐಸಿಡಿಎಸ್ ಮಿಷನ್ ಅಡಿ ದೇಶದೆಲ್ಲೆಡೆ ಹಂತಹಂತ ವಾಗಿ 3 ಲಕ್ಷ ಎಡಬ್ಲ್ಯುಸಿ ಕಟ್ಟಡಗಳನ್ನು ಕಟ್ಟಡವೊಂದಕ್ಕೆ 4.5 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತದೆ. ಇದರಲ್ಲಿ ಕೇಂದ್ರ-ರಾಜ್ಯದ ಪಾಲು 75:25. ಇದಲ್ಲದೆ, 2 ಲಕ್ಷ ಎಡಬ್ಲ್ಯುಸಿ(ಶಿಶುವಿಹಾರ ಸೇರಿದಂತೆ) ಗಳ ಉನ್ನತೀಕರಣಕ್ಕೆ ಘಟಕವೊಂದಕ್ಕೆ 1 ಲಕ್ಷ ರೂ.ಗಳನ್ನು 75:25 ಪಾಲಿನಂತೆ ನಿಗದಿ ಪಡಿಸಲಾಗಿದೆ. ಇದರಲ್ಲಿ ಎಡಬ್ಲ್ಯುಸಿಗಳನ್ನು ಮಕ್ಕಳಸ್ನೇಹಿಯಾಗಿಸುವುದೂ ಸೇರಿದೆ. ರಾಜ್ಯಗಳು ಸಾಧ್ಯವಿರುವಲ್ಲೆಲ್ಲ ಮತ್ತು ಪ್ರಾಯೋಗಿಕವಾಗಿರುವಲ್ಲಿ ಎಡಬ್ಲ್ಯುಸಿಗಳನ್ನು ಶಾಲೆಗಳಲ್ಲೇ ಆರಂಭಿಸಲು ಉತ್ತೇಜಿಸಲಾಗುತ್ತಿದೆ. ನಿರ್ಮಾಣವನ್ನು ಹಂತಹಂತವಾಗಿ ಕಾರ್ಯಗತಗೊಳಿಸಲಾಗುತ್ತದೆ.

7.2 ಅಂಗನವಾಡಿ ಕೇಂದ್ರದ ಬಾಡಿಗೆ :

ಇತ್ತೀಚಿನ ಎನ್‌ಸಿಪಿಸಿಆರ್ ವರದಿ ಪ್ರಕಾರ, ಶೇ.17ರಷ್ಟು ಎಡಬ್ಲ್ಯುಸಿಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಗ್ರಾಮೀಣ ಮತ್ತು ಆದಿವಾಸಿ ಪ್ರದೇಶಗಳಲ್ಲಿನ ಎಡಬ್ಲ್ಯುಸಿಗಳ ಮಾಸಿಕ ಬಾಡಿಗೆಯನ್ನು 50 ರೂ. ನಿಂದ 200 ರೂ.ಗೆ ಹಾಗೂ ನಗರ ಪ್ರದೇಶಗಳಲ್ಲಿ ರೂ.300 ರಿಂದ 750 ರೂ.ಗೆ ಹೆಚ್ಚಿಸಲಾಗಿದೆ. ಆದರೆ, ಈ ಪ್ರಮಾಣ ಅತ್ಯಂತ ಅಸಮರ್ಪಕವಾಗಿದೆ ಮತ್ತು ಇಷ್ಟು ಕಡಿಮೆ ಬಾಡಿಗೆಗೆ ಕಟ್ಟಡಗಳು ಸಿಗುವುದು ಬಹಳ ಕಷ್ಟ. ಐಸಿಡಿಎಸ್ ಮಿಷನ್ ಅಡಿ ಎಡಬ್ಲ್ಯುಸಿಗಳ ಮಾಸಿಕ ಬಾಡಿಗೆಯನ್ನು ಹೆಚ್ಚಿಸಲಾಗಿದೆ. ಪರಿಷ್ಕೃತ ಮಾಸಿಕ ಬಾಡಿಗೆ ಇಂತಿದೆ;

* ಗ್ರಾಮೀಣ/ಆದಿವಾಸಿ ಪ್ರದೇಶದಲ್ಲಿ ಎಡಬ್ಲ್ಯುಸಿ/ಮಿನಿ ಎಡಬ್ಲ್ಯುಸಿಗಳಿಗೆ ರೂ. 200 ರಿಂದ ರೂ. 750
* ನಗರ ಪ್ರದೇಶದಲ್ಲಿನ ಎಡಬ್ಲ್ಯುಸಿ/ಮಿನಿ ಎಡಬ್ಲ್ಯುಸಿಗಳಿಗೆ ರೂ. 750 ರಿಂದ ರೂ. 3,000

* ಮೆಟ್ರೋಪಾಲಿಟನ್ ನಗರಗಳಲ್ಲಿ ಎಡಬ್ಲ್ಯುಸಿ/ಮಿನಿ ಎಡಬ್ಲ್ಯುಸಿಗಳಿಗೆ 5,000 ರೂ.

ಪರಿಷ್ಕೃತ ಬಾಡಿಗೆಯು ಕನಿಷ್ಠ 500-600 ಚದರಡಿಯ ಕಟ್ಟಡಗಳಿಗೆ ಮಾತ್ರ ಅನ್ವಯಲಾಗಲಿದೆ. ಎಡಬ್ಲ್ಯುಸಿಗಳು ಅಗತ್ಯ ಮೂಲಸೌಲಭ್ಯಗಳನ್ನು ಹೊಂದಿರಬೇಕು. ಶಿಶುಸ್ನೇಹಿ ಎಡಬ್ಲ್ಯುಸಿಗಳಿಗೆ ಮಾರ್ಗದರ್ಶಿ ಸೂತ್ರಗಳು ಮತ್ತು ಮಾನದಂಡ(ಶುದ್ಧ ಕುಡಿಯುವ ನೀರು, ಶೌಚಾಲಯ ಸೇರಿದಂತೆ)ಗಳನ್ನು ಅಭಿವೃದ್ಧಿಪಡಿಸಬೇಕು ಮತ್ತು ಕಟ್ಟಡಗಳನ್ನು ಬಾಡಿಗೆಗೆ ಪಡೆಯುವಾಗ ಕಡ್ಡಾಯವಾಗಿ ಪರಿಶೀಲಿಸಬೇಕು. ಎಲ್ಲಿ ಅಂಥ ಕಟ್ಟಡಗಳು ಲಭ್ಯವಿಲ್ಲವೋ, ಅಂಥ ಕಡೆ ಬಾಡಿಗೆಯನ್ನು ಪ್ರಮಾಣಾನುಸಾರ ಕಡಿಮೆ ಮಾಡಬೇಕು. ಅಷ್ಟಲ್ಲದೆ, ಶಿಶುವಿಹಾರದ ಸ್ಥಳಕ್ಕೆ ಹೆಚ್ಚುವರಿ ಬಾಡಿಗೆ ಕೊಡುವ ಬಗ್ಗೆಯೂ ಆಲೋಚಿಸಬಹುದು.

7.3 ಪೂರಕ ಪೋಷಕಾಂಶ :

ಪೂರಕ ಪೋಷಕಾಂಶ ಎಡಬ್ಲ್ಯುಸಿಯ ಇನ್ನಿತರ ಸೇವೆಗಳಿಗೆ ಆರಂಭಿಕ ಬಿಂದುವಿನಂತೆ ಇರುವುದರಿಂದ, ಅದು ಒಂದು ಮುಖ್ಯವಾದ ಭಾಗವಾಗಿರಲಿದೆ. ಕೇಂದ್ರ ಮತ್ತು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ನಡುವೆ ಪೂರಕ ಪೋಷಕಾಂಶದ ಮೊತ್ತ ಹಂಚಿಕೆ ಅನುಪಾತ 50:50 ಇರಲಿದ್ದು, ಎನ್‌ಇಆರ್‌ಗಳಿಗೆ ಇದು 90:10 ಆಗಿರಲಿದೆ. ಪೂರಕ ಪೋಷಕಾಂಶಗಳ ವೆಚ್ಚವನ್ನು ಅಕ್ಟೋಬರ್ 2008ರಲ್ಲಿ ಪರಿಷ್ಕರಿಸಲಾಗಿದೆ. ಆದರೆ, ಕಳೆದ ಎರಡೂವರೆ ವರ್ಷದಲ್ಲಿ ಆಹಾರ ಪದಾರ್ಥಗಳು ಹಾಗೂ ಇಂಧನಗಳ ಬೆಲೆ ಹಿಂದೆಂದೂ ಇಲ್ಲದಂತೆ ಹೆಚ್ಚಳಗೊಂಡಿರುವುದುರಿಂದ, ನಿಗದಿತ ಹಣಕಾಸು ಅನುದಾನದಲ್ಲಿ ಪೂರಕ ಪೋಷಕಾಂಶಗಳನ್ನು ನೀಡುವುದು ಕಷ್ಟ ಎಂದು ಹಲವು ರಾಜ್ಯ ಸರ್ಕಾರಗಳು ಅಭಿಪ್ರಾಯಪಟ್ಟಿವೆ. ಈ ಸವಾಲನ್ನು ಎದುರಿಸಲು ಗ್ರಾಮೀಣ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ(ಸಿಪಿಐ-ಆರ್‌ಎಲ್)ವನ್ನು ಆಧರಿಸಿ, 1986-87ನ್ನು ಆಧಾರವರ್ಷವನ್ನಾಗಿ ಇರಿಸಿಕೊಂಡು, ಎನ್‌ಎನ್‌ಪಿ ನಿಯಮಗಳನ್ನು ಪರಿಷ್ಕರಿಸಲಾಗಿದೆ. ಎರಡನೆಯದಾಗಿ, ಫಲಾನುಭವಿಗೆ ತಗಲುವ ವೆಚ್ಚವನ್ನು ಆಹಾರ ಪದಾರ್ಥಗಳ ವೆಚ್ಚ (ಧಾನ್ಯಗಳ ಮಧ್ಯಸ್ಥ ಬಿಪಿಎಲ್ ದರ), ಸಾಗಣೆ ವೆಚ್ಚ, ಇಂಧನದ ಬೆಲೆ, ಸೂಕ್ಷ್ಮ ಪೋಷಕಾಂಶಗಳಿಂದ ಬಲದುಂಬುವಿಕೆ ವೆಚ್ಚ, ಸಂಸ್ಕರಣೆ ಮತ್ತು ಶೇಖರಣೆ ವೆಚ್ಚ ಹಾಗೂ ಇತ್ಯಾದಿಯನ್ನು ಪರಿಗಣಿಸಿ ಲೆಕ್ಕಿಸಲಾಗಿದೆ. ಎಸ್‌ಎನ್‌ಪಿಯು ಎಂಡಬ್ಲ್ಯುಸಿಡಿ 24-05-2009ರಲ್ಲಿ ಪ್ರಕಟಿಸಿದ ಮಾರ್ಗದರ್ಶಿ ಸೂತ್ರಗಳಿಗೆ ಆನಂತರ ನೀಡಲಾದ ಸ್ಪಷ್ಟನೆಗಳನ್ನು ಒಳಗೊಂಡಂತೆ, ಅನುಗುಣವಾಗಿರಲಿದೆ.

ಅದರಂತೆ, ಐಸಿಡಿಎಸ್ ಮಿಷನ್‌ನ ಪರಿಷ್ಕೃತ ಎಸ್‌ಎನ್‌ಪಿ ವೆಚ್ಚ ಕೆಳಕಂಡಂತೆ ಇರಲಿದೆ :

ವಿಭಾಗ........ಹಾಲಿ ದರ(16.10.2008ರಲ್ಲಿ ಇರುವಂತೆ)................. ಪರಿಷ್ಕೃತ ದರ(ಅಂಗೀಕೃತ ದಿನದಿಂದ ಜಾರಿ) (ಫಲಾನುಭವಿಗೆ, ದಿನವೊಂದಕ್ಕೆ)

(i) ಮಕ್ಕಳು (6-72 ತಿಂಗಳು)............ ರೂ. 4................. ರೂ. 6

(ii) ತೀವ್ರ ಕಡಿಮೆ ತೂಕದ ಮಕ್ಕಳು (6-72 ತಿಂಗಳು).............ರೂ. 6........... ರೂ. 9

(iii) ಗರ್ಭಿಣಿಯರು ಮತ್ತು ಆರೈಕೆಯಲ್ಲಿರುವ ತಾಯಂದಿರು........... ರೂ. 5.................. ರೂ. 7

ಎಸ್‌ಎನ್‌ಪಿಯ ಪರಿಷ್ಕೃತ ದರದ ಜಾರಿಯು ಮೊದಲನೇ ವರ್ಷದಲ್ಲಿ 200 ತೀವ್ರ ಹೊರೆ ಇರುವ ಜಿಲ್ಲೆಗಳಲ್ಲಿ ಯೋಜನೆಯ ಅನುಷ್ಠಾನಕ್ಕೆ ಅನುಗುಣವಾಗಿರಲಿದೆ. ಮೂರು ವರ್ಷದವರೆಗೆ ಇನ್ನಿತರ ಜಿಲ್ಲೆಗಳಿಗೆ ಎಸ್‌ಎನ್‌ಪಿ ದರಗಳು ಮೊದಲಿನಂತೆಯೇ ಇರಲಿವೆ. ಹೆಚ್ಚುವರಿ ನೆರವು ನೀಡುತ್ತಿರುವ

ರಾಜ್ಯಗಳು ಅದನ್ನು ಮುಂದುವರಿಸಬಹುದು. ಬಿಪಿಎಲ್ ದರದಲ್ಲಿ ಆಹಾರ ಧಾನ್ಯಗಳನ್ನು ಪೂರೈಕೆ ಮಾಡುವ ಸೌಲಭ್ಯ ಇರುವಲ್ಲಿ ಡಬ್ಲ್ಯುಬಿಎನ್‌ಪಿಯಡಿ ಆಹಾರ ಧಾನ್ಯ (ಗೋಧಿ, ಅಕ್ಕಿ, ತೃಣ ಧಾನ್ಯಗಳು)ಗಳಿಗೆ ಮನವಿ ಸಲ್ಲಿಸುವುದು ಯುಕ್ತ ನಡೆಯಾಗಲಿದೆ.

ಎಡಬ್ಲ್ಯುಸಿ ಮತ್ತು ಶಿಶುವಿಹಾರ/ದಿನ ಪಾಲನಾ ಕೇಂದ್ರಗಳ ಪ್ರಾಯೋಗಿಕ ಘಟಕಗಳ ಮಕ್ಕಳಿಗೆ ಶಿಶುವಿಹಾರಗಳಿಗೆ ಸಂಬಂಧಿಸಿದ ನಿಯಮಗಳಿಗೆ ಅನುಗುಣವಾಗಿ ಹೆಚ್ಚುವರಿ ಊಟವನ್ನು ಒದಗಿಸುತ್ತಿದ್ದು. ಇದಕ್ಕಾಗಿ ತಗಲುವ ಹೆಚ್ಚುವರಿ ವೆಚ್ಚವನ್ನು ಒಂದೋ ಶಿಶುಪಾಲನೆ ಯೋಜನೆಯಿಂದ ಪಡೆದುಕೊಳ್ಳಲಾಗುತ್ತದೆ ಅಥವಾ ಉನ್ನತ ಸಮಿತಿ ಅಂಗೀಕರಿಸಿದ ಐಸಿಡಿಎಸ್ ಮಿಷನ್‌ನ ಬೆಂಬಲದಿಂದ ರಾಜ್ಯ ಎಪಿಐಪಿಗಳ ಮೂಲಕ ಸಂಗ್ರಹಿಸಲಾಗುತ್ತದೆ.

ಉತ್ತಮ ನಿರ್ವಹಣೆ ಮತ್ತು ನಿಯಂತ್ರಣಕ್ಕಾಗಿ ಎಸ್‌ಎನ್‌ಪಿ ಪರಿಷ್ಕೃತ ದರವನ್ನು ಐಸಿಡಿಎಸ್ ಮಿಷನ್‌ನ ಯೋಜನೆಗಳ ಹಂತಕ್ಕೆ ಅನುಗುಣವಾಗಿ ಚಾಲನೆಗೊಳಿಸಲಾಗುತ್ತದೆ.

### 7.4 ವರ್ಗೀಕರಣ ಮತ್ತು ಮಾನ್ಯತೆ

ಈ ಮೊದಲೇ ನಿರ್ಧರಿಸಿದ ಗುಣಮಟ್ಟದ ಮಾದರಿಗಳ ಸಾಧನೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಫಲಿತಾಂಶಗಳನ್ನು ಆಧರಿಸಿ, ಎಡಬ್ಲ್ಯುಸಿ, ಐಸಿಡಿಎಸ್ ಯೋಜನೆಗಳು ಮತ್ತು ಜಿಲ್ಲಾ ಮಿಷನ್‌ನ ವರ್ಗೀಕರಣ ಹಾಗೂ ಮಾನ್ಯತೆ ಮಾಡಲಾಗುತ್ತದೆ. ಇದನ್ನು ಮಕ್ಕಳಸ್ನೇಹಿ ಎಡಬ್ಲ್ಯುಸಿಗಳು, ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರಗಳು ಹಾಗೂ ಯೋಜನೆಗಳ ಮೌಲ್ಯಮಾಪನಕ್ಕಾಗಿ ರೂಪಿಸಿದ ಸೂಕ್ತ ಕಾರ್ಯವಿಧಾನದೊಂದಿಗೆ ಸಹಭಾಗಿತ್ವದ ಪ್ರಕ್ರಿಯೆಗಳ ಮೂಲಕ ಮಾಡಲಾಗುತ್ತದೆ. ಇದು ಐಸಿಡಿಎಸ್ ಸಿಬ್ಬಂದಿ ಮತ್ತು ಸಮುದಾಯಗಳಲ್ಲಿ ಉತ್ಸಾಹ ತುಂಬಲಿದ್ದು, ಉತ್ತಮ ಸಾಧನೆಗೆ ಹಾಗೂ ಐಸಿಡಿಎಸ್‌ನ ಗುಣಮಟ್ಟ ಸುಧಾರಣೆಗೆ ನೆರವಾಗಲಿದೆ. ಎಡಬ್ಲ್ಯುಸಿಯನ್ನು ಮೀರಿದ ಇಸಿಡಿ ಪರಿಕಲ್ಪನೆಯನ್ನು ಬಲಪಡಿಸಲು, ಖಾಸಗಿ ಶಾಲಾಪೂರ್ವ ವ್ಯವಸ್ಥೆಗೂ ಮಾನ್ಯತೆ ನೀಡಲಾಗುತ್ತದೆ. ಐಸಿಡಿಎಸ್ ಮಿಷನ್ ಅಡಿ ವರ್ಗೀಕರಣ ಮತ್ತು ಮಾನ್ಯತೆ ನೀಡಲು ಜಿಲ್ಲೆಯೊಂದಕ್ಕೆ 2.5 ಲಕ್ಷ ರೂ. ಅನುದಾನ ನಿಗದಿಪಡಿಸಲಾಗಿದೆ.

### 7.5 ಕಾರ್ಯಾಚರಣೆ ವೆಚ್ಚ :

ದೇಶ, ರಾಜ್ಯ, ಜಿಲ್ಲೆ, ವಿಭಾಗ/ಯೋಜನೆ ಮತ್ತು ಗ್ರಾಮ ಮಟ್ಟದಲ್ಲಿ ಐಸಿಡಿಎಸ್‌ನ್ನು ಮಿಷನ್ ಮಾದರಿಯಲ್ಲಿ ಅನುಷ್ಠಾನಗೊಳಿಸಲು ಕಾರ್ಯಾಚರಣೆ ವೆಚ್ಚ 5 ವರ್ಷಕ್ಕೆ 1,23,580 ಕೋಟಿ ರೂ. ಆಗಿದ್ದು, 2012-13ರಲ್ಲಿ ತಗಲುವ ವೆಚ್ಚ 16,542 ಕೋಟಿ ರೂ. ಸಿಬ್ಬಂದಿ ಸಂಬಳ ಮತ್ತು ಗೌರವಧನವಲ್ಲದೆ ಆವರ್ತನ ವೆಚ್ಚಗಳು, ವಕೀಲಿಕೆ ಮತ್ತು ಸಾರ್ವಜನಿಕ ಶಿಕ್ಷಣ, ಬಾಡಿಗೆ, ಪ್ರಯಾಣ ಭತ್ಯೆಗಳು, ಆಡಳಿತಾತ್ಮಕ ವೆಚ್ಚಗಳು ಮತ್ತು ತರಬೇತಿ, ಸಂಶೋಧನೆ, ಎಡಬ್ಲ್ಯುಡಬ್ಲ್ಯುಗಳಿಗೆ ಸಾದಿಲ್ವಾರು, ಶಾಲಾಪೂರ್ವ ವಸ್ತುಗಳು, ಮಾಹಿತಿ ಶಿಕ್ಷಣ ವಸ್ತು ಮತ್ತು ವೈದ್ಯಕೀಯ ಕಿಟ್‌ಗೆ ಅನುದಾನವನ್ನು ಇದು ಒಳಗೊಂಡಿದೆ.

### 7.6 ಆಯವ್ಯಯ

ಮಕ್ಕಳ ಅಭಿವೃದ್ಧಿ ಮತ್ತು ಪೋಷಣಾ ವಿಭಾಗದೊಳಗೆ ಸಮಗ್ರತೆ ಮತ್ತು ಹೊಂದಿಕೊಳ್ಳುವಿಕೆಗೆ ಅನುವು ಮಾಡಿಕೊಡಲು ಹಾಗೂ ತಾಯಿ ಮತ್ತು ಪೋಷಕಾಂಶ ಕೊರತೆ ಎದುರಿಸುತ್ತಿರುವ ಮಗುವಿನ

ವಿಸ್ತೃತ ಮಾಪಕಗಳ ಒಮ್ಮುಖ ಕ್ರಿಯೆಗೆ ಅನುವಾಗುವಂತೆ, ಪ್ರತ್ಯೇಕ ಐಸಿಡಿಎಸ್ ಮಿಷನ್ ಆಯವ್ಯಯ ಖಾತೆಯನ್ನು ಸೃಷ್ಟಿಸಲಾಗುತ್ತದೆ. ಐಸಿಡಿಎಸ್‌ನ ಮಿಷನ್‌ನ ಪರಿಣಾಮಕಾರಿ ಅನುಷ್ಠಾನವನ್ನು ಖಾತ್ರಿಗೊಳಿಸಲು ಹಾಗೂ ಮೇಲೆ ಉಲ್ಲೇಖಿಸಿದ ಗುರಿ ಹಾಗೂ ಉದ್ದೇಶವನ್ನು ಸಾಧಿಸಲು 12ನೇ ಪಂಚವಾರ್ಷಿಕ ಯೋಜನೆಯಲ್ಲಿ 1,77,456 ಕೋಟಿ ರೂ. ಅನುದಾನ ನೀಡಲಾಗಿದ್ದು, ಇದರಲ್ಲಿ ಭಾರತ ಸರ್ಕಾರದ ಪಾಲು 1,23,580 ಕೋಟಿ ರೂ. ಮತ್ತು ರಾಜ್ಯ ಸರ್ಕಾರಗಳ ಪಾಲು 53,876 ಕೋಟಿ ರೂ. ಆಗಿರಲಿದೆ. ಐಸಿಡಿಎಸ್ ಮಿಷನ್ ಅಡಿ ಹಾಲಿ ಹಾಗೂ ಅಂಗೀಕೃತ ಪ್ರಮಾಣಕಗಳ ತುಲನಾತ್ಮಕ ವಿವರಗಳನ್ನು ಅನುಬಂಧ ಫಿಗಿIII ರಲ್ಲಿ ಕೊಡಲಾಗಿದೆ. 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಐಸಿಡಿಎಸ್‌ನ್ನು ಮಿಷನ್ ಮಾದರಿಯಲ್ಲಿ ಅನುಷ್ಠಾನಗೊಳಿಸಲು ಆಯವ್ಯಯ ಅಗತ್ಯಗಳ ವಿವರವಾದ ವಿಭಾಗವಾರು ಮತ್ತು ವಾರ್ಷಿಕ ವಾರು ವಿವರಗಳನ್ನು ಅನುಬಂಧ ಫಿ।ಫಿ ರಲ್ಲಿ ಕೊಡಲಾಗಿದೆ.

ಹನ್ನೆರಡನೇ ಯೋಜನೆಯಲ್ಲಿ ಅಂಗೀಕೃತ ಆಯವ್ಯಯ (ಕೋಟಿ ರೂ.ಗಳಲ್ಲಿ)

ವಿವರ..........ಒಟ್ಟು ಯೋಜನೆ (ಭಾರತ ಸರ್ಕಾರ).................ಭಾರತ ಸರ್ಕಾರದ ಒಟ್ಟು ಆಯವ್ಯಯದಲ್ಲಿ ಶೇಕಡ

ವೇತನ.................. 16,829............ 13.6

ಗೌರವಧನ............. 31,386................ 25.4

ಎಸ್ಎನ್‌ಪಿ............. 42,626.............. 34.5

ಎಡಬ್ಲ್ಯುಡಬ್ಲ್ಯುಗಳ ನಿರ್ಮಾಣ, ಉನ್ನತೀಕರಣ ಮತ್ತು ನಿರ್ವಹಣೆ.......... 8,771...........7.1

ಕಾರ್ಯಕ್ರಮದ ಘಟಕಗಳು(ಐಸಿಡಿಎಸ್)...........ಹೊಸ ಘಟಕಗಳು........... 11,522.......... 9.3

ಹಾಲಿ ಇರುವ ಘಟಕಗಳು..........12,446............. 10.1

ಒಟ್ಟು................................1,23,580................ 100

ವಾರ್ಷಿಕವಾರು ವೆಚ್ಚ (ಕೋಟಿ ರೂ.ಗಳಲ್ಲಿ)

ಯೋಜನೆ ಅವಧಿ.............................. ಭಾರತ ಸರ್ಕಾರದ ಪಾಲು

ವರ್ಷ 1 ವರ್ಷ 2 ವರ್ಷ 3 ವರ್ಷ 4 ವರ್ಷ 5 ಒಟ್ಟು

ಆವರ್ತನ.......... 16,454.............. 21,129............. 24,543............ 25,703............ 25,733............1,13,562

ಆವರ್ತನವಲ್ಲದವು...............88............. 898........ 1,990........... 2,750............ 4,292.......... 10,018

ಒಟ್ಟು ವಾರ್ಷಿಕವಾರು ವೆಚ್ಚ(ಕೋಟಿ ರೂ.ಗಳಲ್ಲಿ)............16,542............ 22,027............26,533.............28,454............30,025.........1,23,580

7.7 ಅನುದಾನಗಳ ಬಿಡುಗಡೆ ಮತ್ತು ಅನುದಾನಗಳ ಹರಿವು

ಐಸಿಡಿಎಸ್ ಮಿಷನ್ ಅಡಿ ಅನುಷ್ಠಾನದ ವಿಸ್ತೃತ ಚೌಕಟ್ಟನ್ನು ಅನುಸರಿಸಿ, ರಾಜ್ಯ ಎಪಿಐಪಿಗಳನ್ನು ಆಧರಿಸಿ ಅನುದಾನ ಬಿಡುಗಡೆ ಮತ್ತು ಅನುದಾನದ ಹರಿವು ಕಾರ್ಯ ನಡೆಯುತ್ತದೆ. ಭಾರತ ಸರ್ಕಾರ (ಡಬ್ಲ್ಯುಸಿಡಿ ಮಂತ್ರಾಲಯ) ಮತ್ತು ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ಆಡಳಿತದ ನಡುವೆ ಒಪ್ಪಂದ (ಎಂಒಯು) ಮಾಡಿಕೊಳ್ಳಬೇಕಿದ್ದು, ಐಸಿಡಿಎಸ್‌ಗೆ ತಮ್ಮ ಹೆಚ್ಚುವರಿ ಪಾಲು ನೀಡುವುದಾಗಿ ರಾಜ್ಯ ಸರ್ಕಾರ/ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಳು ಲಿಖಿತ ಖಾತ್ರಿ ಕೊಡಬೇಕಾಗುತ್ತದೆ. ರಾಜ್ಯ ಸರ್ಕಾರಗಳು ಎದುರಿಸುತ್ತಿರುವ ಸಮಸ್ಯೆ/ಸವಾಲಿನ ಪ್ರಮಾಣ, ಮುಖ್ಯ ಸೇವೆಗಳು ಮತ್ತು ಚಟುವಟಿಕೆಗಳು ಹಾಗೂ ಸುಧಾರಣೆ ಮತ್ತು ಸಂಪನ್ಮೂಲ ಹಂಚಿಕೆಗೆ ರಾಜ್ಯ ಸರ್ಕಾರದ ಬದ್ಧತೆಯನ್ನು ಆಧರಿಸಿ, ಅನುದಾನ ನೀಡಲಾಗುತ್ತದೆ.

ಐಸಿಡಿಎಸ್ ಮಿಷನ್‌ನ ವಾರ್ಷಿಕ ಕಾರ್ಯಕ್ರಮ ಅನುಷ್ಠಾನ ಯೋಜನೆಗಳನ್ನು ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸೊಸೈಟಿಗಳು ಜಂಟಿಯಾಗಿ ನೇಮಿಸಿದ ಪರಿಣತರ ತಂಡಗಳು ಒಟ್ಟಾಗಿ ಮೌಲ್ಯಮಾಪನ ಮಾಡಲಿವೆ. ರಾಷ್ಟ್ರೀಯ ಐಸಿಡಿಎಸ್ ಸೂಕ್ತವಾದ ಆರ್ಥಿಕ ಮತ್ತು ತಾಂತ್ರಿಕ ಮಾನದಂಡಗಳನ್ನು ಆಧರಿಸಿ, ವಾರ್ಷಿಕ ಯೋಜನಾ ನಕ್ಷೆಗೆ ಅನುಮತಿ ನೀಡುತ್ತದೆ ಮತ್ತು ರಾಜ್ಯ ಮಕ್ಕಳ ಅಭಿವೃದ್ಧಿ ಸೊಸೈಟಿಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುತ್ತದೆ. ಮೇಲಿನ ದಾಖಲೆ/ಬದ್ಧತೆಯನ್ನು ಸ್ವೀಕರಿಸಿದ ಬಳಿಕ, ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೆ ಮೊದಲಿನ ಕಂತು ಬಿಡುಗಡೆ ಕುರಿತು ಪರಿಶೀಲಿಸಲಾಗುತ್ತದೆ. ಯೋಜನೆಗಳ ಮೌಲ್ಯಮಾಪನ ಮತ್ತು ಅನುಮೋದನೆಯು ರಕಮು ಆಧಾರದಲ್ಲಿ ನಡೆಯುತ್ತದೆ. ಯೋಜನೆಗಳ ಮೌಲ್ಯಮಾಪನ ಮತ್ತು ಅನುಮೋದನೆಗಳನ್ನು ಸಮಯಕ್ಕೆ ಸರಿಯಾಗಿ ಮುಗಿಸಿ, ಮೊದಲ ಆರು ತಿಂಗಳುಗಳ ವೆಚ್ಚವನ್ನು ಭರಿಸಲು ಆಗುವಂತೆ ಮೊದಲ ಕಂತನ್ನು ಏಪ್ರಿಲ್ 15ರಲ್ಲಿ ಬಿಡುಗಡೆಗೊಳಿಸಲಾಗುತ್ತದೆ. ಆರಂಭದ ವರ್ಷದಲ್ಲಿ ಕೆಲವು ವ್ಯತ್ಯಯಗಳು ಆಗಬಹುದು.

ಪ್ರತಿವರ್ಷ ಎರಡು ಕಂತುಗಳು ಪ್ರತ್ಯೇಕವಾಗಿ ವಿವರವಾದ ಸೂಚನೆಗಳೊಂದಿಗೆ ಇರುತ್ತವೆ; 2ನೇ ಕಂತು (1) ಮೊದಲ ಕಂತಿನ ಸಾಕಾಗುವಷ್ಟು ಬಳಕೆ ಹಾಗೂ (2) ಅನುಷ್ಠಾನದ ಗುಣಮಟ್ಟ ಮತ್ತು ಪ್ರಗತಿಯನ್ನು ಆಧರಿಸಿರುತ್ತದೆ. ಕಳೆದ ವರ್ಷದ ಸಾಧನೆ, ಎಂಒಯುನಲ್ಲಿನ ವಾಗ್ದಾನಗಳನ್ನು ಪೂರೈಸುವುದು, ಉಪಯುಕ್ತತೆ ಪ್ರಮಾಣಪತ್ರಗಳು/ಎಸ್ಒಇಗಳು/ಲೆಕ್ಕಪರಿಶೀಲನೆ ವರದಿಗಳು, ಆಥಿರ್ೀಕ ಪರಾಮರ್ಶನ ವರದಿಗಳು ಇತ್ಯಾದಿ ಶರತ್ತುಗಳನ್ನು ಹಾಕಲಾಗುತ್ತದೆ. ಅದೇ ವರ್ಷದಲ್ಲಿ 2ನೇ ಕಂತು ಬಿಡುಗಡೆಗೆ ಮುನ್ನ ಇಪಿಸಿಯಿಂದ ಎಪಿಐಪಿಗಳಿಗೆ ಮಂಜೂರು ಅತ್ಯಗತ್ಯವಾಗಿರಲಿದೆ. ಲೆಕ್ಕ ಪರಿಶೀಲನೆಯು ಸರ್ಕಾರದ ನಿಯಮ ಗಳ ಅನ್ವಯ ಇರಲಿದೆ.

ಐಸಿಡಿಎಸ್ ಮಿಷನ್‌ಗೆ ಅನುದಾನ ವರ್ಗಾವಣೆಯನ್ನು ರಾಜ್ಯದ ಸಂಚಿತ ನಿಧಿ ಮೂಲಕ ಮಾಡಲಾಗುತ್ತದೆ. ಆದರೆ, ರಾಜ್ಯವು 15 ದಿನಗಳೊಳಗೆ ಅನುದಾನವನ್ನು ವರ್ಗಾಯಿಸಲು ವಿಫಲವಾದಲ್ಲಿ ಹಣಕಾಸು ಆಯೋಗದ ನಿಧಿ ಅನುದಾನ ಬಿಡುಗಡೆಯ ಮಾದರಿಗೆ ಅನುಗುಣವಾಗಿ ಮೊತ್ತಕ್ಕೆ ಬಡ್ಡಿಯನ್ನು ನೀಡಬೇಕಾಗುತ್ತದೆ. ಐಸಿಡಿಎಸ್ ಮಿಷನ್‌ಗೆ ಅನುದಾನ ಹರಿವು ಕೆಳಕಂಡಂತೆ ಇರಲಿದೆ.

ನಕ್ಷೆ 1 : ಅನುದಾನ ಹರಿವು ವಿಧಾನ :

ಭಾರತ ಸರ್ಕಾರ (ಸಂಚಿತ ನಿಧಿ)....................ರಾಜ್ಯ ಮಕ್ಕಳ ಅಭಿವೃದ್ಧಿ ಸೊಸೈಟಿ (ಎಸ್‌ಸಿಡಿಎಸ್)

ರಾಜ್ಯ ಸರ್ಕಾರ (ಸಂಚಿತ ನಿಧಿ)...............ಎಸ್‌ಸಿಡಿಎಸ್‌ನ ಜಿಲ್ಲಾ ಘಟಕ

..................................................ವಿಭಾಗ ಐಸಿಡಿಎಸ್ ಸಮಿತಿ

ಅಗತ್ಯವನ್ನು ಆಧರಿಸಿ.................ವಿಎಚ್‌ಎಸ್‌ಎನ್‌ಸಿ/ಪಿಆರ್‌ಐಗಳು/ಎಡಬ್ಲ್ಯುಸಿಗಳು

>>>>>>>>>>>>>>>>>>ಸಲ್ಲಿಕೆ

>>>>>>>>>>>>>>>>>ಎಪಿಐಪಿ ಮಂಜೂರಾತಿ/ಅನುದಾನ ಹಂಚಿಕೆ

>>>>>>>>>>>>>>>>>ಅನುದಾನ ಹರಿವು

+++++++++++++++++++++++++++++++++++++++++++++++++++++++++++++++++

8. ಪರಾಮರ್ಶನ, ಅವಲೋಕನ ಮತ್ತು ಮೌಲ್ಯಮಾಪನ

ಐಸಿಡಿಸ್ ಮಿಷನ್‌ಅಡಿ ಅಂಗನವಾಡಿ/ಗ್ರಾಮ, ವಿಭಾಗ, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಹಂತಗಳಲ್ಲಿ ಪರಾಮರ್ಶನ ನಡೆಯುತ್ತದೆ. ಪ್ರತಿ ಹಂತದಲ್ಲೂ ಒಂದು ಪ್ರಮಾಣೀಕೃತ ಸ್ವರೂಪದ ಹಾಗೂ ಒಳಸುರಿ, ಹೊರಸುರಿ ಮತ್ತು ಫಲಶ್ರುತಿಯ ಸೂಚಕಗಳ ಸಾಕ್ಷ್ಯಾಧಾರಿತ ಪರಾಮರ್ಶನ ವ್ಯವಸ್ಥೆಯನ್ನು ರಚಿಸಲಾಗುವುದು. ಸರ್ಕಾರದ ಪ್ರಸ್ತುತ ಉಪಕ್ರಮಗಳಾದ ಸೇವೋತ್ತಮ ಅನುಸರಣೆ ಮತ್ತು ನಾಗರಿಕ ಸನ್ನದುಗಳೊಡನೆ ಹೊಂದಿಕೊಳ್ಳುವ ಸಾರ್ವಜನಿಕ ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಉತ್ತಮಗೊಳಿಸಲು ಮಕ್ಕಳ ಅಭಿವೃದ್ಧಿ ಫಲಶ್ರುತಿಗಳನ್ನು ಉತ್ತೇಜನ ಹಾಗೂ ಪರಾಮರ್ಶನಕ್ಕೆ ನಾಲ್ಕು ಪ್ರಮುಖ ಸಮುದಾಯಾಧರಿತ ಮಾರ್ಪಾಡುಗಳನ್ನು ಪರಿಚಯಿಸಲಾಗುತ್ತದೆ. ಅವುಗಳೆಂದರೆ;

(i) ಪ್ರತಿ ವರ್ಷ ಎನ್‌ಆರ್‌ಎಚ್‌ಎಂ ಮಾದರಿಯಲ್ಲಿ ಸಾಮಾನ್ಯ ಅವಲೋಕನ ಮಿಷನ್ (ಸಿಆರ್‌ಎಂ)ನ್ನು ಪರಿಚಯಿಸುವುದು: ಪರ್ಯಾಯವಾಗಿ, ಎಂಎಚ್‌ಎಫ್‌ಡಬ್ಲ್ಯು/ಎನ್‌ಆರ್‌ಎಚ್‌ಎಂಗಳು ಐಸಿಡಿಎಸ್‌ನ ಮೂರು ಪ್ರಮುಖ ಸೇವಾ ಪ್ಯಾಕೇಜ್‌ಗಳಿಗೆ ಜವಾಬ್ದಾರಿ ಎಂಬ ಅಂಶವನ್ನು ಪರಿಗಣಿಸಿ, ಎನ್‌ಆರ್‌ಎಚ್‌ಎಂ ಜೊತೆಗೆ ಜಂಟಿ ಸಿಆರ್‌ಎಂಗಳನ್ನು ನಡೆಸಬಹುದು. ಜಂಟಿ ಸಿಆರ್‌ಎಂನ ಶಿಫಾರಸುಗಳು ಕಾರ್ಯಕ್ರಮದ ವಿನ್ಯಾಸ ಮತ್ತು ರಾಷ್ಟ್ರೀಯ ಹಾಗೂ ಸಂಬಂಧಿಸಿದ ರಾಜ್ಯ ಮತ್ತು ಜಿಲ್ಲಾ ಐಸಿಡಿಎಸ್ ಮಿಷನ್‌ಗಳಿಗೆ ಹಿಮ್ಮಾಹಿತಿ ನೀಡಿ ಮಧ್ಯಂತರದಲ್ಲಿ ಸರಿಪಡಿಸಿಕೊಳ್ಳುವಿಕೆಗೆ ಆಧಾರವಾಗಲಿವೆ. ಐಸಿಡಿಎಸ್‌ನ ಮಿಷನ್ ಎಲ್ಲ ಹಂತ ಗಳಲ್ಲೂ ಎನ್‌ಆರ್‌ಎಚ್‌ಎಂನ ಸಿಆರ್‌ಎಂ ತಂಡಗಳಲ್ಲಿ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರದ ಪ್ರಾತಿನಿಧ್ಯ ಇರುವಂತೆ ಸಂರಚನೆಯನ್ನು ಹೊಂದಾಣಿಕೆ ಮಾಡಬಹುದು.

(ii) ಜನ್ ಸುನ್ವಾಯಿ : ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಹಂತಗಳ(ಬೇರೆ ಬೇರೆ ಜಿಲ್ಲೆಗಳವರು) ಅಧಿಕಾರಿಗಳು ಮತ್ತು ಸ್ವಯಂಕ್ರಿಯಾ ಗುಂಪುಗಳ ಸದಸ್ಯರಿರುವ ಮಿಶ್ರ ಪರಾಮರ್ಶನ ತಂಡಗಳು ಮಾಧ್ಯಮಿಕ ಮತ್ತು/ಅಥವಾ ತೀವ್ರ ಪೋಷಕಾಂಶ ಕೊರತೆ ಹೆಚ್ಚು ಪ್ರಮಾಣದಲ್ಲಿ ವರದಿಯಾಗುತ್ತಿರುವ ನಿರ್ದಿಷ್ಟ ಸಂಖ್ಯೆಯ ಕ್ಷೇತ್ರಗಳಿಗೆ ಭೇಟಿ ನೀಡಬೇಕಾಗುತ್ತದೆ. ಸಮುದಾಯಗಳು ಹಾಗೂ ಕುಟುಂಬದ ಸದಸ್ಯರೊಟ್ಟಿಗೆ ಸಾರ್ವಜನಿಕ ಭೇಟಿ ಹಾಗೂ ಕೇಂದ್ರೀಕರಿಸಿದ ಗುಂಪು ಚರ್ಚೆ (ಎಫ್‌ಜಿಡಿ)ಗಳ ಮೂಲಕ ಈ ತಂಡಗಳು ಮಧ್ಯಸ್ಥಿಕೆ, ತೆರಪುಗಳು ಮತ್ತು ಮಕ್ಕಳ ಪ್ರಗತಿಯ ಫಲಿತಾಂಶಗಳು ಹಾಗೂ ಪರಿಣಾಮಗಳನ್ನು ಉತ್ತಮ ಗೊಳಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಗುಣಾತ್ಮಕ ವಿಶ್ಲೇಷಣೆಯನ್ನು ಕೈಗೊಳ್ಳುತ್ತವೆ. ಈ ತಂಡಗಳು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ

ಐಸಿಡಿಎಸ್ ಮಿಷನ್‌ಗಳಿಗೆ ವಿಶ್ಲೇಷಣೆ ವರದಿಗಳನ್ನು ಸಿದ್ಧಪಡಿಸಿ, ಶಿಫಾರಸುಗಳೊಟ್ಟಿಗೆ ಸಲ್ಲಿಸುತ್ತವೆ. ಜನ್ ಸುನ್ವಾಯಿಯನ್ನು ಜಂಟಿ ಐಸಿಡಿಎಸ್, ಎನ್‌ಎಚ್‌ಆರ್‌ಎಂಸಿಆರ್‌ಎಂಗೆ ಜೋಡಿಸಬಹುದು ಅಥವಾ ರಾಷ್ಟ್ರೀಯ ಮತ್ತು ಐಸಿಡಿಎಸ್ ಮಿಷನ್‌ಗಳು ನಿರ್ಧರಿಸಿದಂತೆ ಪೋಷಕಾಂಶ ಸಮೀಕ್ಷೆಯ ಅಂಕಿಅಂಶವನ್ನು ಆಧರಿಸಿದ ಅಗತ್ಯ ನಿರ್ದಿಷ್ಟ ಉಪಕ್ರಮವಾಗಿರಬಹುದು.

(iii) ಐಸಿಡಿಎಸ್ ಅಡಿ ನಾನಾ ಹಂತಗಳಲ್ಲಿ ಮಕ್ಕಳ ಸುರಕ್ಷಾ ಸೇವೆಗಳ ಗುಣಮಟ್ಟವನ್ನು ಖಾತ್ರಿ ಪಡಿಸಿಕೊಳ್ಳಲು ಸಮುದಾಯದ ಯಜಮಾನತ್ವದ ಮಾನ್ಯತೆ ವ್ಯವಸ್ಥೆಯನ್ನು ಪರೀಕ್ಷಾರ್ಥವಾಗಿ ಆರಂಭಿಸಿ, ಕ್ರಮೇಣ ವಿಸ್ತರಿಸಲಾಗುತ್ತಿದೆ. ಇದು ಎಡಬ್ಲ್ಯುಸಿಗಳು, ಗ್ರಾಮ/ಗುಚ್ಛ ಹಂತದ ಆರೋಗ್ಯ ಉಪಕೇಂದ್ರಗಳು, ಮಂಡಳಗಳು, ವಿಭಾಗಗಳು ಹಾಗು ಜಿಲ್ಲೆ ಮತ್ತಿತರರ ಆರೋಗ್ಯ, ಪೋಷಕಾಂಶ ಮತ್ತು ಅಭಿವೃದ್ಧಿ ಫಲಶ್ರುತಿ ಯನ್ನು ಆಧರಿಸಿ, ಸೇವಾ ವಿತರಣೆ ಬಿಂದುಗಳ ವರ್ಗೀಕರಣವನ್ನು ಸೂಚಿಸುತ್ತದೆ. ಉತ್ತಮ ಸಾಧನೆ ಮಾಡುವ ಪಂಚಾಯಿತಿಗಳು, ವಿಭಾಗಗಳು, ಜಿಲ್ಲೆಗಳು ಮತ್ತು ರಾಜ್ಯಗಳಿಗೆ ನಿರ್ಮಲ ಗ್ರಾಮ ಪುರಸ್ಕಾರ (ಟಿಎಸ್‌ಸಿ)ದಂಥ ಸಮುದಾಯ ಆಧಾರಿತ ಪುರಸ್ಕಾರ ಮತ್ತು ಗೌರವಗಳನ್ನು ರೂಪಿಸಲಾಗುವುದು. ಇಂಥ ಪುರಸ್ಕಾರಗಳು ಎಪಿಐಪಿಗಳ ಮೂಲಕ ಅಧಿಕ ಅನಿರ್ಬಂಧಿತ ಅನುದಾನದ ರೂಪದಲ್ಲಿ ಇರಬಹುದು ಮತ್ತು ಕಾಲಕಾಲಕ್ಕೆ ರಾಷ್ಟ್ರೀಯ ಮತ್ತು ರಾಜ್ಯ ಐಸಿಡಿಎಸ್ ಮಿಷನ್‌ಗಳು ನಿರ್ಧರಿಸಿದ ಇನ್ನಿತರ ಕ್ರಮಗಳಾಗಿರಬಹುದು. ಉತ್ತಮ ಸಾಧನೆ ಮಾಡಿದ ಜಿಲ್ಲೆಗಳು ಇನ್ನಿತರ ಜಿಲ್ಲೆ/ರಾಜ್ಯಗಳಿಗೆ ಕಲಿಕೆಗೆ `ಜೀವಂತ ವಿಶ್ವವಿದ್ಯಾನಿಲಯ'ಗಳು ಆಗುತ್ತವೆ.

(iv) ಸಾಮುದಾಯಿಕ ಪ್ರಕಟನೆ ಮತ್ತು ಸಾರ್ವಜನಿಕ ಮಾಹಿತಿ: ಗ್ರಾಮಗಳ ಹಂತದಲ್ಲಿ ಎಡಬ್ಲ್ಯುಸಿಗಳು, ಆರೋಗ್ಯ ಉಪ ಕೇಂದ್ರಗಳು ಮತ್ತು ಗ್ರಾಮ ಪಂಚಾಯಿತಿಗಳ ಹೊರಗೆ ಪ್ರಮುಖ ಸೂಚಕಗಳನ್ನು ಒಳಗೊಂಡ ಸಾಮುದಾಯಿಕ ನಕ್ಷೆಗಳ ಮೂಲಕ ಐಸಿಡಿಎಸ್ ಮಿಷನ್‌ನ ಸಮುದಾಯ ಹಂತದ ಸೂಚಕಗಳ ಜಾಡು ಹಿಡಿಯಲಾಗುತ್ತದೆ. ಎಡಬ್ಲ್ಯುಸಿಗಳಲ್ಲಿ ಸಮುದಾಯದ ಐದು ವರ್ಷದೊಳಗಿನ ಮಕ್ಕಳ ಬೆಳವಣಿಗೆ ಮತ್ತು ಪೋಷಕಾಂಶ ಪರಿಸ್ಥಿತಿಯ ಪರಾಮರ್ಶನದ ನಕ್ಷೆಯನ್ನು ಪ್ರದರ್ಶಿಸಲಾಗುತ್ತದೆ. ಈ ನಕ್ಷೆಯನ್ನು ಪ್ರತಿ ತಿಂಗಳು ನಿಗದಿಪಡಿಸಿದ ಗ್ರಾಮ ಆರೋಗ್ಯ ಮತ್ತು ಪೋಷಕಾಂಶ ದಿನ (ವಿಎಚ್‌ಎನ್‌ಡಿ)ದಂದು ನವೀಕರಿಸಲಾಗುತ್ತದೆ ಮತ್ತು ಕುಟುಂಬದ ತಾಯಿ ಮತ್ತು ಮಕ್ಕಳ ಸುರಕ್ಷಾ ಕಾರ್ಡ್‌ನ್ನು ಆಧರಿಸಿ ಸ್ಥಿರೀಕರಿಸಬೇಕಾಗುತ್ತದೆ.

ಇಷ್ಟಲ್ಲದೆ, ಐಸಿಡಿಎಸ್ ಯೋಜನೆಯ ಅನುಷ್ಠಾನದ ಪ್ರಗತಿಯನ್ನು ವಿವಿಧ ಹಂತಗಳಲ್ಲಿ ಅವಲೋಕಿಸಲು ಎಂಡಬ್ಲ್ಯುಸಿಡಿ ಮಾರ್ಚ್ 31, 2011 ರಲ್ಲಿ ರಚಿಸಿದ ಪರಾಮರ್ಶನ ಮತ್ತು ಅವಲೋಕನ ಸಮಿತಿಯ ಮಾರ್ಗದರ್ಶಿ ಸೂತ್ರಗಳನ್ವಯ (ಅನುಬಂಧ ಫಿಫಿ ರಲ್ಲಿ ಪ್ರತಿ ಲಭ್ಯವಿದೆ) ಕೇಂದ್ರ ಹಂತದಿಂದ ಎಡಬ್ಲ್ಯುಸಿಗಳವರೆಗೆ 5 ಹಂತದ ಪರಾಮರ್ಶನ ಮತ್ತು ಅವಲೋಕನ ಕಾರ್ಯತಂತ್ರವನ್ನು ರಚಿಸಲಾಗುತ್ತದೆ. ಇದರಲ್ಲಿ (1) ರಾಷ್ಟ್ರೀಯ ಮಟ್ಟದ ಪರಾಮರ್ಶನ ಮತ್ತು ಅವಲೋಕನ ಸಮಿತಿ (ಎನ್‌ಎಲ್‌ಎಂಆರ್‌ಸಿ) (2) ರಾಜ್ಯ ಮಟ್ಟದ ಅವಲೋಕನ ಸಮಿತಿ (ಎಸ್‌ಎಲ್‌ಎಂಆರ್‌ಸಿ) (3) ಜಿಲ್ಲಾ ಹಂತದ ಅವಲೋಕನ ಸಮಿತಿ (ಡಿಎಲ್‌ಎಂಆರ್‌ಸಿ) (4) ವಿಭಾಗ ಹಂತದ ಪರಾಮರ್ಶನ ಸಮಿತಿ (ಬಿಎಲ್‌ಎಂಸಿ) ಮತ್ತು (5) ಅಂಗನವಾಡಿ ಹಂತದ ಪರಾಮರ್ಶನ ಮತ್ತು ಅವಲೋಕನ ಸಮಿತಿ (ಎಲ್‌ಎಂಎಸ್‌ಸಿ) ಇರುತ್ತದೆ.

ಐಸಿಡಿಎಸ್ ಬಲವರ್ಧನೆಗೆ ನಡೆಯುತ್ತಿರುವ ಪ್ರಕ್ರಿಯೆಗಳ ಭಾಗವಾಗಿ ಎಂಡಬ್ಲ್ಯುಸಿಡಿ ಹಾಲಿ ಇರುವ ಐಸಿಡಿಎಸ್ ಎಂಐಎಸ್‌ನ ಸುಧಾರಣೆಯ ಪ್ರಕ್ರಿಯೆಯನ್ನು ಈಗಾಗಲೇ ಆರಂಭಿಸಿದ್ದು, ಅದು 2 ಹಂತಗಳಲ್ಲಿ ನಡೆಯಲಿದೆ. ಮೊದಲನೇ ಹಂತದಲ್ಲಿ ನಾನಾ ಹಂತಗಳಲ್ಲಿ ದಾಖಲಿಸುವಿಕೆ ಮತ್ತು ವರದಿಗಾರಿಕೆ ವ್ಯವಸ್ಥೆಯನ್ನು ಪರಿಷ್ಕರಿಸುವುದು ಹಾಗು ಸಂಸ್ಕರಿಸುವುದು; 2ನೇ ಹಂತವು ಮೇಲ್ವಿಚಾರಣೆ ಮತ್ತು ಕಾರ್ಯಕ್ರಮ ನಿರ್ವಹಣೆ ವ್ಯವಸ್ಥೆಯನ್ನು ಬಲಪಡಿಸುವುದನ್ನು

ಒಳಗೊಂಡಿದೆ. 2ನೇ ಹಂತದಲ್ಲಿ ಇಸಿಇ, ಎನ್‌ಎಚ್‌ಇಡಿ ಇತ್ಯಾದಿಯ ಗುಣಮಟ್ಟದ ಗುರಿಯನ್ನು ಸಾಧಿಸಲು ಹೊಸ ಸಾಧನಗಳು ಮಾತ್ರವಲ್ಲದೆ ಕಾರ್ಯಕ್ರಮದ ನಿರ್ವಹಣೆಗೆ ಸಾಧನಗಳನ್ನು ಮೇಲ್ವಿಚಾರಕರು/ಸಿಡಿಪಿಒ/ಡಿಪಿಒ/ನಿರ್ದೇಶನಾಲಯಗಳಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ.

ಐಸಿಡಿಎಸ್‌ನ ಸುಧಾರಿತ ಎಂಐಎಸ್ (1) ಎಡಬ್ಲ್ಯುಡಬ್ಲ್ಯುಗಳು ವರದಿ ಸಲ್ಲಿಕೆ ಮತ್ತು ಕಡಿತಗಳ ನಿರ್ವಹಣೆಗೆ ಕಡಿಮೆ ಸಮಯ ಬಳಸಿ, ಮನೆಗಳಿಗೆ ಭೇಟಿಗೆ ಹೆಚ್ಚು ಸಮಯ ನೀಡಲು ನೆರವಾಗುತ್ತವೆ (2) ಪ್ರಾಥಮಿಕ ದಾಖಲೆಗಳಿಂದ ವರದಿಗಳಿಗೆ ಅಂಕಿಅಂಶದ ಹರಿವು ಹೆಚ್ಚು ಸ್ಪಷ್ಟತೆಯನ್ನು ಕೊಡುತ್ತದೆ (3) ಎಲ್ಲ ಬಳಕೆದಾರರಿಗೂ ಹೆಚ್ಚು ಅರ್ಥಪೂರ್ಣ, ನಂಬಿಕಾರ್ಹ ಹಾಗೂ ಪರಿಶೀಲಿಸಬಹುದಾದ ಅಂಕಿಅಂಶವನ್ನು ಸೃಷ್ಟಿಸುತ್ತದೆ (4) ಎಂಐಎಸ್‌ನ ಡಿಜಿಟಲೀಕರಣಕ್ಕೆ ನೆರವಾಗುತ್ತದೆ ಮತ್ತು (5) ಫಲಿತಾಂಶದ ಗುರಿಯೆಡೆಗೆ ಚಲಿಸುತ್ತದೆ. ಪರಾಮರ್ಶನ ಸಾಧನಗಳು ಮತ್ತು ವಿನ್ಯಾಸಗಳ ಪರಿಷ್ಕರಣೆ/ಅಭಿವೃದ್ಧಿಯೊಟ್ಟಿಗೆ, 12ನೇ ಯೋಜನೆಯಲ್ಲಿ ಕೆಳಕಂಡ ಹೊಸ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

(i) ಎಡಬ್ಲ್ಯುಸಿ/ವಿಭಾಗೀಯ ಹಂತದಲ್ಲಿ ಮಾಹಿತಿ ದಾಖಲಿಸಲು 2ನೇ ವ್ಯಕ್ತಿ/ಸಂಸ್ಥೆಗೆ ಅವಕಾಶ: ಎಡಬ್ಲ್ಯುಸಿ ಹಂತದಲ್ಲಿ ದಾಖಲಾಗುತ್ತದೆ. ಮೇಲೆ ತೋರಿಸಿದಂತೆ ಸೇವೆಗಳು ಮತ್ತು ಫಲಾನುಭವಿಗಳಿಗೆ ಸಂಬಂಧಿಸಿದ ಅಂಕಿಅಂಶ ಮತ್ತು ಮಾಹಿತಿಗಳು ಎಡಬ್ಲ್ಯುಸಿಗಿಂತ ಮೇಲಿನ ಹಂತದಲ್ಲಿ ಕ್ರೋಡೀಕರಣ, ಸಂಸ್ಕರಣೆ/ವಿಶ್ಲೇಷಿಸಲ್ಪಡುತ್ತವೆ ಮತ್ತು ಪ್ರತಿಯೊಂದು ಹಂತಕ್ಕೆ ಇನ್ನಷ್ಟು ಅಂಕಿಅಂಶವನ್ನು ಸೇರ್ಪಡೆಗೊಳಿಸುತ್ತವೆ. ಎಡಬ್ಲ್ಯುಸಿಗಳಲ್ಲಿ ಸಂಗ್ರಹವಾದ ಅಂಕಿಅಂಶವನ್ನು ಪ್ರತಿ ತಿಂಗಳು ಕಂಪ್ಯೂಟರ್‌ನಲ್ಲಿ ದಾಖಲಿಸಬೇಕು ಮತ್ತು ರಾಜ್ಯ ಡಬ್ಲ್ಯುಸಿಡಿ ಮತ್ತು/ಅಥವಾ ಎನ್‌ಐಸಿ/ಎಂಡಬ್ಲ್ಯುಸಿಡಿಯ ಕೇಂದ್ರೀಕೃತ ಸರ್ವರ್‌ನಲ್ಲಿ ಸಂರಕ್ಷಿಸ ಬೇಕು. ಈ ಉದ್ದೇಶಕ್ಕಾಗಿ ಅಂಕಿಅಂಶವನ್ನು ಪ್ರತಿ ತಿಂಗಳು ಈ ಮೊದಲೇ ವಿನ್ಯಾಸಗೊಳಿಸಿದ ವೆಬ್ ಸಬಲ ಸಾಫ್ಟ್‌ವೇರ್‌ನಲ್ಲಿ ವಿಭಾಗ/ಜಿಲ್ಲಾ ಹಂತದಲ್ಲಿ ದಾಖಲಿಸಲು ಎಡಬ್ಲ್ಯುಸಿ ವರದಿಯೊಂದಕ್ಕೆ 10 ರೂ.ನಂತೆ ಹೊರಗುತ್ತಿಗೆ ನೀಡಲು ಅವಕಾಶ ಮಾಡಿಕೊಡಲಾಗಿದೆ.

(ii) ಪೋಷಕಾಂಶ ಸಂಪನ್ಮೂಲ ವೇದಿಕೆ ಮೂಲಕ ಐವಿಆರ್ ಆಧರಿಸಿದ ಪರಾಮರ್ಶನ: ಎಂಡಬ್ಲ್ಯುಸಿಡಿಯು ಹೊಸದಿಲ್ಲಿಯ ಎನ್‌ಐಪಿಸಿಸಿಡಿಯಲ್ಲಿ ಕೇರ್/ಯುಎಸ್‌ಐಎಡಿಯ ಭಾಗವಾದ ಐಎನ್‌ಎಚ್‌ಸಿ ಕಾರ್ಯಕ್ರಮದ ಬೆಂಬಲದಿಂದ ಪೋಷಕಾಂಶ ಸಂಪನ್ಮೂಲ ವೇದಿಕೆ (ಎನ್‌ಆರ್‌ಪಿ)ಯನ್ನು ಸ್ಥಾಪಿಸಿದೆ. ಪೋಷಕಾಂಶ ಮತ್ತು ಮಕ್ಕಳ ಅಭಿವೃದ್ಧಿಯ ಪರಸ್ಪರಾನುವರ್ತಿ ಜ್ಞಾನ ಸಂಪನ್ಮೂಲ ಬುನಾದಿಯನ್ನು ಸ್ಥಾಪಿಸು ವುದು ಎನ್‌ಆರ್‌ಪಿ ಉದ್ದೇಶ. ಎನ್‌ಆರ್‌ಪಿ ಪೋಷಕಾಂಶ ಸೇರಿದಂತೆ ಸಂದೇಶಗಳ ಸಂವಹನ, ಪರಸ್ಪರಾನುವರ್ತಿ ವೇದಿಕೆ ಪೂರೈಸುವಿಕೆ ಮತ್ತು ಮಾಹಿತಿ ವಿನಿಮಯದ ಡಿಜಿಟಲ್ ಸಂಪನ್ಮೂಲವಾಗಿ ಕಾರ್ಯ ನಿರ್ವಹಿಸಲಿದೆ. ಇಷ್ಟಲ್ಲದೆ ಅದು ಪರಸ್ಪರಾನುವರ್ತಿ ಧ್ವನಿ ಪ್ರತಿಕ್ರಿಯೆ(ಐವಿಆರ್) ವ್ಯವಸ್ಥೆ ಆಧಾರಿತ ಅಂಕಿಅಂಶ ಸೆರೆಹಿಡಿಯುವ ಕಾರ್ಯತಂತ್ರ ಸೌಲಭ್ಯವನ್ನು ಹೊಂದಿದೆ. ಸಂಗ್ರಹವಾದ ಅಂಕಿಅಂಶವನ್ನು ಎಂಐಎಸ್ ವರದಿ ವ್ಯವಸ್ಥೆಯೊಂದಿಗೆ ಗುರುತಿಸಿದ ಸೂಚಕಗಳೊಂದಿಗೆ ಸಂಯೋಜಿಸಲಾಗುತ್ತದೆ. ಐಸಿಡಿಎಸ್ ಅಧಿಕಾರಿಗಳು ಮತ್ತು ಎಡಬ್ಲ್ಯುಸಿಗಳ ನಡುವೆ ಸಂಪರ್ಕ/ಸಂವಹನವನ್ನು ಉತ್ತಮಗೊಳಿಸಲು, ಅಂಗನವಾಡಿ ಕಾರ್ಯಕರ್ತರಿಗೆ ಸಿಮ್ ಒಳಗೊಂಡ ಮೊಬೈಲ್ ಫೋನ್ ನೀಡಲಾಗುತ್ತದೆ.

ಇದರ ಜೊತೆಗೆ, ಎಂಡಬ್ಲ್ಯುಸಿಡಿಯು ಕಾರ್ಯಕ್ರಮದ ಪರಿಣಾಮವನ್ನು ಅವಲೋಕಿಸಲು 3ನೇ ವ್ಯಕ್ತಿ/ಸಂಸ್ಥೆಯಿಂದ ಮೌಲ್ಯಮಾಪನವನ್ನು ಮಾಡಿಸಲಿದೆ. 3ನೇ ವ್ಯಕ್ತಿ/ಸಂಸ್ಥೆಯ ಮೌಲ್ಯಮಾಪನದ ಅಂಶಗಳನ್ನು ಆಧರಿಸಿ, ಎಂಡಬ್ಲ್ಯುಸಿಡಿಯು ಕಾರ್ಯಕ್ರಮದ ಒಟ್ಟಾರೆ ಪರಿಣಾಮವನ್ನು ಹೆಚ್ಚಿಸಲು ಅಗತ್ಯವಾದ ಮಧ್ಯಂತರ ತಿದ್ದುಪಡಿಗಳನ್ನು ಮಾಡಿಕೊಳ್ಳಲಿದೆ.

ಐಸಿಡಿಎಸ್ ಮಿಷನ್ ಅಡಿ ಎಲ್ಲ ಹಂತದಲ್ಲೂ ಅಗತ್ಯವಿರುವಷ್ಟು ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳು ಲಭ್ಯವಿರುವಂತೆ ನೋಡಿಕೊಂಡು, ಅಂಕಿಅಂಶದ ಹರಿವು, ನಿಷ್ಕøಷ್ಟತೆ ಮತ್ತು ನಂಬಿಕಾರ್ಹವಾದ ಮತ್ತು ಪರಿಶೀಲಿಸಬಹುದಾದ ಅಂಕಿಅಂಶವನ್ನು ಹೆಚ್ಚಿಸುವ ಮೂಲಕ ಐಸಿಡಿಎಸ್‍ಗೆ ಸಂಬಂಧಿಸಿದ ಕಾರ್ಯನೀತಿ ನಿರ್ಧಾರಗಳನ್ನು ತೆಗೆದುಕೊಂಡು ಐಸಿಡಿಎಸ್ ಎಂಐಎಸ್‍ನ ಅನುಷ್ಠಾನವನ್ನು ಬಲಗೊಳಿಸಬೇಕು. ಐಸಿಡಿಎಸ್ ಮಿಷನ್ ಅಡಿ ಪರಾಮರ್ಶನ, ಅವಲೋಕನ ಮತ್ತು ಮೌಲ್ಯಮಾಪನವನ್ನು ಬಲಪಡಿಸಲು ಸಮಗ್ರ ಮಾರ್ಗದರ್ಶಿ ಸೂತ್ರಗಳನ್ನು ರಾಷ್ಟ್ರೀಯ ಐಸಿಡಿಎಸ್ ಮಿಷನ್ ನಿರ್ದೇಶನಾಲಯ ಅಭಿವೃದ್ಧಿ ಪಡಿಸಲಿದೆ.

+++++++++++++++++++++++++++++++

9. ಕುಂದುಕೊರತೆ ಪರಿಹಾರ ವ್ಯವಸ್ಥೆ : ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳೊಡನೆ ಅಭಿಪ್ರಾಯ ಹಂಚಿಕೆ ಮೂಲಕ ಉತ್ತರದಾಯಿತ್ವವನ್ನು ಬಲಪಡಿಸಲು ಹಾಗೂ ಫಲಾನುಭವಿಗಳು/ಸಮುದಾಯದ ದೂರುಗಳನ್ನು ನೋಂದಾಯಿಸಿಕೊಳ್ಳಲು ಹಾಗೂ ಬಗೆಹರಿಸಲು ವೇದಿಕೆಯೊಂದನ್ನು ರಚಿಸಲಾಗುತ್ತದೆ. ಈ ಉದ್ದೇಶಿತ ಕಾರ್ಯತಂತ್ರದಲ್ಲಿ ವಿಎಚ್‍ಎಸ್‍ಎನ್‍ಸಿಯು ಗ್ರಾಮೀಣ ಹಂತದಲ್ಲಿ ದೂರು ಪರಿಹಾರ ಸಮಿತಿಯಾಗಿ ಕಾರ್ಯ ನಿರ್ವಹಿಸಲಿದೆ ಮತ್ತು ಪಂಚಾಯಿತಿ ಸಮಿತಿ/ಸ್ಥಾಯಿ ಸಮಿತಿಯು ಎಲ್ಲ ದೂರುಗಳು/ಕುಂದುಕೊರತೆಗಳನ್ನು ಪರಿಹರಿಸಲು ಜವಾಬ್ದಾರವಾಗಲಿದೆ. ಜಿಲ್ಲಾ ಹಂತದಲ್ಲಿ ಸಿಇಒ/ಜಿಲ್ಲಾ ನ್ಯಾಯಾಧೀಶ/ಜಿಲ್ಲಾಧಿಕಾರಿ (ರಾಜ್ಯ ನಿರ್ಧರಿಸಬೇಕಿದೆ) ನೇತೃತ್ವದ ಜಿಲ್ಲಾ ಪರಿಷತ್ ಎಲ್ಲಾ ದೂರುಗಳು/ಕುಂದುಕೊರತೆಗಳನ್ನು ನೋಂದಾಯಿಸಿಕೊಳ್ಳುವ ಮತ್ತು ಪರಿಹರಿಸುವ ಜವಾಬ್ದಾರಿ ಹೊಂದಿರುತ್ತದೆ. ರಾಜ್ಯ ಮಟ್ಟದಲ್ಲಿ ರಾಜ್ಯ ಪೋಷಕಾಂಶ ಮಂಡಳಿಯಡಿ ಬರುವ ಸಂಬಂಧಪಟ್ಟ ಕಾರ್ಯನಿರ್ವಾಹಕ ಸಮಿತಿ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಡಬ್ಲ್ಯುಎಂಸಿಡಿಯ ಕಾರ್ಯದರ್ಶಿ ನೇತೃತ್ವದ ಉನ್ನತ ಸಮಿತಿ ಜವಾಬ್ದಾರನಾಗಿರಲಿದೆ. ವಿಭಾಗ, ಜಿಲ್ಲೆ, ರಾಜ್ಯ ಹಂತದ ಉನ್ನತ ಮಟ್ಟದ ಪ್ರಾಧಿಕಾರವು ಮೇಲ್ಮನವಿ ಪ್ರಾಧಿಕಾರವಾಗಿರಲಿದ್ದು, ಎಂಡಬ್ಲ್ಯುಸಿಡಿ ಅತ್ಯಂತ ಉನ್ನತ ಮಟ್ಟದ ಪ್ರಾಧಿಕಾರ ಆಗಿರಲಿದೆ.

ಕುಂದುಕೊರತೆಗಳ ನೋಂದಣಿ ಮತ್ತು ಪರಿಹಾರ ಪ್ರಕ್ರಿಯೆಯನ್ನು ವರ್ಧಿಸಲು, ವೆಬ್ ಬೆಂಬಲಿತ ವೇದಿಕೆಯೊಂದನ್ನು ಐಸಿಡಿಎಸ್ ಮಿಷನ್ ಅಡಿ ಸ್ಥಾಪಿಸಲಾಗುತ್ತದೆ. ಈ ವ್ಯವಸ್ಥೆಯಲ್ಲಿ ಫಲಾನುಭವಿಗಳು/ನಾಗರಿಕರು ಶುಲ್ಕರಹಿತ ಸಂಖ್ಯೆಗೆ ಕರೆಮಾಡಿ ಅಥವಾ ಫ್ಯಾಕ್ಸ್, ಇಮೇಲ್ ಮತ್ತು/ಅಥವಾ ಐಸಿಡಿಎಸ್ ಮಿಷನ್‍ನ ವೆಬ್‍ಪೋರ್ಟಲ್‍ಗೆ ಭೇಟಿ ನೀಡಿ ತಮ್ಮ ಕುಂದುಕೊರತೆಯನ್ನು ದಾಖಲಿಸಬಹುದು. ಕುಂದು ಕೊರತೆ ಪರಿಹಾರ ವ್ಯವಸ್ಥೆಯನ್ನು ರಚಿಸುವ ಕುರಿತ ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ಪ್ರಸ್ತಾವಿತ ಅನುಷ್ಠಾನ ಮಾರ್ಗದರ್ಶಿ ಸೂತ್ರಗಳಲ್ಲಿ ಉಲ್ಲೇಖಿಸಲಾಗಿದೆ.

++++++++++++++++++++++++++++++++++++++++++++++

10. ಅನುಬಂಧಗಳು

ಅನುಬಂಧ।

ಆಯ್ದ ಪ್ರದೇಶಗಳಲ್ಲಿ ಎಡಬ್ಲ್ಯುಸಿ ಮತ್ತು ಶಿಶುವಿಹಾರಗಳ ರೂಪರೇಷೆ

ತಾಯಂದಿರು ಕೆಲಸಕ್ಕೆ ಹೋಗುವ 0-6 ವರ್ಷ ವಯಸ್ಸಿನ ಮಕ್ಕಳ ಪಾಲನೆ ಮತ್ತು ಬೆಳವಣಿಗೆಗೆ ಶಿಶುವಿಹಾರಗಳು ಅತ್ಯಗತ್ಯ. ತಾಯಂದಿರು ಕೆಲಸಕ್ಕೆ ಹೋದ ಬಳಿಕ ಮಕ್ಕಳನ್ನು ನೋಡಿಕೊಳ್ಳಲು ಪ್ರಬುದ್ಧ ಪ್ರಾಯದವರು ಇಲ್ಲದ ಮನೆಗಳಲ್ಲಿ ಇದು ಅತ್ಯಗತ್ಯವಾಗಲಿದೆ. ಹಗಲು ಹೊತ್ತಿನ ಶಿಶುವಿಹಾರಗಳಿಗೆ ರಾಜ್ಯ ಸರ್ಕಾರಗಳು ಪ್ರಸ್ತುತ ಯಾವುದೇ ಹೂಡಿಕೆ ಮಾಡುತ್ತಿಲ್ಲ. ರಾಜೀವ್ ಗಾಂಧಿ ಶಿಶುವಿಹಾರ ಯೋಜನೆಯಲ್ಲಿ ಶಿಶುವಿಹಾರಗಳ ಲಭ್ಯತೆ ಸೀಮಿತವಾಗಿದ್ದು, ಇಡೀ ದೇಶದಲ್ಲಿ ಕೇವಲ

22,000 ಶಿಶುವಿಹಾರಗಳಿವೆ. ಇವನ್ನು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಳ ನೆರವಿಲ್ಲದೆ ಎನ್‌ಜಿಒಗಳು ನಿರ್ವಹಿಸುತ್ತಿವೆ. ಇಂಥ ಸನ್ನಿವೇಶ ದಲ್ಲಿ ಜನವಸತಿ ಹಂತದವರಿಗೆ ಹೊರಚಾಚು ಇರುವ ಎಡಬ್ಲ್ಯುಸಿಗಳಲ್ಲಿ ಹಗಲು ಸಮಯದಲ್ಲಿ ಶಿಶುವಿಹಾರ ಸೌಲಭ್ಯಗಳನ್ನು ಒದಗಿಸುವ ಅಗತ್ಯವಿದೆ. ಎಡಬ್ಲ್ಯುಸಿಗಳು 0-6 ವರ್ಷದ ಮಕ್ಕಳಿಗೆ ಪೂರಕ ಪೋಷಕಾಂಶ ಪೂರೈಕೆ, ಶಾಲಾಪೂರ್ವ ಶಿಕ್ಷಣ ಹಾಗೂ ಆರೋಗ್ಯ ತಪಾಸಣೆಗೆ ನೆರವಾಗುವುದರಿಂದ ಅವು ಶಿಶುವಿಹಾರಗಳಾಗಿ ಕೆಲಸ ನಿರ್ವಹಿಸಲು ಅತ್ಯಂತ ಸೂಕ್ತ. ಹೆಚ್ಚುವರಿಯಾಗಿ ಬೇಕಿರುವುದು ಭೌತಿಕ ಮೂಲಸೌಲಭ್ಯದ ವರ್ಧನೆ, ಮಾನವ ಸಂಪನ್ಮೂಲ, ಪಾಲನೆಗೆ ಸಂಬಂಧಿಸಿದ ಸಾಧನಗಳು ಮತ್ತು 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಅಗತ್ಯವಾದ ಸೌಲಭ್ಯಗಳು. ವಿಶೇಷವಾಗಿ ಬೇಕಾದ ಹೆಚ್ಚುವರಿ ಅಗತ್ಯಗಳೆಂದರೆ.,

1. ಸಿಬ್ಬಂದಿ: ಕೇಂದ್ರದಲ್ಲಿ 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪಾಲನೆ ಮತ್ತು ಗಮನ ನೀಡಲು ಹಾಗೂ ಪೂರಕ ಪೋಷಕಾಂಶಗಳನ್ನು ಪೂರೈಸಲು ಒಬ್ಬ ಹೆಚ್ಚುವರಿ ಸಿಬ್ಬಂದಿಯ ಅಗತ್ಯವಿದೆ. ಶಿಶುವಿಹಾರದ ಸಿಬ್ಬಂದಿಯ ವೇತನವು ಎಡಬ್ಲ್ಯುಡಬ್ಲ್ಯು ವೇತನಕ್ಕೆ ಸಮವಾಗಿರಲಿದ್ದು, ಮಾಸಿಕ 3,000 ರೂ. ಇರುತ್ತದೆ.

2. ಪೂರಕ ಪೋಷಕಾಂಶ : ಶಿಶುವಿಹಾರಗಳಲ್ಲಿ ಪೂರ್ತಿ ದಿನ ಇರುವ ಮಕ್ಕಳಿಗೆ ಬೆಳಗ್ಗೆ ಉಪಹಾರ/ಆನಂತರ ತಿನಿಸು, ಮಧ್ಯಾನ್ಹ ಭೋಜನ ಹಾಗೂ ಸಂಜೆ ತಿಂಡಿಗೆ ಬೇಕಾದ ಸರಕುಗಳನ್ನು ನೀಡಬೇಕಾಗು ತ್ತದೆ. ಆದರೆ, ಎಲ್ಲ ಮಕ್ಕಳೂ ಇಡೀ ದಿನ ಇರುವುದಿಲ್ಲ. ಪೋಷಕರು ಶಿಶುವಿಹಾರದಲ್ಲಿ 15 ಕ್ಕಿಂತ ಹೆಚ್ಚು ಮಕ್ಕಳನ್ನು ದಿನವಿಡೀ ಬಿಡುವುದಿಲ್ಲ ಎಂದು ಊಹಿಸಲಾಗಿದೆ. ಈ ಮಕ್ಕಳಿಗೆ ಪೂರಕ ಪೋಷಕಾಂಶದ ವೆಚ್ಚ ದಿನವೊಂದಕ್ಕೆ ಒಂದು ಮಗುವಿಗೆ 6 ರೂ. ನಿಗದಿಪಡಿಸಲಾಗಿದ್ದು, ಇದನ್ನು ವರ್ಷವೊಂದಕ್ಕೆ 300 ದಿನ ಪೂರೈಸುವ ಎಡಬ್ಲ್ಯುಸಿ-ಎಸ್‌ಎನ್‌ಪಿ ಸರಂಜಾಮುಗಳಿಗೆ ಹೆಚ್ಚುವರಿಯಾಗಿ ನೀಡಲಾಗುತ್ತದೆ.

3. ಮೂಲಸೌಕರ್ಯಗಳು : ಮಕ್ಕಳು ಆಟವಾಡಲು, ವಿಶ್ರಾಂತಿ ತೆಗೆದುಕೊಳ್ಳಲು ಹಾಗೂ ಕಲಿಕೆಗೆ (ಯಾವುದೇ ಅಡೆತಡೆಯಿಲ್ಲದೆ) ಹಾಗೂ ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸುರಕ್ಷಿತ ಮತ್ತು ರಕ್ಷಣಾತ್ಮಕ ವಾತಾವರಣವನ್ನು ಖಾತ್ರಿಗೊಳಿಸಲು ಮಗುವೊಂದಕ್ಕೆ ಹೆಚ್ಚುವರಿಯಾಗಿ 6-8 ಚದರ ಅಡಿ (ಒಟ್ಟು 150-175 ಚದರ ಅಡಿ) ಸ್ಥಳಾವಕಾಶದ ಅಗತ್ಯವಿದೆ. ಅಂಗನವಾಡಿ ಸೌಲಭ್ಯವನ್ನು ಪರಿಚಯಿಸಲಿರುವ ಎಡಬ್ಲ್ಯುಸಿಗಳಲ್ಲಿ ಹೆಚ್ಚುವರಿ ಕೊಠಡಿಯನ್ನು ನಿರ್ಮಿಸಬೇಕು ಅಥವಾ ಒಂದು ವೇಳೆ ಹೊಸ ಕಟ್ಟಡವೊಂದಕ್ಕೆ ಸ್ಥಳಾಂತರಿಸಬೇಕಿದ್ದರೆ, ಕೇಂದ್ರ ಮತ್ತು ರಾಜ್ಯಗಳು ವೆಚ್ಚವನ್ನು 75:25 ರಂತೆ ಹಂಚಿಕೊಳ್ಳ ಬೇಕು. ಎಡಬ್ಲ್ಯುಸಿಗಳ ಉನ್ನತೀಕರಣಕ್ಕೆ ಘಟಕವೊಂದಕ್ಕೆ ಒಂದು ಲಕ್ಷ ರೂ.ನಂತೆ 2 ಲಕ್ಷ ಘಟಕಗಳನ್ನು ಹಂತಹಂತವಾಗಿ ಮೇಲ್ದರ್ಜೆಗೇರಿಸಲು ನಿರ್ಧರಿಸಲಾಗಿದ್ದು, ಇದರಲ್ಲಿ ಎಡಬ್ಲ್ಯುಸಿ ಮತ್ತು ಅಂಗನವಾಡಿಗಳ ಉನ್ನತೀಕರಣಕ್ಕೆ ಅದ್ಯತೆ ನೀಡಲಾಗುತ್ತದೆ.

4. ಅವಧಿ : ಕೇಂದ್ರಗಳು ಕನಿಷ್ಠ 8 ಗಂಟೆ ತೆರೆದಿರಬೇಕು. ತಾಯಂದಿರ ಅಗತ್ಯಕ್ಕೆ ಅನುಗುಣವಾಗಿ ಸಮಯವನ್ನು ನಿಗದಿಗೊಳಿಸಬೇಕು ಮತ್ತು ಇದು ಬೇರೆ ಬೇರೆ ಪ್ರದೇಶ/ಋತುವಿಗೆ ಬೇರೆ ಬೇರೆ ಆಗಿರಬಹು ದು. ಅಂಗನವಾಡಿಗಳ ಸಮಯ ಪ್ರಾಥಮಿಕ ಶಾಲೆಗಳ ಸಮಯಕ್ಕೆ ಅನುಗುಣವಾಗಿದ್ದರೆ, ದೊಡ್ಡ ಮಕ್ಕಳು ಆರು ವರ್ಷಕ್ಕಿಂತ ಸಣ್ಣ ಮಕ್ಕಳನ್ನು ಕರೆದುಕೊಂಡು ಬರಲು ಹಾಗೂ ವಾಪಸ್ ಕರೆದುಕೊಂಡು ಹೋಗಲು ಸಾಧ್ಯವಾಗುತ್ತದೆ. ಸಿಬ್ಬಂದಿ ತಾವು ಕೇಂದ್ರದಲ್ಲಿ ಆರು ಗಂಟೆಗಿಂತ ಹೆಚ್ಚು ಕಾಲ ಕಳೆಯದಂತೆ ತಮ್ಮ ವೇಳಾಪಟ್ಟಿಯನ್ನು(ಸರದಿಯಂತೆ) ಸಿದ್ದಪಡಿಸಿಕೊಳ್ಳಬೇಕು.

5. ತರಬೇತಿ : ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ನೋಡಿಕೊಳ್ಳಲು ಎಲ್ಲ ಮೂವರು ಸಿಬ್ಬಂದಿಗೂ ಮೂಲಭೂತ ತರಬೇತಿ ಅಗತ್ಯವಿದೆ. ಎಡಬ್ಲ್ಯುಡಬ್ಲ್ಯು-1ಗೆ ಶಾಲಾಪೂರ್ವ ಶಿಕ್ಷಣವನ್ನು ನೀಡಲು ಹೆಚ್ಚುವರಿ ವಿಶೇಷ ಪರಿಣತಿ ಅಗತ್ಯವಿದೆ ಮತ್ತು ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ನೋಡಿಕೊಳ್ಳಲು ಶಿಶುವಿಹಾರ ಸಿಬ್ಬಂದಿಗೆ ಶಿಶುವಿಹಾರ ನಿರ್ವಹಣೆ ಮತ್ತು ಪಾಲನೆ

ಹಾಗೂ ಉತ್ತೇಜನ ನೀ ಡುವ ಗುರಿಯುಳ್ಳ ತರಬೇತಿ ಅಗತ್ಯವಿದೆ. ಎಡಬ್ಲ್ಯುಸಿ+ಶಿಶುವಿಹಾರದ ಹೊಸ ಮಾದರಿಗೆ ಮಾರ್ಗದರ್ಶನ ಹಾಗೂ ಪರಾಮರ್ಶನ ನೀಡಲು ಮೇಲ್ವಿಚಾರಕರು ಮತ್ತು ಸಿಡಿಪಿಒಗಳಿಗೆ ಕೂಡ ತರಬೇತಿ ನೀಡಬೇಕಾಗು ತ್ತದೆ. ಶೇ.5 ರಷ್ಟು ಎಡಬ್ಲ್ಯುಸಿಗಳಲ್ಲಿ ಎಡಬ್ಲ್ಯುಸಿ+ಶಿಶುವಿಹಾರಗಳನ್ನು ರಾಜ್ಯಗಳೊಂದಿಗೆ 75:25 ಅನುಪಾತದಲ್ಲಿ ವೆಚ್ಚ ಹಂಚಿಕೊಳ್ಳುವಿಕೆ ಆಧಾರದಲ್ಲಿ ಆರಂಭಿಸಲಾಗುತ್ತದೆ. ಆರಂಭದಲ್ಲಿ ನಗರ ಪ್ರದೇಶಗಳಲ್ಲಿ ಈ ಮಾದರಿಯನ್ನು ಅನುಷ್ಠಾನಗೊಳಿಸಲು ಒತ್ತು ನೀಡಲಾಗುತ್ತದೆ. ನಗರ: ಗ್ರಾಮಾಂತರ ಪ್ರದೇಶಗಳಲ್ಲಿ ಅನುಷ್ಠಾನದ ಅನುಪಾತ 60:40 ಇರಲಿದೆ. ನಗರ ಪ್ರದೇಶದ ಶೇ.60 ರಷ್ಟು ಶಿಶುವಿಹಾರಗಳಲ್ಲಿ ಶೇ.17ನ್ನು ಮೆಟ್ರೋಪಾಲಿಟನ್‌ಗಳಲ್ಲಿ ಆರಂಭಿಸಲಾಗುತ್ತದೆ. ರಾಜ್ಯಗಳು ಈ ಮಾದರಿಯ ಅನುಷ್ಠಾನಕ್ಕೆ ಸ್ವಯಂಸೇವಾ ಸಂಘಟನೆಗಳನ್ನು ಬಳಸಿಕೊಳ್ಳುವ ಸಾಧ್ಯತೆಯನ್ನು ಪರಿಶೀಲಿಸಬಹುದು. ಒಂದು ವೇಳೆ ರಾಜ್ಯಗಳು ತಮ್ಮ ದೇ ಮಾದರಿಯನ್ನು ಅನುಷ್ಠಾನಗೊಳಿಸಿಕೊಳ್ಳಲು ಇಚ್ಛಿಸಿದಲ್ಲಿ, ಎಡಬ್ಲ್ಯುಸಿ+ಶಿಶುವಿಹಾರ ಮಾದರಿಯಂತೆ ಸಂಚಾರಿ ಶಿಶುವಿಹಾರದಂಥ ಸೌಲಭ್ಯವನ್ನು ನೀಡಲು ಹಾಗೂ ಅದರ ಸುಲಲಿತ ಅನುಷ್ಠಾನಕ್ಕೆ ತಂತ್ರಜ್ಞಾನದ ಬೆಂಬಲವನ್ನು ಖಾತ್ರಿಗೊಳಿಸಬಲ್ಲ ಹಾಗೂ ತರಬೇತಿಯನ್ನು ನೀಡುವ ಪರಿಣತಿ ಇರುವ ಸರಕಾರೇತರ ಸಂಘಟನೆಗಳನ್ನು ತೊಡಗಿಸಿಕೊಳ್ಳುವ ಸಾಧ್ಯತೆಯನ್ನು ಪರಿಶೀಲಿಸಬಹುದು. ಈ ಮಾದರಿಯನ್ನು ಅನುಷ್ಠಾನಗೊಳಿ ಸಲು ಆಸಕ್ತಿ ಇರುವ ರಾಜ್ಯಗಳು ವಿವರವಾದ ಅನುಷ್ಠಾನ ವ್ಯವಸ್ಥೆಯನ್ನು ಹಾಗೂ ಶಿಷ್ಟಾಚಾರವನ್ನು ರೂಪಿಸಿಕೊಂಡು, ಅದನ್ನು ತಮ್ಮ ಪಿಐಪಿಗಳಲ್ಲಿ ಅಂಗೀಕಾರಕ್ಕಾಗಿ ಸಲ್ಲಿಸಬೇಕು. 70,000 ಎಡಬ್ಲ್ಯುಸಿಗಳಲ್ಲಿ ಹಂತಹಂತವಾಗಿ ಎಡಬ್ಲ್ಯುಸಿ+ಶಿಶುವಿಹಾರಗಳನ್ನು ಕೆಳಗಿನ ವೇಳಾಪಟ್ಟಿಯಂತೆ ಅನುಷ್ಠಾನಗೊಳಿಸಲಾಗುತ್ತದೆ;

| ವಿವರ | ವರ್ಷ 1 | 2 | 3 | 4 | 5 |
|---|---|---|---|---|---|
| ಎಡಬ್ಲ್ಯುಸಿ+ಶಿಶುವಿಹಾರ ಸಂಖ್ಯೆ (ನಿರ್ಮಾಣದ ಅನುಪಾತದಲ್ಲಿ) | 0 | 20,000 | 40,000 | 70,000 | 70,000 |
| ಮೆಟ್ರೋಪಾಲಿಟನ್ ನಗರಗಳಲ್ಲಿ ಶಿಶುವಿಹಾರ(ಶೇ.40) | 0 | 8,000 | 16,000 | 28,000 | 28,000 |
| ನಗರಪ್ರದೇಶಗಳಲ್ಲಿ ಶಿಶುವಿಹಾರ(ಶೇ.43) | 0 | 8,600 | 17,200 | 30,100 | 30,100 |
| ಗ್ರಾಮಾಂತರದಲ್ಲಿ ಶಿಶುವಿಹಾರ (ಶೇ.17) | 0 | 3,400 | 6,800 | 11,900 | 11,900 |

ಹೆಚ್ಚುವರಿ ವಿವರಗಳು - ಎಡಬ್ಲ್ಯುಸಿ+ಶಿಶುವಿಹಾರ

ಎಡಬ್ಲ್ಯುಸಿ+ಶಿಶುವಿಹಾರದಲ್ಲಿರುವ ಸೌಲಭ್ಯಗಳು ..............................ವೆಚ್ಚ...........................ಷರಾ

ಹೆಚ್ಚುವರಿ ಶಿಶುವಿಹಾರ ಕೆಲಸಗಾರ.............ಮಾಸಿಕ 3,000 ರೂ...........................ಗೌರವಧನ

ಪಾಲನಾ ವಸ್ತುಗಳು, ಮೃದುವಾದ ಆಟಿಕೆಗಳು ಮತ್ತು ಶುಚಿಗೊಳಿಸುವ ವಸ್ತುಗಳು.....ವರ್ಷಕ್ಕೆ 1,000 ರೂ..............ಇತ್ಯಾದಿ ಅಗತ್ಯಗಳು

ಶಿಶುವಿಹಾರಕ್ಕೆ ಬಳಸುವ ಸ್ಥಳಾವಕಾಶದ ಅಧಿಕ ಬಾಡಿಗೆ...........ಹೆಚ್ಚುವರಿ ಬಾಡಿಗೆ((ಮಾಸಿಕ, ಶಿಶುವಿಹಾರವೊಂದಕ್ಕೆ)................ಗ್ರಾಮಾಂತರ/ಮೂಲವಾಸಿ ರೂ.500/ನಗರ ಪ್ರದೇಶ ರೂ.

1,000/ಮೆಟ್ರೋಪಾಲಿ ಟನ್ ರೂ. 2,000........... ಬಾಡಿಗೆಯು ಪ್ರದೇಶ ನಿರ್ದಿಷ್ಟವಾಗಿರಲಿದೆ ಮತ್ತು ರಾಜ್ಯ ಬಾಡಿಗೆ ಪಟ್ಟಿ (ಎಸ್‌ಒಆರ್) ಮತ್ತು ನಿಯಮಗಳಂತೆ ಗರಿಷ್ಠ ಮಿತಿಯವರೆಗೆ ಇರಲಿವೆ.

ಶಿಶುವಿಹಾರದಲ್ಲಿ ಎಲ್ಲ ಮಕ್ಕಳಿಗೂ ಸಂಜೆ ಉಪಹಾರ.........ದಿನವೊಂದಕ್ಕೆ ಒಬ್ಬ ಫಲಾನುಭವಿಗೆ ರೂ.6 ..........................ಸಂಜೆ ವೇಳೆ ಉಪಹಾರ/ಹಾಲಿನ ವೆಚ್ಚ

ಟಿಪ್ಪಣಿ: ಎಲ್ಲ ವೆಚ್ಚ(ಶಿಶುವಿಹಾರದ ನೌಕರರ ಗೌರವಧನ ಸೇರಿದಂತೆ)ಗಳನ್ನು ಕೇಂದ್ರ ಮತ್ತು ರಾಜ್ಯಗಳು 75:25ರ ಅನುಪಾತದಲ್ಲಿ ಹಂಚಿಕೊಳ್ಳಲಿವೆ.

..........................................................................................

ಅನುಬಂಧ II

ಸಂಖ್ಯೆ 16-3/2009 ಎಂಇ ಸಂಪುಟ 2

ಭಾರತ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ, ಶಾಸ್ತ್ರಿ ಭವನ, ಹೊಸದಿಲ್ಲಿ

10 ಮಾರ್ಚ್ 2011

ಇವರಿಗೆ,

ಐಸಿಡಿಎಸ್‌ಗೆ ಸಂಬಂಧಿಸಿದ ಎಲ್ಲ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಕಾರ್ಯದರ್ಶಿಗಳು

ವಿಷಯ: ಅಂಗನವಾಡಿ ಕೇಂದ್ರಗಳ ನಿರ್ಮಾಣ

ಮಾನ್ಯರೇ,

ನಿಮಗೆಲ್ಲ ಗೊತ್ತಿರುವಂತೆ ದೇಶದೆಲ್ಲೆಡೆ ಅಂಗನವಾಡಿ ಕೇಂದ್ರ (ಎಡಬ್ಲ್ಯುಸಿ)ಗಳ ಕಾರ್ಯಜಾಲದ ಮೂಲಕ ಅನುಷ್ಠಾನಗೊಳ್ಳುತ್ತಿರುವ ಮಕ್ಕಳ ಸಮಗ್ರ ಅಭಿವೃದ್ಧಿ ಸೇವೆ (ಐಸಿಡಿಎಸ್) ಯೋಜನೆಯು ಒಂದು ಪ್ರಮುಖ ಕಾರ್ಯಕ್ರಮವಾಗಿದೆ. ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮತ್ತು ಗರ್ಭಿಣಿಯರು ಹಾಗೂ ಹಾಲುಣಿಸುತ್ತಿರುವ ತಾಯಂದಿರಿಗೆ ಆರು ಸೇವೆಗಳ ಪ್ಯಾಕೇಜ್‌ನ್ನು ಈ ಯೋಜನೆ ನೀಡುತ್ತದೆ. ಆದ್ದರಿಂದ ಎಡಬ್ಲ್ಯುಸಿ ಎನ್ನುವುದು ಆರೋಗ್ಯ, ಪೋಷಕಾಂಶ ಮತ್ತು ಆರಂಭಿಕ ಬಾಲ್ಯಾವಸ್ಥೆಯ ಬೆಳವಣಿಗೆ ಹಾಗೂ ಕಲಿಕೆಯ ವಾಸಸ್ಥಳ ಹಂತದ ಮೊದಲ ಕಾವಲು ಪಡೆ ಆಗಿರಲಿದೆ.

2. ಐಸಿಡಿಎಸ್ ಯೋಜನೆಯಡಿ ಈಶಾನ್ಯ ರಾಜ್ಯಗಳನ್ನು ಹೊರತುಪಡಿಸಿದರೆ, ಬೇರೆಡೆ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಯಾವುದೇ ಅವಕಾಶಗಳಿಲ್ಲ. ಹಲವು ರಾಜ್ಯಗಳು ತಮ್ಮದೇ ಅನುದಾನ ಮತ್ತು ವಿವಿಧ ಮಂತ್ರಾಲಯಗಳ ಯೋಜನೆಗಳಾದ ಬಿಆರ್‌ಜಿಎಫ್, ಎಂಪಿಎಲ್‌ಎಡಿಎಸ್, ಎಂಎಲ್‌ಎಡಿಎಸ್, ಎನ್‌ಆರ್‌ಇಜಿ, ಪಿಆರ್‌ಐ, ಎಂಎಸ್‌ಡಿಪಿ, ಎಡಿಪಿ, ಬಿಎಡಿಪಿ ಮತ್ತು ಆರ್‌ಐಡಿಎಫ್ ಇತ್ಯಾದಿ ರಾಜ್ಯದ ಯೋಜನೆಗಳಡಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಎಡಬ್ಲ್ಯುಸಿಗಳನ್ನು ನಿರ್ಮಿಸುತ್ತಿವೆ. ಎಡಬ್ಲ್ಯುಸಿಗಳನ್ನು ಆರಂಭಿಕ ಬಾಲ್ಯಾವಸ್ಥೆಯ ಕಲಿಕೆಯ ವೇದಿಕೆಯನ್ನಾಗಿ ಕ್ರೋಡೀಕರಿಸಲು ಹಾಗೂ ಸಬ್ಲಾ(ಎಸ್‌ಎಬಿಎಲ್‌ಎ) ಮತ್ತು ಐಜಿಎಂಎಸ್‌ವೈ ಯೋಜನೆಯನ್ನು ಆರಂಭಿಸಿರುವುದನ್ನು ದೃಷ್ಟಿಯಲ್ಲಿರಿಸಿಕೊಂಡು, ಇಂಥ ಪ್ರಯತ್ನಗಳ ವೇಗವರ್ಧನೆಯ ಅಗತ್ಯವಿದೆ.

3. ಗುರಿ ನಿರ್ದೇಶಿತ ಜನಸಂಖ್ಯೆಗೆ ಸೇವೆಗಳನ್ನು ವಿತರಣೆ ಮಾಡುವಲ್ಲಿ ಎಡಬ್ಲ್ಯುಸಿಗಳ ಪ್ರಾಮುಖ್ಯತೆ ಮತ್ತು ವರ್ಧಿತ ಪಾತ್ರವನ್ನು ಪರಿಗಣಿಸಿ, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಎಡಬ್ಲ್ಯುಸಿಗಳಲ್ಲಿ ಕನಿಷ್ಠ ಸೌಲಭ್ಯಗಳು ಲಭ್ಯವಿರುವಂತೆ ಮಾಡಲು ಎಡಬ್ಲ್ಯುಸಿ ಕಟ್ಟಡಗಳ ರೂಪರೇಷೆ/ವಿನ್ಯಾಸ ಹೇಗಿರಬೇಕು ಎಂಬ ಕುರಿತು ಸೂಚನೆ/ಸಲಹೆ ನೀಡುವ ಅಗತ್ಯವಿದೆ ಎಂದು ಭಾವಿಸಲಾಯಿತು. ಈ ವಿಷಯವನ್ನು ಹಲವು ಏಜೆನ್ಸಿಗಳೊಡನೆ ಚರ್ಚಿಸಲಾಗಿದೆ ಮತ್ತು ಎಡಬ್ಲ್ಯುಸಿಗಳಲ್ಲಿ ಮಕ್ಕಳು/ಮಹಿಳೆಯರಿಗೆ ಕುಳಿತುಕೊಳ್ಳಲು ಪ್ರತ್ಯೇಕ ಕೊಠಡಿ, ಪ್ರತ್ಯೇಕ ಅಡುಗೆ ಮನೆ, ಆಹಾರ ಪದಾರ್ಥಗಳನ್ನು ಶೇಖರಿಸಲು ಉಗ್ರಾಣ, ಮಕ್ಕಳಸ್ನೇಹಿ ಶೌಚಾಲಯಗಳು ಮತ್ತು ಮಕ್ಕಳು ಆಟವಾಡಲು ಸ್ಥಳಾವಕಾಶ(ಒಳಾಂಗಣ ಮತ್ತು ಹೊರಾಂಗಣ ಚಟುವಟಿಕೆಗಳು)ದೊಟ್ಟಿಗೆ ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯ ಹೊಂದಿರಬೇಕೆಂಬ ಅನಿಸಿಕೆ ವ್ಯಕ್ತವಾಗಿದೆ. ಎಡಬ್ಲ್ಯುಸಿ ಕನಿಷ್ಠ 600 ಚದರ ಅಡಿ ಆವರಣ ಹೊಂದಿದ್ದಲ್ಲಿ, ಅದು ಕನಿಷ್ಠ ಅಗತ್ಯಗಳನ್ನು ಪೂರೈಸಬಹುದು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

4. ಹೊಸದಿಲ್ಲಿಯ ಸಿಪಿಡಬ್ಲ್ಯುಡಿ, ಆಂಧ್ರಪ್ರದೇಶ, ರಾಜಸ್ಥಾನ, ತಮಿಳುನಾಡು, ಬಿಹಾರ ಮತ್ತು ಚತ್ತೀಸ್‌ಗಢ ರಾಜ್ಯ ಸರ್ಕಾರಗಳು ಸಲ್ಲಿಸಿದ ಎಡಬ್ಲ್ಯುಸಿಗಳ ಕೆಲವು ಸೂಚಿಸಲ್ಪಟ್ಟ ರೂಪರೇಷೆಗಳನ್ನು ಇಲ್ಲಿ ಪರಾಮರ್ಶೆಗಾಗಿ ಅಳವಡಿಸಲಾಗಿದೆ. ಆದರೆ, ಇವು ಸಲಹಾತ್ಮಕವಾಗಿದ್ದು, ಯಾವುದೇ ಸ್ಥಿರ ಮಾನದಂಡಗಳನ್ನು ಪ್ರತಿನಿಧಿಸುವುದಿಲ್ಲ.

5. ನಿಮ್ಮ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಡಬ್ಲ್ಯುಸಿಗಳ ನಿರ್ಮಾಣ ಪ್ರಸ್ತಾವನೆಗಳನ್ನು ಪರಿಗಣಿಸುವಾಗ ಈ ಮೊದಲು ಹೇಳಿದ ವಿವರಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ಕೋರಲಾಗಿದೆ.

ನಿಮ್ಮ ವಿಶ್ವಾಸಿ

(ಡಾ. ಶ್ರೀರಂಜನ್), ಜಂಟಿ ಕಾರ್ಯದರ್ಶಿ, ಭಾರತ ಸರ್ಕಾರ

ಪ್ರತಿಗಳು

1) ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಐಸಿಡಿಎಸ್ ನಿರ್ದೇಶಕರು

2) ಎಂಡಬ್ಲ್ಯುಸಿಡಿಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಟಿಡಿ(ಎನ್‌ಐಸಿ)

(ಎಚ್.ಎಸ್. ನಂದಾ)

ಉಪ ಕಾರ್ಯದರ್ಶಿ, ಭಾರತ ಸರ್ಕಾರ

ಎಡಬ್ಲ್ಯುಸಿಯ ವಿನ್ಯಾಸದ ನಮೂನೆ :

ಚತ್ತೀಸ್‌ಗಢ

ಎಡಬ್ಲ್ಯುಸಿಗಳ ಪರ್ಯಾಯ ವಿನ್ಯಾಸಗಳು

1. ವಿನ್ಯಾಸ ಆಯ್ಕೆ 1 : ವಿಸ್ತೀರ್ಣ = 84.31 ಚದರ ಮೀಟರ್. ಚಮೀಗೆ 4,000 ರೂ. ನಂತೆ 3,37,240 ರೂ.

2. ವಿನ್ಯಾಸ ಆಯ್ಕೆ 2 : ವಿಸ್ತೀರ್ಣ = 100.5 ಚಮೀ. ಚಮೀಗೆ 4,000 ರೂ.ನಂತೆ 4,02,000 ರೂ.

ಆದರೆ, ಗಮನಿಸಬೇಕಾದ ಅಂಶಗಳೆಂದರೆ.

1. ವೆಚ್ಚ ಕ್ಷಮತೆಯ ವಿವಿಧ ನಿರ್ಮಾಣ ತಂತ್ರಜ್ಞಾನಗಳನ್ನು ಬಳಸಬೇಕು ಎಂಬುದು ನಮ್ಮ ಸಲಹೆ

2. ಮೇಲಿನದರಲ್ಲಿ ಶೌಚಾಲಯದ ವೆಚ್ಚವೂ ಸೇರಿದೆ

3. ವಿವಿಧ ಇಲಾಖೆಗಳ ಯೋಜನೆಗಳ ಒಮ್ಮುಖವಾಗುವಿಕೆಯನ್ನು ಇಲ್ಲಿ ಸೇರ್ಪಡೆಗೊಳಿಸಿಲ್ಲ

4. ಇದು ತಾತ್ಕಾಲಿಕ/ಪ್ರಾಥಮಿಕ ವೆಚ್ಚ. ಆರ್‌ಇಎಸ್‌ಗಳಿಂದ ಅಂಕಿಅಂಶಗಳ ಕೊರತೆಯಿಂದ ಹಿಂದಿನ ಲೆಕ್ಕಾಚಾರವನ್ನು ಆಧರಿಸಿದೆ.

ಒಂದು ನಮೂನೆಯನ್ನು ಕೆಳಗೆ ನೀಡಲಾಗಿದೆ. ಎಲ್ಲ ಸೂಕ್ತ ಮಾದರಿಗಳ ವಿಸ್ತೃತ ವಿನ್ಯಾಸಗಳು ತಿತಿತಿ.ತಿಛಿಜ.ಟಿiಛಿ.iಟಿ ನಲ್ಲಿ ಲಭ್ಯವಿವೆ.

..................................................ನಕ್ಷೆ.............................................

ಅನುಬಂಧ III

ಐಸಿಡಿಎಸ್ ಮಿಷನ್ ಅಡಿಯಲ್ಲಿರುವ ಮುಖ್ಯ ಸೇವೆಗಳ ಪ್ಯಾಕೇಜ್ :

1. ಆರಂಭಿಕ ಬಾಲ್ಯಾವಸ್ಥೆಯ ಪಾಲನಾ ಶಿಕ್ಷಣ ಮತ್ತು ಅಭಿವೃದ್ಧಿ (ಇಸಿಸಿಇಡಿ). ಐಸಿಡಿಎಸ್ ಮಿಷನ್ ಅಡಿ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಂಪೂರ್ಣ ಮತ್ತು ಸಮಗ್ರ ಅವಕಾಶಗಳನ್ನು ಒದಗಿಸುವಿಕೆ; ಇದು ಅವರ ಪಾಲನೆ, ಸಂರಕ್ಷಣೆ, ಕಲಿಕೆ ಮತ್ತು ಸರ್ವಾಂಗೀಣ ಬೆಳವಣಿಗೆಗೆ ಸಬಲಗೊಳಿಸುತ್ತದೆ ಮತ್ತು ಖಾತ್ರಿಗೊಳಿಸುತ್ತದೆ; ಕುಟುಂಬ, ಸಮುದಾಯ ಮತ್ತು ಅಂಗನವಾಡಿ ಕೇಂದ್ರ ಆಧಾರಿತ ಮಧ್ಯಸ್ಥಿಕೆಗಳ ಮೂಲಕ, ಇಸಿಸಿಇಡಿಯ ಚೌಕಟ್ಟಿನೊಳಗೆ ಆರಂಭಿಕ ಬಾಲ್ಯಾವಸ್ಥೆಯ ಪಾಲನೆ ಮತ್ತು ಶಿಕ್ಷಣ (ಇಸಿಸಿಇ) ಎನ್ನುವುದು 3ಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಅನೌಪಚಾರಿಕ, ಆರಂಭಿಕ ಮಾನಸಿಕೋ-ಸಾಮಾಜಿಕ ಪ್ರಚೋದನೆ ಮತ್ತು 3 ರಿಂದ 6 ವರ್ಷ ವಯಸ್ಸಿನ ಮಕ್ಕಳ ಹೆಚ್ಚು ಯೋಜಿತ ಅನೌಪಚಾರಿಕ ಶಾಲಾಪೂರ್ವ ಶಿಕ್ಷಣ. ಈ ಶಿಕ್ಷಣವು ಮಕ್ಕಳಸ್ನೇಹಿ, ಆಟವನ್ನು ಆಧರಿಸಿದ ಮತ್ತು ಮಗುವಿನ ವೈಯಕ್ತಿಕ ತೆಯನ್ನು ಮತ್ತು ಸಂಪೂರ್ಣ ಅಭಿವೃದ್ಧಿ ಹಾಗೂ ಶಾಲೆಗೆ ಸಿದ್ಧಗೊಳಿಸುವಿಕೆಯನ್ನು ಗುರಿಯಾಗಿರಿಸಿಕೊಂಡಿರಬೇಕು.

1.1 ಅನೌಪಚಾರಿಕ ಶಾಲಾಪೂರ್ವ ಶಿಕ್ಷಣ/ಆರಂಭಿಕ ಬಾಲ್ಯಾವಸ್ಥೆಯ ಪಾಲನೆ ಮತ್ತು ಶಿಕ್ಷಣ (ಇಸಿಸಿಇ):

ಶಾಲಾಪೂರ್ವ ಶಿಕ್ಷಣ(ಪಿಎಸ್‌ಇ) ಐಸಿಡಿಎಸ್‌ನ ಅತ್ಯಂತ ಮುಖ್ಯ ಅಂಗಗಳಲ್ಲಿ ಒಂದು ಮತ್ತು ಹಲವು ರೀತಿಯಲ್ಲಿ ಈ ಕಾರ್ಯಕ್ರಮದ ಬೆನ್ನೆಲುಬು ಎಂದು ಪರಿಗಣಿಸಲ್ಪಟ್ಟಿದೆ. ಆನಂದದಾಯಕ ಆಟ-ಮಾರ್ಗ(ಪ್ಲೇವೇ) ವಿಧಾನದ ಮೂಲಕ ಮಗುವನ್ನು ನಿಯಮಿತ ಶಾಲೆಗೆ ಸಿದ್ಧಗೊಳಿಸಲು ನೆರವಾಗುವ ಸುಸ್ಥಿರ ಚಟುವಟಿಕೆಗಳನ್ನು ಒದಗಿಸುವುದು ಪಿಎಸ್‌ಇ ಉದ್ದೇಶ. ಐಸಿಡಿಎಸ್‌ನಲ್ಲಿ ರೂಪಿಸಲಾದ ಪಿಎಸ್‌ಇಯು ಆರು ವರ್ಷದವರೆಗಿನ ಮಗುವಿನ ಸಂಪೂರ್ಣ ಬೆಳವಣಿಗೆಯನ್ನು ಕೇಂದ್ರವಾಗಿರಿಸಿಕೊಂಡಿದೆ. ಆರು ವರ್ಷದವರೆಗೆ ಮಗುವಿನ ಸಾಮಾಜಿಕ, ಭಾವನಾತ್ಮಕ ಸೇರಿದಂತೆ ಸಂಪೂರ್ಣ ಬೆಳವಣಿಗೆಯನ್ನು ಕೇಂದ್ರವಾಗಿರಿಸಿ ಕೊಂಡಿದೆ. ಅಂಗನವಾಡಿಯು ಮಗುವಿನ

ಕುತೂಹಲವನ್ನು ತಣಿಸಲು ಹಾಗೂ ಸಾಮಾಜಿಕ, ಭಾವನಾತ್ಮಕ, ಸಂಜ್ಞಾನಾತ್ಮಕ, ಭೌತಿಕ, ಚಲನಶೀಲ ಮತ್ತು ಸೌಂದರ್ಯಪ್ರಜ್ಞೆಗೆ ಉತ್ತೇಜನ ನೀಡುವ ಕಲಿಕಾ ವಾತಾವರಣವನ್ನು ನಿರ್ಮಿಸಿ, ಮಗುವಿನ ಸೃಜನಶೀಲ ಶಕ್ತಿಯ ಹರಿವಿಗೆ ದಾರಿ ಮಾಡಿಕೊಡುತ್ತದೆ. ಐಸಿಡಿಎನ್ ಮಿಷನ್‌ನ ಆರಂಭಿಕ ಕಲಿಕಾ ಭಾಗವು ಸಂಚಿತ ಜೀವಿತಾವಧಿಯ ಕಲಿಕೆ ಮತ್ತು ಬೆಳವಣಿಗೆಗೆ ಭದ್ರ ಬುನಾದಿ ಹಾಕಲು ಗಮನಾರ್ಹ ಒಳಸುರಿಗಳನ್ನು ಖಾತ್ರಿಗೊಳಿಸುತ್ತದೆ. ಮಗು ಪ್ರಾಥಮಿಕ ಶಾಲೆಗೆ ತೆರಳಲು ಅಗತ್ಯವಾದ ಸಿದ್ಧತೆಗಳನ್ನು ಒದಗಿಸುವ ಮೂಲಕ ಹಾಗೂ ಕಿರಿಯ ಮಕ್ಕಳಿಗೆ ಬದಲಿ ಪಾಲನೆಯನ್ನು ಪೂರೈಸುವ ಮೂಲಕ ಹಿರಿಯ ಮಕ್ಕಳನ್ನು ವಿಶೇಷವಾಗಿ ಹೆಣ್ಣು ಮಕ್ಕಳು, ಶಾಲೆಗೆ ಹಾಜರಾಗಲು ನೆರವಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ತನ್ನ ದೇಣಿಗೆ ನೀಡುತ್ತದೆ.

ಮಕ್ಕಳ ಆರಂಭಿಕ ಪಾಲನೆ ಮತ್ತು ಕಲಿಕಾ ವಾತಾವರಣವನ್ನು ಬಲಪಡಿಸುವ ಗುರಿಯಿರಿಸಿಕೊಂಡಿರುವ ಮಿಷನ್ ಮಾದರಿಯ ಐಸಿಡಿಎಸ್, ಎಡಬ್ಲ್ಯುಸಿ ವೇದಿಕೆ ಮೂಲಕ ಇಸಿಸಿಯಲ್ಲಿ ಗುಣಮಟ್ಟದ ಸುಧಾರಣೆಗೆ ಅಗತ್ಯವಾದ ಸಂಪನ್ಮೂಲಗಳನ್ನು ಹೂಡಿಕೆ ಮಾಡುತ್ತದೆ. ಐಸಿಡಿಎಸ್ ಸೇವೆಗಳಲ್ಲಿ ಸ್ಥಳೀಯ ಸಮುದಾಯಗಳು ಮತ್ತು ಇನ್ನಿತರ ಭಾಗಿದಾರರಾದ ತಾಯಂದಿರ ಗುಂಪುಗಳು ಪಾಲ್ಗೊಳ್ಳುವಂತೆ ಮಾಡುವ ಮೂಲಕ ಐಸಿಡಿಎಸ್ ಸೇವೆಗಳಿಗೆ ಬೇಡಿಕೆ ಹೆಚ್ಚಿಸುವಂಥ ಸಂತೋಷದಾಯಕ ಆರಂಭಿಕ ಕಲಿಕಾ ಉಪಕ್ರಮಗಳನ್ನು ಕೈಗೊಳ್ಳುತ್ತದೆ. ಸೂಕ್ತವಾದ ಸ್ಥಳೀಯ ಆಟಗಳು/ಕಲಿಕಾ ಸಾಧನಗಳು, ಸಲಕರಣೆಗಳು ಮತ್ತು ತರಬೇತಿ ಪಡೆದ ಎಡಬ್ಲ್ಯುಡಬ್ಲ್ಯುಗಳಿಂದ ಬೋಧನೆಗೆ ಸೌಲಭ್ಯಗಳನ್ನು ಅಳವಡಿಸುವ ಮೂಲಕ ಎಡಬ್ಲ್ಯುಸಿಗಳನ್ನು ಇಸಿಸಿಇ ಮಕ್ಕಳಸ್ನೇಹಿಯಾಗಿಸುವುದು ಇದರ ಗುರಿ. ಐಸಿಡಿಎಸ್ ಮಿಷನ್ ಅಡಿ ಸೂಕ್ಷ್ಮ ಮತ್ತು ಸ್ಥೂಲ ಹಂತಗಳಲ್ಲಿ ಇಸಿಸಿಇಗಳನ್ನು ಬಲಪಡಿಸುವ ಪ್ರಮುಖ ಕ್ರಿಯೆಗಳ ವಿವರಗಳು ಅನುಬಂಧ I ರಲ್ಲಿದೆ.

ಐಸಿಡಿಎಸ್ ಚಾಲ್ತಿಯಲ್ಲಿರುವ ಇಸಿಸಿಇ ಸೇವೆಗಳನ್ನು ಬಲಪಡಿಸಲು, ಅಂಗನವಾಡಿ ಕೇಂದ್ರಗಳು ಮತ್ತು ಕೇಂದ್ರಗಳ ಆಚೆಯೂ ಮಕ್ಕಳಿಗೆ ವಿಸ್ತೃತ ವ್ಯಾಪ್ತಿಯ ಸೇವೆಗಳನ್ನು ಒದಗಿಸಲು ಲಕ್ಷ್ಯ ನೀಡಿದೆ. ಕೆಳಕಂಡ ಮುಖ್ಯ ಮಧ್ಯಸ್ಥಿಕೆ ಮೂಲಕ ಈ ಸೇವೆಗಳನ್ನು ವಿಸ್ತೃತವಾಗಿ ಒದಗಿಸಲಾಗುತ್ತಿದೆ;

(i) ಅಂಗನವಾಡಿ ಕೇಂದ್ರಗಳಲ್ಲಿ ಇಸಿಸಿಇ ಸೇವೆಗಳು: ಅಂಗನವಾಡಿ ಕೇಂದ್ರಗಳಲ್ಲಿ 4 ಗಂಟೆಗಳ ಆರಂಭಿಕ ಬಾಲ್ಯಾವಸ್ಥೆಯ ಶಿಕ್ಷಣ ತರಗತಿಗಳನ್ನು ನಡೆಸುವ ಜೊತೆಗೆ ಪೂರಕ ಪೋಷಕಾಂಶ, ಬೆಳವಣಿಗೆಯ ಅವಲೋಕನ ಮತ್ತು ಇನ್ನಿತರ ಮಧ್ಯಸ್ಥಿಕೆಗಳ ಮೂಲಕ ಆರಂಭಿಕ ಬಾಲ್ಯಾವಸ್ಥೆಯ ಪಾಲನೆ ಮತ್ತು ಶಿಕ್ಷಣವನ್ನು ಮುಖ್ಯ ಸೇವೆಯಾಗಿ ಬಲಪಡಿಸುವುದಕ್ಕೆ ಲಕ್ಷ್ಯ ನೀಡಲಾಗುತ್ತದೆ. ವಿಶೇಷವಾಗಿ, ಅಂಗನವಾಡಿ ಕೇಂದ್ರಗಳಲ್ಲಿ ಇಸಿಸಿಇ ಸೇವೆಯ ಹೆಚ್ಚಿನ ಪಾಲನ್ನು ವಿತರಣೆ ಮಾಡುವ ಮಾರ್ಗಗಳೆಂದರೆ;

(ಎ) ಅಂಗನವಾಡಿ ಸಿಬ್ಬಂದಿ ನೇತೃತ್ವದ ಮಧ್ಯಸ್ಥಿಕೆ: ಐಸಿಡಿಎಸ್‌ನಡಿ ಇಸಿಸಿಇ ಸೇವೆಗಳ ವಿತರಣೆಯ ಗುಣಮಟ್ಟವನ್ನು ಸುಧಾರಿಸಬೇಕೆಂ ದರೆ, ಅಂಗನವಾಡಿ ಸಿಬ್ಬಂದಿ ತರಬೇತಿ ಪಡೆದವರಾಗಿರಬೇಕು. ಆಕೆ ಮಗುವಿನ ಸಂಪೂರ್ಣ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಆರು ವರ್ಷದವರೆಗಿನ ಮಕ್ಕಳ ಶಿಕ್ಷಣ ಮತ್ತು ಪಾಲನೆಗೆ ಜವಾಬ್ದಾರರಾಗಿ ರುತ್ತಾರೆ. ಎಡಬ್ಲ್ಯುಡಬ್ಲ್ಯುಗಳು ಪಾಲಕರು ಮತ್ತು ತಾಯಂದಿರಿಗೆ ಗೃಹಾಧರಿತ ಮಾರ್ಗದರ್ಶನವನ್ನು ಹಾಗೂ 3 ವರ್ಷ ಕೆಳಗಿನ ಮಕ್ಕಳಿಗೆ ಆರಂಭಿಕ ಪ್ರಚೋದನೆಯನ್ನು ನೀಡುತ್ತಾರೆ. ಬೆಳವಣಿಗೆಯಲ್ಲಿ ನ್ಯೂನತೆ ಯನ್ನು ಆರಂಭದಲ್ಲೇ ಪರಿಶೀಲನೆ ಮಾಡಿ, ಪರಾಮರ್ಶೆಗೆ ಕಳಿಸುತ್ತಾರೆ. 3 ರಿಂದ 6 ವರ್ಷ ವಯಸ್ಸಿನ ಮಕ್ಕಳಿಗೆ ಸ್ವಾಭಾವಿಕ, ಸಂತೋಷಕರ ಹಾಗೂ ಪ್ರಚೋದಿಸುವ ವಾತಾವರಣವನ್ನು ಖಾತ್ರಿಗೊಳಿಸಲು, ಗರಿಷ್ಠ ಬೆಳವಣಿಗೆ ಮತ್ತು ಪ್ರಗತಿಗೆ ಅಗತ್ಯ ಒಳಸುರಿಗಳಿಗೆ ಒತ್ತು ನೀಡಬೇಕಾಗುತ್ತದೆ. ಎಲ್ಲ ಕ್ಷೇತ್ರಗಳಲ್ಲೂ ಸಂಪೂರ್ಣ ಬೆಳವಣಿಗೆಗೆ ಇಂಬು ನೀಡಲು ಪ್ರಗತಿಗೆ ಪೂರಕವಾದ ಪಠ್ಯಕ್ರಮವನ್ನು ವಿನ್ಯಾಸಗೊಳಿಸಲಾಗುತ್ತದೆ. 3-4 ವರ್ಷದ ಮಕ್ಕಳಿಗೆ ಆಟವನ್ನು ಆಧರಿಸಿದ, ಆಟಕ್ಕೆ ಹೆಚ್ಚು ಅವಕಾಶ ನೀಡುವ ಯೋಜಿತ ಕಾರ್ಯಕ್ರಮಗಳಿಂದ

ಆರಂಭಿಸಿ, ಆನಂತರ 5-6 ವರ್ಷ ವಯಸ್ಸಿನ ಮಕ್ಕಳನ್ನು ಶಾಲೆಗೆ ಸಿದ್ಧಗೊಳಿಸುವ ನಿರ್ದಿಷ್ಟ, ಹಿರಿಯರು ಮಾರ್ಗದರ್ಶನ ನೀಡುವ ಗುಂಪು ಚಟುವಟಿಕೆಗಳ ಅನುಪಾತವನ್ನು ಹೆಚ್ಚಿಸುವೆಡೆಗೆ ಮುನ್ನಡೆಯಲಾಗುತ್ತದೆ. ಸಂತಸಕರ ಕಲಿಕಾಪ್ರಕ್ರಿಯೆ ಮತ್ತು ಮಕ್ಕಳಸ್ನೇಹಿ ವಾತಾವರಣವನ್ನು ಖಾತ್ರಿಗೊಳಿಸಲು, ಆಟವನ್ನು ಆಧರಿಸಿದ ಕಾರ್ಯಕ್ರಮಗಳು/ಚಟುವಟಿಕೆಗಳಿಗೆ ಸಾಲುವಷ್ಟು ಸ್ಥಳಾವಕಾಶ ಮತ್ತು ವಯೋನಿರ್ದಿ ಷ್ಟ ಬೆಳವಣಿಗೆಗೆ ಪೂರಕವಾದ ಆಟ ಹಾಗೂ ಕಲಿಕಾ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ. ಶಾಲಾಪೂರ್ವ ಶಿಕ್ಷಣವನ್ನು ಬಲಪಡಿಸಲು ಅಗತ್ಯವಿರುವಲ್ಲೆಲ್ಲ ಹೆಚ್ಚುವರಿ ಒಳಸುರಿಗಳಿಗಾಗಿ ಜಿಲ್ಲಾ ಮಟ್ಟದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದನ್ನು ಪ್ರೋತ್ಸಾಹಿಸಲಾಗುತ್ತದೆ. ಎಡಬ್ಲ್ಯುಡಬ್ಲ್ಯುಗಳಿಗೆ ಅಗತ್ಯವನ್ನು ಅಧರಿಸಿದ ತರಬೇತಿ, ಕಲಿಕಾ ಸಾಧನಗಳ ಪೂರೈಸುವಿಕೆ, ಆರಂಭಿಕಾವಸ್ಥೆಯ ಮಕ್ಕಳ ಪಾಲನೆ ಮತ್ತು ಬೆಳವಣಿಗೆಯ ಪ್ರಾಮುಖ್ಯತೆ ಕುರಿತು ವಕಾಲತು ರೂಪಿಸುವಿಕೆ, ಸಮುದಾಯದ ಮುಖಂಡರಿಗೆ ತರಬೇತಿ ಕಾರ್ಯಕ್ರಮಗಳನ್ನು ಸಂಘಟಿಸುವುದು, ಇಸಿಸಿಇಗೆ ತೀವ್ರತರ ಯೋಜನೆ ಪೂರೈಸುವುದು ಹಾಗೂ ಶಾಲಾ ವ್ಯವಸ್ಥೆ ಮತ್ತು ಇಸಿಸಿಇ ನಡುವೆ ಒಮ್ಮುಖತೆಯನ್ನು ಪ್ರೋತ್ಸಾಹಿಸಲು ಎಸ್‌ಎಸ್‌ಎ ಸಹಾಯ ಕೋರಬಹುದು.

(ಬಿ) ಪೋಷಕರ ನೇತೃತ್ವದ ಎಡಬ್ಲ್ಯುಸಿ ಆಧರಿಸಿದ ಮಧ್ಯಸ್ಥಿಕೆಗಳು: ಎಡಬ್ಲ್ಯುಸಿಗಳಲ್ಲಿ ಪ್ರಾರಂಭಿಕ ಉಪಕ್ರಮವಾಗಿ ಮಕ್ಕಳಿಗೆ ಶಿಕ್ಷಣ ನೀಡಲು ಹಾಗೂ ಪಾಲನೆ ಮಾಡಲು ಪೋಷಕರನ್ನು ಆಹ್ವಾನಿಸಿ, ಉತ್ತೇಜಿಸಲಾಗು ತ್ತದೆ. ಈ ಮಧ್ಯಸ್ಥಿಕೆಯಲ್ಲಿ ತಾಯಂದಿರ ಗುಂಪುಗಳು ಮತ್ತು ಪೋಷಕರ ಗುಂಪುಗಳನ್ನು (ಲಭ್ಯವಿರುವೆಡೆಯಲ್ಲಿ) ಒಳಗೊಳ್ಳಲಾಗುತ್ತದೆ. ಆಟ ಮತ್ತು ಮಕ್ಕಳ ವೈಯಕ್ತಿಕ ಆಸಕ್ತಿಗಳ ಮೂಲಕ ಕಲಿಕೆಗೆ ಪೋಷಕರನ್ನು ಮೊದಲ ಶಿಕ್ಷಕರನ್ನಾಗಿಸುವುದು ಇದರ ಉದ್ದೇಶ. ಪೋಷಕರನ್ನು ಆರಂಭದಲ್ಲಿ ಎಡಬ್ಲ್ಯುಡಬ್ಲ್ಯುಗಳ ಬೆಂಬಲ ಮತ್ತು ಮಾರ್ಗದರ್ಶನದೊಡನೆ ಮಕ್ಕಳ ಆರಂಭಿಕ ಬಾಲ್ಯಾವಸ್ಥೆಯ ಪಾಲನೆ ಮತ್ತು ಶಿಕ್ಷಣ ಸೇವೆಗಳ ನಿರ್ವಹಣೆಗೆ (ವಾರಕ್ಕೆ 2 ದಿನ) ಬೆಂಬಲ ನೀಡುವುದಕ್ಕೆ ಜವಾಬ್ದಾರರಾಗಿರುವಂತೆ ಮಾಡಬಹುದು. ಈ ಪ್ರಾಯೋಗಿಕ ಉಪಕ್ರಮದ ಯಶಸ್ಸನ್ನು ಆಧರಿಸಿ, ಪೋಷಕರ ನೇತೃತ್ವದ ಇಸಿಸಿಇ ಮಧ್ಯ ಸ್ಥಿಕೆಯನ್ನು ಹೆಚ್ಚಿಸಬಹುದು ಇಲ್ಲವೇ ಕಡಿಮೆಗೊಳಿಸಬಹುದು. ಎಡಬ್ಲ್ಯುಸಿಗಳಲ್ಲಿ ಹಿರಿಯ ನಾಗರಿಕರು ಮತ್ತು ಅಜ್ಜ-ಅಜ್ಜಿಯರು ಸೇರಿದಂತೆ ಪೋಷಕರ ವಕಾಲತು ಮತ್ತು ಸಾಮರ್ಥ್ಯ ನಿರ್ಮಾಣಕ್ಕಾಗಿ ಪ್ರತಿ ತಿಂಗಳು ನಿಶ್ಚಿತ ದಿನದಂದು ಇಸಿಸಿಇ ದಿನವನ್ನು ಸಂಘಟಿಸಬಹುದು.

(2) ಅಂಗನವಾಡಿ ಕೇಂದ್ರದಾಚೆಗೂ ಇಸಿಸಿಇ ಸೇವೆಗಳು: ಆರಂಭಿಕ ಬಾಲ್ಯಾವಸ್ಥೆಯ ಪಾಲನೆ ಮತ್ತು ಶಿಕ್ಷಣವನ್ನು ಮುಖ್ಯ ಸೇವೆಯಾಗಿರಿಸಿಕೊಂಡು, 4 ಗಂಟೆಗಳ ಆರಂಭಿಕ ಬಾಲ್ಯಾವಸ್ಥೆಯ ಶಿಕ್ಷಣ ತರಗತಿಗಳ ಬಳಿಕ ಪೂರಕ ಪೋಷಕಾಂಶ, ಬೆಳವಣಿಗೆಯ ಪರಾಮರ್ಶನ ಹಾಗೂ ಇನ್ನಿತರ ಸಂಬಂಧಿಸಿದ ಮಧ್ಯಸ್ಥಿಕೆಗಳನ್ನು ಬಲಪಡಿಸುವುದನ್ನು ಗುರಿಯಾಗಿರಲಿದೆ. ನಿರ್ದಿಷ್ಟವಾಗಿ, ಅಂಗನವಾಡಿ ಕೇಂದ್ರಗಳಾಚೆಗೂ ಇಸಿಸಿಇ ಸೇವೆಗಳನ್ನು ಯಾವುದರ ಮೂಲಕ ವಿತರಣೆಗೊಳಿಸಲಾಗುತ್ತದೆ ಎಂದರೆ.,

(ಎ) ಪೋಷಕರ ನೇತೃತ್ವದ ಗೃಹಾಧರಿತ ಮಧ್ಯಸ್ಥಿಕೆ: ಆರಂಭಿಕ ಉಪಕ್ರಮವಾಗಿ, ಪೋಷಕರು ತಮ್ಮ ಮನೆಗಳಲ್ಲಿ ಇಸಿಸಿಇ ಮಧ್ಯಸ್ಥಿಕೆಗಳನ್ನು ನಡೆಸಲು ಉತ್ತೇಜನ ನೀಡಲಾಗುತ್ತದೆ. ಇಂಥ ಜವಾಬ್ದಾರಿಗಳನ್ನು ನಿರ್ವಹಿಸಲು ಪೋಷಕರಿಗೆ ನಿಯತವಾಗಿ ತರಬೇತಿ ಹಾಗು ಸಾಮರ್ಥ್ಯ ನಿರ್ಮಾಣವನ್ನು ಐಸಿಡಿಎಸ್ ಮಿಷನ್ ಖಾತ್ರಿಗೊಳಿಸುತ್ತದೆ.

(ಬಿ) ಎನ್‌ಜಿಒ ನೇತೃತ್ವದ ಮಧ್ಯಸ್ಥಿಕೆಗಳು: ಇಸಿಸಿಇ ಸೇವೆಗಳನ್ನು ಅಂಗನವಾಡಿ ಕೇಂದ್ರಗಳಾಚೆಯೂ ಬಲಪಡಿಸಲು, ಮಧ್ಯಸಿಕೆಗಳನ್ನು ನಿರ್ವಹಿಸಲು ಸ್ವಯಂಸೇವಾ ಸಂಘಟನೆಗಳು/ಎನ್‌ಜಿಒಗಳನ್ನು ಒಳಗೊಳ್ಳಬಹುದು. ಅವು ಎಳೆಯ ಮಕ್ಕಳಿಗೆ ಒಂದೋ ಮಗುವಿನ ಮನೆಯಲ್ಲಿ ಅಥವಾ ಅಂಗನವಾಡಿ

ಕೇಂದ್ರದಲ್ಲಿ ಶಿಕ್ಷಣ ಮತ್ತು ಪಾಲನಾ ಸೇವೆಗಳನ್ನು ಒದಗಿಸುತ್ತವೆ. ಇದು ಇಡೀ ದಿನ ಅಥವಾ ಭಾಗಶಃ ದಿನದ ಶಿಕ್ಷಣ ಮತ್ತು ಪಾಲನೆ ಆಗಿರಬಹುದು. ಈ ಸೇವೆಯ ಉದ್ದೇಶವೇವೆಂದರೆ, ಮನೆಯಂಥ ನೆರೆಹೊರೆಯೊಳಗೆ ಸಣ್ಣ ಗುಂಪುಗಳಲ್ಲಿ ಮಕ್ಕಳಿಗೆ ಕಲಿಕಾ ಅವಕಾಶಗಳನ್ನು ಒದಗಿಸುವುದು. ಈ ಭಾಗವನ್ನು ಅನುಷ್ಠಾನಗೊಳಿಸುತ್ತಿರುವ ಸ್ವಯಂಸೇವಾ ಸಂಘಟನೆಗಳು ಆಟದ ಮೈದಾನಗಳನ್ನು ನಿರ್ವಹಿಸಬೇಕಾ ಗುತ್ತದೆ. ಇದರಿಂದ ಶಿಕ್ಷಕರು ಮತ್ತು ಮಕ್ಕಳು ನಿಯತವಾಗಿ ಸಾಮಾಜಿಕ ಹಾಗೂ ಶೈಕ್ಷಣಿಕ ಸಂಪರ್ಕವನ್ನು ಹೊಂದಿರಬಹುದು. ಇಂಥ ಚಟುವಟಿಕೆಯಲ್ಲಿ ಪಾಲ್ಗೊಂಡಿರುವ ಸ್ವಯಂಸೇವಾ ಸಂಘಟನೆಗಳು ಶಿಕ್ಷಕರು ಹಾಗು ಪಾಲಕರಿಗೆ ಬೆಂಬಲ ನೀಡಲು ನೋಂದಾಯಿತ ಮತ್ತು ಶೈಕ್ಷಣಿಕ ಅರ್ಹತೆಯಿರುವ ಶಿಕ್ಷಕರನ್ನು `ಇಸಿಸಿಇ ಸಂಯೋಜಕರು' ಎಂದು ನೇಮಿಸಿಕೊಳ್ಳಬೇಕಾಗುತ್ತದೆ. ಪೋಷಕರು ಮತ್ತು ಶಿಕ್ಷಕರು/ಪಾಲಕರ ಪರಸ್ಪರರ ವರ್ತನೆಯಲ್ಲಿ ಬದಲಾವಣೆ ಈ ಸೇವೆಯ ಪ್ರಮುಖ ಲಕ್ಷಣ. ಶಿಕ್ಷಕರು/ಪಾಲಕರಿಗೆ ನಿಯತವಾಗಿ ತರಬೇತಿ ನೀಡುವ ಮತ್ತು ಸಾಮರ್ಥ್ಯ ನಿರ್ಮಾಣದ ಮೂಲಕ ಮಕ್ಕಳು ಹೇಗೆ ಕಲಿಯುತ್ತಾರೆ ಎಂಬುದನ್ನು ಅರ್ಥ ಮಾಡಿಸಲಾಗುತ್ತದೆ ಹಾಗೂ ಅರಿವು ಮೂಡಿಸಲಾಗುತ್ತದೆ. ಇಸಿಸಿಇ ಸಂಯೋಜಕರು ಮಕ್ಕಳ ಸುರಕ್ಷತೆ, ಯೋಗಕ್ಷೇಮ ಮತ್ತು ಕಲಿಕಾ ಪ್ರಕ್ರಿಯೆಗಳನ್ನು ಪರೀಕ್ಷಿಸಲು ಸಮುದಾಯ/ಕುಟುಂಬಗಳಿಗೆ ನಿಯತವಾಗಿ ಭೇಟಿ ನೀಡುತ್ತಾರೆ.

(ಸಿ) ಖಾಸಗಿ ಕ್ಷೇತ್ರದ ಶಾಲೆಗಳು(ಪೂರ್ವ ಪ್ರಾಥಮಿಕ ಮತ್ತು ನರ್ಸರಿ ಇತ್ಯಾದಿ) ನೇತೃತ್ವದ ಮಧ್ಯಸ್ಥಿಕೆಗಳು: ಖಚಿತ ಅಂಕಿಅಂಶ ಲಭ್ಯವಿಲ್ಲದಿದ್ದರೂ, ಕೆಲವು ಅಂದಾಜುಗಳ ಪ್ರಕಾರ, ಖಾಸಗಿ ಕ್ಷೇತ್ರದ ಉಪಕ್ರಮ (ಡೇಕೇರ್ ಸೆಂಟರ್, ನರ್ಸರಿ, ಕಿಂಡರ್‌ಗಾರ್ಟನ್ ಮತ್ತು ಪೂರ್ವಪ್ರಾಥಮಿಕ ತರಗತಿಗಳು ಸೇರಿದಂತೆ)ಗಳಲ್ಲಿ ದಾಖಲಾದ ಮಕ್ಕಳ ಸಂಖ್ಯೆ ಒಂದು ಕೋಟಿ (2001ರಲ್ಲಿ) ಅಥವಾ ಆ ಸಮಯದಲ್ಲಿ ಐಸಿಡಿಎಸ್‌ನಲ್ಲಿ ಎಷ್ಟು ಮಕ್ಕಳು ಇದ್ದರೋ ಅವರಷ್ಟು(1). ಇಂದು ವಿವಿಧ ವರ್ಗಗಳಿಗೆ ಅವಕಾಶ ನೀಡುವ ಸರ್ಕಾರದ ಕಾರ್ಯಕ್ರಮಗಳಷ್ಟೇ ಖಾಸಗಿ ಕ್ಷೇತ್ರದ ಉಪಕ್ರಮಗಳು ಇರಬಹುದು. ಮೊದಲಿಗೆ ನಗರಗಳ ಮೇಲ್ವರ್ಗ ಮತ್ತು ಮಧ್ಯಮ ವರ್ಗಗಳಿಗೆ ಸೀಮಿತವಾಗಿದ್ದ ಖಾಸಗಿ ಕ್ಷೇತ್ರದ ಉಪಕ್ರಮಗಳು ಇಂದು ಸಣ್ಣ ಪಟ್ಟಣಗಳು, ಗ್ರಾಮಗಳು, ಅರೆನಗರ ಪ್ರದೇಶಗಳು, ನಗರ ಪ್ರದೇಶದ ಕೊಳೆಗೇರಿಗಳು ಇತ್ಯಾದಿಗೂ ವಿಸ್ತರಿಸಿವೆ. ಆದರೆ, ಖಾಸಗಿ ಕ್ಷೇತ್ರದಲ್ಲೂ ಅಗಾಧವಾದ ಅಂತರವಿದ್ದು, ಒಂದೆಡೆ ಉತ್ತಮವಾಗಿ ನೆಲೆಯೂರಿದ ಗುಣಮಟ್ಟದ ಶಿಕ್ಷಣ ನೀಡುವ ಇಲೈಟ್ ಶಾಲೆಗಳಿದ್ದರೆ, ಇನ್ನೊಂದೆಡೆ ಕಳಪೆ ನಿರ್ವಹಣೆ, ವಿದ್ಯಾರ್ಥಿಗಳಿಂದ ಕಿಕ್ಕಿರಿದ ಮತ್ತು ಸಾಕಷ್ಟು ಸಾಧನ-ಸಲಕರಣೆಗಳಿಲ್ಲದ ಶಾಲೆಗಳು ಹೆಚ್ಚು ಸಂಖ್ಯೆಯಲ್ಲಿವೆ(2). ಮೇಲಿನ ಸಂಸ್ಥೆಗಳು ಪೂರೈಸುತ್ತಿರುವ ಇಸಿಸಿಇ ಸೇವೆಗಳ ಗುಣಮಟ್ಟ ಮತ್ತು ಮಾದರಿಯನ್ನು ಖಾತ್ರಿಗೊಳಿಸುವ ಉದ್ದೇಶದಿಂದ, ಸೂಕ್ತ ಕಾರ್ಯನೀತಿಗಳು ಮತ್ತು ನಿಯಂತ್ರಣಗಳನ್ನು ಅಭಿವೃದ್ಧಿಪಡಿಸಬೇಕಿದೆ ಮತ್ತು ಅನುಷ್ಠಾನಗೊಳಿಸಬೇಕಿದೆ. ಖಾಸಗಿ ಕ್ಷೇತ್ರದ ಎಲ್ಲ ಶಾಲೆಗಳನ್ನು (ಪೂರ್ವ ಪ್ರಾಥಮಿಕ ಮತ್ತು ನರ್ಸರಿ ಇತ್ಯಾದಿ) ಇಸಿಸಿಇಯ ಈ ಕಾರ್ಯನೀತಿಗಳು ಮತ್ತು ನಿಯಂತ್ರಣಗಳಡಿ ತರಲಾಗುತ್ತದೆ.

(1. ಡಿಇಇ ಅಂಡ್ ಎಲ್, ಎಂಎಚ್‌ಆರ್‌ಡಿ, 2004, ನ್ಯಾಷನಲ್ ಫೋಕಸ್ ಗ್ರೂಪ್ ಆನ್ ಅರ್ಲಿ ಚೈಲ್ಡ್‌ಹುಡ್ ಎಜುಕೇಷನ್, ಎನ್‌ಸಿಇಆರ್‌ಟಿ, 2006 2. ಮೇಲಿನದೇ).

ಎಡಬ್ಲ್ಯುಸಿಯ ಆಚೆಗಿನ ಇಸಿಸಿಇ ಪರಿಕಲ್ಪನೆಯನ್ನು ಬಲಪಡಿಸಲು ಆರಂಭ ಹಂತದಲ್ಲೇ ಮಧ್ಯಸ್ಥಿಕೆ ಮತ್ತು ಪ್ರಚೋದನೆ, ಮಾಸಿಕ ಪರಾಮರ್ಶನ ಮತ್ತು ಮಕ್ಕಳ ಬೆಳವಣಿಗೆ ಹಾಗೂ ಪ್ರಗತಿಯ ಮೈಲುಗಲ್ಲುಗಳ ಪ್ರವರ್ತನೆಗೆ ಅನುದಾನ ನೀಡಿಕೆಯಲ್ಲದೆ ಇಂಥ ಖಾಸಗಿ ಕ್ಷೇತ್ರದ ಶಾಲೆಗಳನ್ನು ವಿಎಚ್‌ಎನ್‌ಡಿಗಳ ಜೊತೆಗೆ ಜೋಡಿಸುವುದು ಸೇರಿದಂತೆ ಐಸಿಡಿಎಸ್ ಮಿಷನ್‌ನಡಿ ನಾನಾ ಉಪಕ್ರಮಗಳನ್ನು ಚಾಲನೆಗೊಳಿಸಲಾಗು ತ್ತದೆ. ಈ ಉದ್ದೇಶಕ್ಕಾಗಿ ಐಸಿಡಿಎಸ್‌ಅಡಿ ಮಗುವೊಂದಕ್ಕೆ ತಲಾ ಎಸ್‌ಎನ್‌ಪಿ ವೆಚ್ಚವನ್ನು ಪ್ರಯೋಗಾರ್ಥ ಆಧಾರದಲ್ಲಿ ಆಯ್ದ ಖಾಸಗಿ ಕ್ಷೇತ್ರದ ಶಾಲೆಗಳಿಗೆ (ಪೂರ್ವ ಪ್ರಾಥಮಿಕ ಮತ್ತು ನರ್ಸರಿ ಇತ್ಯಾದಿ) ನೀಡಬಹುದಾಗಿದೆ. ಒಂದು ವೇಳೆ ಒತ್ತಾಯಿಸಿದರೆ

ಅಥವಾ ಅಗತ್ಯವಿದ್ದರೆ, ಅಂಥ ಸಂಸ್ಥೆಗಳು ಈ ಉದ್ದೇಶಕ್ಕಾಗಿ ನಿಧಿಯನ್ನು ಬೇರೆ ಮೂಲಗಳಿಂದಲೂ ಸಂಗ್ರಹಿಸುವ ಸ್ವಾತಂತ್ರ್ಯವನ್ನು ನೀಡಲಾಗಿದೆ. ಐಸಿಡಿಎಸ್ ಮಿಷನ್‌ನಡಿ ಖಾಸಗಿ ಕ್ಷೇತ್ರದ ಶಾಲೆ (ಪೂರ್ವಪ್ರಾಥಮಿಕ ಮತ್ತು ನರ್ಸರಿ ಇತ್ಯಾದಿ)ಗಳಿಗೆ ಮಾನ್ಯತೆ ನೀಡಲಾಗುತ್ತಿದ್ದು, ಆರೋಗ್ಯಕರ ಸ್ಪರ್ಧೆಯನ್ನು ಪ್ರೋತ್ಸಾಹಿಸುವುದು ಹಾಗೂ ಗುಣಮಟ್ಟದ ಇಸಿಸಿಇ ಸೇವೆಗಳನ್ನು ನೀಡುವುದು ಇದರ ಉದ್ದೇಶ.

1.2 ಪೂರಕ ಪೋಷಕಾಂಶ: ಐಸಿಡಿಎಸ್‌ನ ಪೂರಕ ಪೋಷಕಾಂಶ ಘಟಕವು ಪೂರಕ ಉಣಿಸುವ ಘಟಕವನ್ನು ಮತ್ತು ಫಲಾನುಭವಿಗಳನ್ನು ಗುರುತಿಸಲು ಸಮುದಾಯದ ಕುಟುಂಬಗಳ ಸಮೀಕ್ಷೆ ಇತ್ಯಾದಿಯನ್ನು ಒಳಗೊಂಡಿರುತ್ತದೆ. ಫಲಾನುಭವಿಗಳು ವರ್ಷದಲ್ಲಿ 300 ದಿನ ಪೂರಕ ಪೋಷಕಾಂಶ ಸಾಮಗ್ರಿಗಳನ್ನು ಪಡೆಯುತ್ತಾರೆ. ಈ ಯೋಜನೆಯು ಪೂರಕ ಪೋಷಕಾಂಶಗಳನ್ನು ಪೂರೈಸುವ ಮೂಲಕ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಿಗೆ ಶಿಫಾರಸು ಮಾಡಿದ ಪಡಿಭತ್ಯ (ಡಯಟರಿ ಅಲೋಯನ್ಸ್, ಆರ್‌ಡಿಎ) ಮತ್ತು ಅಂದಾಜು ದೈನಂದಿನ ಒಳಸೇವನೆ (ಅಪ್ರಾಕ್ಸಿ ಮೇಟ್ ಡೇಲಿ ಇನ್‌ಟೇಕ್, ಎಡಿಐ) ನಡುವಿನ ಕ್ಯಾಲೊರಿ ಕಂದರವನ್ನು ಭರ್ತಿ ಮಾಡಲು ಪ್ರಯತ್ನಿಸುತ್ತದೆ. ಪೋಷಕಾಂಶ ನೀಡಿಕೆಯ ಉದ್ದೇಶ ಪೂರಕ ಆಹಾರ ನೀಡುವಿಕೆಯೇ ಹೊರತು ಅದು ಕುಟುಂಬದ ಆಹಾರಕ್ಕೆ ಪರ್ಯಾಯವಲ್ಲ. ಪುನಾರೂಪಿಸಿದ ಯೋಜನೆಯಡಿ ಈ ಫಲಾನುಭವಿಗಳಿಗೆ ಎಂಡಬ್ಲ್ಯುಸಿಡಿ 24ನೇ ಫೆಬ್ರವರಿ 2009ರಲ್ಲಿ ಹೊರಡಿಸಿದ ಪರಿಷ್ಕೃತ ಪೋಷಕಾಂಶ ಮತ್ತು ಉಣಿಸುವಿಕೆ ನಿಯಮಗಳಡಿ ಪೂರಕ ಪೋಷಕಾಂಶಗಳ ನೀಡುವಿಕೆ ಮುಂದುವರಿಯಲಿದೆ (ಕೋಷ್ಟಕ ನೋಡಿ). ಸ್ಥಳೀಯ ಅಗತ್ಯಗಳು ಮತ್ತು ಆಹಾರಾಭ್ಯಾಸಗಳನ್ನು ಆಧರಿಸಿ, ರಾಜ್ಯಗಳು ಪೂರಕ ಆಹಾರದ ಆಯ್ಕೆಯನ್ನು ಹೊಂದಿಸಿಕೊಳ್ಳಬಹುದಾಗಿದೆ.

ಎಂಡಬ್ಲ್ಯುಸಿಡಿ ಫೆ. 24, 2009ರಲ್ಲಿ ಪ್ರಕಟಿಸಿದ ಪೋಷಕಾಂಶ ಮತ್ತು ಉಣಿಸುವಿಕೆ ಪ್ರಮಾಣಕಗಳು

ವಿಭಾಗ...................ಕ್ಯಾಲೊರಿ (ಕಿಲೋಕ್ಯಾಲೊರಿ)............................ಪ್ರೋಟೀನ್ (ಗ್ರಾಂ)

ಮಕ್ಕಳು(6-72 ತಿಂಗಳು).......... 500........................ 12-15

ತೀವ್ರ ಕಡಿಮೆ ತೂಕದ ಮಕ್ಕಳು (6-72 ತಿಂಗಳು)..........800...............20-25

ಗರ್ಭಿಣಿಯರು ಮತ್ತು ಹಾಲುಣಿಸುತ್ತಿರುವ ತಾಯಂದಿರು.............600.................18-20

ಎಸ್‌ಎನ್‌ಪಿಗೆ ಕ್ರಮಬದ್ಧ ವಿಧಾನವನ್ನು ಖಾತ್ರಿಗೊಳಿಸುವ ಗುರಿಯಿಟ್ಟುಕೊಂಡು, ಸಿಪಿಐಆರ್‌ಎಲ್‌ನ್ನು ಆಧಾರವಾಗಿರಿಸಿಕೊಂಡು ಆಹಾರ ಪದಾರ್ಥಗಳು, ಇಂಧನ ಇತ್ಯಾದಿಗಳ ಹಣದುಬ್ಬರದಿಂದಾದ ಬೆಲೆ ಹೆಚ್ಚಳವನ್ನು ಪರಿಗಣಿಸಿ ಎಸ್‌ಎನ್‌ಪಿಯ ಹಣಕಾಸು ಪ್ರಮಾಣಕಗಳನ್ನು ಪರಿಷ್ಕರಿಸಲಾಗಿದೆ. ಅಷ್ಟಲ್ಲದೆ, ಎಫ್‌ಸಿಐ ಗೋದಾಮು/ಎಸ್‌ಎಚ್‌ಜಿಗಳಿಂದ ಎಡಬ್ಲ್ಯುಸಿಗಳಿಗೆ ಸಂಸ್ಕರಣೆ, ಸಂಗ್ರಹ ಮತ್ತು ಸಾಗಣೆಯನ್ನು ಅನುವು ಗೊಳಿಸಲು ಪರಿಷ್ಕರಿಸಿದ ಪ್ರಮಾಣಕಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಜೊತೆಗೆ, ಎಸ್‌ಎನ್‌ಪಿಯನ್ನು ಕನಿಷ್ಠ ಸವಕಳಿಯಿಂದ ನಿರ್ವಹಿಸಿದಲ್ಲಿ ಮತ್ತು ಇಪಿಸಿಯಿಂದ ಅನುಮತಿ ಪಡೆದುಕೊಂಡು ಹೊಂದಾಣಿಕೆ ಮಾಡಿ ಕೊಳ್ಳಬಹುದಾದ ಅನುದಾನಗಳು/ಅನಿರ್ಬಂಧಿತ ಸಂಪನ್ಮೂಲಗಳನ್ನು ಬಳಸಿಕೊ0ಡು, ಅಂಗನವಾಡಿ ಕೇಂದ್ರಗಳನ್ನು ಸುಧಾರಣೆ ಮಾಡಿದ ರಾಜ್ಯಗಳನ್ನು ಪುರಸ್ಕರಿಸಲಾಗುತ್ತದೆ. ಗರ್ಭಿಣಿಯರು ಮತ್ತು ಹಾಲುಣಿಸು ತ್ತಿರುವ ತಾಯಂದಿರು ಹಾಗೂ 6 ತಿಂಗಳಿನಿಂದ 3 ವರ್ಷದವರೆಗಿನ ಮಕ್ಕಳಿಗೆ ನೀಡುವ ಮನೆಗೆ ಕೊಂಡೊಯ್ಯುವ ದಿನಸಿಗೆ ಸ್ಥಳೀಯವಾಗಿ ಸೂಕ್ತವಾದ ಉಣಿಸುವಿಕೆ ಆಯ್ಕೆಗಳನ್ನು ಬಳಸಬಹುದು. ಇದರಲ್ಲಿ ಸ್ಥಳೀಯ ಸಮುದಾಯಗಳು, ಮಹಿಳಾ ಎಸ್‌ಎಚ್‌ಜಿಗಳು, ತಾಯಂದಿರ ಸಮಿತಿಗಳು,

ಗ್ರಾಮೀಣ ಆರೋಗ್ಯ, ನೈರ್ಮಲ್ಯ ಮತ್ತು ಪೋಷಕಾಂಶ ಸಮಿತಿಗಳ ಹೆಚ್ಚಿನ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲಾಗುತ್ತದೆ.

2. ಪಾಲನೆ ಮತ್ತು ಪೋಷಕಾಂಶ ಸಲಹೆ:

15-45 ವರ್ಷದೊಳಗಿನ ಎಲ್ಲ ಮಹಿಳೆಯರಿಗೆ ಮಕ್ಕಳ ಪಾಲನೆ ಮತ್ತು ಪೋಷಕಾಂಶ ಸಲಹೆಯನ್ನು ನೀಡಲಾಗುತ್ತಿದ್ದು, ಕೌಟುಂಬಿಕ ಪರಿಸರದಲ್ಲೇ ಮಕ್ಕಳ ಆರೋಗ್ಯ ಮತ್ತು ಪೋಷಕಾಂಶ ಅಗತ್ಯಗಳನ್ನು ಪೂರೈಸುವ ತಾಯಿ ಮತ್ತು/ಅಥವಾ ಇನ್ನಿತರ ಪಾಲಕರು ಮತ್ತು ಮಕ್ಕಳ ಪಾಲನಾ ಸಾಮರ್ಥ್ಯವನ್ನು/ದಕ್ಷತೆಯನ್ನು ವೃದ್ಧಿಸುವುದು ಇದರ ಗುರಿ. ಈ ಘಟಕವು ಮಹಿಳೆಯರಿಗೆ ಮೂಲಭೂತ ಆರೋಗ್ಯ ರಕ್ಷಣೆ, ಪೋಷಕಾಂಶ, ತಾಯಂದಿರ ಪಾಲನೆ ಮತ್ತು ಆರೋಗ್ಯಕರ ಆಹಾರ ಅಭ್ಯಾಸಗಳು, ಮಕ್ಕಳ ಪಾಲನೆ, ಎಳೆಯ ಮಕ್ಕಳಿಗೆ ಉಣಿಸುವಿಕೆ ವಿಧಾನಗಳು, ಆರೋಗ್ಯ ಸೇವೆಗಳ ಬಳಕೆ, ಕುಟುಂಬ ಯೋಜನೆ ಮತ್ತು ಪರಿಸರ ನೈರ್ಮಲ್ಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಲಹೆ ಮತ್ತು ವರ್ತನೆಯಲ್ಲಿ ಬದಲಾವಣೆ ಸಂವಹನ(ಬಿಸಿಸಿ)ವನ್ನು ಗುರಿಯಾಗಿರಿಸಿಕೊಂಡಿದೆ. ಹೆಚ್ಚು ಹೊರೆ ಇರುವ 200 ಜಿಲ್ಲೆಗಳ ಎಡಬ್ಲ್ಯುಡಬ್ಲ್ಯು/ ಹೆಚ್ಚುವರಿ ಎಡಬ್ಲ್ಯುಡಬ್ಲ್ಯುಗಳು ಸಮುದಾಯ ಮತ್ತು ಮನೆಗಳಿಗೆ ಭೇಟಿ ನೀಡಿ ಸೂಕ್ತ ಉಣಿಸುವಿಕೆ ಅಭ್ಯಾಸಗಳ ಕುರಿತು ಪ್ರಾತ್ಯಕ್ಷಿಕೆ ನೀಡುವ ಮೂಲಕ ಸಲಹೆ ಮತ್ತು ವರ್ತನೆಯಲ್ಲಿ ಬದಲಾವಣೆ ಸಂವಹನವನ್ನು ತಲುಪಿಸುವ ಜವಾಬ್ದಾರಿ ಹೊಂದಿರುತ್ತಾರೆ. ಮಕ್ಕಳ ಪಾಲನೆಯ ಸಾಮರ್ಥ್ಯವನ್ನು ವರ್ಧಿಸುವ ಮತ್ತು ಮಕ್ಕಳ ಆರೋಗ್ಯ ಹಾಗೂ ಪೋಷಕಾಂಶದ ಉತ್ತೇಜಿಸುವಿಕೆಯ ಉದ್ದೇಶವನ್ನು ಸಾಧಿಸಲು ಸೇವೆಗಳು/ ಮಧ್ಯಸ್ಥಿಕೆಗಳನ್ನು ಈ ಘಟಕದಡಿ ಪೂರೈಸಲಾಗುತ್ತದೆ;

(i) ಬೆಳವಣಿಗೆಯ ಪರಾಮರ್ಶನ ಮತ್ತು ಉತ್ತೇಜನ: ಐಸಿಡಿಎಸ್ ಮಾರ್ಗದರ್ಶಿ ಸೂತ್ರಗಳ ಪ್ರಕಾರ, ಇದೊಂದು ಮುಖ್ಯ ಸೇವೆಯಾಗಿದ್ದು, 0-3 ವರ್ಷ ವಯಸ್ಸಿನ ಎಲ್ಲ ಅರ್ಹ ಮಕ್ಕಳನ್ನು ಪ್ರತಿ ತಿಂಗಳು ಹಾಗೂ 0-6 ವರ್ಷದ ಮಕ್ಕಳನ್ನು ಮೂರು ತಿಂಗಳಿಗೊಮ್ಮೆ ತೂಕ ಮಾಡಬೇಕಾಗುತ್ತದೆ. ಬೆಳವಣಿಗೆಯಲ್ಲಿ ನ್ಯೂನತೆಯನ್ನು ಗುರುತಿಸುವಿಕೆ ಮತ್ತು ಪಾಲಕರಿಗೆ ಸೂಕ್ತ ಸಲಹೆಗಳನ್ನು ನೀಡುವ ಮೂಲಕ, ಅದರಲ್ಲೂ ವಿಶೇಷವಾಗಿ ಎಳೆಗೂಸು ಹಾಗೂ ಎಳೆಯ ಮಕ್ಕಳ ಉಣಿಸುವಿಕೆ ಮತ್ತು ಆರೋಗ್ಯ ರಕ್ಷಣೆಯನ್ನು ಬಲಪಡಿಸಲಾಗುತ್ತದೆ. ಕುಟುಂಬದ ತಾಯಿ ಮತ್ತು ಮಕ್ಕಳ ರಕ್ಷಣಾ ಕಾರ್ಡ್‌ಗಳನ್ನು ಪಾಲಕರು ಉಪಯೋಗಿಸಿ, ತಮ್ಮ ಮಕ್ಕಳ ಬೆಳವಣಿಗೆಯನ್ನು ಪರಾಮರ್ಶನ ಮಾಡುತ್ತಾರೆ.

(ii) ಹಸುಗೂಸು ಮತ್ತು ಎಳೆಯ ಮಕ್ಕಳ ಉಣಿಸುವಿಕೆ (ಐವೈಸಿಎಫ್) ಸಲಹೆ : ಮಗುವಿನ ಜನನದ ನಂತರ ಶೀಘ್ರವಾಗಿ ಎದೆಹಾಲು ನೀಡಿಕೆಯನ್ನು ಆರಂಭಿಸುವುದು ಮತ್ತು ಮೊದಲ ಆರು ತಿಂಗಳು ಎದೆಹಾಲು ಹೊರತು ಬೇರೇನೂ ನೀಡದಿರುವಂತೆ ಹಾಗೂ ಎಳೆಯ ಮಕ್ಕಳು ತಮ್ಮ ಜೀವನವನ್ನು ಉತ್ತಮವಾಗಿ ಆರಂಭಿಸುವುದನ್ನು ಖಾತ್ರಿ ಪಡಿಸಲು ಸೂಕ್ತವಾದ ಪೂರಕ ಉಣಿಸುವಿಕೆಯನ್ನು ಐವೈಸಿಎಫ್ ಆಚರಣೆಗಳು ಒಳಗೊಂಡಿವೆ. ಐವೈಸಿಎಫ್ ಆಚರಣೆಗಳನ್ನು ಮನೆಗಳಿಗೆ ಭೇಟಿ ನೀಡಿ ಮುಖಾಮುಖಿ ಸಲಹೆ ನೀಡುವ ಮೂಲಕ ಮತ್ತು ಗರ್ಭಿಣಿಯರು ಹಾಗೂ ಹಾಲುಣಿಸುತ್ತಿರುವ ತಾಯಂದಿರು, 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ತಾಯಂದಿರು, ಕುಟುಂಬ ಹಾಗೂ ಸಮುದಾಯದ ಬೆಂಬಲದ ಮೂಲಕ ವರ್ಧಿಸಬಹುದು. ಈ ಘಟಕದಡಿ ಇಂಥ ಆಚರಣೆಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಇದರಲ್ಲಿ ಅನಾರೋಗ್ಯದ ಸಮಯದಲ್ಲಿ ಉಣಿಸುವಿಕೆ ಮತ್ತು ಪಾಲನೆ, ಚಾಲ್ತಿಯಲ್ಲಿರುವ ಮಿಥ್ಯೆಗಳು ಮತ್ತು ಪೂರ್ವಗ್ರಹಗಳನ್ನು ಉದ್ದೇಶಿಸುವುದು, ಪೂರಕ ಆಹಾರದ ತಯಾರಿಕೆ, ಉಣಿಸುವಾಗ ಸ್ವಚ್ಛತೆ ಮತ್ತು ನೈರ್ಮಲ್ಯ ಒಳಗೊಂಡಿದೆ. ಇಂಥ ಸಲಹಾ ಸಭೆಗಳಲ್ಲಿ ಹಾಲುಣಿಸುವುದರಿಂದ ತಾಯಿ ಮತ್ತು ಮಗುವಿಗೆ ಆಗುವ ಲಾಭಗಳ ಬಗ್ಗೆ ಚರ್ಚಿಸಲಾಗುತ್ತದೆ.

(iii) ಹಾಲುಣಿಸುವಿಕೆಗೆ ಬೆಂಬಲ: ಹಾಲುಣಿಸುವಿಕೆಯ ಆರಂಭಕ್ಕೆ ಬೆಂಬಲ, ತಾಯಂದಿರು ತಮ್ಮ ಮಕ್ಕಳಿಗೆ ಸಾಕಾಗುವಷ್ಟು ಹಾಲು ಉತ್ಪಾದಿಸದೆ ಇರುವುದು, ಮಗು ಜನಿಸಿದ ತಕ್ಷಣ ಹಾಲು ಉತ್ಪಾದನೆ ಆಗದೆ ಇರುವುದು ಮತ್ತು ಒಣಗಿದ ಮೊಲೆ ತೊಟ್ಟು ಇತ್ಯಾದಿಯಿಂದ ಹಾಲುಣಿಸಲು ಕಷ್ಟವಾಗುವುದು ಇತ್ಯಾದಿಯನ್ನು ಒಳಗೊಂಡಿದೆ. ಹಾಲು ಉತ್ಪತ್ತಿಯಾಗುತ್ತಿರುವ ತಾಯಂದಿರಲ್ಲಿ ತಾವು ಮಕ್ಕಳಿಗೆ ಸಂಪೂರ್ಣವಾಗಿ ಅದರಲ್ಲೂ ವಿಶೇಷವಾಗಿ ಮಗುವಿನ ಜನನದ ತಕ್ಷಣ ಹಾಲುಣಿಸಬಲ್ಲೆವು ಎಂಬ ಆತ್ಮವಿಶ್ವಾಸವನ್ನು ಬೆಳೆಸಲು ನೆರವಾಗಲು ಮನೆಗೆ ಹಾಗೂ ಸಮುದಾಯಕ್ಕೆ ಭೇಟಿ ನೀಡಿ ಸಲಹಾ ಬೆಂಬಲ ನೀಡಲಾಗುವುದು.

(iv) ತಾಯಂದಿರಿಗೆ ಪಾಲನಾ ಸಲಹೆ ನೀಡುವಿಕೆ : ಗರ್ಭಿಣಿಯಾಗಿದ್ದಾಗ ಹಾಗೂ ಹೆರಿಗೆಯಾದ ನಂತರ ತಾಯಂದಿರ ಪೋಷಕಾಂಶ ಮತ್ತು ಆರೋಗ್ಯವನ್ನು ಉತ್ತೇಜಿಸಲು ಸಲಹೆ ಹಾಗೂ ವರ್ತನೆಯಲ್ಲಿ ಬದಲಾವಣೆ ಸಂವಹನವನ್ನು ಕೈಗೊಳ್ಳಲಾಗುತ್ತದೆ. ಗರ್ಭಾವಸ್ಥೆಯಲ್ಲಿ ಮತ್ತು ಜನನದ ವೇಳೆ ಪೋಷಕಾಂಶಭರಿತ ಆಹಾರ, ವಿಶ್ರಾಂತಿ, ಐಎಫ್ಎ ಅನುವುಗೊಳಿಸುವಿಕೆ, ಎಎನ್‌ಸಿ ಮತ್ತು ಹೆರಿಗೆ ನಂತರದ ಪರೀಕ್ಷೆಗಳು ಇತ್ಯಾದಿ ಬಗ್ಗೆ ಗರ್ಭಿಣಿಯರು, ಅವರ ತಾಯಂದಿರು, ಅತ್ತೆಯರು ಮತ್ತು ಇನ್ನಿತರ ಪಾಲಕರಿಗೆ ಮಾಹಿತಿ ಮತ್ತು ಸಲಹೆ ನೀಡಲಾಗುತ್ತದೆ. ಮನೆಯ ಹಿರಿಯರು ಉತ್ತಮ ಆಚರಣೆಗಳನ್ನು ಉತ್ತೇಜಿಸು ವವರಾಗಬೇಕು ಹಾಗೂ ಅವುಗಳಿಗೆ ಅಡೆತಡೆ ಒಡ್ಡುವ ಬದಲು ಬಲಗೊಳಿಸುವ ಅನುವುದಾರರಾಗಿ ಒಳಗೊಳ್ಳಬೇಕು. ಹೆಚ್ಚುವರಿ ಎಡಬ್ಲ್ಯುಡಬ್ಲ್ಯು+ಮಕ್ಕಳ ಪಾಲನೆ ಮತ್ತು ಪೋಷಕಾಂಶ ಸಲಹೆಗಾರ ಹಾಗೂ ಎಎನ್ಎಂನ ಒಟ್ಟಾರೆ ಮೇಲ್ವಿ ಚಾರಣೆಯಲ್ಲಿರುವ ಆಶಾ ಹಾಗೂ ಇನ್ನಿತರ ಆರೋಗ್ಯ ಸಿಬ್ಬಂದಿ ಈ ಕೆಲಸದ ಜವಾಬ್ದಾರಿ ಹೊರಲಿದ್ದಾರೆ.

(v) ಪೋಷಣೆ ಮತ್ತು ಆರೋಗ್ಯ ಹಾಗೂ ನೈರ್ಮಲ್ಯ ಶಿಕ್ಷಣ : ಐಸಿಡಿಎಸ್ ಮಿಷನ್ ಅಡಿಯ ವಿಎಚ್‌ಎನ್‌ಡಿ ಹಾಗೂ ಸ್ನೇಹ ಶಿಬಿರಗಳು ಪೋಷಣೆ ಹಾಗೂ ಆರೋಗ್ಯ ಶಿಕ್ಷಣದ ಮುಖ್ಯ ವೇದಿಕೆಗಳಾಗಿರಲಿವೆ. ಇಷ್ಟಲ್ಲದೆ, ಮಾಸಿಕ ಸಭೆಗಳು, ತಾಯಂದಿರು/ಮಹಿಳಾ ಮಂಡಳಿಗಳ ಸಣ್ಣ ಗುಂಪುಗಳಲ್ಲಿ ಚರ್ಚೆಗಳು, ಸಮುದಾಯಕ್ಕೆ ಹಾಗೂ ಮನೆಗಳಿಗೆ ಭೇಟಿ, ಟಿಎಚ್‌ಆರ್ ದಿನಗಳು, ಗ್ರಾಮಸಂಪರ್ಕ ಆಂದೋಳನಗಳು, ಸ್ಥಳೀಯ ಹಬ್ಬಗಳು/ಸಭೆಗಳ ಮೂಲಕ ಫಲಾನುಭವಿಗಳಿಗೆ ಪೋಷಣೆ, ಆರೋಗ್ಯ ಹಾಗೂ ನೈರ್ಮಲ್ಯ ಮತ್ತು ಅಭಿವೃದ್ಧಿ ಶಿಕ್ಷಣವನ್ನು ನೀಡಲಾಗುತ್ತದೆ. ಕಡಿಮೆ ವೆಚ್ಚದ ಪಾಕವಿಧಾನ, ಸಮತೋಲಿತ ಮತ್ತು ಪೋಷಕಾಂಶಭರಿತ ಆಹಾರ, ಪೋಷಕಾಂಶಭರಿತ ಸ್ಥಳೀಯ ಆಹಾರಗಳ ಪ್ರಾತ್ಯಕ್ಷಿಕೆಯನ್ನು ನಡೆಸಲಾಗುತ್ತದೆ. ಎಡಬ್ಲ್ಯುಸಿಗಳಲ್ಲಿ ಮಕ್ಕಳ ಪಾಲನೆ ಮತ್ತು ಪೋಷಕಾಂಶ ಸಲಹೆಯನ್ನು ನೀಡಲಿದ್ದು, ಮಹಿಳೆಯರಿಗೆ ತರಬೇತಿ ನೀಡಲಾಗುತ್ತದೆ ಹಾಗೂ ಎಡಬ್ಲ್ಯುಡಬ್ಲ್ಯು+ಮಕ್ಕಳ ಪಾಲನೆ ಹಾಗೂ ಪೋಷಕಾಂಶ ಸಲಹೆಗಾರರಿಗೆ ಮಕ್ಕಳು ಮತ್ತು ತಾಯಂದಿರ ಪಾಲನೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಬಹುದು. ವಿಶೇಷ ದಿನಗಳು ಹಾಗೂ ಪೋಷಕಾಂಶ ವಾರ, ಐಸಿಡಿಎಸ್ ದಿನ, ಹಾಲೂಡಿಸುವ ವಾರ ಇತ್ಯಾದಿ ದಿನಗಳನ್ನು ಸಂಘಟಿಸಿ, ಸಮುದಾಯ ಹಾಗೂ ಕುಟುಂಬಗಳಲ್ಲಿ ಸೂಕ್ಷ್ಮತೆ ಬೆಳೆಸಲಾಗುವುದು.

(vi) ಮಕ್ಕಳ ಬೆಳವಣಿಗೆ ಮತ್ತು ಅಭಿವೃದ್ಧಿಯ ಪರಾಮರ್ಶನ ಹಾಗೂ ಉತ್ತೇಜನ: ಮಕ್ಕಳ ಬೆಳವಣಿಗೆಯ ಪರಾಮರ್ಶನ ಹಾಗೂ ಪೋಷಕಾಂಶ ಸಮೀಕ್ಷೆಗಳು ಗ್ರಾಮೀಣ ಮಟ್ಟದಲ್ಲಿ ಐಸಿಡಿಎಸ್‌ನ ಪ್ರಮುಖ ಚಟುವಟಿಕೆಗಳಾಗಿವೆ. 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ತಿಂಗಳಿಗೊಮ್ಮೆ ಹಾಗೂ 3-6 ವರ್ಷದ ಮಕ್ಕಳನ್ನು 3 ತಿಂಗಳಿಗೊಮ್ಮೆ ತೂಕ ಮಾಡಲಾಗುತ್ತಿದೆ. ಈ ಉದ್ದೇಶಕ್ಕಾಗಿ 2 ಬಗೆಯ ತಕ್ಕಡಿಗಳು ಇವೆ- ಮಕ್ಕಳನ್ನು ತೂಗುವ ತಕ್ಕಡಿ ಹಾಗೂ 25 ಕೆಜಿ ಸಾಲ್ಟರ್ ತಕ್ಕಡಿ. ಡಬ್ಲ್ಯುಎಚ್‌ಒನ ಮಕ್ಕಳ ಬೆಳವಣಿಗೆ ಮಾದರಿಗಳ ಅನ್ವಯ, ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ವಯಸ್ಸು ಮತ್ತು ತೂಕದ ಬೆಳವಣಿಗೆ ನಕ್ಷೆಗಳನ್ನು ಉಳಿಸಿಕೊಂಡು ಬರಲಾಗುತ್ತದೆ. ಈ ಬೆಳವಣಿಗೆ ನಕ್ಷೆಗಳು ಮಕ್ಕಳನ್ನು ನಾನಾ ವಿಭಾಗಗಳಲ್ಲಿ ಅಂದರೆ, ಸಾಮಾನ್ಯ ತೂಕದ ಮಕ್ಕಳು, ಮಧ್ಯಮ ಕಡಿಮೆ ತೂಕದ ಮಕ್ಕಳು ಹಾಗೂ ತೀವ್ರ ಕಡಿಮೆ ತೂಕದ ಮಕ್ಕಳು ಎಂದು ಗುರುತಿಸಲು ನೆರವಾಗುತ್ತವೆ. ಬಾಲಕರು

ಮತ್ತು ಬಾಲಕಿಯರಿಗೆ ಪ್ರತ್ಯೇಕ ನಕ್ಷೆಗಳು ಇರಲಿವೆ. ಈ ನಕ್ಷೆಗಳ ಮೂಲಕ ಜಾಡು ಹಿಡಿಯುವಿಕೆಯಿಂದ ಬೆಳವಣಿಗೆಯಲ್ಲಿ ನ್ಯೂನತೆಯನ್ನು ಪತ್ತೆ ಹಚ್ಚಲು ಹಾಗೂ ತಕ್ಷಣ ಚಿಕಿತ್ಸೆ ನೀಡಲು ಹಾಗೂ ಹೆಚ್ಚಿನ ಸಲಹಾ ಚಿಕಿತ್ಸೆಗೆ ಕಳಿಸಲು ನೆರವಾಗಲಿದೆ.

ತಾಯಿ ಮತ್ತು ಮಗು ಸುರಕ್ಷತೆ ಜಂಟಿ ಕಾರ್ಡ್‌ನ್ನು ಪ್ರತಿಯೊಬ್ಬ ತಾಯಿಗೂ ನೀಡಿ, ಪೋಷಕಾಂಶ ಸ್ಥಿತಿ, ಲಸಿಕೀಕರಣ ವೇಳಾಪಟ್ಟಿ ಮತ್ತು ಬೆಳವಣಿಗೆ ಮೈಲುಗಲ್ಲುಗಳ ಜಾಡು ಹಿಡಿಯಲಾಗುತ್ತದೆ. ಸಂವಾದ ಮತ್ತು ಸಲಹೆ ನೀಡುವಿಕೆ ಹಾಗೂ ಬೆಳವಣಿಗೆಯ ಪರಾಮರ್ಶನವು ಮಕ್ಕಳ ಪಾಲನೆ ಹಾಗೂ ಉಣಿಸುವಿಕೆ ವಿಧಾನಗಳನ್ನು ಸುಧಾರಿಸುತ್ತದೆ. ಮತ್ತು, ಕುಟುಂಬಗಳ ಸಾಮರ್ಥ್ಯ ಹಾಗೂ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುತ್ತದೆ. ಮಕ್ಕಳ ಬೆಳವಣಿಗೆ ಮತ್ತು ಆಹಾರ ಸೇವನೆ ಹಾಗೂ ಪಾಲನೆ ನಡುವಿನ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ಕುಟುಂಬಗಳಿಗೆ ನೆರವಾಗುತ್ತದೆ.

(vii) ತೀವ್ರ ಹಾಗೂ ಮಧ್ಯಮ ಕಡಿಮೆ ತೂಕದ ಮಕ್ಕಳ ಸಮುದಾಯ ಆಧಾರಿತ ನಿರ್ವಹಣೆ: ಎಡಬ್ಲ್ಯುಸಿಗಳ ಸ್ನೇಹ ಶಿಬಿರದಲ್ಲಿ ಕಡಿಮೆ ತೂಕದ ಮಕ್ಕಳ ತಾಯಂದಿರು ಹಾಗೂ ಪಾಲಕರಿಗೆ ಪಾಲನೆ ವಿಧಾನಗಳ ಕುರಿತು 12 ದಿನ ತರಬೇತಿ ನೀಡಲಾಗುತ್ತದೆ. ಆನಂತರ 18 ದಿನ ಮನೆಯಲ್ಲಿ ಅಭ್ಯಾಸ ಮಾಡಿಸಲಾಗುತ್ತದೆ. ಇದು ಮಗು ತೂಕ ಗಳಿಸಿಕೊಳ್ಳಲು ನೆರವಾಗುತ್ತದೆ ಮತ್ತು 6-8 ಸಭೆಗಳೊಳಗೆ ಮಗು ಪುನರ್ವಸತಿಯ ಮಾರ್ಗದಲ್ಲಿ ಇರುತ್ತದೆ.

ತೀವ್ರ ಪೋಷಕಾಂಶ ಕೊರತೆಯಿರುವ ಮಕ್ಕಳನ್ನು ವೈದ್ಯಕೀಯ ನೆರವು ಪಡೆದುಕೊಳ್ಳಲು ಎಎನ್‌ಎಂ ಮತ್ತು/ಅಥವಾ ಎಂಒ ಸಲಹೆ ಪಡೆದು, ಎನ್‌ಆರ್‌ಸಿಗಳು/ಎಂಟಿಸಿಗಳಿಗೆ ಪರಾಮರ್ಶೆಗೆ ಕಳಿಸಲಾಗುತ್ತದೆ.

3. ಆರೋಗ್ಯ ಸೇವೆಗಳು: ಐಸಿಡಿಎಸ್ ಮಿಷನ್‌ನ ಕೆಳಗಿನ ಮೂರು ಪ್ರಮುಖ ಆರೋಗ್ಯ ಸೇವೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದಡಿಯ ಸಾರ್ವಜನಿಕ ಆರೋಗ್ಯ ಮೂಲಸೌಲಭ್ಯದ ಮೂಲಕ ವಿತರಿಸಲಾಗುತ್ತದೆ;

(i) ಲಸಿಕೀಕರಣ: ಗರ್ಭಿಣಿಯರು ಮತ್ತು ನವಜಾತ ಶಿಶುಗಳ ಲಸಿಕೀಕರಣವನ್ನು ಖಾತ್ರಿಗೊಳಿಸುವ ಗುರಿ. ರಾಷ್ಟ್ರೀಯ ಲಸಿಕೀಕರಣ ವೇಳಾಪಟ್ಟಿಯನ್ವಯ ಉಪ ಆರೋಗ್ಯ ಕೇಂದ್ರಗಳು ನವಜಾತರು ಹಾಗೂ ಗರ್ಭಿಣಿಯರ ಲಸಿಕೀಕರಣಕ್ಕೆ ಜವಾಬ್ದಾರವಾಗಿರುತ್ತವೆ. ಮಕ್ಕಳಿಗೆ ವಿಟಮಿನ್ ಎ ಹಾಗೂ ಬೂಸ್ಟರ್ ಡೋಸ್‌ಗಳನ್ನು ಕೊಡಲಾಗುತ್ತದೆ. ಉದ್ದೇಶಿತ ಜನಸಂಖ್ಯೆಯ ಸಂಪೂರ್ಣ ಲಸಿಕೀಕರಣಕ್ಕೆ ಹಾಗೂ ಜನಸಾಮಾನ್ಯರಿಂದ `ಗ್ರಾಮ ಆರೋಗ್ಯ ಪೋಷಕಾಂಶ ದಿನಗಳು' ಎಂದು ಕರೆಯಲ್ಪಡುವ ಲಸಿಕೀಕರಣ ಸಭೆಗಳನ್ನು ನಿರ್ದಿಷ್ಟ ದಿನದಂದು ಎಡಬ್ಲ್ಯುಸಿಗಳಲ್ಲಿ ಆಯೋಜಿಸಲು ಆರೋಗ್ಯ ಸಿಬ್ಬಂದಿ (ವಿಎಚ್‌ಎನ್‌ಡಿ)ಗೆ ಎಡಬ್ಲ್ಯುಡಬ್ಲ್ಯು ಮತ್ತು ಆಶಾಗಳು ನೆರವಾಗುತ್ತಾರೆ.

(ii) ಆರೋಗ್ಯ ತಪಾಸಣೆ: ಐಸಿಡಿಎಸ್‌ನಡಿ ಆರು ವರ್ಷದ ಮಕ್ಕಳು, ಹೆರಿಗೆಗೆ ಮುನ್ನ ಗರ್ಭಿಣಿಯರು ಹಾಗೂ ಹೆರಿಗೆ ಬಳಿಕ ಹಾಲುಣಿಸುವ ತಾಯಂದಿರ ಆರೋಗ್ಯ ರಕ್ಷಣೆ ಮುಂದುವರಿಯುತ್ತದೆ. ಎಎನ್‌ಎಂ ಮತ್ತು ಹಾಲುಣಿಸುವ ಪಿಎಚ್‌ಸಿ ಸಿಬ್ಬಂದಿ(ಎಂಒ) ನಿಯತ ಆರೋಗ್ಯ ಪರೀಕ್ಷೆ, ತೂಕವನ್ನು ದಾಖಲಿಸುವುದು, ಲಸಿಕೆ ಹಾಕುವುದು, ಪೋಷಕಾಂಶ ಕುರಿತು ಸಮುದಾಯ ಆಧಾರಿತ ನಿರ್ವಹಣೆಗೆ ಬೆಂಬಲ, ಅತಿಸಾರ, ಜಂತುಹುಳುಗಳ ನಾಶ ಮತ್ತು ಕಬ್ಬಿಣ ಹಾಗೂ ಫೋಲಿಕ್ ಆಮ್ಲ ಹಾಗೂ ಸಣ್ಣ ಆರೋಗ್ಯ ಸಮಸ್ಯೆಗಳಿಗೆ ಔಷಧ ನೀಡುವಿಕೆ ಸೇರಿದಂತೆ ನಾನಾ ಆರೋಗ್ಯ ಸೇವೆಗಳನ್ನು ಮಕ್ಕಳಿಗೆ ಒದಗಿಸುತ್ತಾರೆ. ಎಡಬ್ಲ್ಯುಸಿ ಗಳಿಗೆ ಪ್ರತಿವರ್ಷ ಜ್ವರ, ಶೀತ, ಕೆಮ್ಮು, ಹುಳು ಕಾಟ ಇತ್ಯಾದಿ ಸಾಮಾನ್ಯ ಕಾಯಿಲೆಗಳ ನಿಯಂತ್ರಣಕ್ಕೆ ಮೂಲಭೂತ ಔಷಧಗಳು ಹಾಗೂ ಪ್ರಥಮ ಚಿಕಿತ್ಸೆಯ ಮೂಲಭೂತ ಸಾಧನಗಳಿರುವ ವೈದ್ಯಕೀಯ ಕಿಟ್ ಪೂರೈಸಲಾಗುತ್ತದೆ.

ಎನ್‌ಆರ್‌ಎಚ್‌ಎಂ ಆರೋಗ್ಯ ತಪಾಸಣೆಗೆ ಎಡಬ್ಲ್ಯುಸಿ ಹಂತದಲ್ಲಿ ಮಾಸಿಕ ಆಧಾರದಲ್ಲಿ ಕನಿಷ್ಠ ಮೂರು ತಿಂಗಳಿಗೊಮ್ಮೆ ವೈದ್ಯರನ್ನು ಒದಗಿಸಲಿದೆ. ಎನ್‌ಆರ್‌ಎಚ್‌ಎಂ ಆಯುಷ್ ವೈದ್ಯರು ಸೇರಿದಂತೆ ತಮ್ಮದೇ ವೈದ್ಯರನ್ನು ಮತ್ತು ಅರ್ಹ ವೈದ್ಯರು ಇಲ್ಲದೆಡೆ ಸೂಕ್ತವಾಗಿ ತರಬೇತಿ ಪಡೆದ ಎಎನ್‌ಎಂಗಳನ್ನು ಬಳಸಿಕೊಳ್ಳುವುದನ್ನು ಕಡ್ಡಾಯಗೊಳಿಸಿ, ಯೋಜನಾ ಆಯೋಗ ನಿರ್ದೇಶನಗಳನ್ನು ಹೊರಡಿಸಬಹುದು.

(iii) ಪರ್ಯಾಲೋಚನ ಸೇವೆಗಳು: ಆರೋಗ್ಯ ತಪಾಸಣೆ ಮತ್ತು ಬೆಳವಣಿಗೆಯ ಪರಾಮರ್ಶನದ ಸಂದರ್ಭದಲ್ಲಿ ಒಂದುವೇಳೆ ಅನಾರೋಗ್ಯ ಪೀಡಿತ ಮತ್ತು ಸೂಕ್ತ ಪೋಷಣೆ ಇಲ್ಲದ ಮಕ್ಕಳು ಹಾಗೂ ಗರ್ಭಿಣಿಯರು ಮತ್ತು ಹಾಲುಣಿಸುತ್ತಿರುವ ತಾಯಂದಿರಿಗೆ ಸೂಕ್ತ ವೈದ್ಯಕೀಯ ಗಮನ ಅಗತ್ಯವಿದೆ ಎನ್ನಿಸಿದಲ್ಲಿ, ಅವರನ್ನು ಆಸ್ಪತ್ರೆಗಳಿಗೆ ಕಳಿಸಲಾಗುತ್ತದೆ. ಅಂಗನವಾಡಿ ಸಿಬ್ಬಂದಿ ಇದಕ್ಕೆ ಅನುವು ಮಾಡಿಕೊಡುತ್ತಾರೆ ಮತ್ತು ಎಳೆಯ ಮಕ್ಕಳಲ್ಲಿ ವೈಕಲ್ಯವನ್ನು ಪತ್ತೆಹಚ್ಚಿ ಆರೋಗ್ಯ ಸೌಲಭ್ಯಗಳಿಗೆ ಕಳಿಸುತ್ತಾರೆ. ಎಎನ್‌ಎಂ ಮತ್ತು/ಅಥವಾ ಎಂಒಗಳು ಇದರ ಪ್ರಾಥಮಿಕ ಹೊಣೆಗಾರರಾಗಿರುತ್ತಾರೆ.

4. ಸಮುದಾಯದ ಕ್ರೋಢೀಕರಣ, ಜಾಗೃತಿ ವಕಾಲತು ಮತ್ತು ಐಇಸಿ: ಐಸಿಡಿಎಸ್ ಮಿಷನ್ ಮಕ್ಕಳ ಆರಂಭಿಕ ಬೆಳವಣಿಗೆ, ತಾಯಿ ಮತ್ತು ಮಗುವಿನ ಪಾಲನೆ ಮತ್ತು ಪೋಷಕಾಂಶವನ್ನು ಉತ್ತೇಜಿಸುವ ಸಬಲಗೊಳಿಸುವ ವಾತಾವರಣವನ್ನು ಸೃಷ್ಟಿಸಲು ವಕಾಲತು ಮತ್ತು ಶಿಕ್ಷಣ ಹಾಗೂ ಸಂವಹನವನ್ನು ಸೃಷ್ಟಿಸಲು ಬಳಸುತ್ತದೆ. ಐಸಿಡಿಎಸ್‌ನ ಉಪಕ್ರಮಗಳಲ್ಲಿ ಸಮುದಾಯದ ಪಾಲುಗಾರಿಕೆ ಮತ್ತು ಮಾಲೀಕತ್ವವನ್ನು ವರ್ಧಿಸುವ ಗುರಿಯಿಟ್ಟುಕೊಂಡು ಸಮುದಾಯದ ಸದಸ್ಯರು/ಪಿಆರ್‌ಐಗಳು/ಮಹಿಳಾ ಗುಂಪುಗಳು/ಗ್ರಾಮದ ಹಿರಿಯರು/ನಾಗರಿಕ ಸಮಾಜದ ಸಂಘಟನೆಗಳು ಇತ್ಯಾದಿಯಲ್ಲಿ ಸಾಮಾಜಿಕ ಕ್ರೋಢೀಕರಣ ಮತ್ತು ಸಂವೇದನೆಯನ್ನು ಮೂಡಿಸಲಾಗುವುದು. ಎಲ್ಲ ಹಂತದ ಸಿಬ್ಬಂದಿಗೆ ಸೂಕ್ತ ಐಇಸಿ ಸಲಕರಣೆಗಳು ಹಾಗೂ ತರಬೇತಿ ನೀಡಲಾಗುವುದು. ವಿಶೇಷವಾಗಿ, ಈ ಮುಂಗಾಣ್ಕೆಯನ್ನು ಸಾಧಿಸಲು ಕೆಳಕಂಡ ವಕಾಲತು ಮತ್ತು ಐಇಸಿ ಚಟುವಟಿಕೆಗಳನ್ನು ನಡೆಸಲಾಗುವುದು:

(i) ಪೋಷಣೆ ಮತ್ತು ಮಕ್ಕಳ ಬೆಳವಣಿಗೆಯಲ್ಲಿ ಪಿಆರ್‌ಐಗಳು/ತಾಯಂದಿರ ಸಮಿತಿಗಳು/ಎಸ್‌ಎಚ್‌ಜಿಗಳನ್ನು ತೊಡಗಿಸಿಕೊಳ್ಳುವುದು ಮತ್ತು ಸಂವೇದನೆ ಮೂಡಿಸುವುದು. ಸಮುದಾಯದ ಮಾಲೀಕತ್ವವನ್ನು ಹೆಚ್ಚಿಸಲು ಪಿಆರ್‌ಐಗಳು/ಎಸ್‌ಎಚ್‌ಜಿಗಳು/ತಾಯಂದಿರ ಗುಂಪುಗಳು/ಸಮುದಾಯದ ಪ್ರಮುಖ ವ್ಯಕ್ತಿಗಳು ಮತ್ತು ಪ್ರೇರೇಪಿಸುವವರನ್ನು ಎಡಬ್ಲ್ಯುಡಬ್ಲ್ಯು ಮತ್ತು ಆಶಾಗಳು ಗುರುತಿಸಬೇಕು ಮತ್ತು ಮಹಿಳೆಯರು ಗರ್ಭ ಧರಿಸಿದಾಗ ಹಾಗೂ ಉಣಿಸುವಾಗ, ಆರಂಭಿಕ ಹಾಗೂ ವಿಶೇಷವಾಗಿ ಹಾಲುಣಿಸುವಿಕೆ, ಸಮಯಕ್ಕೆ ಸರಿಯಾಗಿ ಪೂರಕ ಆಹಾರ ನೀಡುವಿಕೆಯನ್ನು ಆರಂಭಿಸುವುದು, ಬೆಳವಣಿಗೆಯ ಪರಾಮರ್ಶನದ ಮೇಲ್ವಿಚಾರಣೆ, ಆರಂಭಿಕ ಕಲಿಕೆ, ಬೆಳವಣಿಗೆ ಬಗ್ಗೆ ಕಾಳಜಿ, ಗ್ರಾಮಸಭೆಯಲ್ಲಿ ಪೋಷಣೆ ಕುರಿತು ಹಂಚಿಕೊಳ್ಳುವುದು ಇತ್ಯಾದಿ ಮಕ್ಕಳ ಬೆಳವಣಿಗೆ ಮತ್ತು ಪೋಷಣೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತಿಳಿಸಿ ಕೊಡಬೇಕಾಗುತ್ತದೆ.

(ii) ಮಾಹಿತಿ ಮತ್ತು ಪ್ರಸರಣ ಮಂತ್ರಾಲಯದ ಹಾಡು ಮತ್ತು ನಾಟಕ ವಿಭಾಗದ ಸಹಭಾಗಿತ್ವದಲ್ಲಿ ಸಾಮಾಜಿಕ ಸಜ್ಜುಗೊಳಿಸುವಿಕೆ ಆಂದೋಲನ: ಆದಿವಾಸಿಗಳಿರುವ ಪ್ರದೇಶಗಳು, ಗ್ರಾಮಾಂತರ ಹಾಗೂ ಸಮೂಹ ಮಾಧ್ಯಮದ ತಲುಪುವಿಕೆ ಕ್ಷೀಣವಾಗಿರುವಲ್ಲಿ ಸ್ಥಳೀಯ ಭಾಷೆಯಲ್ಲಿ ಬೊಂಬೆಯಾಟ, ಜನಪದ ನೃತ್ಯಗಳು, ಆಟಗಳು, ಪ್ರಹಸನಗಳನ್ನು ಹಾಡು ಮತ್ತು ನಾಟಕ ವಿಭಾಗದ ಘಟಕದ ಸಹಭಾಗಿತ್ವದಲ್ಲಿ ಹಮ್ಮಿಕೊಳ್ಳಬೇಕು.

(iii) ಸಮೂಹ ಮಾಧ್ಯಮದ ಬಳಕೆ: ಎಂಡಬ್ಲ್ಯುಸಿಡಿಯು ಪೋಷಕಾಂಶ ಕೊರತೆ ಬಗ್ಗೆ ಜಾಗೃತಿ ಮೂಡಿಸಲು ರಾಷ್ಟ್ರೀಯ ಐಇಸಿ ಆಂದೋಲನವನ್ನು ಚಾಲನೆಗೊಳಿಸಲಿದೆ; ಐಸಿಡಿಎಸ್ ಮಿಷನ್ ಪೋಷಕಾಂಶ ಮತ್ತು ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ಜಿಲ್ಲೆ, ವಿಭಾಗ ಮತ್ತು ಗ್ರಾಮಗಳ ಹಂತಕ್ಕೆ ವಿಸ್ತರಿಸಲು ಪ್ರಯತ್ನಿಸುತ್ತಿದೆ. ಪೋಷಕಾಂಶ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಸಂದೇಶಗಳಾದ ಐವೈಸಿಎಫ್ ವಿಧಾನಗಳ ಉತ್ತೇಜನ, ಗರ್ಭಾವಸ್ಥೆಯಲ್ಲಿ ಪಾಲನೆ, ಆರೋಗ್ಯಕರ ಆಹಾರ ಸೇವನೆ ಮತ್ತು ಬೆಳವಣಿಗೆಯ ಪರಾಮರ್ಶನವೂ ಸೇರಿದಂತೆ ಐಸಿಡಿಎಸ್ ಕಾರ್ಯಕ್ರಮದ ಸೇವೆಗಳನ್ನು ಪ್ರಚುರ ಪಡಿಸಲು ಮುಖ್ಯವಾಹಿನಿ ಮಾಧ್ಯಮಗಳಾದ ಟಿವಿ, ರೇಡಿಯೊ, ಮುದ್ರಣ ಮಾಧ್ಯಮ, ವಾರ್ತಾಪತ್ರಗಳು ಇತ್ಯಾದಿಯನ್ನು ಬಳಸಿಕೊಳ್ಳಬಹುದು. ಭಿತ್ತಿಪತ್ರಗಳು ಮತ್ತು ಪ್ರದರ್ಶನ ಫಲಕಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ಅಳವಡಿಸಬೇಕು. ಸಮುದಾಯ ರೇಡಿಯೊ ಆರಂಭಿಸಿ, ನಡೆಸುವ ಸಾಧ್ಯತೆಯನ್ನು ಪರಿಶೀಲಿಸಬಹುದು. ರಾಜ್ಯಮಟ್ಟದ ವಾರ್ತಾಪತ್ರದಲ್ಲಿ ಪ್ರಮುಖ ಸಂದೇಶಗಳು, ಉಣಿಸುವಿಕೆ, ಕಡಿಮೆ ವೆಚ್ಚದ ಪೋಷಕಾಂಶಭರಿತ ಆಹಾರ ಮತ್ತು ಪಾಕವಿಧಾನಗಳನ್ನು ಮೂರು ತಿಂಗಳಿಗೊಮ್ಮೆ ಪ್ರಕಟಿಸಬಹುದು. ಆಹಾರ ಮತ್ತು ಪೋಷಕಾಂಶ ಮಂಡಳಿ (ಎಫ್ಎನ್‌ಬಿ)ಯ ಸ್ಥಳೀಯ ತಂಡದ ಒಳಸುರಿ ಮತ್ತು ತಾಂತ್ರಿಕ ಬೆಂಬಲದೊಡನೆ ಈ ಕಾರ್ಯದ ಅನುಷ್ಠಾನದ ಜವಾಬ್ದಾರಿ ರಾಜ್ಯ ಐಸಿಡಿಎಸ್ ಮಿಷನ್ ಮೇಲೆ ಇರಲಿದೆ.

(iv) ಜಾಗೃತಿ ಪ್ರಚಾರಾಂದೋಳನ/ಸ್ಥಳೀಯ-ಜನಪದ ಮಾಧ್ಯಮದ ಮೂಲಕ ಗ್ರಾಮಾಂತರ ಸಂಪರ್ಕ ಆಂದೋಲನ: ಸ್ಥಳೀಯ ಭಾಷೆಯಲ್ಲಿ ವಿಷಯ ಕುರಿತು ಪ್ರದರ್ಶನ ನೀಡಬಲ್ಲ ಸ್ಥಳೀಯ ತಂಡಗಳನ್ನು ಗುರುತಿಸುವ ಜವಾಬ್ದಾರಿಯು ಜಿಲ್ಲಾ ಐಸಿಡಿಎಸ್ ಮಿಷನ್ ಮೇಲೆ ಇರಲಿದೆ. ಗ್ರಾಮಗಳ ಹಂತದಲ್ಲಿ ಪ್ರದರ್ಶನಗಳು ನಡೆಯಬೇಕಿದ್ದು, ವಿಎಚ್‌ಎನ್‌ಡಿ/ಇಸಿಸಿಇ ದಿನಗಳು/ಇನ್ನಿತರ ಗ್ರಾಮ ಸಂಪರ್ಕ ದಿನಗಳಂದು ಆದಿವಾಸಿ/ಗ್ರಾಮಾಂತರ ಪ್ರದೇಶಗಳನ್ನು ತಲುಪುವಂತೆ ಇರಬೇಕು.

(v) ಅಂತರ್ವ್ಯಯಕ್ತಿಕ ಸಂವಹನ (ಐಪಿಸಿ): ಸ್ಥಳೀಯ ಜ್ಞಾನ ಮತ್ತು ಆಚರಣೆಗಳು ಹಾಗೂ ಆಚರಣೆಗಳು ಮತ್ತು ಜೀವನವೃತ್ತ ಹಂತಕ್ಕೆ ಸೂಕ್ತವಾದ ಜ್ಞಾನವನ್ನು ಗಳಿಸಿಕೊಳ್ಳುವ, ಅಳವಡಿಸಿಕೊಳ್ಳುವ ಮತ್ತು ಅನ್ವಯಿಸುವ ವೈಯಕ್ತಿಕ ಸಾಮರ್ಥ್ಯವನ್ನು ಆಧರಿಸಿ, ಅಂತರ್ವ್ಯಯಕ್ತಿಕ ಸಂವಹನವನ್ನು ನಡೆಸಬೇಕಾಗುತ್ತದೆ. ಐವೈಸಿಎಫ್‌ನ ಪ್ರಾಮುಖ್ಯತೆ, ಬೆಳವಣಿಗೆಯ ಪರಾಮರ್ಶನ, ಪೂರಕ ಪೋಷಕಾಂಶ ಮತ್ತು ಸೂಕ್ತ ವಾದ ಆಹಾರ ಕುರಿತ ಪ್ರಾತ್ಯಕ್ಷಿಕೆ ಸೇರಿದಂತೆ ಮಗುವಿನ ಬೆಳವಣಿಗೆಯಲ್ಲಿ ಆರಂಭಿಕ ಬಾಲ್ಯಾವಸ್ಥೆ ಮತ್ತು ತಾಯಿಯ ಪಾಲನೆಯ ಪ್ರಾಮುಖ್ಯತೆ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಐಸಿಡಿಎಸ್ ಸೇವೆಗಳಿಗೆ ಬೇಡಿಕೆ ಸೃಷ್ಟಿಸುವುದು ಇದರ ಗುರಿ. ಮನೆಯಲ್ಲಿ ಸೂಕ್ತ ಪಾಲನೆ ಮತ್ತು ಉಣಿಸುವ ವಿಧಾನ ಬಳಸುವುದನ್ನು ಖಾತ್ರಿಗೊಳಿಸಲು ಅತ್ತೆ ಮತ್ತು ಇನ್ನಿತರ ಪಾಲಕರಿಗೆ ಸೂಕ್ಷ್ಮತೆಯನ್ನು ಬೆಳೆಸಲಾಗುತ್ತದೆ. ಎಡಬ್ಲ್ಯುಸಿಯಲ್ಲಿ ಹಾಗೂ ಮನೆಗಳಿಗೆ ಭೇಟಿ ಮೂಲಕ ಐಪಿಸಿಯನ್ನು ಕಾರ್ಯರೂಪಕ್ಕೆ ತರಲಾಗುತ್ತದೆ.

(vi) ಸ್ವಯಂಸೇವಾ ಕ್ರಿಯೆಗಳು: ಪೋಷಕಾಂಶ ನೀಡಿಕೆ/ಇಸಿಸಿಇ, ಮಕ್ಕಳ ಬೆಳವಣಿಗೆ, ತಾಯಂದಿರ ಪಾಲನೆ ಕ್ರಿಯೆಗಳನ್ನು ಗ್ರಾಮ ಮತ್ತು ವಿಭಾಗ ಹಂತದ ಪೋಷಕಾಂಶ ಮತ್ತು ಇನ್ನಿತರ ಸೇವೆಗೆ ಸಂಬಂಧಿಸಿ ದಂತೆ ಸಮುದಾಯವನ್ನು ಒಟ್ಟುಗೂಡಿಸುವವರು/ಸಾಮಾಜಿಕವಾಗಿ ಒಟ್ಟುಗೂಡಿಸುವವರು ಹಾಗೂ ದೊಡ್ಡ ಪ್ರಮಾಣದಲ್ಲಿ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸಬಲ್ಲ ಹೋರಾಟಗಾರರು/ಮಹಾ ಪೋಷಕರು ಸ್ವಯಂಕ್ರಿಯೆ ಕೈಗೊಳ್ಳಲಿದ್ದಾರೆ. ಸಮುದಾಯದ ಸದಸ್ಯರು ಹಾಗೂ ಸಿಬ್ಬಂದಿಯ ಸಾಮರ್ಥ್ಯ ನಿರ್ಮಾಣದಲ್ಲಿ ವಿಭಾಗ ಹಂತದ ಪೋಷಕಾಂಶ ಸಜ್ಜುಗೊಳಿಸುವವರು ಮತ್ತು ತರಬೇತಾದ ಮೇಲ್ವಿಚಾರಕರು ಪಾತ್ರ ವಹಿಸಿರುತ್ತಾರೆ. ಬೇರೆ ಬೇರೆ ಹಂತಗಳಲ್ಲಿರುವ ಸ್ವಯಂಸೇವಾ ಕ್ರಿಯಾಗುಂಪು (ವಿಎಜಿ)ಗಳು ಸೂಕ್ತವಾದ ವಿವಿಧ ಸಂಘಟನೆಗಳು, ಸಂಶೋಧನೆ ಮತ್ತು ಶೈಕ್ಷಣಿಕ ಸಂಸ್ಥೆಗಳು, ಸಮುದಾಯಾಧರಿತ ಸಂಘಟನೆಗಳು, ನಾಗರಿಕ ಸಮಾಜದ ಗುಂಪುಗಳು, ಸ್ಥಳೀಯ ಸಮುದಾಯದ ಗುಂಪುಗಳು ಹಾಗೂ ಸಂಸ್ಥೆಗಳನ್ನು ಒಳಗೊಂಡಿರುತ್ತವೆ. ಇದರ

ಜೊತೆಗೆ, ವಿಎಜಿಯಲ್ಲಿ ನಿವೃತ್ತ ಹಿರಿಯ ಅಧಿಕಾರಿಗಳು, ಶಿಕ್ಷಕರು, ವೈದ್ಯರು, ಪೋಷಕರು ಇತ್ಯಾದಿ ಸಮುದಾಯದ ವಿವಿಧ ಧಾರೆಗೆ ಸೇರಿದವರು ಇರುತ್ತಾರೆ. ಸಮುದಾಯಕ್ಕೆ ಮೌಲ್ಯಯುತ ಸೇವೆ ಸಲ್ಲಿಸುವ ಅಗತ್ಯವಿದೆ ಎಂದು ಭಾವಿಸುವ ಶಿಕ್ಷಿತ, ನಿರುದ್ಯೋಗಿ ಗೃಹಿಣಿಯರನ್ನು ಒಳಗೊಳ್ಳ ಲು ಇದೊಂದು ಪ್ರಮುಖ ಮಾರ್ಗವಾಗಿದೆ.

....................................

ಅನುಬಂಧ iv

ಇಸಿಸಿಇಗೆ ಬೆಳವಣಿಗೆಗೆ ಸೂಕ್ತವಾದ/ವಯಸ್ಸಿಗೆ ಸೂಕ್ತವಾದ ಚಟುವಟಿಕೆಗಳು

ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು:

* ಮುಕ್ತ ಆಟ ಮತ್ತು ಪ್ರಬುದ್ಧರು-ಮಕ್ಕಳ ನಡುವೆ ಹೆಚ್ಚು ಮುಖಾಮುಖಿ ಮೂಲಕ ಆರೋಗ್ಯ, ಪೋಷಕಾಂಶ ಮತ್ತು ಆರಂಭಿಕ ಮಾನಸಿಕೋ-ಸಾಮಾಜಿಕ ಉತ್ತೇಜನದ ಮೇಲೆ ಲಕ್ಷ್ಯ. ಸುರಕ್ಷಿತ, ವಿಶಾಲವಾದ ಮತ್ತು ಶುಚಿಯಾದ ಪರಿಸರದಲ್ಲಿ ಚಟುವಟಿಕೆಗಳು(ಉದಾಹರಣೆಗೆ ಎಳೆಗೂಸುಗಳ ಆಟಗಳು, ಸಾಂಪ್ರದಾಯಿಕ ಹಾಡು ಹಾಗೂ ಅಕ್ಷರಗಳು, ಆಟದ ವಿವಿಧ ಸಾಮಗ್ರಿಗಳ ಬಳಕೆಗೆ ಅವಕಾಶ, ಪ್ರಬುದ್ಧರ ವ್ಯಕ್ತಿಗತ ಗಮನ ಮತ್ತು ಮುಖಾಮುಖಿ, ಶೋಧನೆಗೆ ಅವಕಾಶ, ಆರಂಭದಲ್ಲೇ ಕಥೆಗಳನ್ನು ಪರಿಚಯಿಸುವಿಕೆ, ಎಳೆಯ ಮಕ್ಕಳ ಪುಸ್ತಕಗಳು, ರೇಖಾಚಿತ್ರಗಳು ಇತ್ಯಾದಿ),

* ತಾಯಿ-ಮಗು ಸಂರಕ್ಷಣಾ ಕಾರ್ಡ್ ಬಳಸಿಕೊಂಡು ಪಾಲನೆಯ ವರ್ಧನೆ, ಎಳವೆಯಲ್ಲೇ ಪ್ರಚೋದನೆ ಮತ್ತು ಆರಂಭದಲ್ಲೇ ಪ್ರಗತಿಯಲ್ಲಿ ನ್ಯೂನತೆಯನ್ನು ಗುರುತಿಸಿ, ಇವುಗಳನ್ನು ಇನ್ನಿತರ ಮುಖ್ಯ ಪಾಲನಾ ವರ್ತನೆಗಳೊಂದಿಗೆ ಸಂಬಂಧಿಸುವುದು.

3-4 ವರ್ಷದ ನಡುವಿನ ಮಕ್ಕಳು:

* ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ ಆಟಕ್ಕೆ ಹೆಚ್ಚು ಅವಕಾಶ, ಆಟವನ್ನು ಆಧರಿಸಿದ ಯೋಜಿತ ಕಾರ್ಯಕ್ರಮ (2-3 ಗಂಟೆಗಳು)

* ಪ್ರಬುದ್ಧರು-ಮಕ್ಕಳು, ಮಕ್ಕಳು-ಮಕ್ಕಳು ಮುಖಾಮುಖಿ ಹಾಗೂ ಆಟದ ಸಾಧನಗಳು ಮತ್ತು ಪರಿಸರದೊಡನೆ ವೈವಿಧ್ಯಮಯ ವ್ಯಕ್ತಿಗಳು, ಸಣ್ಣ ಗುಂಪು ಮತ್ತು ದೊಡ್ಡ ಗುಂಪುಗಳೊಟ್ಟಿಗೆ ಚಟುವಟಿಕೆ ಮೂಲಕ ಹೆಚ್ಚು ಮುಕ್ತವಾದ, ನಿರಂತರವಾದ, ಆದರೆ, ಕೆಲವು ನಿರ್ದೇಶಿತ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವುದು

* ಕಥೆಗಳು, ಹಾಡುಗಳ ಕಲಿಕೆ, ಕಲ್ಪನಾತ್ಮಕ ಆಟಗಳ ಸೃಷ್ಟಿ ಮತ್ತು ತೊಡಗಿಸಿಕೊಳ್ಳುವುದು, ಪ್ರಶ್ನೆಗಳನ್ನು ಕೇಳುವುದು, ಸರಳವಾದ ಸಮಸ್ಯೆಗಳನ್ನು ಬಗೆಹರಿಸುವುದು, ಸಕ್ರಿಯ ಮತ್ತು ಮುಖಾಮುಖಿ ಕಲಿಕೆಯನ್ನು ಉತ್ತೇಜಿಸಲು ಪ್ರಯೋಗಗಳನ್ನು ಕೈಗೊಳ್ಳುವುದು ಹಾಗೂ ಧನಾತ್ಮಕ ಸ್ವಂತ ವ್ಯಕ್ತಿತ್ವಕ್ಕಾಗಿ `ಚೆನ್ನಾಗಿದೆ ಎಂಬ ಭಾವನೆ'ಯ ಅನುಭವವನ್ನು ಹೊಂದಿರುವುದು.

4 ರಿಂದ 5 ವರ್ಷದ ಮಕ್ಕಳು :

* ಪ್ರಬುದ್ಧರ ಮಾರ್ಗದರ್ಶನಕ್ಕೆ ಪ್ರತಿಯಾಗಿ ಮುಕ್ತ ಆಟದ ಚಟುವಟಿಕೆಗಳ ಅನುಪಾತವನ್ನು ಹೆಚ್ಚಿಸುವ ಕಡೆಗೆ ಮುನ್ನಡೆಯುವುದು ಮತ್ತು ದೊಡ್ಡ ಗುಂಪಿನಲ್ಲಿ ಚಟುವಟಿಕೆಗಳ ಹೆಚ್ಚಳ ಹಾಗೂ ಮೇಲಿನವುಗಳಲ್ಲಿ ಸಂಕೀರ್ಣತೆಯ ಹೆಚ್ಚಳದೊಂದಿಗೆ ನಿರ್ದಿಷ್ಟ ಶಾಲಾ ಸನ್ನದ್ಧಗೊಳಿಸುವಿಕೆಗೆ ಲಕ್ಷ್ಯ ನೀಡುವುದು (3-4 ಗಂಟೆಗಳು)

* ಓದುವಿಕೆಗೆ ಸನ್ನದ್ಧಗೊಳಿಸುವುದು: ಉದಾಹರಣೆಗೆ, ಚಿತ್ರ-ಧ್ವನಿಗಳನ್ನು ಹೋಲಿಸುವುದು, ಆಕಾರಗಳು, ಧ್ವನಿಸಂಕೇತಗಳು; ಶಬ್ದ ಭಂಡಾರವನ್ನು ಹೆಚ್ಚಿಸುವುದು; ಶಾಬ್ದಿಕ ಅಭಿವ್ಯಕ್ತಿ, ಚಿತ್ರದ ಪುಸ್ತಕಗಳು, ಕಥೆ ಹೇಳುವುದು, ರೇಖಾಚಿತ್ರಗಳು ಇತ್ಯಾದಿ ಮೂಲಕ ಓದುವಿಕೆಯೊಟ್ಟಿಗೆ ಸಂಬಂಧ ಮತ್ತು ಆಸಕ್ತಿ ಬೆಳೆಸಿಕೊಳ್ಳುವುದು

* ಬರಹಕ್ಕೆ ಸನ್ನದ್ಧಗೊಳ್ಳುವುದು: ಉದಾಹರಣೆಗೆ, ಕಣ್ಣು-ಕೈ ಸಮನ್ವಯ, ಬರೆಯುವುದರಲ್ಲಿ ಆಸಕ್ತಿ, ಎಡ- ಬಲ ದಿಕ್ಕುಗಳ ಗುರುತಿಸುವಿಕೆ

ಗಣಿತ : ವರ್ಗೀಕರಣ ಕೌಶಲಗಳನ್ನು ಬೆಳೆಸಿಕೊಳ್ಳುವುದು, ಶ್ರೇಣಿಗಳಲ್ಲಿ ಜೋಡಣೆ, ವಿನ್ಯಾಸಗಳ ನಿರ್ಮಾಣ, ತರ್ಕಬದ್ಧತೆ, ಸಮಸ್ಯೆಗಳನ್ನು ಬಗೆಹರಿಸುವಿಕೆ, ಪರಿಕಲ್ಪನೆಗಳನ್ನು ರೂಪಿಸುವುದು; ಸಂಖ್ಯಾಪೂರ್ವ ಮತ್ತು ಸಂಖ್ಯೆಯ ಪರಿಕಲ್ಪನೆಗಳು ಮತ್ತು ಅವಕಾಶದ ಪರಿಕಲ್ಪನೆಗಳು ಮತ್ತು ಶಬ್ದ ಭಂಡಾರ, ಪರಿಸರದ ಪರಿಕಲ್ಪನೆ

* ಚಲನೆಯ ಅಭಿವೃದ್ಧಿ : ಸಣ್ಣ ಹಾಗೂ ದೊಡ್ಡ ಸ್ನಾಯುಗಳ ಬೆಳವಣಿಗೆ

* ಸೃಜನಶೀಲತೆ ಮತ್ತು ಸೌಂದರ್ಯಪ್ರಜ್ಞೆಯನ್ನು ಶ್ಲಾಘಿಸುವುದು.

5-6 ವರ್ಷ ಮಕ್ಕಳು:

* ನಾನಾ ವಿಷಯಗಳಿಗೆ ಸಂಬಂಧಿಸಿದಂತೆ ಶಾಲಾ ಸನ್ನದ್ಧತೆಯ ಪರಿಕಲ್ಪನೆಗಳು ಗುರಿಯಾಗಿರಿಸಿಕೊಂಡಿರುವುದೇನೆಂದರೆ; ವಾಕ್ಯಗಳನ್ನು ಗ್ರಹಿಸುವುದು, ದೃಷ್ಟಿ ಪರಿಪ್ರೇಕ್ಷ ಮತ್ತು ವಿವೇಚನೆ, ಸಂಖ್ಯೆ ಮತ್ತು ಅವಕಾಶದ ಪರಿಕಲ್ಪನೆಗಳು, ಹೆಚ್ಚು/ಕಡಿಮೆ, ದೂರ/ಹತ್ತಿರ, ದಪ್ಪ/ತೆಳು ಎಂಬ ಪರಿಕಲ್ಪನೆಗಳು, ಒಂದು ಮತ್ತು ಎರಡರ ವರ್ಗೀಕರಣ, ಪದಗಳಿಗೆ ಅಕ್ಷರಗಳನ್ನು ಹೊಂದಿಸುವುದು, ಓದಿಗೆ ಸನ್ನದ್ಧತೆ, ಬಣ್ಣ, ವಸ್ತುಗಳ ವರ್ಗೀಕರಣ, ಆರಂಭಿಕ ಎಣಿಕೆ, ಆರಂಭಿಕ ಸಾಕ್ಷರತೆ ಇತ್ಯಾದಿ.

.....................................

ಅನುಬಂಧ v

ಆಯ್ದ ಸ್ಥಳಗಳಲ್ಲಿ ಸ್ನೇಹಶಿಬಿರಗಳ ರೂಪರೇಷೆಗಳು- ಮಧ್ಯಮ ಮತ್ತು ತೀವ್ರ ಪೋಷಕಾಂಶ ಕೊರತೆಯ ತಡೆ ಹಾಗೂ ನಿರ್ವಹಣೆಗೆ ಸಮುದಾಯ ಆಧಾರಿತ ಮಾರ್ಗ

ಜೀವನದ ಮೊದಲ ಆರು ವರ್ಷಗಳಲ್ಲಿ ಪೋಷಕಾಂಶ ಕೊರತೆ ತಡೆಗೆ ವಿಶೇಷ ಆದ್ಯತೆ ನೀಡಬೇಕಾದ ಅಗತ್ಯವಿದೆ: ಏಕೆಂದರೆ, ಅದು ಬೆಳವಣಿಗೆ ಮತ್ತು ಪ್ರಗತಿ ಮೇಲೆ ಜೀವಿತವಿಡೀ ವಿಪರಿಣಾಮ ಬೀರುತ್ತದೆ ಮತ್ತು ಮಕ್ಕಳ ಸಾವಿನ ದರದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ದೇಶದ ಪ್ರತಿಯೊಂದು ಎಳೆಯ ಮಗುವೂ ಪೋಷಕಾಂಶ ಕೊರತೆ ಹೊಂದಿರುತ್ತದೆ. ಮಕ್ಕಳಲ್ಲಿ ಕಡಿಮೆ ತೂಕ (ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇ.42.5 ಮಕ್ಕಳು) ಅಥವಾ ಕುಬ್ಜತೆ (ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇ.48 ರಷ್ಟು ಮಕ್ಕಳು) ಮತ್ತು ಶೇ.19.8ರಷ್ಟು ಮಕ್ಕಳು ಕೃಶರಾಗುತ್ತಾರೆ. ಹಲವು ಅಧ್ಯಯನಗಳು ಮತ್ತು ಮೌಲ್ಯಮಾಪನಗಳ ಪ್ರಕಾರ, ಇದಕ್ಕೆ ಪ್ರಮುಖ ಕಾರಣಗಳೆಂದರೆ., (i) ಮಕ್ಕಳ ಬೆಳವಣಿಗೆಯ ಪರಾಮರ್ಶನದಲ್ಲಿನ ಅನಿಯತತೆ ಹಾಗೂ ವ್ಯಾಪ್ತಿ ಕಡಿಮೆ ಇರುವುದು (ii) ಬೆಳವಣಿಗೆ ತಿರುವುಗಳು ಮತ್ತು ಸಲಹೆ ಎಂಬ ಬಗ್ಗೆ ಸೂಕ್ತವಾದ ಅರ್ಥವಿವರಣೆ ಇಲ್ಲದಿರುವುದು (iii) ಪೋಷಕಾಂಶ ಕೊರತೆಯ ಅಲ್ಪ ದೃಗ್ಗೋಚರತೆ-ಒಂದು ನಿಶ್ಶಬ್ದ ತುರ್ತುಪರಿಸ್ಥಿತಿ (iv) ತಾಯಂದಿರು ಮತ್ತು ಪಾಲಕರಲ್ಲಿ ವಿಶೇಷವಾಗಿ, ಮೊದಲ ಬಾರಿ ತಾಯಿ ಆದವರಲ್ಲಿ ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿವರ

ಉಣಿಸುವಿಕೆ ಹಾಗೂ ಪಾಲನಾ ಆಚರಣೆಗಳ ಕುರಿತು ಅರಿವಿನ ಕೊರತೆ ಹಾಗೂ (v) ಸಮಯಕ್ಕೆ ಸರಿಯಾಗಿ ಎದೆ ಹಾಲು ನೀಡದೆ ಇರುವುದು ಮತ್ತು ಸೂಕ್ತ ಪೂರಕ ಉಣಿಸುವಿಕೆಗೆ ಗಮನ ಕೊಡದೆ ಇರುವುದು.

ಈ ಸವಾಲನ್ನು ಎದುರಿಸುವುದು ಕಷ್ಟದ ಕೆಲಸವಾದರೂ, ತೂಕ ಕಡಿಮೆ ಇರುವ ಮಕ್ಕಳಲ್ಲಿ ಬಹಳ ಕಡಿಮೆ ಸಂಖ್ಯೆಯ ಮಕ್ಕಳಿಗಷ್ಟೇ ವೈದ್ಯಕೀಯ ಸೌಲಭ್ಯಗಳಲ್ಲಿ ವೈದ್ಯರು ಗಮನ ಮತ್ತು ಚಿಕಿತ್ಸೆ ನೀಡಬೇಕಾಗು ತ್ತದೆ ಎನ್ನುವುದು ಚೆನ್ನಾಗಿ ಗೊತ್ತಿರುವ ವಾಸ್ತವ. ಇವರಲ್ಲಿ ಹೆಚ್ಚಿನವರಿಗೆ ಸಮುದಾಯ/ಗ್ರಾಮದ ಹಂತದಲ್ಲೇ ಪುನರ್ವಸತಿ ಕಲ್ಪಿಸಬಹುದು ಮತ್ತು ನಿರ್ವಹಿಸಬಹುದು. ಮಧ್ಯಮ ಹಂತದ ಹಾಗೂ ತೀವ್ರ ಪೋಷಕಾಂಶ ಕೊರತೆ ಕಡಿಮೆಗೊಳಿಸುವಿಕೆಯನ್ನು ವರ್ಧಿಸಲು ಹಾಗೂ ಸಮಸ್ಯೆಯನ್ನು ಬಗೆಹರಿಸಲು, 4-5 ಅಂಗನವಾಡಿ ಕೇಂದ್ರಗಳ ಗುಚ್ಛದಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ಸ್ನೇಹಶಿಬಿರದ ಮೂಲಕ ಪೋಷಕಾಂಶ ಕೊರತೆ ಇರುವವರ ಸಮುದಾಯ ಆಧಾರಿತ ನಿರ್ವಹಣೆ ಹಾಗೂ ತಡೆಯನ್ನು ಖಾತ್ರಿಗೊಳಿಸಲು ಪ್ರಯತ್ನಿಸಲಾಗುತ್ತದೆ. ವಿಯೆಟ್ನಾಂ, ಮ್ಯಾನ್ಮಾರ್, ಪಶ್ಚಿಮ ಆಫ್ರಿಕಾ ಇತ್ಯಾದಿ ದೇಶಗಳಲ್ಲಿ ಪೋಷಕಾಂಶ ಕೊರತೆ ಇರುವವರನ್ನು ಕಡಿಮೆಗೊಳಿಸುವಿಕೆಗೆ ಸಂಬಂಧಿಸಿದಂತೆ ಧನಾತ್ಮಕ ಫಲಿತಾಂಶ ನೀಡಿದ ಧನಾತ್ಮಕ ದಿಕ್ಚ್ಯುತಿ ಮಾದರಿ(ಪಾಸಿಟಿಲ್ ಡೀವಿಯನ್ಸ್ ಅಪ್ರೋಚ್)ಯಲ್ಲಿ ಕಲಿತ ಪಾಠವನ್ನು ಐಸಿಡಿಎಸ್ ಮಿಷನ್‌ನಲ್ಲಿ ಬಳಸಿಕೊಳ್ಳಲಾಗಿದೆ. ಭಾರತದಲ್ಲಿ ಈ ಮಾದರಿಯನ್ನು ಪಶ್ಚಿಮ ಬಂಗಾಳ ಹಾಗೂ ಒರಿಸ್ಸಾದ ಐಸಿಡಿಎಸ್‌ನ ಸಂರಚನೆಯಲ್ಲಿ ಬಳಸಲಾಗಿದ್ದು, ಧನಾತ್ಮಕ ಫಲಿತಾಂಶ ನೀಡಿದೆ ಮತ್ತು ಅನ್ವೇಷಕ ಮಧ್ಯಸ್ಥಿಕೆ ಎಂದು ಭಾರಿ ಪ್ರಮಾಣದಲ್ಲಿ ಮೇಲ್ದರ್ಜೆಗೇರಿಸುವ ಸಾಮರ್ಥ್ಯ ಹೊಂದಿದೆ.

ಧನಾತ್ಮಕ ದಿಕ್ಚ್ಯುತಿ ಮಾರ್ಗವು ಸಮುದಾಯವನ್ನು ಆಧರಿಸಿದ ಪರಿಣಾಮಕಾರಿ ಮಾರ್ಗವಾಗಿದ್ದು, ಪೋಷಕಾಂಶ ಕೊರತೆ ಸಮಸ್ಯೆಯನ್ನು ಬಗೆಹರಿಸಲು ಸಮುದಾಯಗಳು ಹಾಗೂ ಕುಟುಂಬಗಳನ್ನು ಪ್ರಚೋದಿಸುತ್ತದೆ. ಅದು ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಸಮುದಾಯದೊಳಗೇ ಪರಿಹಾರ ಹುಡುಕಲು ಹಾಗೂ ವರ್ತನೆಯಲ್ಲಿ ನಿರಂತರ ಬದಲಾವಣೆಯೆಡೆಗೆ ಲಕ್ಷ್ಯ ಹರಿಸುತ್ತದೆ. ಒಂದೇ ಸಾಮಾಜಿಕೋ ಆರ್ಥಿಕ ಶ್ರೇಣಿಯಲ್ಲಿರುವ ಮಕ್ಕಳಲ್ಲಿ ಉಳಿದವರಿಗೆ ಹೋಲಿಸಿದರೆ ಕೆಲವರು ಏಳಿಗೆ ಹೊಂದಲು ಅವರ ಪಾಲಕರು ಕೆಲವು ಧನಾತ್ಮಕ ಪಾಲನಾ ಆಚರಣೆಗಳನ್ನು ಅನುಸರಿಸುವುದು ಕಾರಣ ಎಂಬ ನಂಬಿಕೆಯನ್ನು ಅದು ಆಧರಿಸಿದೆ. ಇಂಥ ಅಚರಣೆಗಳನ್ನು ಕಂಡುಹಿಡಿಯಬೇಕು ಮತ್ತು ಪೋಷಕಾಂಶ ಕೊರತೆ ಇರುವ ಮಕ್ಕಳ ತಾಯಂದಿರು-ಪಾಲಕರಿಗೆ ಬಳಸುವಂತೆ ಮನದಟ್ಟು ಮಾಡಲು ಉತ್ತೇಜಿಸಬೇಕು. ಈ ಆಚರಣೆಗಳು ಸ್ಥಳೀಯ ಹಾಗೂ ದೇಶಿ ಆಗಿರುವುದರಿಂದ, ಸಾಂಸ್ಕೃತಿಕವಾಗಿ ಸಮ್ಮತವಾಗುತ್ತವೆ, ಕೈಗೆಟಕುತ್ತವೆ ಮತ್ತು ಸುಸ್ಥಿರವಾಗಿರುತ್ತವೆ. ರಾಷ್ಟ್ರೀಯ ಪಾಲನೆ ಮತ್ತು ಸಲಹಾ ಸಭೆಗಳಲ್ಲಿ ಇವುಗಳ ಪ್ರಚಾರ ಮಾಡುವಿಕೆ ಯಿಂದ ಪೋಷಕಾಂಶ ಫಲಿತಾಂಶಗಳಲ್ಲಿ ಬದಲಾವಣೆ ಆಗಿದೆ. ಪಾಲನಾ ವರ್ತನೆಗಳು ಸ್ವಾಭಾವಿಕವಾಗಿ ಜೋಡಣೆಯಾಗಿರುತ್ತವೆ ಮತ್ತು ನವಜಾತ ಮಕ್ಕಳು ಹಾಗೂ ಎಳೆಯ ಮಕ್ಕಳ ಉಣಿಸುವಿಕೆ, ಆರೋಗ್ಯ, ನೈರ್ಮಲ್ಯ, ಮಾನಸಿಕೋಸಾಮಾಜಿಕ ಪಾಲನೆ ಮತ್ತು ಬಾಲಕಿಯರು ಹಾಗೂ ಮಹಿಳೆಯರ ಪಾಲನೆಯನ್ನು ಒಳಗೊಂಡಿರುತ್ತದೆ.

ಈ ಮಾರ್ಗವನ್ನು ಬಳಸಿಕೊಂಡು ಐಸಿಡಿಎಸ್ ಮಿಷನ್ ಅಡಿ ಮಾಧ್ಯಮಿಕ ಮತ್ತು ತೀವ್ರ ಪೋಷಕಾಂಶ ಕೊರತೆಯಿರುವವರ ನಿರ್ವಹಣೆ ಮತ್ತು ಕೊರತೆಯನ್ನು ತಡೆಯಲು ಸಮುದಾಯವನ್ನು ಆಧರಿಸಿದ ಸ್ನೇಹ ಶಿಬಿರಗಳನ್ನು ವಿನ್ಯಾಸಗೊಳಿಸಲಾಗುತ್ತದೆ. ಸ್ನೇಹ ಶಿಬಿರಗಳ ಒಟ್ಟಾರೆ ಗುರಿಯೇನೆಂದರೆ, ಪೋಷಕಾಂಶ ಕೊರತೆ ಇರುವ ಮಕ್ಕಳ ಶೀಘ್ರ ಪುನರ್ವಸತಿಯನ್ನು ಖಾತ್ರಿಗೊಳಿಸುವುದು; ಪುನರ್ವಸತಿಯನ್ನು ಸುಸ್ಥಿರಗೊಳಿ ಸಲು ಕುಟುಂಬಗಳನ್ನು ಸಬಲಗೊಳಿಸುವುದು ಹಾಗೂ ಮಕ್ಕಳ ಪಾಲನೆ, ಉಣಿಸುವಿಕೆ ಹಾಗೂ ಆರೋಗ್ಯ ರಕ್ಷಣೆಯಲ್ಲಿ ಸಮುದಾಯದ ವರ್ತನೆಯನ್ನು ಬದಲಿಸುವ ಮೂಲಕ ಭವಿಷ್ಯದಲ್ಲಿ ಪೋಷಕಾಂಶ ಕೊರತೆ ಯನ್ನು ತಡೆಯುವುದು. ಇದರಲ್ಲಿ ಒಳಗೊಂಡ

ಪ್ರಮುಖ ಕಾರ್ಯತಂತ್ರಗಳೆಂದರೆ, (i) ಅಂಗನವಾಡಿ ಸಿಬ್ಬಂದಿ ಹಾಗೂ ಮೇಲ್ವಿಚಾರಕರಿಗೆ ಈ ಮಾರ್ಗ ಕುರಿತು ಅಭಿಶಿಕ್ಷಣ (ii) ತಾಯಿ-ಮಗು ರಕ್ಷಣಾ ಕಾರ್ಡ್ ಮತ್ತು ಬೆಳವಣಿಗೆ ರೇಖಾಚಿತ್ರಗಳನ್ನು ಬಳಸಿಕೊಂಡು, ಶೇ. 100ರಷ್ಟು ತೂಕ ಪರಾಮರ್ಶನ ಮತ್ತು ಜಾಡು ಹಿಡಿಯುವುದು (iii) ಸಮಸ್ಯೆಯ ವಿಸ್ತಾರ ಕುರಿತು ಸಮುದಾಯಕ್ಕೆ ಅಭಿಶಿಕ್ಷಣ/ಹಂಚಿಕೊಳ್ಳುವುದು (iv) ಬಡ ಪ್ರದೇಶಗಳಲ್ಲಿರುವ ಆರೋಗ್ಯವಂತ ಮಕ್ಕಳ ಮನೆಗಳಲ್ಲಿ ಅನುಸರಿಸುವ ಧನಾತ್ಮಕ ಆಚರಣೆಗಳನ್ನು ಪಟ್ಟಿ ಮಾಡುವುದು ಹಾಗೂ (v) ಪೋಷಕಾಂಶ ಪಾಲನೆ ಹಾಗೂ ಸಲಹಾಸಭೆಗಳನ್ನು ರಚಿಸುವುದು.

ಸ್ನೇಹ ಶಿಬಿರಗಳಲ್ಲಿ ಮಾಧ್ಯಮಿಕ ಹಾಗೂ ತೀವ್ರ ಕಡಿಮೆ ತೂಕದ ಮಕ್ಕಳ ತಾಯಂದಿರು ಮತ್ತು ಪಾಲಕರಿಗೆ ಸಮುದಾಯದ ಕಾರ್ಯಕರ್ತರು, ತಾಯಂದಿರ ಗುಂಪುಗಳು ಹಾಗೂ ಎಸ್‌ಎಚ್‌ಜಿಗಳು, ಅಂಗನವಾಡಿ ಸಿಬ್ಬಂದಿ ಕೃತಿಯ ಮೂಲಕ ಕಲಿಕೆ ತಂತ್ರವನ್ನು ತಿಳಿಸಿಕೊಡುತ್ತಾರೆ. ಈ ಮಕ್ಕಳ ತಾಯಂದಿರು ಹಾಗೂ ಪಾಲಕರು ಕಡಿಮೆ ತೂಕದ ಮಕ್ಕಳ ಪುನರ್ವಸತಿಯಲ್ಲಿ ಯಶಸ್ವಿಯಾದ ಹೊಸ ಅಡುಗೆ, ಉಣಿಸುವಿಕೆ, ನೈರ್ಮಲ್ಯ, ಆರೋಗ್ಯ ಮತ್ತು ಪಾಲನಾ ವರ್ತನೆಗಳನ್ನು ಆಚರಣೆಗೆ ತರುತ್ತಾರೆ. ಆಯ್ಕೆಯಾದ ಆಚರಣೆಗಳು ಸಾರ್ವಜನಿಕವಾಗಿ ಅಂಗೀಕೃತಗೊಂಡ ಆರೋಗ್ಯ ವರ್ತನೆಗಳಿಂದ ಹಾಗೂ ಅದೇ ಪರಿಸ್ಥಿತಿಯಲ್ಲಿ ವಾಸಿಸುತ್ತಿರುವ ಸಾಮಾಜಿಕೋಆರ್ಥಿಕ ಗುಂಪಿನ ಆರೋಗ್ಯವಂತ ಮಕ್ಕಳಿರುವ ಮನೆಗಳಲ್ಲಿ ಬಳಕೆಯಾಗುತ್ತಿರುವ ಧನಾತ್ಮಕ ಆಚರಣೆಗಳಿಂದ ಬಂದಿರಬಹುದು. ಸ್ನೇಹ ಶಿಬಿರಗಳು 12 ದಿನ ಅವಧಿಯ ಸಭೆ, ಆನಂತರ 18 ದಿನ ಮನೆಯಾಧರಿತ ಆಚರಣೆಗಳ ಮೂಲಕ ವರ್ತನೆಯಲ್ಲಿ ಬದಲಾವಣೆಯನ್ನು ಉತ್ತೇಜಿಸುತ್ತವೆ ಮತ್ತು ಸ್ಥಳೀಯ ಜ್ಞಾನ, ಸಂಪನ್ಮೂಲಗಳು ಹಾಗೂ ಸಹಪಾಠಿಗಳಿಂದ ಕಲಿಕೆಯನ್ನು ಬಳಸಿಕೊಂಡು ತಮ್ಮ ಮಕ್ಕಳ ಪೋಷಕಾಂಶ ಪುನರ್ವಸತಿಯ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಪೋಷಕರನ್ನು ಸಬಲಗೊಳಿಸುತ್ತವೆ.

12 ದಿನಗಳಲ್ಲಿ ಐಸಿಡಿಎಸ್ ಕೊಡಮಾಡಿದ ಮತ್ತು ಕಡಿಮೆ ತೂಕದ ಮಕ್ಕಳ ಪಾಲಕರು ನೀಡಿದ ವೈಯಕ್ತಿಕ ಹಾಗೂ ಸಮುದಾಯದ ದೇಣಿಗೆಯಿಂದ ಧನಾತ್ಮಕ ಪಾಲನಾ ಆಚರಣೆಗಳು ಮತ್ತು ಅನುಕೂಲಕರ ಉಣಿಸುವಿಕೆ ವರ್ತನೆಗಳನ್ನು ಪ್ರದರ್ಶಿಸಲು ಹೆಚ್ಚುವರಿ ಕ್ಯಾಲೊರಿಯ ಸ್ಥಳೀಯ ಆಹಾರವನ್ನು ಉಣಿಸಲಾಗುತ್ತದೆ. ಮಕ್ಕಳು ಹಸಿವನ್ನು ಮರುಗಳಿಸಿಕೊಳ್ಳುತ್ತಾರೆ ಮತ್ತು ತೂಕ ಹೆಚ್ಚಳದಿಂದ ಕಣ್ಣಿಗೆ ಕಾಣಿಸುವಂಥ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. 12 ದಿನಗಳಲ್ಲಿ 400 ಗ್ರಾಂ ತೂಕ ಹೆಚ್ಚಳವನ್ನು ನಿರೀಕ್ಷಿಸಲಾಗಿದೆ. ಬಳಿಕ 18 ದಿನಗಳ ಮನೆಯಾಧರಿತ ಪಾಲನೆ ನಡೆಯಲಿದ್ದು, 12 ದಿನದಲ್ಲಿ ಕಲಿತ ಆಚರಣೆಗಳನ್ನು ಮನೆಯಲ್ಲಿ ಬಳಸಲಾಗುತ್ತದೆ. ಅಂಗನವಾಡಿ ಸಿಬ್ಬಂದಿ ಮನೆಗೆ ಭೇಟಿ ನೀಡುವ ಮೂಲಕ ಈ ಮಕ್ಕಳನ್ನು 18 ದಿನವೂ ಹತ್ತಿರದಿಂದ ಪರಾಮರ್ಶನ ನಡೆಸಲಿದ್ದಾರೆ. ಈ ಆಚರಣೆಗಳನ್ನು ಪಾಲಿಸಿದಲ್ಲಿ ಇನ್ನಷ್ಟು ತೂಕ ಹೆಚ್ಚಳವನ್ನು ನಿರೀಕ್ಷಿಸಬಹುದು. ತಾಯಂದಿರು ಪುನರ್ವಸತಿ ಪ್ರಕ್ರಿಯೆಗಳಲ್ಲಿ ಆಚರಣೆಗಳನ್ನು ಅಂತರ್ಗತ ಮಾಡಿಕೊಳ್ಳಲಿದ್ದು, ಪುನರ್ವಸತಿಯನ್ನು ಸುಸ್ಥಿರಗೊಳಿಸಿಕೊಳ್ಳಲಿದ್ದಾರೆ ಮತ್ತು ಬೇರೆ ಮಕ್ಕಳಲ್ಲಿ ಪೋಷಕಾಂ ಶ ಕೊರತೆಯನ್ನು ತಡೆಯಲಿದ್ದಾರೆ. ಇದು ತರಂಗದಂಥ ಪರಿಣಾಮವನ್ನು ಉಂಟುಮಾಡಲಿದ್ದು, ಇನ್ನಿತರ ಕುಟುಂಬಗಳಲ್ಲಿ ಪಾಲನಾ ಆಚರಣೆಗಳ ಸುಧಾರಣೆಗೆ ದಾರಿ ಮಾಡಿಕೊಡಲಿದೆ.

ಸ್ನೇಹ ಶಿಬಿರದ 12 ದಿನಗಳ ಸಭೆಯಲ್ಲಿ ನಡೆಯುವ ಪ್ರಮುಖ ಮಧ್ಯಸ್ತಿಕೆಗಳೆಂದರೆ.,

* ತೀವ್ರ ಹಾಗೂ ಮಧ್ಯಮ ಪ್ರಮಾಣದ ಪೋಷಕಾಂಶ ಕೊರತೆ ಇರುವ ಮಕ್ಕಳನ್ನು ಆಯ್ಕೆ ಮಾಡುವುದು (ಎಡಬ್ಲ್ಯುಸಿ/ಗುಚ್ಛವೊಂದಕ್ಕೆ 15 ಮಕ್ಕಳು ಮೀರದಂತೆ)

* ಆಯ್ದ ಮಕ್ಕಳ ತಾಯಂದಿರು ಮತ್ತು ಪಾಲಕರ ಅಭಿಶಿಕ್ಷಣ

* ಆಯ್ದ ಮಕ್ಕಳ ತೂಕದ ಪರಾಮರ್ಶನ

* ಮಕ್ಕಳ ಹೊಟ್ಟೆ ಹುಳುಗಳ ನಿವಾರಣೆ

*        ಈ ಮಕ್ಕಳ ಸಂಪೂರ್ಣ ಲಸಿಕೀಕರಣ ಮತ್ತು ಐಎಫ್‌ಎಯನ್ನು ಖಾತ್ರಿಗೊಳಿಸುವುದು

*        ಉಣಿಸುವಿಕೆ ಮತ್ತು ಮಕ್ಕಳ ಪಾಲನೆ ಆಚರಣೆಗೆ ಸಂಬಂಧಿಸಿದಂತೆ ತಾಯಂದಿರು ಮತ್ತು ಪಾಲಕರಿಗೆ 12 ದಿನಗಳ ನೇರ ತರಬೇತಿ ಸಭೆ

*        ಮೊದಲನೇ ದಿನ, 12ನೇ ದಿನ ಹಾಗೂ 18 ದಿನದ ಬಳಿಕ ತೂಕವನ್ನು ದಾಖಲಿಸುವುದು

*        ತಾಯಿ ಮತ್ತು ಮಗು ಸಂರಕ್ಷಣೆ ಕಾರ್ಡ್ ಬಳಸಿಕೊಂಡು ಉಣಿಸುವಿಕೆ, ಆರೋಗ್ಯ, ನೈರ್ಮಲ್ಯ ಮತ್ತು ಮಾನಸಿಕೋಸಾಮಾಜಿಕ ಪಾಲನೆಯ ಐಇಸಿ ಬಳಸಿಕೊಂಡು, 12 ದಿನಗಳ ವಿಷಯಾಧರಿತ ಶಿಕ್ಷಣ

*        ಆರೋಗ್ಯ ತಪಾಸಣೆ ಮತ್ತು ಪರ್ಯಾಲೋಚನೆ ಸೇವೆಗಳು

*        18 ದಿನ ಕಾಲ ಮನೆಯಲ್ಲಿ ಅಭ್ಯಾಸ

*        ಪ್ರತಿ ಮಗುವೂ ಸಾಮಾನ್ಯ ಸ್ಥಿತಿಗೆ ಬರುವವರೆಗೆ ಉಪಕ್ರಮವನ್ನು ಮರುಕಳಿಸುವುದು

*        ಪರಾಮರ್ಶನ ಪ್ರಗತಿ-ಮಕ್ಕಳುವಾರು, ಎಡಬ್ಲ್ಯುಸಿವಾರು ಹಾಗೂ ತಾಲೂಕು ಮತ್ತು ಜಿಲ್ಲಾ ಹಂತಗಳಲ್ಲಿ

.....................

ಅನುಬಂಧ ೧।

ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಪಾತ್ರದ ವಿಸ್ತರಣೆಗೆ ಸಂಬಂಧಿಸಿದ ಆದೇಶ

ಝಡ್. 18015/8/2011-ಎನ್‌ಎಚ್‌ಆರ್‌ಎಂ-2

ಭಾರತ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ರಾಷ್ಟ್ರೀಯ/ಗ್ರಾಮೀಣ ಆರೋಗ್ಯ ಮಿಷನ್

ನಿರ್ಮಾಣ್ ಭವನ್

ಹೊಸದಿಲ್ಲಿ

ದಿನಾಂಕ : 25 ಜುಲೈ 2011

ಆದೇಶ

ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ (ವಿಎಚ್‌ಎಸ್‌ಸಿ)ಗಳ ವ್ಯಾಪ್ತಿಯನ್ನು ಅಂಗನವಾಡಿ ಸಿಬ್ಬಂದಿ, ಎಎನ್‌ಎಂಗಳು ಹಾಗೂ ಆಶಾಗಳ ಸಕ್ರಿಯ ಪಾಲ್ಗೊಳ್ಳುವಿಕೆಯೊಂದಿಗೆ (ಪೋಷಕಾಂಶವನ್ನು ಸೇರ್ಪಡೆಗೊಳಿಸಿ) ವಿಸ್ತರಿಸಲು ನಿರ್ಧರಿಸಲಾಗಿದೆ. ಈ ಸಮಿತಿಯನ್ನು ಇನ್ನು ಮುಂದೆ ಗ್ರಾಮೀಣ ಆರೋಗ್ಯ, ನೈರ್ಮಲ್ಯ ಮತ್ತು ಪೋಷಕಾಂಶ ಸಮಿತಿ (ಎಎಚ್‌ಎನ್‌ಎನ್‌ಸಿ) ಎಂದು ಕರೆಯಲಾಗುತ್ತದೆ. ಎನ್‌ಆರ್‌ಎಚ್‌ಎಂ ಚೌಕಟ್ಟಿನ ಅನುಷ್ಠಾನದ ಅನ್ವಯ ವಿಎಚ್‌ಎಸ್‌ಸಿಯ ವಿವರಿಸಿದ ಚಟುವಟಿಕೆಗಳೊಂದಿಗೆ, ವಿಎಚ್‌ಎಸ್‌ಎನ್‌ಸಿಯು ಪೋಷಕಾಂಶಕ್ಕೆ ಸಂಬಂಧಿಸಿದ ಪರಿಸ್ಥಿತಿ, ಸಂಗತಿಗಳು ಹಾಗೂ ಕ್ರಿಯೆಗಳಲ್ಲಿ ತೊಡಗಿಕೊಳ್ಳುತ್ತದೆ ಮತ್ತು ಪರಾಮರ್ಶನ ನಡೆಸುತ್ತದೆ.

ವಿಎಚ್‌ಎಸ್‌ಎನ್‌ಸಿಯ ವಿಸ್ತರಿಸಿದ ಅಧ್ಯಾದೇಶದಲ್ಲಿ ವಿಎಚ್‌ಎಸ್‌ಸಿಯ ನಿಯೋಜಿತ ಚಟುವಟಿಕೆಗಳೊಂದಿಗೆ ಕೆಳಕಂಡ ಚಟುವಟಿಕೆಗಳನ್ನು ಸೇರ್ಪಡೆಗೊಳಿಸ ಲಾಗಿದೆ:

* ಪೋಷಕಾಂಶಕ್ಕೆ ಸಂಬಂಧಿಸಿದ ಸಂಗತಿಗಳು ಮತ್ತು ಆರೋಗ್ಯದ ಮುಖ್ಯ ನಿರ್ಧಾರಕವಾಗಿ ಪೋಷಕಾಂಶದ ಪ್ರಾಮುಖ್ಯತೆ ಬಗ್ಗೆ ಜಾಗೃತಿ ಮೂಡಿಸುವುದು

* ಗ್ರಾಮದಲ್ಲಿ ವಿಶೇಷವಾಗಿ, ಮಹಿಳೆಯರು ಮತ್ತು ಮಕ್ಕಳ ಪೋಷಕಾಂಶ ಪರಿಸ್ಥಿತಿ ಹಾಗೂ ಪೋಷಕಾಂಶ ಕೊರತೆಗಳ ಸಮೀಕ್ಷೆ ನಡೆಸುವುದು

ಹೊಸದಾಗಿ ನಿರ್ಮಾಣಗೊಂಡ ಎಡಬ್ಲ್ಯುಸಿಗಳಿಗೆ ಪ್ರಸ್ತುತ 1.25 ಲಕ್ಷ ರೂ. ಒಮ್ಮೆ ನೀಡುವ ಅನುದಾನ ಕೊಡಲಾಗುತ್ತಿದೆ. ಹಳೆಯ ಎಡಬ್ಲ್ಯುಸಿ ಅಥವಾ ಹಳೆಯ/ಹೊಸ ಎಂಸಿಟಿಸಿಗಳಿಗೆ ಇಂಥ ಅನುದಾನ ಲಭ್ಯವಿಲ್ಲ. ಹೊಸದಾಗಿ ಆರಂಭವಾದ ಎಡಬ್ಲ್ಯುಟಿಸಿಗಳು ಮತ್ತು ಕನಿಷ್ಠ 5 ವರ್ಷ ಕಾಲ ನಿರಂತರವಾಗಿ ಕಾರ್ಯನಿರ್ವಹಿಸುತ್ತಿರುವ ಹಳೆಯ ಎಡಬ್ಲ್ಯುಟಿಸಿಗಳಲ್ಲಿ ತರಬೇತಿ ಸೌಲಭ್ಯವನ್ನು ಉನ್ನತೀಕರಿಸಲು ಪ್ರತಿ ಯೊಂದಕ್ಕೆ 2.5 ಲಕ್ಷ ರೂ. ನೀಡಲಾಗುತ್ತದೆ. ಅದೇ ರೀತಿ ಹೊಸದಾಗಿ ತೆರೆದ ಎಲ್ಲ ಎಂಎಲ್‌ಟಿಸಿಗಳು ಹಾಗೂ ಕನಿಷ್ಠ 5 ವರ್ಷದಿಂದ ಕಾರ್ಯ ನಿರ್ವಹಿಸುತ್ತಿರುವ ಹಳೆಯ ಎಂಎಲ್‌ಟಿಸಿಗಳಿಗೆ ಒಮ್ಮೆ ನೀಡಬಹು ದಾದ 3 ಲಕ್ಷ ರೂ. ಅನುದಾನ ಕೊಡಲಾಗುತ್ತದೆ.

6. ನಿಯತ ತರಬೇತಿ ಕಾರ್ಯಕ್ರಮಗಳು: ಎಡಬ್ಲ್ಯುಎಚ್, ಎಡಬ್ಲ್ಯುಡಬ್ಲ್ಯು, ಮೇಲ್ವಿಚಾರಕರು, ಎಸಿಡಿಪಿಒಗಳು/ಸಿಡಿಪಿಒಗಳು ಮತ್ತು ಎಡಬ್ಲ್ಯುಟಿಸಿ/ಎಂಎಲ್‌ಟಿಸಿಗಳ ಬೋಧಕರು ಸೇರಿದಂತೆ ಎಲ್ಲ ಐಸಿಡಿಎಸ್ ಸಿಬ್ಬಂದಿಗೆ ಕೆಲಸಕ್ಕೆ ಸೇರ್ಪಡೆ ಆದ ಬಳಿಕ ಕಡ್ಡಾಯ ನಿಯತ ತರಬೇತಿಗಳು ಅಂದರೆ, ವೃತ್ತಿ/ಅನುಗೊಳಿಸುವಿಕೆ ತರಬೇತಿ ನೀಡಲಾಗುತ್ತದೆ. ಎಡಬ್ಲ್ಯುಡಬ್ಲ್ಯುಗಳು, ಮೇಲ್ವಿಚಾರಕರು ಮತ್ತು ಸಿಡಿಪಿಒ/ಎಸಿ ಡಿಪಿಒಗಳಿಗೆ ಐಸಿಡಿಎಸ್ ಯೋಜನೆಗಳು/ಎಡಬ್ಲ್ಯುಸಿಗಳನ್ನು ಕಾರ್ಯಾಚರಣೆಗೊಳಿಸಲು ಅಗತ್ಯವಿರುವ ಒಮ್ಮೆ ನೀಡುವ ವೃತ್ತಿ ತರಬೇತಿ ಕೋರ್ಸ್‌ಗೆ ಮುನ್ನ ಅಲ್ಪಾವಧಿಯ ಸೇರ್ಪಡೆ ತರಬೇತಿ ನೀಡಲಾಗುತ್ತದೆ. ಐಸಿಡಿಎಸ್ ಸಿಬ್ಬಂದಿ ಹಾಗೂ

ಎಡಬ್ಲ್ಯುಟಿಸಿಗಳು/ಎಂಎಲ್‌ಟಿಸಿಗಳ ಬೋಧಕರಿಗೆ ಐಸಿಡಿಎಸ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬೇಕಾದ ಜ್ಞಾನ, ಕೌಶಲ ಮತ್ತು ಸಾಮರ್ಥ್ಯವನ್ನು ನೀಡಲು 2 ವರ್ಷ ಕ್ರೊಮ್ಮೆ ಪುನರ್ಮನನ ತರಬೇತಿ ನೀಡಲಾಗುವುದು. ಇನ್ನಿತರ ಅನ್ವೇಷಣಾತ್ಮಕ ತರಬೇತಿ, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು ಇತ್ಯಾದಿಗಳ ಸಂಘಟಿಸುವಿಕೆಯು ವಿಭಾಗ 9 ರಲ್ಲಿ ಇರುವಂತೆ ಪರಿಷ್ಕೃತ ಆರ್ಥಿಕ ನಿಯಮಗಳಿಗನ್ವಯ ರಾಷ್ಟ್ರೀಯ ಹಾಗೂ ರಾಜ್ಯ ಐಸಿಡಿಎಸ್ ಮಿಷನ್ ನಿರ್ದೇಶನಾಲಯಗಳು ಸ್ಥಾಪನೆಯಾಗಿ, ಕಾರ್ಯನಿರ್ವಹಣೆ ಆರಂಭಿಸುವವರೆಗೆ ಈ ನಿಯತ ತರಬೇತಿ ಕಾರ್ಯಕ್ರಮಗಳು ಮುಂದುವರಿಯಲಿವೆ. ಆನಂತರ ದೇಶದಾದ್ಯಂತ ಎಲ್ಲ ಹಂತಗಳ ಪ್ರತಿ ಸಿಬ್ಬಂದಿಯ ತರಬೇತಿ ಅಗತ್ಯಗಳು ಪೂರೈಕೆಯಾಗಿದೆಯೇ ಎಂಬುದನ್ನು ಕಂಡುಕೊಳ್ಳಲು ತರಬೇತಿ ಅಗತ್ಯಗಳ ಸಮಗ್ರ ಮೌಲ್ಯಮಾಪನವನ್ನು ಮಾಡಲಾಗುತ್ತದೆ ಮತ್ತು ಅದನ್ನು ಆಧರಿಸಿ ಎಲ್ಲ ನಿಯತ/ಹಾಲಿ ತರಬೇತಿ ಕಾರ್ಯಕ್ರಮಗಳು/ಯೋಜನೆಗಳನ್ನು ಪರಿಷ್ಕರಿಸಲಾಗುತ್ತದೆ ಮತ್ತು/ಅಥವಾ ಬಲಗೊಳಿಸಲಾಗುತ್ತದೆ.

7. ತರಬೇತಿ ಅಗತ್ಯದ ಮೌಲ್ಯಮಾಪನ: ರಾಷ್ಟ್ರೀಯ ಐಸಿಡಿಎಸ್ ಮಿಷನ್ ನಿರ್ದೇಶನಾಲಯವು ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರ, ಎನ್‌ಐಪಿಸಿಸಿಡಿ ಹಾಗೂ ರಾಜ್ಯ ಮಿಷನ್ ನಿರ್ದೇಶನಾಲಯ ಗಳ ಬೆಂಬಲದಿಂದ ರಾಷ್ಟ್ರಾದ್ಯಂತ ತರಬೇತಿ ಅಗತ್ಯಗಳ ಸಮಗ್ರ ಮೌಲ್ಯಮಾಪನವನ್ನು ಮಾಡಲಿದ್ದು, ಎಲ್ಲ ಹಂತಗಳಲ್ಲಿರುವ ಪ್ರತಿಯೊಬ್ಬರ ತರಬೇತಿ ಅಗತ್ಯಗಳನ್ನು ಕಂಡುಹಿಡಿಯುವುದು ಇದರ ಉದ್ದೇಶ. ತರಬೇತಿ ಅಗತ್ಯಗಳ ಮೌಲ್ಯಮಾಪನವನ್ನು ಇಂಥ ಮೌಲ್ಯಮಾಪನ ಮಾಡಬಲ್ಲ ಮತ್ತು/ಅಥವಾ ಇಂಥದ್ದೇ ಚಟುವಟಿಕೆಗಳಲ್ಲಿ ವಿಸ್ತೃತ ಜ್ಞಾನ ಮತ್ತು ಅನುಭವ ಇರುವ ಮೂರನೇ ಸಂಸ್ಥೆ/ಸಂಘಟನೆಗೆ ಹೊರ ಗುತ್ತಿಗೆ ನೀಡಲಾಗುತ್ತದೆ. ತರಬೇತಿ ಅಗತ್ಯಗಳ ಮೌಲ್ಯಮಾಪನದಲ್ಲಿ ಕಂಡುಕೊಂಡಿದ್ದನ್ನು ಆಧರಿಸಿ, ರಾಷ್ಟ್ರ ಮತ್ತು ರಾಜ್ಯ ಮಟ್ಟದ ತರಬೇತಿ ಯೋಜನೆಗಳ ರೂಪರೇಷೆಯನ್ನು ವಿನ್ಯಾಸಗೊಳಿಸಲಾಗುತ್ತದೆ ಮತ್ತು 12ನೇ ಪಂಚವಾರ್ಷಿಕ ಯೋಜನೆಯ ಉಳಿದ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುತ್ತದೆ.

8. ಪರಿಷ್ಕೃತ ಹಣಕಾಸು ಪ್ರಮಾಣಕಗಳು: ಎಡಬ್ಲ್ಯುಟಿಸಿಗಳು/ಎಂಎಲ್‌ಟಿಸಿಗಳು ಹಾಗೂ ಎನ್‌ಐಪಿಸಿಸಿಡಿಯಲ್ಲಿ ನಡೆದ ಐಸಿಡಿಎನ್ ಸಿಬ್ಬಂದಿ ಹಾಗೂ ತರಬೇತುದಾರರ ತರಬೇತಿಗೆ ಸಂಬಂಧಿಸಿದ ಪ್ರಮಾಣಕಗಳನ್ನು ಅವುಗಳ ಪರಿಷ್ಕರಣೆಗೆಂದು ನೇಮಕಗೊಂಡ ವಿಶೇಷ ಸಮಿತಿಯ ಶಿಫಾರಸು ಆಧರಿಸಿ, 10 ವರ್ಷಗಳ ನಂತರ ಏಪ್ರಿಲ್ 2009ರಲ್ಲಿ ಪರಿಷ್ಕರಿಸಲಾಯಿತು. 2009ರ ಬಳಿಕ ಬೆಲೆ ಏರಿಕೆಯಿಂದಾಗಿ ಪರಿಷ್ಕೃತ ಪ್ರಮಾಣ ಕಗಳು ಸಾಕಾಗಲಿಲ್ಲ. ಕಡಿಮೆ ಹಣಕಾಸು ಲಭ್ಯತೆಯಿಂದಾಗಿ ತರಬೇತಿಯ ಗುಣಮಟ್ಟದ ಮೇಲೆ ಗಮನಾರ್ಹ ಪರಿಣಾಮವುಂಟಾಗಿದೆ ಮತ್ತು ತರಬೇತಿ ಕೇಂದ್ರಗಳು ಪೋಷಕಾಂಶ, ಗೃಹವಿಜ್ಞಾನ ಅಥವಾ ಮಕ್ಕಳ ಅಭಿವೃದ್ಧಿ ವಿಷಯದಲ್ಲಿ ಸ್ನಾತಕೋತರ ಪದವಿ ಪಡೆದ ಉತ್ತಮ ಶಿಕ್ಷಕರನ್ನು ಉಳಿಸಿಕೊಳ್ಳಲು ಆಗುತ್ತಿಲ್ಲ ಎಂದು ಕೆಲವು ಅಧ್ಯಯನಗಳು ತೋರಿಸಿವೆ. ಆದ್ದರಿಂದ, ಈ ಪ್ರಮಾಣಕಗಳನ್ನು ತರಬೇತಿ ಕೋರ್ಸ್‌ಗಳ ವಿವಿಧ ಅಂಶಗಳಡಿ ಕೆಳಗೆ ನೀಡಲಾದ ಕೋಷ್ಟಕ 1ರಲ್ಲಿ ವಿವರಿಸಿದಂತೆ ಸೂಕ್ತ ಶೇಕಡಾವಾರು ಪ್ರಮಾಣದಲ್ಲಿ ಹೆಚ್ಚಿಸಲಾಗುತ್ತದೆ.

ಐಸಿಡಿಎಸ್ ಮಿಷನ್ ಅಡಿ ತರಬೇತಿ ಹಾಗೂ ಸಾಮರ್ಥ್ಯ ನಿರ್ಮಾಣವನ್ನು ಬಲಪಡಿಸಲು ಅಗತ್ಯವಾದ ವಿಸ್ತೃತ ಮಾರ್ಗದರ್ಶಿ ಸೂತ್ರಗಳನ್ನು ಡಬ್ಲ್ಯುಸಿಡಿ ಮಂತ್ರಾಲಯ ಸಿದ್ಧಪಡಿಸಿದ ಐಸಿಡಿಎಸ್ ಅನುಷ್ಠಾನ ಮಾರ್ಗದರ್ಶಿ ಸೂತ್ರಗಳು ನೀಡಲಿವೆ.

......................................................

ಐಸಿಡಿಎಸ್ ಮಿಷನ್-ಅನುಷ್ಠಾನದ ವಿಸ್ತೃತ ಚೌಕಟ್ಟು

ಕೋಷ್ಟಕ 1 : ವಿವಿಧ ಐಸಿಡಿಎಸ್ ತರಬೇತಿ ಕೋರ್ಸ್‍ಗಳ ಕೆಲವು ಘಟಕಾಂಶಗಳ ಚಾಲ್ತಿ ಹಾಗೂ ಪರಿಷ್ಕೃತ ದರ(ಬದಲಾವಣೆಗೆ ಸಲಹೆ ನೀಡಿದಲ್ಲಿ)ದ ತುಲನಾತ್ಮಕ ವಿವರಣ ಪತ್ರ

ವೆಚ್ಚ ವರ್ಗೀಕರಣ..............ವೆಚ್ಚದ ಬಾಬ್ತು/ಸಿಬ್ಬಂದಿ ವಿಭಾಗ/ಕಾರ್ಯಕ್ರಮ.....................ಹಾಲಿ ಮಟ್ಟ/ಮೊತ್ತ(1.4.2009ರಿಂದ ಅನ್ವಯಿಸುವಂತೆ)..........ಪರಿಷ್ಕೃತ ಮಟ್ಟ/ಮೊತ್ತ

I. ಸ್ಥಿರ ವೆಚ್ಚ

Iೀ. ಅಂಗನವಾಡಿ ತರಬೇತಿ ಕೇಂದ್ರ (ಎಡಬ್ಲ್ಯುಟಿಸಿ)

ಎ. ಪುನರಾವರ್ತನೆ ವೆಚ್ಚ............ಬಾಡಿಗೆ......... ಅಂದಾಜು ಮಾಸಿಕ ರೂ.9,000.............................ಅಂದಾಜು ರೂ. 13,000

(i) ಮೆಟ್ರೋ/ಎ1/ಎ ನಗರಗಳು ಮಾಸಿಕ ರೂ.12,000...................(i)ಮೆಟ್ರೋ/ಎ1/ಎ ನಗರಗಳು ರೂ.18,000

(ii) ಬಿ1/ಬಿ ನಗರಗಳು ಮಾಸಿಕ ರೂ. 10,000 .........................(ii) ಬಿ1/ಬಿ ನಗರಗಳು ರೂ. 15,000

(iii) ಜಿಲ್ಲಾ ಮಟ್ಟದ ನಗರಗಳು ಮಾಸಿಕ ರೂ. 7,000.....................(iii) ಜಿಲ್ಲಾ ಮಟ್ಟದ ನಗರಗಳು ರೂ. 10,000

(iv) ವಿಭಾಗ ಹಂತ ಮತ್ತು ಇನ್ನಿತರ ನಗರಗಳು ಮಾಸಿಕ ರೂ. 6,000.........(iv) ವಿಭಾಗ ಹಂತ ಮತ್ತು ಇನ್ನಿತರ ನಗರಗಳು ರೂ. 9,000

ವಿದ್ಯುತ್ ಮತ್ತು ನೀರಿನ ಶುಲ್ಕ............ ವಿದ್ಯುತ್‍ಗೆ ಮಾಸಿಕ ರೂ. 2,000 ಮತ್ತು ನೀರಿಗೆ ರೂ. 500 ............... ವಿದ್ಯುತ್‍ಗೆ ಮಾಸಿಕ ರೂ. 3,000 ಹಾಗೂ ನೀರಿಗೆ ರೂ.750

ಸಂವಹನ (ದೂರವಾಣಿ-ಫ್ಯಾಕ್ಸ್)............ತಿಂಗಳಿಗೆ ರೂ.750........................................................................ತಿಂಗಳಿಗೆ ರೂ. 1,000

ಬಿ. ಪುನರಾವರ್ತನೆಯಲ್ಲದ ವೆಚ್ಚ.....................ಸಾಧನ-ಸಲಕರಣೆಗಳು, ಪೀಠೋಪಕರಣ, ತರಬೇತಿ ಸಾಮಗ್ರಿಗಳು ಇತ್ಯಾದಿ ಉನ್ನತೀಕರಣ(ಹೊಸ ಹಾಗೂ ಹಳೆಯ ತರಬೇತಿ ಕೇಂದ್ರಗಳು ಎರಡಕ್ಕೂ).......... ........1.25 ಲಕ್ಷ ರೂ....... 2.5 ಲಕ್ಷ ರೂ.

Iಃ. ಮಧ್ಯಮ ಹಂತದ ತರಬೇತಿ ಕೇಂದ್ರ (ಎಂಎಲ್‍ಟಿಸಿ)

ಎ. ಪುನರಾವರ್ತಿತ ವೆಚ್ಚ..........ಎಂಎಲ್‍ಟಿಸಿಯ ಬೋಧಕರಿಂದ ಎಡಬ್ಲ್ಯುಟಿಸಿಗಳು ಮತ್ತು ಐಸಿಡಿಎಸ್ ಯೋಜನೆ/ಎಡಬ್ಲ್ಯುಸಿಗೆ ಪರಾಮರ್ಶನ ಭೇಟಿ.......ವಾರ್ಷಿಕ ರೂ.12,000(ವರ್ಷಕ್ಕೆ 5 ಭೇಟಿ).... .............ವಾರ್ಷಿಕ ರೂ.18,000 (ವರ್ಷಕ್ಕೆ 10 ಭೇಟಿ)

ವೃತ್ತಪತ್ರಿಕೆಗಳು, ನಿಯತಕಾಲಿಕ, ಫ್ಯಾಕ್ಸ್, ಅಂತರ್ಜಾಲ ಇತ್ಯಾದಿ....... ರೂ.750 ................................ಮಾಸಿಕ ರೂ. 1,500

ವಿದ್ಯುತ್ ಮತ್ತು ನೀರು..................ವಿದ್ಯುತ್ ರೂ.2,000, ನೀರು 500 ರೂ.,..............ವಿದ್ಯುತ್ ರೂ.4,000, ಮತ್ತು ನೀರು ರೂ.1,500

ಬಿ. ಪುನರಾವರ್ತಿತವಲ್ಲದ ವೆಚ್ಚಗಳು

ಸಾಧನ ಸಲಕರಣೆಗಳು, ಪೀಠೋಪಕರಣ, ತರಬೇತಿ ಸಾಧನಗಳು ಇತ್ಯಾದಿ ಉನ್ನತೀಕರಣ..................ಅವಕಾಶವಿಲ್ಲ..........ರೂ. 3 ಲಕ್ಷ (ಹಳೆಯ ಹಾಗೂ ಹೊಸ ಎಂಎಲ್‌ಟಿಸಿಗಳಿಗೆ)

II. ಪುನರಾವರ್ತಿತ ಮಾರ್ಪಡಿಸಲಾಗುವ ವೆಚ್ಚ (ಎಡಬ್ಲ್ಯುಟಿಸಿ ಮತ್ತು ಎಂಎಲ್‌ಟಿಸಿ ಎರಡಕ್ಕೂ)

ಎ. ಎಡಬ್ಲ್ಯುಟಿಸಿ/ಎಂಎಲ್‌ಟಿಸಿ ಸಿಬ್ಬಂದಿಗೆ ಶ್ರೇಣಿಗೆ ಅನುಗುಣವಾಗಿ ವೇತನ ...........ಎಂಎಲ್‌ಟಿಸಿಯ ಸಂಯೋಜಕ..............ರೂ.2,000 (ನಿಗದಿತ).............ರೂ. 3,000 (ನಿಗದಿತ)

ಎಡಬ್ಲ್ಯುಟಿಸಿ ಪ್ರಾಚಾರ್ಯ.............i) ನೇಮಕದ ಆರಂಭ ರೂ.10,000.....................ರೂ.12,250

ಎಂಎಲ್‌ಟಿಸಿಯ ಬೋಧಕ...........ii) 5 ವರ್ಷ ಪೂರ್ಣಗೊಳಿಸಿದ ಬಳಿಕ ರೂ.12,500.................15,625 ರೂ.

iii) 10 ವರ್ಷ ಪೂರ್ಣಗೊಳಿಸಿದ ಬಳಿಕ ರೂ.15,000/-...........ರೂ.18,750/-

iv) 15 ವರ್ಷ ಪೂರ್ಣಗೊಳಿಸಿದ ಬಳಿಕ ರೂ. 17,500/- .............ರೂ. 21,875/-

v) 20 ವರ್ಷ ಪೂರ್ಣಗೊಳಿಸಿದ ಬಳಿಕ ರೂ. 20,000/-................ರೂ. 25,000/-

vi) 25 ವರ್ಷ ಪೂರ್ಣಗೊಳಿಸಿದ ನಂತರ ಏನೂ ಇಲ್ಲ ...................ರೂ. 30,000/-

ಎಡಬ್ಲ್ಯುಟಿಸಿಯ ಸಂಯೋಜಕ.............i) ಆರಂಭದಲ್ಲಿ ರೂ.8,000/-...............................................ರೂ.10,000/-

ii) ಐದು ವರ್ಷ ಪೂರ್ಣಗೊಳಿಸಿದ ಬಳಿಕ ರೂ. 10,000/-...........................................ರೂ. 12,250/-

iii) 10 ವರ್ಷ ಪೂರ್ಣಗೊಳಿಸಿದ ಬಳಿಕ ರೂ. 12,000/- ................................... ರೂ. 15,000/-

iv) 15 ವರ್ಷ ಪೂರ್ಣಗೊಳಿಸಿದ ಬಳಿಕ ರೂ. 14,000/- .........................................ರೂ. 17,500/-

v) 20 ವರ್ಷ ಪೂರ್ಣಗೊಳಿಸಿದ ಬಳಿಕ ರೂ. 16,000/- .....................................ರೂ. 20,000/-

vi) 25 ವರ್ಷ ಪೂರ್ಣಗೊಳಿಸಿದ ಬಳಿಕ ಏನೂ ಇಲ್ಲ ..............................................ರೂ. 25,000/-

ಎಡಬ್ಲ್ಯುಟಿಸಿಯಲ್ಲಿ ಲೆಕ್ಕಪತ್ರ ಗುಮಾಸ್ತ............i) ಆರಂಭದಲ್ಲಿ ರೂ.6,000/-.....................ರೂ. 7,500/-

ಎಡಬ್ಲ್ಯುಟಿಸಿಯಲ್ಲಿ ಬೆರಳಚ್ಚುಗಾರರು.............. ii) 5 ವರ್ಷ ಪೂರ್ಣಗೊಳಿಸಿದ ಬಳಿಕ ರೂ.7,500/-................ರೂ. 9,375/-

ಎಂಎಲ್‌ಟಿಸಿಯಲ್ಲಿ ಬೆರಳಚ್ಚುಗಾರ+ಗುಮಾಸ್ತ..........iii) 10 ವರ್ಷ ಪೂರ್ಣಗೊಳಿಸಿದ ಬಳಿಕ ರೂ.9,000.........ರೂ.11,250
ಎಂಎಲ್‌ಟಿಸಿಯಲ್ಲಿ ಸಹಾಯಕ ಗುಮಾಸ್ತ ..... iv) 5 ವರ್ಷ ಪೂರ್ಣಗೊಳಿಸಿದ ಬಳಿಕ ರೂ. 10,500.........ರೂ. 13,125/-

v) 20 ವರ್ಷ ಪೂರ್ಣಗೊಳಿಸಿದ ಬಳಿಕ ರೂ. 12,000/-..................... ರೂ. 15,000/-

vi) 25 ವರ್ಷ ಪೂರ್ಣಗೊಳಿಸಿದ ಬಳಿಕ ಏನೂ ಇಲ್ಲ.................................ರೂ. 18,000/-

ಎಡಬ್ಲ್ಯುಟಿಸಿ/ಎಂಎಲ್‌ಟಿಸಿಗಳಲ್ಲಿ ಮಹಿಳಾ ವಾರ್ಡನ್........... i) ಆರಂಭದಲ್ಲಿ ರೂ.5,000/-...................ರೂ. 6,250/-

ii) 5 ವರ್ಷಗಳ ಬಳಿಕ ರೂ. 6,000........ರೂ. 7,500

ii) 10 ವರ್ಷಗಳ ಬಳಿಕ.............ರೂ. 7,000...............ರೂ. 8,750

iv) 15 ವರ್ಷಗಳ ಬಳಿಕ ರೂ. 8,000.............ರೂ. 10,000

v) 20 ವರ್ಷಗಳ ಬಳಿಕ.ರೂ. 9,000...........ರೂ. 11,250

vi) 25 ವರ್ಷಗಳ ಬಳಿಕ......ಏನೂ ಇಲ್ಲ............ರೂ. 14,000

ಎಂಎಲ್‌ಟಿಸಿ/ಎಡಬ್ಲ್ಯುಟಿಸಿಗಳಲ್ಲಿ ಬಾಣಸಿಗ/ಜವಾನ/ಚೌಕಿದಾರ......... i) ಆರಂಭದಲ್ಲಿ ರೂ.4,500/-...........ರೂ. 5,625/-

ii) 5 ವರ್ಷದ ಬಳಿಕ ರೂ.5,500/-.......ರೂ. 5,857/-

iii) 10 ವರ್ಷದ ಬಳಿಕ.......... ರೂ. 6,500/- ರೂ. 8,125/-

iv) 15 ವರ್ಷದ ಬಳಿಕ............ ರೂ. 7,500/-..........ರೂ. 9,375/-

v) 20 ವರ್ಷದ ಬಳಿಕ............... ರೂ. 8,500/-..........ರೂ. 10,625/-

vi) 25 ವರ್ಷದ ಬಳಿಕ.....................ಏನೂ ಇಲ್ಲ..............ರೂ.13,200/-

ತಾತ್ಕಾಲಿಕ ಆಧಾರದಲ್ಲಿ ಕರಕುಶಲ ಶಿಕ್ಷಕಿ, ಸಂಗೀತ ಶಿಕ್ಷಕಿ ಮತ್ತು ವೈದ್ಯರ ನೇಮಕ; ಪೌರಕಾರ್ಮಿಕರು (ಎಡಬ್ಲ್ಯುಟಿಸಿ/ಎಂಎಲ್‌ಟಿಸಿ ಎರಡಕ್ಕೂ)..........ರೂ. 1,000 ಪ್ರತಿಯೊಬ್ಬರಿಗೆ..........ಮಾಸಿಕ ರೂ. 2,000

ಃ. ಸಂಪನ್ಮೂಲ ವ್ಯಕ್ತಿಗಳು/ಅತಿಥಿ ಉಪನ್ಯಾಸಕರಿಗೆ ಗೌರವಧನ (ಪ್ರಯಾಣ ಭತ್ಯೆ ಸೇರಿದಂತೆ)............ಸೇರ್ಪಡೆ/ವೃತ್ತಿ/ಪುನರ್ಮನನ ತರಬೇತಿ ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳಿಗೆ ಹಾಗೂ ಎಡಬ್ಲ್ಯುಟಿಸಿಗಳ ಬೋಧಕರಿಗೆ ಅನುಗೊಳಿಸುವಿಕೆ/ಪುನರ್ಮನನ ತರಬೇತಿ....................ಉಪನ್ಯಾಸವೊಂದಕ್ಕೆ ರೂ.250...........................ಉಪನ್ಯಾಸವೊಂದಕ್ಕೆ ರೂ.500

ಮೇಲ್ವಿಚಾರಕರ ಸೇರ್ಪಡೆ/ವೃತ್ತಿ/ಪುನರ್ಮನನ ತರಬೇತಿ............ಉಪನ್ಯಾಸವೊಂದಕ್ಕೆ ರೂ. 250............. ಉಪನ್ಯಾಸವೊಂದಕ್ಕೆ ರೂ. 500

ಸಿಡಿಪಿಒ/ಎಸಿಡಿಪಿಒಗಳಿಗೆ ವೃತ್ತಿ/ಪುನರ್ಮನನ ತರಬೇತಿ ಹಾಗೂ ಎಂಎಲ್‌ಟಿಸಿಯ ಬೋಧಕರಿಗೆ ಅನುಗೊಳಿಸುವಿಕೆ/ಪುನರ್ಮನನ ತರಬೇತಿ..........ಉಪನ್ಯಾಸವೊಂದಕ್ಕೆ ರೂ. 750......ಉಪನ್ಯಾಸವೊಂದಕ್ಕೆ ರೂ.1,500

ಸಿಡಿಪಿಒ/ಎಸಿಡಿಪಿ2ಗಳಿಗೆ ಸೇರ್ಪಡೆ ತರಬೇತಿ.................ಉಪನ್ಯಾಸವೊಂದಕ್ಕೆ ರೂ.250..................ಉಪನ್ಯಾಸವೊಂದಕ್ಕೆ ರೂ. 750

ಅ. ತರಬೇತಿ ಪಡೆಯುವವರಿಗೆ ಊಟ ಮತ್ತು ವಸತಿ ವೆಚ್ಚ......ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳ ಸೇರ್ಪಡೆ/ವೃತ್ತಿ/ಪುನರ್ಮನನ ತರಬೇತಿ.......ದಿನವೊಂದಕ್ಕೆ ರೂ. 75............ದಿನವೊಂದಕ್ಕೆ ರೂ. 75

ಮೇಲ್ವಿಚಾರಕರಿಗೆ ಸೇರ್ಪಡೆ/ವೃತ್ತಿ/ಪುನರ್ಮನನ ತರಬೇತಿ ಹಾಗೂ ಎಡಬ್ಲ್ಯುಟಿಸಿಗಳ ಬೋಧಕರಿಗೆ ಅನುಗೊಳಿಸುವಿಕೆ/ಪುನರ್ಮನನ ತರಬೇತಿ........ದಿನವೊಂದಕ್ಕೆ ರೂ. 120(ಊಟ ರೂ. 90 ಮತ್ತು ವಸತಿ ರೂ. 30)...................ರೂ. 250

ಸಿಡಿಪಿಒ/ಎಸಿಡಿಪಿಒಗಳಿಗೆ ವೃತ್ತಿ/ಪುನರ್ಮನನ ತರಬೇತಿ ಹಾಗೂ ಎಂಎಲ್‌ಟಿಸಿಗಳ ಬೋಧಕರಿಗೆ ಅನುಗೊಳಿಸುವಿಕೆ/ಪುನರ್ಮನನ ತರಬೇತಿ..............ದಿನವೊಂದಕ್ಕೆ ತಲಾ ರೂ. 225(ಊಟ ರೂ. 125, ವಸತಿ ರೂ. 100).........................ರೂ. 500

ಸಿಡಿಪಿಒ/ಎಸಿಡಿಪಿಒಗಳಿಗೆ ಸೇರ್ಪಡೆ ತರಬೇತಿ............ದಿನವೊಂದಕ್ಕೆ ತಲಾ 150 (ರೂ. 110 ಊಟ, ರೂ. 40 ವಸತಿ)......................ತಲಾ ರೂ. 300

ಡಿ. ತರಬೇತಿ ಪಡೆಯುತ್ತಿರುವವರಿಗೆ ಟಿಎ.........ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳಿಗೆ ಸೇರ್ಪಡೆ/ವೃತ್ತಿ/ಪುನರ್ಮನನ/ಅನುವುಗೊಳಿಸುವಿಕೆ ತರಬೇತಿ...........ದಿನವೊಂದಕ್ಕೆ ರೂ.300 ಯಥಾರ್ಥ ಅನ್ವಯಿಸುವಂತೆ ............ ರೂ. 450 ಯಥಾರ್ಥ ಅನ್ವಯಿಸುವಂತೆ

ಮೇಲ್ವಿಚಾರಕರಿಗೆ ವೃತ್ತಿ/ಪುನರ್ಮನನ ತರಬೇತಿ ಹಾಗೂ ಎಡಬ್ಲ್ಯುಟಿಸಿಗಳ ಬೋಧಕರಿಗೆ ಅನುವುಗೊಳಿಸುವಿಕೆ/ಪುನರ್ಮನನ ತರಬೇತಿ.........ತಲಾ ರೂ. 1,000 ಬಾಧ್ಯತೆಗೆ ತಕ್ಕಂತೆ ಅಥವಾ ಯಥಾರ್ಥ ಅನ್ವಯಿಸುವಂತೆ.....................ತಲಾ ರೂ. 1,500 ಯಥಾರ್ಥ ಅನ್ವಯಿಸುವಂತೆ

ಸಿಡಿಪಿಒಗಳು/ಎಸಿಡಿಪಿಒಗಳಿಗೆ ವೃತ್ತಿ/ಪುನರ್ಮನನ ತರಬೇತಿ.................ತಲಾ ರೂ. 5,000 ಬಾಧ್ಯತೆಗೆ ತಕ್ಕಂತೆ ಅಥವಾ ಯಥಾರ್ಥ ಅನ್ವಯಿಸುವಂತೆ...............7,500 ರೂ. ಯಥಾರ್ಥ ಅನ್ವಯಿಸುವಂತೆ

ಎಂಎಲ್‌ಟಿಸಿಗಳ ಬೋಧಕರಿಗೆ ಪುನರ್ಮನನ/ಅನುವುಗೊಳಿಸುವಿಕೆ ತರಬೇತಿ..........ತಲಾ ರೂ.3000 ಬಾಧ್ಯತೆಗೆ ತಕ್ಕಂತೆ ಅಥವಾ ಯಥಾರ್ಥ ಅನ್ವಯಿಸುವಂತೆ.......... ರೂ. 4,500 ಯಥಾರ್ಥ ಅನ್ವಯಿಸುವಂತೆ

ಮೇಲ್ವಿಚಾರಕರಿಗೆ ಸೇರ್ಪಡೆ ತರಬೇತಿ.........ತಲಾ ರೂ.800 ಬಾಧ್ಯತೆಗೆ ತಕ್ಕಂತೆ ಅಥವಾ ಯಥಾರ್ಥ ಅನ್ವಯಿಸುವಂತೆ...............ರೂ. 1,200 ಯಥಾರ್ಥ ಅನ್ವಯಿಸುವಂತೆ

ಇ. ತರಬೇತಿ ವೇಳೆ ಸಾಗಣೆ ಮತ್ತು ಕ್ಷೇತ್ರಕ್ಕೆ ಭೇಟಿ...... ಎಡಬ್ಲ್ಯುಡಬ್ಲ್ಯುಗಳ ವೃತ್ತಿ ತರಬೇತಿ.........ಕೋರ್ಸ್‌ಗೆ ರೂ. 7,500...................ಕೋರ್ಸ್‌ಗೆ 10,000

ಎಡಬ್ಲ್ಯುಡಬ್ಲ್ಯುಗಳಿಗೆ ಸೇರ್ಪಡೆ/ಪುನರ್ಮನನ ತರಬೇತಿ ಹಾಗೂ ಮೇಲ್ವಿಚಾರಕರಿಗೆ ಸೇರ್ಪಡೆ ತರಬೇತಿ............................ಕೋರ್ಸ್‌ಗೆ ರೂ. 1,000................ ಕೋರ್ಸ್‌ಗೆ ರೂ. 2,000

ಎಡಬ್ಲ್ಯುಎಚ್‌ಗಳಿಗೆ ಅನುವುಗೊಳಿಸುವಿಕೆ/ಪುನರ್ಮನನ ತರಬೇತಿ..............ಕೋರ್ಸ್‌ಗೆ ರೂ. 2,250........................ಕೋರ್ಸ್‌ಗೆ 3,000

ಮೇಲ್ವಿಚಾರಕರಿಗೆ ವೃತ್ತಿ ತರಬೇತಿ ................................ಕೋರ್ಸ್‌ಗೆ ರೂ. 7,500.............................ಕೋರ್ಸ್‌ಗೆ 10,000

ಮೇಲ್ವಿಚಾರಕರಿಗೆ ಪುನರ್ಮನನ ತರಬೇತಿ.................ಕೋರ್ಸ್‌ಗೆ ರೂ.2,000..................ಕೋರ್ಸ್‌ಗೆ ರೂ. 4,000

ಎಡಬ್ಲ್ಯುಟಿಸಿಗಳ ಬೋಧಕರಿಗೆ ಅನುವುಗೊಳಿಸುವಿಕೆ/ಪುನರ್ಮನನ ತರಬೇತಿ.................ಕೋರ್ಸ್‌ಗೆ ರೂ. 2,000................ಕೋರ್ಸ್‌ಗೆ ರೂ. 3,000

ಸಿಡಿಪಿಒ/ಎಸಿಪಿಡಿಪಿಒಗಳಿಗೆ ವೃತ್ತಿ ತರಬೇತಿ.................ಕೋರ್ಸ್‌ಗೆ ರೂ.24,000...........................ಕೋರ್ಸ್‌ಗೆ ರೂ. 30,000

ಸಿಡಿಪಿಒ/ಎಸಿಪಿಡಿಪಿಒಗಳಿಗೆ ಪುನರ್ಮನನ ತರಬೇತಿ..........ಕೋರ್ಸ್‌ಗೆ ರೂ. 3,000....................ಕೋರ್ಸ್‌ಗೆ ರೂ. 45,000

ಸಿಡಿಪಿಒ/ಎಸಿಪಿಡಿಪಿಒಗಳಿಗೆ ಸೇರ್ಪಡೆ ತರಬೇತಿ.....................ಕೋರ್ಸ್‌ಗೆ ರೂ. 1,000/-..........................ಕೋರ್ಸ್‌ಗೆ ರೂ. 3,000

ಎಂಎಲ್‌ಟಿಸಿ ಬೋಧಕರಿಗೆ ಅನುವುಗೊಳಿಸುವಿಕೆ/ಪುನರ್ಮನನ ತರಬೇತಿ..................ಕೋರ್ಸ್‌ಗೆ ರೂ. 3,000....................ಕೋರ್ಸ್‌ಗೆ ರೂ. 4,500

ಸಿಡಿಪಿಒ/ಎಸಿಡಿಪಿಒಗಳಿಗೆ ವೃತ್ತಿ ತರಬೇತಿ......................ಕೋರ್ಸ್‌ಗೆ ರೂ.24,000......................ಕೋರ್ಸ್‌ಗೆ ರೂ. 30,000

ಸಿಡಿಪಿಒ/ಎಸಿಡಿಪಿಒಗಳಿಗೆ ಪುನರ್ಮನನ ತರಬೇತಿ..........ಕೋರ್ಸ್‌ಗೆ ರೂ. 3,000.............ಕೋರ್ಸ್‌ಗೆ ರೂ. 4,500

ಸಿಡಿಪಿಒ/ಎಸಿಡಿಪಿಒಗಳಿಗೆ ಸೇರ್ಪಡೆ ತರಬೇತಿ............ಕೋರ್ಸ್‌ಗೆ ರೂ. 1,000................ಕೋರ್ಸ್‌ಗೆ ರೂ. 3,000

ಎಂಎಲ್‌ಟಿಸಿ ಬೋಧಕರಿಗೆ ಅನುವುಗೊಳಿಸುವಿಕೆ/ಪುನರ್ಮನನ ತರಬೇತಿ...............ಕೋರ್ಸ್‌ಗೆ ರೂ. 3,000......................ಕೋರ್ಸ್‌ಗೆ ರೂ.4,500

ಎಫ್. ಪ್ರೋತ್ಸಾಹಕಗಳು..........ಎಡಬ್ಲ್ಯುಡಬ್ಲ್ಯುಗಳ ವೃತ್ತಿ ತರಬೇತಿ ಮುಗಿದ ಬಳಿಕ ಪ್ರೋತ್ಸಾಹಕಗಳು.............ತಲಾ ರೂ.500........................ತಲಾ ರೂ. 1,000

ಜಿ. ಸಾದಿಲ್ವಾರು ಖರ್ಚು.....................ಎಡಬ್ಲ್ಯುಡಬ್ಲುಗಳಿಗೆ ವೃತ್ತಿ ತರಬೇತಿ...............ಕೋರ್ಸ್ ರೂ.3,000...............ಕೋರ್ಸ್‌ಗೆ ರೂ. 4,500

ಎಡಬ್ಲ್ಯುಡಬ್ಲ್ಯುಗಳಿಗೆ ಪುನರ್ಮನನ ತರಬೇತಿ...................ಕೋರ್ಸ್‌ಗೆ ರೂ. 500...........ಕೋರ್ಸ್‌ಗೆ ರೂ. 2,000

ಎಡಬ್ಲ್ಯುಡಬ್ಲ್ಯುಗಳಿಗೆ ಸೇರ್ಪಡೆ ತರಬೇತಿ...............ಕೋರ್ಸ್‌ಗೆ ರೂ. 1,500.......................ಕೋರ್ಸ್‌ಗೆ ರೂ. 2,000

ಮೇಲ್ವಿಚಾರಕರಿಗೆ ವೃತ್ತಿ ತರಬೇತಿ............................. ಕೋರ್ಸ್‌ಗೆ ರೂ. 5,000...................... ಕೋರ್ಸ್‌ಗೆ ರೂ. 7,500

ಎಡಬ್ಲ್ಯುಟಿಸಿಗಳ ಬೋಧಕರಿಗೆ ಅನುವುಗೊಳಿಸುವಿಕೆ ತರಬೇತಿ ಮತ್ತು ಮೇಲ್ವಿಚಾರಕರಿಗೆ ಸೇರ್ಪಡೆ/ಪುನರ್ಮನನ ತರಬೇತಿ...................... ಕೋರ್ಸ್‌ಗೆ ರೂ. 2,000..................ಕೋರ್ಸ್‌ಗೆ ರೂ. 3,000

ಎಡಬ್ಲ್ಯುಟಿಸಿಗಳ ಬೋಧಕರಿಗೆ ಪುನರ್ಮನನ ತರಬೇತಿ..........................ಕೋರ್ಸ್‌ಗೆ ರೂ. 1,500..................... ಕೋರ್ಸ್‌ಗೆ ರೂ. 2,500

ಸಿಡಿಪಿಒ/ಎಸಿಡಿಪಿಒಗಳಿಗೆ ವೃತ್ತಿ ತರಬೇತಿ.......................ಕೋರ್ಸ್‌ಗೆ ರೂ. 10,000.........................ಕೋರ್ಸ್‌ಗೆ ರೂ. 15,000

ಸಿಡಿಪಿಒಗಳಿಗೆ ಸೇರ್ಪಡೆ/ಪುನರ್ಮನನ ತರಬೇತಿ.....................ಕೋರ್ಸ್‌ಗೆ ರೂ. 5,000.................ಕೋರ್ಸ್‌ಗೆ ರೂ. 7,500

ಎಂಎಲ್‌ಟಿಸಿಗಳ ಬೋಧಕರಿಗೆ ಅನುವುಗೊಳಿಸುವಿಕೆ ತರಬೇತಿ..................... ಕೋರ್ಸ್‌ಗೆ ರೂ. 3,000.............ಕೋರ್ಸ್‌ಗೆ ರೂ. 4,500

..............................................

ಅನುಬಂಧ ಫಿII

ವಿವಿಧ ರಾಜ್ಯಗಳಲ್ಲಿ ಐಸಿಡಿಎಸ್‌ನ ಕಾರ್ಯಾಚರಣೆ-ಉತ್ತಮ ಆಚರಣೆಗಳ ಕಾರ್ಯರೂಪ ಮಾದರಿಗಳು

ಆಚರಣೆ/ಮಧ್ಯಸ್ಥಿಕೆ............................ರಾಜ್ಯ ಮತ್ತು ಬೆಂಬಲ..................ವಿಧಾನ........................................ಆದ್ಯತೆ ಕ್ಷೇತ್ರ..........................
ಫಲಶ್ರುತಿ/ಫಲಿತಾಂಶ

ತಮಿಳುನಾಡು ಸಮಗ್ರ ಪೋಷಕಾಂಶ ಕಾರ್ಯಕ್ರಮ..........ಸಮಾಜ ಕಲ್ಯಾಣ ಮತ್ತು ಮಹಿಳೆ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ, ತಮಿಳುನಾಡು ಸರ್ಕಾರ ಮತ್ತು ವಿಶ್ವ ಬ್ಯಾಂಕ್.....................ಪೋಷಕಾಂಶ ಶಿಕ್ಷಣ, ಪ್ರಾಥಮಿಕ ಆರೋಗ್ಯ ರಕ್ಷಣೆ, ಪೋಷಕಾಂಶ ತೀವ್ರ ಕೊರತೆ ಇರುವವರಿಗೆ ಅಥವಾ ಬೆಳವಣಿಗೆಯಲ್ಲಿ ನ್ಯೂನತೆ ಇರುವವರಿಗೆ ಸ್ಥಳದಲ್ಲೇ ಪೂರಕ ಉಣಿಸುವಿಕೆ, ಅತಿಸಾರ ನಿರ್ವಹಣೆ, ವಿಟಮಿನ್ ಎ ನೀಡುವಿಕೆ, ನಿಯತಕಾಲಿಕ ಜಂತು ನಿವಾರಣೆ ಮತ್ತು ನಿಯತ ಸಂಖ್ಯೆಯ ಮಹಿಳೆಯರಿಗೆ ಪೂರಕ ಉಣಿಸುವಿಕೆ ಮತ್ತಿತರ ಪ್ಯಾಕೇಜ್ ಸೇವೆಗಳು----ಸಾಮುದಾಯಿಕ ಪೋಷಣೆ ಕೇಂದ್ರದ ಸ್ಥಾಪನೆ(ಸಿಎನ್‌ಸಿ)..............ಬೆಳವಣಿಗೆ ಪರಾಮರ್ಶನ, ಪೋಷಕಾಂಶ ಶಿಕ್ಷಣ ಮತ್ತು ಆಹಾರದ ಬಲದುಂಬುವಿಕೆ.......ವಿಟಮಿನ್ ಎ ಪೂರಕ ನೀಡಿಕೆ 1982ರಲ್ಲಿ ಶೇ.46 ರಿಂದ 1986ರಲ್ಲಿ ಶೇ. 70ಕ್ಕೆ ಹೆಚ್ಚಳ. ಆದರೆ, 1990ರಲ್ಲಿ ಶೇ.57ಕ್ಕೆ ಕುಸಿತ---ಜಂತು ನಿವಾರಣೆ ಪ್ರಮಾಣ 1982ರಲ್ಲಿ ಶೇ.42 ರಿಂದ 1986ರಲ್ಲಿ ಶೇ.60ಕ್ಕೆ ಹೆಚ್ಚಳ. ಆದರೆ, 1990ರಲ್ಲಿ ಶೇ.51ಕ್ಕೆ ಕುಸಿತ --- 1982ರಲ್ಲಿ ಶೇ.63ರಷ್ಟು ಮಕ್ಕಳು ಸಂಪೂರ್ಣ ಲಸಿಕೀಕರಣಗೊಂಡಿದ್ದು, ಇದು 1986ರಲ್ಲಿ ಶೇ.79 ಹಾಗೂ 1990ರಲ್ಲಿ ಶೇ.83ಕ್ಕೆ ಹೆಚ್ಚಿತು.

ಸಂತಾನೋತ್ಪತ್ತಿ ಮತ್ತು ಮಗುವಿನ ಆರೋಗ್ಯ, ಪೋಷಕಾಂಶ ಮತ್ತು ಎಚ್‌ಐವಿ-ಏಡ್ಸ್ ಕಾರ್ಯಕ್ರಮ(ಆರ್‌ಎಸಿಎಚ್‌ಎನ್‌ಎ)ದಲ್ಲಿ ಐಎನ್‌ಎಚ್‌ಪಿ 2.... ಕೇರ್‌ಇಂಡಿಯಾ, ಯುಎಸ್‌ಎಐಡಿ, ಐಸಿಡಿಎಸ್.............ಎನ್‌ಜಿಒಗಳೊಡನೆ ಸಹಭಾಗಿತ್ವದ ಮೂಲಕ ಉತ್ತಮ ಆಚರಣೆಗಳ ಅನ್ವೇಷಣೆ ಮತ್ತು ಪ್ರದರ್ಶನ ---- ಸರ್ಕಾರಿ ವ್ಯವಸ್ಥೆ ಮೂಲಕ ಪುನರಾವರ್ತನೆ ---- ಭಾಗಿದಾರರೊಂದಿಗೆ ಹಂಚಿಕೆ ಸಹಭಾಗಿತ್ವ - ಲಿಂಗ ಸಮಾನತೆಯ ಉತ್ತೇಜನ....................15 ರಿಂದ 20 ಮನೆಗಳಿಗೆ ಸೇವೆ ನೀಡಬಲ್ಲ ಸಮುದಾಯದ ಸ್ವಯಂಸೇವಕರ ಶ್ರೇಣಿ - ದಿನಸಿ ಮನೆಗೆ ಕೊಂಡೊಯ್ಯುವ ದಿನದೊಂದಿಗೆ ಪೋಷಕಾಂಶ ಆರೋಗ್ಯ ದಿನಗಳನ್ನು ಜೋಡಿಸುವುದು - ಸಮುದಾಯ ಆಧಾರಿತ ಪರಾಮರ್ಶನ ವ್ಯವಸ್ಥೆಗಳನ್ನು ಬಳಸುವುದು - ವಿಭಾಗ ಹಂತದ ಸಂಪನ್ಮೂಲ ರೇಖಾಚಿತ್ರಗಳನ್ನು ಪರಾಮರ್ಶನಕ್ಕೆ ಬಳಸುವುದು.......................ಸೂಕ್ತವಾದ ಪೂರಕ ಪೋಷಕಾಂಶ ಉಣಿಸುವಿಕೆ ಆಚರಣೆಗಳ ಸುಧಾರಣೆ ಮೇಲೆ ನಿರಾಶಾದಾಯಕ ಪರಿಣಾಮ - 12 ರಿಂದ 23 ತಿಂಗಳ ಮಕ್ಕಳಿಗೆ ಶಿಫಾರಸು ಮಾಡಿದ ಪ್ರಮಾಣದ ಅರೆ ಘನ ಆಹಾರ ಪೂರೈಸುವ ವಾಡಿಕೆ ಕಡಿಮೆ - 6 ರಿಂದ 11 ತಿಂಗಳ ಮಕ್ಕಳಿಗೆ ಅರೆ ಘನ ಆಹಾರ ನೀಡುವಿಕೆಯಲ್ಲಿ ಗಮನಾರ್ಹ ಸುಧಾರಣೆಯಿಲ್ಲ - 6 ರಿಂದ 23 ತಿಂಗಳ ಮಕ್ಕಳಿರುವ ತಾಯಂದಿರ ಕನಿಷ್ಠ ಮೂರು ಆಹಾರ ಗುಂಪು(ತೈಲರಹಿತ ಪಥ್ಯ)ಗಳಲ್ಲಿ ಸುಧಾರಣೆಯಿಲ್ಲ - 6 ರಿಂದ 23 ತಿಂಗಳ ಮಕ್ಕಳಿಗೆ ಸೂಕ್ತವೆನಿಸುವಷ್ಟು ಉಣಿಸುವಿಕೆಯ ಪುನರಾವರ್ತನೆಯಲ್ಲಿ ಯಾವುದೇ ಸುಧಾರಣೆ ಇಲ್ಲ - 12 ರಿಂದ 23 ತಿಂಗಳ ಶೇ.5ಕ್ಕಿಂತ ಕಡಿಮೆ ಮಕ್ಕಳು ಕಳೆದ 24 ತಿಂಗಳಲ್ಲಿ ದಿನಸಿ ಆಹಾರ ಬಳಸಿಲ್ಲ.

ದುಲಾರ್ ಕಾರ್ಯತಂತ್ರ..............ಯುನಿಸೆಫ್, ಐಸಿಡಿಎಸ್ ಮತ್ತು ಜಾರ್ಖಂಡ್ ಸರ್ಕಾರ ....................... ದುಲಾರ್ ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪಾಲನೆಗೆ ಜೀವನಕ್ರಮ ಮಾರ್ಗವನ್ನು ಅನುಸರಿ ಸುತ್ತದೆ- ದುಲಾರ್ ಕಾರ್ಯಕ್ರಮವು ಬಾಲಕಿಯರು ಮತ್ತು

ಸಂತಾನೋತ್ಪತ್ತಿ ವಯಸ್ಸಿನ ಮಹಿಳೆಯರಿಗೆ, ಅದರಲ್ಲೂ ವಿಶೇಷವಾಗಿ ಗರ್ಭಿಣಿಯರಿಗೆ ಮತ್ತು ಎಳೆಯ ಮಕ್ಕಳ ಪಾಲನೆ ವೇಳೆ ಸೂಕ್ತ ಪೋಷಕಾಂಶ, ಆರೋಗ್ಯ ಸೇವೆ ಮತ್ತು ಮಕ್ಕಳ ಪಾಲನೆ ಕುರಿತು ಮಾಹಿತಿ ಹೊಂದಿರುವುದನ್ನು ಖಾತ್ರಿ ಪಡಿಸುತ್ತದೆ - ದುಲಾರ್ ಕಾರ್ಯತಂತ್ರವು ತಾವು ವಾಸಿಸುತ್ತಿರುವ ಪ್ರದೇಶದಲ್ಲಿ ಸಮುದಾಯದ ಕ್ರೋಢೀಕರಣ ದಿಂದ ಹಾಗೂ ಸಮುದಾಯದ ಸದಸ್ಯರಿಗೆ ವಿಶೇಷ ತರಬೇತಿ ನೀಡಿ, ಮಾಹಿತಿಯನ್ನು ಹಂಚಲು ಮತ್ತು ಆರೋಗ್ಯಕರ ವರ್ತನೆಯನ್ನು ಉತ್ತೇಜಿಸುತ್ತದೆ- ದುಲಾರ್ ಆರಂಭಿಸಿದ 2 ದಿನಗಳ ಗ್ರಾಮ ಸಂಪರ್ಕ ಅಭಿಯಾನ(ವಿಸಿಡಿ)ದಲ್ಲಿ ಇಡೀ ಸಮುದಾಯ ಪಾಲ್ಗೊಳ್ಳುತ್ತದೆ. ವಿಸಿಡಿ ಜಾಗೃತಿಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಸಹಭಾಗಿತ್ವದ ವಿಧಾನಗಳು ಹಾಗೂ ಪ್ರಾತ್ಯಕ್ಷಿಕೆಗಳನ್ನು ಬಳಸುತ್ತದೆ- ಎಡಬ್ಲ್ಯುಡಬ್ಲ್ಯುಗಳಿಗೆ ನೆರವಾಗಲು ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು (ಎಲ್ಆರ್ಪಿ) ಎಂಬ ಸ್ವಯಂಸೇವಕರ ಹೊಸ ಶ್ರೇಣಿಯನ್ನು ಪರಿಚಯಿಸಿದೆ - ಆರೋಗ್ಯ ಮತ್ತು ಪೋಷಣೆಗೆ ಸಂಬಂಧಿಸಿದ ನಾನಾ ವಿಷಯಗಳ ಬಗ್ಗೆ ಮನೆಗಳಲ್ಲಿ ಸಲಹೆ - ಮಕ್ಕಳನ್ನು ನಿಯತವಾಗಿ ತೂಕ ಮಾಡುವುದು.............ಸಮುದಾಯದ ಕ್ರೋಢೀಕರಣ-ಗ್ರಾಮ ಸಂಪರ್ಕ ಅಭಿಯಾನ-ಬೆಳವಣಿಗೆಯ ಪರಾಮರ್ಶನ. ........................2005ರ ಮೌಲ್ಯಾಂಕನದ ಪ್ರಕಾರ, ದುಲಾರ್ ಗ್ರಾಮಗಳು(ಶೇ.84) ದುಲಾರ್ ಅಲ್ಲದ ಗ್ರಾಮಗಳಿಗೆ ಹೋಲಿಸಿದರೆ(ಶೇ.64) ಹೆಚ್ಚು ಗಿಣ್ಣುಹಾಲು(ಕೊಲೋಸ್ಟ್ರಮ್) ಕುಡಿಸುವ ದರ ಹೊಂದಿವೆ- ಆದರೆ, 6ರಿಂದ 12 ತಿಂಗಳ ಮಕ್ಕಳಿಗೆ ಪೂರಕ ಆಹಾರವನ್ನು ಪರಿಚಯಿಸುವ ಮಧ್ಯಸ್ಥ ವಯಸ್ಸಿಗೆ ಸಂಬಂಧಿಸಿದಂತೆ 2 ಗುಂಪುಗಳ ನಡುವೆ ಗಮನಾರ್ಹ ಬದಲಾವಣೆಯೇನೂ ಇರಲಿಲ್ಲ ಮತ್ತು ಅದು 8 ತಿಂಗಳು ಇದ್ದು, ಹೆಚ್ಚು ಇತ್ತು- 8 ರಿಂದ 9 ತಿಂಗಳು: ದುಲಾರ್ ಶೇ.48.3 ಮತ್ತು ದುಲಾರ್ ಅಲ್ಲದ ಶೇ.52.7(ಪಿ=0.641) ಮಕ್ಕಳು ಕಳೆದ 48 ಗಂಟೆಗಳಲ್ಲಿ ಘನ ಆಹಾರ ಪಡೆದುಕೊಂಡಿದ್ದರು ಮತ್ತು ಕ್ರಮವಾಗಿ ಶೇ.48.9 ಮತ್ತು ಶೇ. 51.3 ಮಕ್ಕಳಿಗೆ ಎದೆಹಾಲು ಹೊರತಾಗಿ ಬೇರೆ ಹಾಲು ನೀಡಲಾಗಿತ್ತು- 9 ರಿಂದ 12 ತಿಂಗಳು: ದುಲಾರ್ ಶೇ.73.8 ಮತ್ತು ದುಲಾರ್ ಅಲ್ಲದ ಶೇ.72.5 (ಪಿ=1.0) ಮಕ್ಕಳು ಪೂರಕ ಘನ ಆಹಾರವನ್ನು ಕಳೆದ 24 ಗಂಟೆಗಳಲ್ಲಿ ಪಡೆದಿದ್ದರು ಮತ್ತು ಶೇ. 42 ಹಾಗೂ ಶೇ.48 (ಪಿ=0.140) ಮಕ್ಕಳು ಎದೆಹಾಲಿಗೆ ಹೊರತಾಗಿ ಬೇರೆ ಹಾಲು ಪಡೆದಿದ್ದರು.

ಕನೊ ಪಬೊರ್ ನಾ (ನಾವೇಕೆ ಅದನ್ನು ಮಾಡಲಾಗದು?)-ಪಶ್ಚಿಮ ಬಂಗಾಳದ ಧನಾತ್ಮಕ ಪಥಾಂತರ ಮಾದರಿ.................ಐಸಿಡಿಎಸ್ (ಪಶ್ಚಿಮ ಬಂಗಾಳ)..............-ಪಿಡಿ ವಿಧಾನವು ಸಮುದಾಯದಲ್ಲಿ ಆರೋಗ್ಯವಂತ ಮಕ್ಕಳ ತಾಯಂದಿರ ಉಣಿಸುವಿಕೆ ಆಚರಣೆಗಳನ್ನು ಗುರುತಿಸುತ್ತದೆ ಮತ್ತು ಇವನ್ನು ಸಮುದಾಯ ಆಧಾರಿತ ಮಾರ್ಗದ ಮೂಲಕ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಬೇರೆ ತಾಯಂದಿರಿಗೆ ಸಂವಹಿಸುತ್ತದೆ - ಗ್ರಾಮ ಸಮಿತಿಗಳ ನೇಮಕ ಮತ್ತು ಸಾಮಾಜಿಕ ಗುಂಪುಗಳ ಮತ್ತು ಸಂಸ್ಥೆಗಳ ನಡುವೆ ಸಂವಾದ, ಗ್ರಾಮದಲ್ಲಿ ವನಭೋಜನ, ಜಾತ್ರೆಗಳು ಇತ್ಯಾದಿ ಸಹಭಾಗಿತ್ವದ ಪ್ರಕ್ರಿಯೆಗಳನ್ನು ಒಳಗೊಂಡ ಸಾಂಸ್ಕøತಿಕ ವಿಧಾನಗಳ ಮೂಲಕ ಧನಾತ್ಮಕ ಪಥಾಂತರ ಮಾರ್ಗದ ಸುತ್ತ ಸಮುದಾಯದ ಕ್ರೋಢೀಕರಣ- ಅನುಷ್ಠಾನಗೊಳಿಸುವಿಕೆಯಲ್ಲಿ ಭಾಗಿಯಾಗಿರುವ ಸೇವಾ ಪೂರೈಕೆದಾರರು, ಆಡಳಿತ ವರ್ಗ ಮತ್ತು ಎನ್‌ಜಿಒಗಳ ನಡುವೆ ಸಹಭಾಗಿತ್ವ ಮತ್ತು ಒಮ್ಮುಖತೆ- ಮಕ್ಕಳ ಪಾಲನೆ ಸಿಬ್ಬಂದಿ ಮತ್ತು ಸಮುದಾಯದ ಚಟುವಟಿಕೆಗಳ ನಿಯತ ಪುನರ್ವಿಮರ್ಶೆ ಮೂಲಕ ಸಾಮರ್ಥ್ಯ ನಿರ್ಮಾಣ- ಮಕ್ಕಳ ಪಾಲನೆ ಆಚರಣೆ ಗಳಲ್ಲಿ ಧನಾತ್ಮಕ ವರ್ತನಾ ಬದಲಾವಣೆಗೆ ಒತ್ತು ನೀಡುವ ಪೋಷಕಾಂಶ ಕೊರತೆಯ ಸಮುದಾಯ ಆಧಾರಿತ ನಿರ್ವಹಣೆ. 12 ದಿನ ಸ್ಥಳದಲ್ಲೇ ಉಣಿಸುವಿಕೆ ಮತ್ತು 18 ದಿನ ವರ್ಗ 2, 3 ಮತ್ತು 4ರ ಮಕ್ಕಳಿಗೆ ಮನೆಗೆ ಕೊಂಡೊಯ್ಯುವ ದಿನಸಿ- ಎಳೆಯ ಮಕ್ಕಳಿಗೆ ಉಣಿಸುವಿಕೆ, ಆರೋಗ್ಯಪಾಲನೆ, ನೈರ್ಮಲ್ಯ ಮತ್ತು ಮಾನಸಿಕೋಸಾಮಾಜಿಕ ಪಾಲನಾ ಆಚರಣೆಗಳ ಬಗ್ಗೆ ತಾಯಂದಿರು ಅಥವಾ ಪಾಲಕರಿಗೆ ನೇರ ತರಬೇತಿ. ಆನಂತರ 18 ದಿನ ಮನೆಯಲ್ಲಿ ಪಾಲನಾ ಸಭೆ. ಈ ಆವರ್ತನವು 6ರಿಂದ 9 ತಿಂಗಳು ಮುಂದುವರಿಯಲಿದ್ದು, ಅಷ್ಟರಲ್ಲಿ ತಾಯಂದಿರು/ಪಾಲಕರು ವರ್ತನೆಯಲ್ಲಿ ಬದಲಾವಣೆಗಳನ್ನು

ತೋರಿಸಲು ಆರಂಭಿಸುತ್ತಾರೆ..............................................-ಸಮುದಾಯದ ಕ್ರೋಢೀಕರಣ- ಬೆಳವಣಿಗೆಯ ಪರಾಮರ್ಶನ- ಪೋಷಕಾಂಶ ಸಲಹೆ ಮತ್ತು ಮಕ್ಕಳ ಪಾಲನೆ.....................................- ಮಕ್ಕಳಿಗೆ ಪೂರಕ ಆಹಾರ ನೀಡಿಕೆಯ ಆರಂಭವು ಪಿಡಿ ಪ್ರದೇಶ (ಶೇ.37)ದಲ್ಲಿ ನಿಯಂತ್ರಿತ ಪ್ರದೇಶ (ಶೇ.19)ಕ್ಕೆ ಹೋಲಿಸಿದರೆ, ಹೆಚ್ಚು ಇದ್ದಿತ್ತು- ಸೂತ್ರೀಕರಿಸಿದ ಹಾಲು ಪಡೆಯುತ್ತಿರುವ ಮಕ್ಕಳ ಪ್ರಮಾಣ ಪಿಡಿ ಪ್ರದೇಶ (ಶೇ. 5-9)ದಲ್ಲಿ ನಿಯಂತ್ರತ ಪ್ರದೇಶಕ್ಕೆ ಹೋಲಿಸಿದರೆ, ಹೆಚ್ಚು ಇತ್ತು(ಶೇ.6-13)- ಪಿಡಿ ಪ್ರದೇಶದಲ್ಲಿ ಅರೆಘನ ಅಥವಾ ಘನ ಆಹಾರ ಪಡೆಯುತ್ತಿದ್ದ ಮಕ್ಕಳ ಪ್ರಮಾಣ(ತಲಾ ಶೇ.3)ವು ನಿಯಂತ್ರಿತ ಪ್ರದೇಶಕ್ಕೆ ಹೋಲಿಸಿದರೆ, ಕಡಿಮೆ ಇತ್ತು- 6 ತಿಂಗಳು ವಯಸ್ಸಿನಲ್ಲಿ ನಿಯಂತ್ರಿತ ಪ್ರದೇಶಕ್ಕೆ (ಶೇ. 21) ಹೋಲಿಸಿದರೆ, ಪಿಡಿ ಪ್ರದೇಶದಲ್ಲಿ ಅರೆ ಘನ ಅಥವಾ ಘನ ಪದಾರ್ಥ ಸೇವಿಸುವವರ ಪ್ರಮಾಣ (ಶೇ. 33) ಹೆಚ್ಚು ಇತ್ತು- ಪೂರಕ ಆಹಾರ ಪಡೆಯು ತ್ತಿರುವ 12 ತಿಂಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳಿರುವ ತಾಯಂದಿರಲ್ಲಿ ಚಮಚದಲ್ಲಿ ಆಹಾರ ತಿನ್ನಿಸುತ್ತಿದ್ದವರ ಪ್ರಮಾಣವು ಪಿಡಿ ಪ್ರದೇಶ (ಶೇ.53)ದಲ್ಲಿ ನಿಯಂತ್ರಿತ ಪ್ರದೇಶ (ಶೇ.44)ಕ್ಕಿಂತ ಹೆಚ್ಚು ಇತ್ತು-ಪಿಡಿ ಪ್ರದೇಶದ ಶೇ.44 ಹಾಗೂ ನಿಯಂತ್ರಿತ ಪ್ರದೇಶದ ಶೇ.29 ಮಕ್ಕಳಲ್ಲಿ ಪೂರಕ ಆಹಾರ ಉಣಿಸುವಿಕೆಯು 6ನೇ ತಿಂಗಳನಲ್ಲಿ ಆರಂಭವಾದರೂ, ಅನುಪಾತದಲ್ಲಿ ಗಮನಾರ್ಹ (ಪಿ< 0.01) ವ್ಯತ್ಯಾಸವಿತ್ತು. ಪಿಡಿ ಪ್ರದೇಶದ ಶೇ.41(ಪಿ<0.05)ಕ್ಕೆ ಹೋಲಿಸಿದರೆ, ನಿಯಂತ್ರಿತ ಪ್ರದೇಶದ ಮಕ್ಕಳಲ್ಲಿ ಪ್ರಮಾಣ ಹೆಚ್ಚು ಇತ್ತು. 7 ತಿಂಗಳು ಆಗಿದ್ದಾಗ ಉಣಿಸುವಿಕೆ ಆರಂಭಿಸಲಾಗಿತ್ತು- 7 ರಿಂದ 11 ತಿಂಗಳ ಮಕ್ಕಳಲ್ಲಿ ಪಿಡಿ ಪ್ರದೇಶದ ಶೇ.44 ಹಾಗೂ ನಿಯಂತ್ರಿತ ಪ್ರದೇಶದ ಶೇ.34 ರಷ್ಟು ಮಂದಿ ಮನೆಯಲ್ಲಿ ತಯಾರಿಸಿದ ಘನ ಆಹಾರವನ್ನು ತೆಗೆದುಕೊಳ್ಳುತ್ತಿದ್ದರು- ಪೂರಕ ಆಹಾರ ಪಡೆಯುತ್ತಿದ್ದ 6 ತಿಂಗಳಿನ ಮಕ್ಕಳಲ್ಲಿ ಶೇ.40ರಷ್ಟು ಪಿಡಿ ಪ್ರದೇಶದ ಹಾಗೂ ಶೇ. 43ರಷ್ಟು ನಿಯಂತ್ರಿತ ಪ್ರದೇಶದಲ್ಲಿರುವ ಮಕ್ಕಳು ದಿನಕ್ಕೆ 3 ಬಾರಿ ಹಾಗೂ ಉಳಿದವರು ದಿನಕ್ಕೆ 4 ಬಾರಿ ಆಹಾರ ಸ್ವೀಕರಿಸುತ್ತಿದ್ದರು. ಪಿಡಿ ಪ್ರದೇಶದ(ಹೆಚ್ಚು ಅನುಪಾತ ಪಿ<0.01) ಮಕ್ಕಳು (ಶೇ.58), ನಿಯಂತ್ರಿತ ಪ್ರದೇಶದಲ್ಲಿರುವ ಮಕ್ಕಳಿಗೆ ಹೋಲಿಸಿದರೆ (ಶೇ.29) ದಿನಕ್ಕೆ 4 ಬಾರಿ ಪೂರಕ ಆಹಾರ ಪಡೆಯುತ್ತಿದ್ದರು- ಕೊಡುತ್ತಿರುವ ಪೂರಕ ಆಹಾರದಲ್ಲಿ ಹೆಚ್ಚಿನವು ಮನೆಯಲ್ಲಿ ತಯಾರಿಸಿದ ಘನ ಆಹಾರಗಳು (ಪಿಡಿ ಶೇ.78, ನಿಯಂತ್ರಿತ ಪ್ರದೇಶ ಶೇ.82); ನಂತರದ ಸ್ಥಾನ ಮನೆಯಲ್ಲೇ ತಯಾರಿಸಿದ ಅರೆ ಘನ ಆಹಾರಗಳು (ಪಿಡಿ ಶೇ.16, ನಿಯಂತ್ರಿತ ಪ್ರದೇಶ ಶೇ. 9, ಪಿ<0.01), ಪಿಡಿ ಪ್ರದೇಶದ ಗಮನಾರ್ಹ ಪ್ರಮಾಣದ (ಶೇ.52) ಮಕ್ಕಳು (ಪಿ<0.01) ನಿಯಂತ್ರಿತ ಪ್ರದೇಶದ ಮಕ್ಕಳಿಗೆ ಹೋಲಿಸಿದರೆ (ಶೇ.33) ದಿನವೊಂದಕ್ಕೆ 4-5 ಬಾರಿ ಆಹಾರ ಪಡೆದು ಕೊಂಡರು - ಅನುಕೂಲಕರ ಉಣಿಸುವಿಕೆಯ ಪುನರಾವರ್ತನೆ(ದಿನಕ್ಕೆ 2-3 ಬಾರಿ) (ಪಿ<0.01) ನಿಯಂತ್ರಿತ ಪ್ರದೇಶಕ್ಕೆ ಹೋಲಿಸಿದರೆ (ಶೇ.61) ಪಿಡಿ ಪ್ರದೇಶದಲ್ಲಿ ಗಮನಾರ್ಹವಾಗಿ ಕಡಿಮೆ (ಶೇ.21) ಇತ್ತು- ನಿಯಂತ್ರಿತ ಪ್ರದೇಶಕ್ಕೆ ಹೋಲಿಸಿದರೆ (ಶೇ.13) ಪಿಡಿ ಪ್ರದೇಶದಲ್ಲಿ ಶೇ.50 ರಷ್ಟು ಮಕ್ಕಳನ್ನು ವರ್ಷಕ್ಕೆ 9 ಬಾರಿ ತೂಕ ಹಾಕಲಾಗಿದೆ; ಗಮನಾರ್ಹ ಹೆಚ್ಚು ಅನುಪಾತ (ಪಿ<0.01)

ಸಮುದಾಯಾಧರಿತ ತಾಯಿ ಮತ್ತು ಮಗು ಆರೋಗ್ಯ ಮತ್ತು ಪೋಷಣೆ ಯೋಜನೆ..................ಉತ್ತರಪ್ರದೇಶ ಸರ್ಕಾರದ ಐಸಿಡಿಎಸ್ ಹಾಗೂ ಯುನಿಸೆಫ್ .............- ಪೋಷಕಾಂಶ ಕೊರತೆಗೆ ಕಾರಣವಾದ ಅಂಶಗಳನ್ನು ಕಂಡುಹಿಡಿಯಲು ಮತ್ತು ತಕ್ಷಣ ಗಮನಿಸಲು ಬಹುಕ್ಷೇತ್ರೀಯ (ಆರೋಗ್ಯ, ಐಸಿಡಿಎಸ್, ಪಿಆರ್ಐ) ಸಹಭಾಗಿತ್ವ- ಸಮುದಾಯದಕ್ರೋಢೀಕರಣದ ಉತ್ತೇಜನ ಮತ್ತು ಆಯ್ದ `ಅಪಾಯದಲ್ಲಿರುವ' ಕುಟುಂಬಗಳನ್ನು ತಲುಪಲು ಆಯ್ಕೆಯಾದ ಸಮುದಾಯದ ಕಾರ್ಯಕರ್ತರ ಮೂಲಕ ಗಮನ ಕೇಂದ್ರೀಕರಿಸುವುದು........................- ಸಮುದಾಯದ ಕ್ರೋಢೀಕರಣ ಮತ್ತು ಎಚ್ಎಚ್ ಸಲಹೆ- ಸ್ಥಳೀಯ ಕಾರ್ಯಕರ್ತರನ್ನು (ಬಾಲಪರಿವಾರ ಮಿತ್ರ/ಸ್ನೇಹಿತರನ್ನು) ಒಳಗೊಳ್ಳುವುದು- 3 ಜಿಲ್ಲಾ ಹಾಗೂ 2 ರಾಜ್ಯ ಪೋಷಕಾಂಶ ಕೇಂದ್ರಗಳನ್ನು ಸ್ಥಾಪಿಸುವುದು................-ಜನನದ ಒಂದು ಗಂಟೆಯೊಳಗೆ ಎದೆಹಾಲು ನೀಡುವಿಕೆಯ ಆರಂಭಿಸುವಿಕೆ 5 ಪಟ್ಟು ಹೆಚ್ಚಿತು (ಬುನಾದಿ ರೇಖೆ ಶೇ.4.6 ಮತ್ತು ಅಂತ್ಯರೇಖೆ ಶೇ.21.9)- ಎದೆ ಹಾಲು

ಉಣಿಸುವಿಕೆಗೆ ಮೊದಲು ನವಜಾತ ಶಿಶುಗಳಿಗೆ ಏನನ್ನಾದರೂ ಅಥವಾ ಇನ್ನಿತರ ಆಹಾರ ನೀಡಿರುವುದಾಗಿ ಅಂದಾಜು ಶೇ.78ರಷ್ಟು ತಾಯಂದಿರು ದೃಢಪಡಿಸಿದರು- ಗಿಣ್ಣುಹಾಲು ಕುಡಿಸುವಿಕೆಯ ಪ್ರಾಮುಖ್ಯತೆ ಬಗ್ಗೆ ಶೇ.60ರಷ್ಟು ತಾಯಂದಿರಿಗೆ ಗೊತ್ತಿತ್ತು-ಅಂತ್ಯ ರೇಖೆಯಲ್ಲಿ ಗಿಣ್ಣುಹಾಲು ಕುಡಿಸುವಿಕೆಗೆ ಸಂಬಂಧಿಸಿದಂತೆ ಗಮನಾರ್ಹ ಬದಲಾವಣೆ ಕಂಡುಬಂದಿತು (ಬುನಾದಿ ರೇಖೆ ಶೇ.28, ಅಂತ್ಯರೇಖೆ ಶೇ.53)- 6 ರಿಂದ 9 ತಿಂಗಳಿನ ನಡುವೆ ಅರೆ ಘನ ಆಹಾರವನ್ನು ಪರಿಚಯಿಸಲಾಯಿತು: ಬುನಾದಿರೇಖೆಯಲ್ಲಿ ಶೇ.18 ಹಾಗೂ ಅಂತ್ಯರೇಖೆಯಲ್ಲಿ ಶೇ.63 ರಷ್ಟು ಹೆಚ್ಚಳ ಕಂಡುಬಂತು- ಹೆರಿಗೆಗೆ ನೆರವಾಗುವ ವ್ಯಕ್ತಿ ಕೈಗಳನ್ನು ಸೋಪಿನಿಂದ ತೊಳೆಯುವಿಕೆಯನ್ನು ಶೇ.87ರಷ್ಟು ಪ್ರಕರಣಗಳಲ್ಲಿ ಅಂತ್ಯರೇಖೆಯಲ್ಲಿ ಗಮನಿಸ ಲಾಯಿತು. ಅದೇ ರೀತಿ, ಜನನದ ಮೂರು ದಿನಗಳ ಬಳಿಕ ಮಗುವಿಗೆ ಸ್ನಾನ ಮಾಡಿಸುವ ಪ್ರಕರಣಗಳು ಶೇ.22ರಷ್ಟು ಇದ್ದವು ಮತ್ತು ಹೋಲಿಕೆ ಮಾಡಲು ಬುನಾದಿ ರೇಖೆಯ ಅಂಕಿಅಂಶಗಳು ಲಭ್ಯವಿರಲಿಲ್ಲ- ಹೆಚ್ಚುವರಿ ಪಥ್ಯ ಮತ್ತು ಐಎಫ್‌ಎಗೆ ಸಂಬಂಧಿಸಿದ ಸಲಹೆಗಳ ಮೂಲಗಳು ತೋರಿಸಿದಂತೆ, ಬಿಪಿಎಂಗಳು ಕಾರ್ಯನಿರ್ವಹಿಸುತ್ತಿದ್ದು, ಶೇ.61.9ರಷ್ಟು ಫಲಾನುಭವಿಗಳು ಬಿಪಿಎಂನಿಂದ ಹೆಚ್ಚುವರಿ ಪಥ್ಯದ ಮಾಹಿತಿ ಪಡೆದರು; ಶೇ. 30.1 ಮಂದಿ ಎಎನ್‌ಎಂ ಹಾಗೂ ಶೇ.8 ಮಂದಿ ಎಡಬ್ಲ್ಯುಡಬ್ಲ್ಯು ಮತ್ತು ಇನ್ನಿತರರಿಂದ ಮಾಹಿತಿ ಪಡೆದರು.

- ಲಸಿಕೀಕರಣ ಮತ್ತು ವಿಟಮಿನ್ ಎಯ ಮಾಹಿತಿ ಮೂಲ ಬಿಪಿಎಂ ಶೇ.28.9, ಎಎನ್‌ಎಂ ಶೇ.27.4, ಎಡಬ್ಲ್ಯುಡಬ್ಲ್ಯು ಶೇ.16.7 ಮತ್ತು ಇನ್ನಿತರರು ಶೇ.27. ಇದು ತೋರಿಸುವುದೇನೆಂದರೆ, ಬಿಪಿಎಂ ಸಮುದಾಯದ ಮಾಹಿತಿಯ ಮುಖ್ಯಸಂಪನ್ಮೂಲವಾಗಿ ಹೊರಹೊಮ್ಮಿದೆ.

ಅಂಚಲ್ ಸೆ ಅಂಗನ್ ತಕ್ (ಎಎಸ್‌ಎಟಿ).........ಐಸಿಡಿಎಸ್ ರಾಜಸ್ತಾನ ಸರ್ಕಾರ ಮತ್ತು ಯುನಿಸೆಫ್.................ಜೀವನ ಆವರ್ತ ಮಾರ್ಗ ಈ ಕಾರ್ಯಕ್ರಮದ ಕಾರ್ಯತಂತ್ರದ ಮಹತ್ವದ ಸಂಗತಿ- ವಸತಿಗಳ ಹಂತದಲ್ಲಿ ಆರೋಗ್ಯ ಮತ್ತು ಪೋಷಕಾಂಶ ಕುರಿತು ಸಲಹೆ- ಸಮುದಾಯ, ಸಮೂಹ ಮಾಧ್ಯಮ, ಸಲಹೆ, ಜನಪದ ಮಾಧ್ಯಮದಲ್ಲಿ ಅರಿವು ಮೂಡಿಸಲು ವಕಾಲತು-ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ - ಗ್ರಾಮ ಸಂಪರ್ಕ ಸಮೂಹ (ಜಿಎಸ್‌ಎಸ್), ಸಮೂಹಾಧರಿತ ಕ್ರಿಯೆ, ಪ್ರತಿಯೊಂದು ಗುಂಪಿನಲ್ಲೂ 18-25 ಸದಸ್ಯರು. ಪ್ರತಿಯೊಂದು ಗುಂಪು 15-20 ಮನೆಗಳಿಗೆ ಜವಾಬ್ದಾರವಾಗಿರುತ್ತದೆ- ತಾಯಿ ಮತ್ತು ಮಕ್ಕಳ ಆರೋಗ್ಯ ಹಾಗೂ ಪೋಷಕಾಂಶ (ಎಂಸಿಎಚ್‌ಎನ್) ದಿನಗಳು- ಎಡಬ್ಲ್ಯುಸಿಗಳಲ್ಲಿ ಸಹಯೋಗಿನಿ ಮತ್ತು ಎಡಬ್ಲ್ಯುಸಿಯ ನೆರವಿನಿಂದ ಎಎನ್‌ಎಂ ಹಾಗೂ ಎಡಬ್ಲ್ಯುಡಬ್ಲ್ಯುಗಳ ಅನುವುಗೊಳಿಸುವಿಕೆ ನಡೆಯುತ್ತದೆ.................ಎಚ್‌ಎಚ್ ಹಂತದ ಸಲಹೆ ಮತ್ತು ಕೇಂದ್ರ ಆಧಾರಿತ ಆರೋಗ್ಯ ಮತ್ತು ಪೋಷಕಾಂಶ ಶಿಕ್ಷಣ ಸೇವೆಗಳು..........- ನವಜಾತ ಶಿಶುಗಳಿಗೆ ಗಿಣ್ಣುಹಾಲು ಕುಡಿಸುವ ತಾಯಂದಿರ ಶೇಕಡಾ ವಾರು ಪ್ರಮಾಣದಲ್ಲಿ ಗಮನಾರ್ಹ ವ್ಯತ್ಯಾಸ (ಶೇ.18 ವಿ/ಎಸ್ ಶೇ.46)-ಸಕ್ಕರೆ ನೀಡಿದ ಶೇ.39.6 ಎಎಸ್‌ಎಟಿ ತಾಯಂದಿರಿಗೆ ಹೋಲಿಸಿದರೆ, ಶೇ.51.3ರಷ್ಟು ಎಎಸ್‌ಎಟಿ ಅಲ್ಲದ ತಾಯಂದಿರು ಎದೆಹಾಲು ನೀಡುತ್ತಾರೆ- ಪೂರಕ ಆಹಾರ ನೀಡುವಿಕೆಯ ಸರಾಸರಿ ವಯಸ್ಸು ಎಎಸ್‌ಎಟಿಯಲ್ಲಿ 9.39 ಹಾಗೂ ಎಎಸ್‌ಎಟಿ ಅಲ್ಲದಲ್ಲಿ 9.92.

ನವಜಾತ ಶಿಶುಗಳ ಬೆಳವಣಿಗೆಯನ್ನು ಸುಧಾರಿಸಲು ಸಮುದಾಯ ಆಧಾರಿತ ಪೋಷಕಾಂಶ ಶಿಕ್ಷಣ...................ಬೆಳಕು ಟ್ರಸ್ಟ್ ಮತ್ತು ಯುನಿಸೆಫ್........................- ಸ್ಥಳೀಯವಾಗಿ ಲಭ್ಯವಿರುವ ಆಹಾರದ ಸೂಕ್ತ ಬಳಕೆ, ಸೂಕ್ತ ಉಣಿಸುವಿಕೆ ರೂಢಿ, ಸಲಹೆ ಪಡೆದು ಪೂರಕ ಉಣಿಸುವಿಕೆಯಲ್ಲಿ ಆಹಾರ ವೈವಿಧ್ಯವನ್ನು ನಿಧಾನವಾಗಿ ಹೆಚ್ಚಿಸುವುದು........ಪೋಷಕಾಂಶ ಶಿಕ್ಷಣ.................- 7 ರಿಂದ 11 ತಿಂಗಳ ನಡುವೆ ಶೇ.41 ಮತ್ತು ಎನ್‌ಐ ಶೇ.29 (ಪಿ ಮೌಲ್ಯ 0.15) ಮಂದಿ ಪ್ರಾಣಿಜನ್ಯ ಹಾಲು ಬಳಸುತ್ತಿರಲಿಲ್ಲ- ಶೇ.85 ಮತ್ತು ಶೇ.72 (ಪಿ ಮೌಲ್ಯ 0.06) ತಾಯಂದಿರು ಹಾಲುಣಿಸಲು ಬಾಟಲಿ

ಬಳಸುತ್ತಿರಲಿಲ್ಲ (7 ರಿಂದ 11 ತಿಂಗಳು)- ಶೇ.32 ಮತ್ತು ಎನ್ಐ ಶೇ. 26(ಪಿ ಮೌಲ್ಯ 0.45) ಘನ ಆಹಾರವನ್ನು ಸೇವಿಸುತ್ತಿರಲಿಲ್ಲ- ಶೇ. 33 ಮತ್ತು ಎನ್ಐ ಶೇ. 55 (ಪಿ<0.001, ಹೆಚ್ಚು ಗಮನಾರ್ಹ) ರಷ್ಟು 7 ರಿಂದ 11 ತಿಂಗಳ ಮಕ್ಕಳಿಗೆ ಬಾಳೆಹಣ್ಣು ತಿನ್ನಿಸಲಾಗುತ್ತಿತ್ತು- ಶೇ.78 ಮತ್ತು ಎನ್ಐ ಶೇ.55 (ಪಿ<0.001, ಹೆಚ್ಚು ಗಮನಾರ್ಹ) ಮಕ್ಕಳಿಗೆ 24 ಗಂಟೆಗಳಲ್ಲಿ ಕನಿಷ್ಠ 4 ಬಾರಿ ಎದೆಹಾಲು ಸೇರಿದಂತೆ ಉಣಿಸಲಾಗುತ್ತಿತ್ತು (7 ರಿಂದ 11 ತಿಂಗಳು)- 11 ತಿಂಗಳಲ್ಲಿ ಐಎ ಶೇ.42 ಮತ್ತು ಎನ್ಐ ಶೇ.19 (ಪಿ ಮೌಲ್ಯ 0.01, ಗಮನಾರ್ಹ) ಐದು ರೀತಿಯ ಆಹಾರ ಪದಾರ್ಥ (ಡೇರಿ, ಧಾನ್ಯಗಳು, ಪ್ರೋಟೀನ್, ಹಣ್ಣುಗಳು, ತರಕಾರಿ, ಎಣ್ಣೆ/ಕೊಬ್ಬು, ಸಕ್ಕರೆ ಹಾಗೂ ತಿನಿಸು) ನೀಡಲಾಗುತ್ತಿತ್ತು.

ಬಾಲ ಪೋಷಣ್ ಸ್ವಾಸ್ಥ್ಯ ಮಾ, ಮಧ್ಯಪ್ರದೇಶ, ಉತ್ತರಪ್ರದೇಶ ಹಾಗೂ ಜಾರ್ಖಂಡ್................ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್, ಆರೋಗ್ಯ ಇಲಾಖೆ, ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ (ಆರ್ಸಿಎಚ್) ಮತ್ತು ಐಸಿಡಿಎಸ್ .................- ಸುಸ್ಥಿರ ವಿಶಾಲ ವ್ಯಾಪ್ತಿಯ ವಿಟಮಿನ್ ಎ ಪೂರಕ ನೀಡಿಕೆ (ವಿಎಎಸ್)- ತಾಯಂದಿನಲ್ಲಿ ರಕ್ತಹೀನತೆ ಕಡಿಮೆಗೊಳಿಸುವಿಕೆ- 6ರಿಂದ 23 ತಿಂಗಳ ಮಕ್ಕಳಲ್ಲಿ ರಕ್ತಹೀನತೆ ಕಡಿಮೆಗೊಳಿಸುವಿಕೆ............ ವಿಟಮಿನ್ ಎ ನೀಡಿಕೆಯನ್ನು ವಿಸ್ತರಿಸಲು ಸಹಭಾಗಿತ್ವದ ನಿರ್ಮಾಣ....................-ಜಾರ್ಖಂಡದಲ್ಲಿ ಮಕ್ಕಳ ಆರೋಗ್ಯ ಮತ್ತು ಪೋಷಕಾಂಶ ಮಾಸಿಕ ಕಾರ್ಯ ತಂತ್ರ -ರಾಜ್ಯ ಸರ್ಕಾರ ವಿಟಮಿನ್ ಎಯನ್ನು ಸಮಯಕ್ಕೆ ಸರಿಯಾಗಿ ಪೂರೈಸುವುದನ್ನು ಖಾತ್ರಿಗೊಳಿಸಲು ವಕಾಲತು - ವರ್ಷಕ್ಕೆ ಎರಡು ಬಾರಿ ವರದಿ ನೀಡುವುದನ್ನು ಹಾಗೂ ಸಮಯಕ್ಕೆ ಸರಿಯಾಗಿ ವರದಿ ನೀಡುವಿಕೆಯನ್ನು ಪರಿಚಯಿಸುವ ಮೂಲಕ ಎಚ್ಐಎಂಎಸ್ನ್ನು ಬಲಪಡಿಸುವುದು.

ಮಹಾರಾಷ್ಟ್ರ ಪೋಷಕಾಂಶ ಮಿಷನ್................ಮಹಾರಾಷ್ಟ್ರ ರಾಜ್ಯ...........-ತರಬೇತಿ ಮತ್ತು ಉತ್ತೇಜನ- ಸಂಯೋಜನೆ- ಪರಾಮರ್ಶನ ಮತ್ತು ಮೌಲ್ಯಮಾಪನ- ಸಮುದಾಯದ ಒಳಗೊಳ್ಳುವಿಕೆ ಮತ್ತು ಪಾಲ್ಗೊಳ್ಳುವಿಕೆ................. ರಾಜ್ಯವು ಮಕ್ಕಳಲ್ಲಿ ಪೋಷಕಾಂಶ ಕೊರತೆ ಹಾಗೂ ಸಾವನ್ನು ಗಮನಾರ್ಹವಾಗಿ ಕಡಿತಗೊಳಿಸುವ ಪ್ರಯತ್ನದಲ್ಲಿ ಸಂಯೋಜಿತ ಹಾಗೂ ಸಮಗ್ರ ವಿಧಾನವನ್ನು ರೂಪುಗೊಳಿಸಿದೆ.... .........- 1,000 ಜನನದಲ್ಲಿ 38, 2005-26ರಲ್ಲಿ (ಎನ್ಎಫ್ಎಚ್ಎಸ್ 3) - ಎಂಎಂಆರ್ 1.49/1,000 ಜನನಕ್ಕೆ - 2007ರಲ್ಲಿ ಸಿಬಿಆರ್ 18.1(ಎಸ್ಆರ್ಎಸ್ 2008) -ಟಿಎಫ್ಆರ್ 2005ರಲ್ಲಿ 2.2(ಎಸ್ಆರ್ಎಸ್,2006)

ತಾಯಂದಿರ ಸಮಿತಿ................ಆಂಧ್ರಪ್ರದೇಶ...........ತಾಯಂದಿರ ಸಮಿತಿಯನ್ನು ರಚಿಸಿ, ಅವರಿಗೆ ಬಹುಕ್ರಿಯಾ ಜವಾಬ್ದಾರಿಯನ್ನು ವಹಿಸಲಾಗುತ್ತದೆ..............ತಾಯಂದಿರ ಸಮಿತಿಗಳು ಗ್ರಾಮದಲ್ಲಿ ಬದಲಾವಣೆಯ ಸಹಯೋಗಿಗಳಂತೆ ಕಾರ್ಯನಿರ್ವಹಿಸುತ್ತಾರೆ.....................- ಶೇ.40 ರಷ್ಟು ತಾಯಂದಿರ ಸಮಿತಿಗಳನ್ನು ಐಸಿಡಿಎಸ್ನಲ್ಲಿ ಔಪಚಾರಿಕವಾಗಿ ಒಳಗೊಳ್ಳಲಾಗಿದೆ- ಗ್ರಾಮೀಣ ಪ್ರದೇಶ (ಮಹಿಳೆಯರು ಶೇ.25 ಮತ್ತು ಬಾಲಕಿಯರು ಶೇ.15) ಮತ್ತು ನಗರ ಪ್ರದೇಶಗಳಿಗೆ (ಶೇ.20ರಷ್ಟು ಬಾಲಕಿಯರು) ಹೋಲಿಸಿದರೆ, ಆದಿವಾಸಿ ಪ್ರದೇಶಗಳಲ್ಲಿ ಸಮಿತಿ ಬಗ್ಗೆ ಹೆಚ್ಚು ಅರಿವು ಇದೆ (ಮಹಿಳೆಯರು ಶೇ.49 ಮತ್ತು ಹರೆಯದ ಬಾಲಕಿಯರು ಶೇ.34)

.................................................................................

ಅನುಬಂಧ ಫಿ॥

ರಾಷ್ಟ್ರೀಯ ಮಟ್ಟದಲ್ಲಿ ಸಾಂಸ್ಥಿಕ ವ್ಯವಸ್ಥೆಗಳನ್ನು ಸ್ಥಾಪಿಸಲು ರೂಪರೇಷೆ

ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯಗಳಿಗೆ ಕಾರ್ಯನೀತಿ ಬೆಂಬಲ ಹಾಗೂ ಮಾರ್ಗದರ್ಶನ ನೀಡಲು ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಾನ್ಯ ರಾಜ್ಯ ಸಚಿವ (ಉಸ್ತುವಾರಿ) ಮತ್ತು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಮಿಷನ್ ಚಾಲನಾ ಗುಂಪು (ಎನ್‌ಎಂಎಸ್‌ಜಿ) ಹಾಗೂ ಸಬಲೀಕರಣ ಕಾರ್ಯಕ್ರಮ ಸಮಿತಿ (ಇಪಿಸಿ) ಎನ್ನುವ ಸಬಲೀಕೃತ ಸಂರಚನೆಗಳನ್ನು ರಚಿಸಲಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಸಾಂಸ್ಥಿಕ ವ್ಯವಸ್ಥೆ ಕೆಳಕಂಡಂತೆ ಇರಲಿದೆ;

1. ರಾಷ್ಟ್ರೀಯ ಮಿಷನ್ ಚಾಲನಾ ಗುಂಪು (ಎನ್‌ಎಂಎಸ್‌ಜಿ) ಐಸಿಡಿಎಸ್‌ನ ಅನುಷ್ಠಾನಕ್ಕೆ ದಿಗ್ದರ್ಶನ, ಕಾರ್ಯನೀತಿ ಮತ್ತು ಮಾರ್ಗದರ್ಶನ ನೀಡುವ ಉನ್ನತ ಸಂಸ್ಥೆಯಾಗಿರಲಿದೆ ಮತ್ತು ಅದು ಕೆಳಕಂಡ ಸಂಯೋಜನೆಯನ್ನು ಹೊಂದಿರಲಿದೆ.

1. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವ (ಉಸ್ತುವಾರಿ)..........ಅಧ್ಯಕ್ಷರು

2. ಸದಸ್ಯ, ಡಬ್ಲ್ಯುಸಿಡಿ, ಯೋಜನಾ ಆಯೋಗ..........................ಉಪಾಧ್ಯಕ್ಷರು

3. ಐದು ಪ್ರಾಂತ್ಯಗಳ ಸಚಿವರು, ಆವರ್ತ ಮಾದರಿಯಲ್ಲಿ,................ಸದಸ್ಯರು

4. ಕಾರ್ಯದರ್ಶಿ, ಡಬ್ಲ್ಯುಸಿಡಿ ಮಂತ್ರಾಲಯ........................... ಸದಸ್ಯರು

5. ಕಾರ್ಯದರ್ಶಿ, ವೆಚ್ಚಗಳು, ಹಣಕಾಸು ಮಂತ್ರಾಲಯ............ ಸದಸ್ಯರು

6. ಜಂಟಿ ಕಾರ್ಯದರ್ಶಿ ಮತ್ತು ಎಫ್‌ಎ, ಡಬ್ಲ್ಯುಸಿಡಿ ಮಂತ್ರಾಲಯ................. ಸದಸ್ಯರು

7. ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು ಪೂರೈಕೆ, ಕೃಷಿ ಮತ್ತು ಆಹಾರ ಸಚಿವಾಲಯ/ಮಂತ್ರಾಲಯಗಳ ಕಾರ್ಯದರ್ಶಿಗಳು.............ಸದಸ್ಯರು

8. ಐದು ಪ್ರಾಂತ್ಯಗಳ ಮುಖ್ಯ ಕಾರ್ಯದರ್ಶಿಗಳು (ಆದರೆ, ಬೇರೆ ರಾಜ್ಯಗಳವರು),ಆವರ್ತ ಮಾದರಿಯಲ್ಲಿ.............ಸದಸ್ಯರು

9. ಸಂಬಂಧಿಸಿದ ಕ್ಷೇತ್ರಗಳ ತಜ್ಞರು (5 ಮಂದಿ)- ಆಯ್ಕೆ ಮಾಡಿಕೊಳ್ಳುವಿಕೆ.................... ಸದಸ್ಯರು

10. ಮಿಷನ್ ನಿರ್ದೇಶಕ - ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕ............ಸದಸ್ಯರು

ರಾಷ್ಟ್ರೀಯ ಮಿಷನ್ ಚಾಲನಾ ಗುಂಪು ಆರು ತಿಂಗಳಿಗೊಮ್ಮೆ ಸಭೆ ಸೇರಲಿದೆ ಮತ್ತು ಕೆಳಕಂಡ ಕಾರ್ಯಗಳಿಗೆ ಜವಾಬ್ದಾರವಾಗಿರಲಿದೆ;

* ಐಸಿಡಿಎಸ್‌ನ ಯೋಜನೆಗಳ ಕಾರ್ಯನೀತಿ ಮತ್ತು ಕಾರ್ಯಕ್ರಮಗಳಿಗೆ ಅನುಮತಿ ನೀಡುವುದು

* ನಾನಾ ಇಲಾಖೆಗಳ ನಡುವೆ ಕಾರ್ಯನೀತಿ ಮತ್ತು ಆಡಳಿತದ ಪರಿಣಾಮಕಾರಿ ಒಮ್ಮುಖತೆಯನ್ನು ಖಾತ್ರಿಗೊಳಿಸುವುದು

* ಐಸಿಡಿಎಸ್ ಮಿಷನ್‌ನ ಉನ್ನತ ಕಾರ್ಯಕ್ರಮ ಸಮಿತಿಗೆ ಕಾರ್ಯನೀತಿಗಳು ಮತ್ತು ಕಾರ್ಯಕ್ರಮದ ಅನುಷ್ಠಾನದ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಸಲಹೆ ನೀಡುವುದು

* ಫಲಿತಾಂಶದ ಪುನರ್ವಿಮರ್ಶೆ ಮತ್ತು ಕಾರ್ಯನೀತಿಯ ಸಂರಚನೆಯಲ್ಲಿ ಅಗತ್ಯವಿರುವ ಯಾವುದೇ ಮಧ್ಯಂತರ ಬದಲಾವಣೆಗಳಿದ್ದಲ್ಲಿ ಸಲಹೆ ನೀಡುವುದು

* ಪ್ರಸ್ತಾವಗಳು ಮತ್ತು ಕಾರ್ಯಕ್ರಮಗಳಿಗೆ ಸಂಬಂಧಿಸಿದ ಇಪಿಸಿಯ ಶಿಫಾರಸುಗಳ ಮೌಲ್ಯ ನಿರ್ಧರಿಸುವುದು ಮತ್ತು ವಿಸ್ತೃತ ಕ್ರಮಬದ್ಧ ಚೌಕಟ್ಟನ್ನು ಆಧರಿಸಿ, ಅವನ್ನು ಅಂಗೀಕರಿಸುವುದು

* ಐಸಿಡಿಎಸ್ ಮಿಷನ್ ಅಡಿ ಚಟುವಟಿಕೆಗಳನ್ನು ನಡೆಸಲು ಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ಹಾಗು ತಜ್ಞರನ್ನು ನೇಮಿಸಿಕೊಳ್ಳಲು ಇಪಿಸಿಯ ಶಿಫಾರಸುಗಳ ಮೌಲ್ಯ ನಿರ್ಧಾರ ಹಾಗೂ ಅಂಗೀಕಾರ

* ಐಸಿಡಿಎಸ್ ಮಿಷನ್‌ನ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕಾಲಕ್ಕೆ ಅನುಗುಣವಾಗಿ ಕಾರ್ಯಾಚರಣೆಯ ವಿಧಾನದಲ್ಲಿ ಅಗತ್ಯವಿರುವ ಬದಲಾವಣೆಗಳನ್ನು ಮಾಡುವುದು

* ಯೋಜನೆಯ ಗುರಿಯಾಗಿರುವ ಗುಂಪನ್ನು ಬಾಧಿಸುವ ಕಾರ್ಯನೀತಿಯ ಯಾವುದೇ ಪರಿಣಾಮ

* ಯೋಜನೆಯ ಗುರಿಯಾಗಿರುವ ಗುಂಪನ್ನು ಬಾಧಿಸುವ ಕಾರ್ಯನೀತಿಗೆ ಸಂಬಂಧಿಸಿದ ಯಾವುದೇ ಇನ್ನಿತರ ವಿಷಯ

2. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿ ನೇತೃತ್ವದ ಉನ್ನತ ಕಾರ್ಯಕ್ರಮ ಸಮಿತಿ (ಇಪಿಸಿ)ಯು ಐಸಿಡಿಎಸ್‌ನ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದ ಯೋಜನೆ, ಮೇಲುಸ್ತುವಾರಿ ಮತ್ತು ಪರಾಮರ್ಶನದ ಅತ್ಯುನ್ನತ ತಾಂತ್ರಿಕ ಅಂಗವಾಗಿರಲಿದೆ. ಇಪಿಸಿಯ ಸಂಯೋಜನೆ ಕೆಳಕಂಡಂತೆ ಇರಲಿದೆ;

1. ಕಾರ್ಯದರ್ಶಿ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ.............ಅಧ್ಯಕ್ಷರು

2. ಹಿರಿಯ ಸಲಹೆಗಾರ, ಯೋಜನಾ ಆಯೋಗ.................. ಸದಸ್ಯರು

3. ಜಂಟಿ ಕಾರ್ಯದರ್ಶಿ, ವೆಚ್ಚ ಇಲಾಖೆ, ವಿತ್ತ ಸಚಿವಾಲಯ ........................ಸದಸ್ಯರು

4. ಜಂಟಿ ಕಾರ್ಯದರ್ಶಿ ಮತ್ತು ಎಫ್‌ಎ, ಡಬ್ಲ್ಯುಸಿಡಿ ಮಂತ್ರಾಲಯ............ಸದಸ್ಯರು

5. ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಮಾನವ ಸಂಪನ್ಮೂಲ ಅಭಿವೃದ್ಧಿ, ಕುಡಿಯುವ ನೀರು ಮತ್ತು ನೈರ್ಮಲ್ಯ, ಪಂಚಾಯತ್ ರಾಜ್, ಆಹಾರ, ಗ್ರಾಮೀಣಾಭಿವೃದ್ಧಿ ಇತ್ಯಾದಿ ಇಲಾಖೆ/ಮಂತ್ರಾಲಯಗಳ ಪ್ರತಿನಿಧಿಗಳು....................................ಸದಸ್ಯರು

6. ನಿರ್ದೇಶಕ, ಎನ್‌ಐಪಿಸಿಸಿಡಿ.................ಸದಸ್ಯರು

7. ಜಂಟಿ ಕಾರ್ಯದರ್ಶಿ(ಹಂಗಾಮಿ), ಸಬ್ಲಾ, ಎಂಡಬ್ಲ್ಯುಸಿಡಿ..........ಸದಸ್ಯರು

8. ಆವರ್ತ ಮಾದರಿಯಲ್ಲಿ ಐದು ವಲಯಗಳ ರಾಜ್ಯ ಕಾರ್ಯದರ್ಶಿಗಳು..............ಸದಸ್ಯರು

9. ನಿರ್ದೇಶಕ, ಎನ್ಐಎನ್....................ಸದಸ್ಯರು

10. ಮಿಷನ್ ನಿರ್ದೇಶಕ.................ಸದಸ್ಯರು

ಇಪಿಸಿಯ ಅಧ್ಯಕ್ಷರು ಸಮಿತಿಯ ಕಾರ್ಯದಲ್ಲಿ ನೆರವಾಗಲು ಇನ್ನಿತರ ಸದಸ್ಯರನ್ನು ಸೇರ್ಪಡೆಗೊಳಿಸಿಕೊಳ್ಳಬಹುದು ಅಥವಾ ಅಗತ್ಯವಿದೆ ಎನಿಸಿದಲ್ಲಿ ಇಪಿಸಿ ಸಭೆಗಳಿಗೆ ವಿಶೇಷ ಆಹ್ವಾನಿತರಾಗಿ ಆಹ್ವಾನಿಸಬಹುದು. ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಎಸ್ಎಸ್ಎ ಹಾಗೂ ಎನ್ಎಚ್ಆರ್ಎಂಗಳಿಗೆ ಈಗಾಗಲೇ ನೀಡಲಾದ ಅಧಿಕಾರಗಳನ್ನು ಇಪಿಸಿಗೂ ನೀಡಲಾಗುತ್ತದೆ. ಇಪಿಸಿಯು ಮೂರು ತಿಂಗಳಿಗೊಮ್ಮೆ ಸಭೆ ಸೇರಲಿದೆ ಮತ್ತು ಕೆಳಕಂಡ ಕಾರ್ಯಗಳಿಗೆ ಜವಾಬ್ದಾರವಾಗಿರಲಿದೆ;

(i) ಮಿಷನ್‌ನ ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳ ಯೋಜನೆ ಮತ್ತು ಪರಾಮರ್ಶನದ ಮೂಲಕ ನಿಗದಿಪಡಿಸಿದ ಗುರಿ ಹಾಗೂ ಉದ್ದೇಶದ ಸಾಧನೆ

(ii) ನಿಯಮಗಳು ಹಾಗೂ ಕಾರ್ಯವಿಧಾನಗಳನ್ನು ರೂಪಿಸುವುದು ಹಾಗೂ ಅವುಗಳನ್ನು ಎನ್ಎಂಎಸ್‌ಜಿ ಎದುರು ಅಂಗೀಕಾರಕ್ಕೆ ಮಂಡಿಸುವುದು

(iii) ರಾಜ್ಯ/ಜಿಲ್ಲಾ ಐಸಿಡಿಎಸ್ ಕಾರ್ಯಕ್ರಮಗಳನ್ನು ಯೋಜಿಸಲು, ಅನುಷ್ಠಾನಗೊಳಿಸಲು ಹಾಗೂ ಪರಾಮರ್ಶಿಸಲು ರಾಜ್ಯಗಳ ಐಸಿಡಿಎಸ್ ಮಿಷನ್‌ಗಳಿಗೆ ಅನುವು ಮಾಡಿಕೊಡುವುದು

(iv) ಎಪಿಐಪಿಗಳಿಗೆ ಅನುಮತಿ ನೀಡುವುದು ಹಾಗೂ ಅಂಗೀಕೃತ ಯೋಜನೆಗಳು/ವಸ್ತುಗಳ ವೆಚ್ಚವನ್ನು ಐಸಿಡಿಎಸ್ ಮಿಷನ್/ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಒಟ್ಟಾರೆ ಆಯವ್ಯಯದೊಳಗೆ ಮಾರ್ಪಡಿಸುವುದು

(v) ಐಸಿಡಿಎಸ್ ಮಿಷನ್‌ನ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಇಂಥ ಮಾರ್ಪಾಡುಗಳನ್ನು ಕಾರ್ಯಾಚರಣೆ ವಿಧಾನಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ, ಕಾಲಕ್ಕೆ ಅನುಗುಣವಾಗಿ ಮಾಡುವುದು

(vi) ಹಿಂದುಳಿದ ರಾಜ್ಯಗಳ ವಿಶ್ಲೇಷಣೆ ಮತ್ತು ಬೆಂಬಲಕ್ರಿಯೆಯೊಂದಿಗೆ ಪ್ರಮುಖ ಫಲಶ್ರುತಿಗಳ ಪ್ರಗತಿಯ ಜಾಡುಹಿಡಿಯುವುದು

(vii) ಕಾರ್ಯಕ್ರಮಗಳು, ಸಿಬ್ಬಂದಿ ಮತ್ತು ಆಯವ್ಯಯ ಇತ್ಯಾದಿಗೆ ಸಂಬಂಧಿಸಿದ ಶಿಫಾರಸುಗಳನ್ನು ಮಿಷನ್‌ನ ಚಾಲನಾ ಗುಂಪಿನ ಮಂಜೂರಿಗೆ ಕಳಿಸುವುದು

(viii) ಐಸಿಡಿಎಸ್ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಕಾರ್ಯನಿರ್ವಾಹಕ ಮತ್ತು ಆರ್ಥಿಕ ಅಧಿಕಾರವನ್ನು ಕಾರ್ಯಗತಗೊಳಿಸುವುದು

(ix) ವಿಸ್ತೃತ ಅಂಗೀಕೃತ ಚೌಕಟ್ಟಿನಡಿ ಯೋಜನೆಗಳಿಗೆ ಅನುಮತಿ ನೀಡುವುದು

(x) ರಾಜ್ಯ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿ ಶಿಫಾರಸು ಮಾಡಿದ ಹೊಸ ಯೋಜನೆಗಳು/ಐಡಬ್ಲ್ಯುಸಿಗಳಿಗೆ ಅನುಮತಿ ನೀಡುವುದು

(xi) ಎಂಐಎಸ್ ಹಾಗೂ ಮೌಲ್ಯಮಾಪನ ಸೇರಿದಂತೆ ತರಬೇತಿ, ವಕಾಲತು ಮತ್ತು ಐಇಸಿ, ಪರಾಮರ್ಶನದ ಪ್ರಸ್ತಾವಗಳಿಗೆ ಅನುಮತಿ ನೀಡುವುದು

(xii) ಪರಿಣಾಮಕಾರಿ ವಿಕೇಂದ್ರೀಕೃತ ಕಾರ್ಯನಿರ್ವಹಣೆಗೆ ರಾಜ್ಯ ಇಪಿಸಿಗಳನ್ನು ಬೆಂಬಲಿಸುವುದು ಮತ್ತು ಮಾರ್ಗದರ್ಶನ ನೀಡುವುದು

(xiii) ರಾಷ್ಟ್ರೀಯ ಮಿಷನ್‌ನ ಚಾಲನಾ ಸಮಿತಿ ವಹಿಸಿಕೊಟ್ಟ ಯಾವುದೇ ಸಂಬಂಧಿಸಿದ ಕೆಲಸಗಳು

3. ರಾಷ್ಟ್ರೀಯ ಐಸಿಡಿಎಸ್ ಮಿಷನ್ ನಿರ್ದೇಶನಾಲಯ: ಎನ್‌ಎಂಎಸ್‌ಜಿ/ಇಪಿಸಿ ನಿಗದಿಪಡಿಸಿದ ಕೆಲಸಗಳನ್ನು ನಿರ್ವಹಿಸಲು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು ರಾಷ್ಟ್ರೀಯ ಐಸಿಡಿಎಸ್ ಮಿಷನ್ ನಿರ್ದೇಶನಾಲಯವನ್ನು ಸ್ಥಾಪಿಸುತ್ತದೆ. ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ(ಐಸಿಡಿಎಸ್ ಉಸ್ತುವಾರಿ) ಶ್ರೇಣಿಯ ಮಿಷನ್ ನಿರ್ದೇಶಕರೊಬ್ಬರು ಐಸಿಡಿಎಸ್ ಮಿಷನ್‌ನ ದೈನಂದಿನ ಆಡಳಿತ ನಿರ್ವಹಣೆಯ ಹೊಣೆ ಹೊತ್ತಿರುತ್ತಾರೆ. ಐಸಿಡಿಎಸ್‌ನ ಗುರಿಗಳನ್ನು ಸಾಧಿಸಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ಎನ್‌ಎಂಎಸ್‌ಜಿ ಅನುಮತಿ ನೀಡಿದ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರಗಳನ್ನು ರಾಷ್ಟ್ರೀಯ ಮಿಷನ್ ನಿರ್ದೇಶಕರಿಗೆ ಕೊಡಲಾಗಿರುತ್ತದೆ. ಐಸಿಡಿಎಸ್ ಮಿಷನ್ ನಿರ್ದೇಶನಾಲಯದ ಒಟ್ಟಾರೆ ಸಂರಚನೆ ಕೆಳಕಂಡಂತೆ ಇರಲಿದೆ:

ಮಿಷನ್ ರಾಷ್ಟ್ರೀಯ ನಿರ್ದೇಶಕ

.....................ಆಹಾರ ಮತ್ತು ಪೋಷಕಾಂಶ ಮಂಡಳಿ

....................ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರ

ನಿರ್ದೇಶಕ/ಡಿಎಸ್(ಯೋಜನೆ, ಕಾರ್ಯನೀತಿ, ಸಂಯೋಜನೆ ಮತ್ತು ಸಾಗಣೆ)..................ನಿರ್ದೇಶಕ/ಡಿಎಸ್

ಕಾರ್ಯಕ್ರಮ ನಿರ್ವಾಹಕ (ಪೋಷಕಾಂಶ)................................ಕಾರ್ಯಕ್ರಮ ನಿರ್ವಾಹಕ (ಆರೋಗ್ಯ ಸೇವೆಗಳು)

ಅಧೀನ ಕಾರ್ಯದರ್ಶಿ(ಯೋಜನೆ, ಕಾರ್ಯನೀತಿ ಮತ್ತು ಸಾಗಣೆ)........... ವಿಭಾಗೀಯ ಅಧಿಕಾರಿ (1), ಸಹಾಯಕರು (2), ಎಲ್‌ಡಿಸಿ (1)

ವಿಭಾಗಿಯ ಅಧಿಕಾರಿ(ಕಾರ್ಯನೀತಿ ಮತ್ತು ಯೋಜನೆ), ಸಹಾಯಕರು(2), ಎಲ್‌ಡಿಸಿ (1).......ಡೇಟಾ ಎಂಟ್ರಿ ಆಪರೇಟರ್

ನಿರ್ದೇಶಕ/ಡಿಎಸ್(ಹಣಕಾಸು,ವೆಚ್ಚ)................ಕಾರ್ಯಕ್ರಮ ಸಹಾಯಕ...............ಕಾರ್ಯಕ್ರಮ ಸಹಾಯಕ.................ಡೇಟಾ ಎಂಟ್ರಿ ಆಪರೇಟರ್

ಕಾರ್ಯಕ್ರಮ ನಿರ್ವಾಹಕ(ಹಣಕಾಸು ಮತ್ತು ವೆಚ್ಚ)...........ಅಧೀನ ಕಾರ್ಯದರ್ಶಿ (ಹಣಕಾಸು ಮತ್ತು ವೆಚ್ಚ).................ಡೇಟಾ ಎಂಟ್ರಿ ಆಪರೇಟರ್

ಕಾರ್ಯಕ್ರಮ ಸಹಾಯಕ...........ವಿಭಾಗೀಯ ಅಧಿಕಾರಿ (1), ಸಹಾಯಕರು (2), ಎಲ್‌ಡಿಸಿ (1)

ನಿರ್ದೇಶಕ/ಡಿಎಸ್ (ತರಬೇತಿ ಐಇಸಿ, ಎಂ ಮತ್ತು ಇ/ಸಂಶೋಧನೆ)......ಅಧೀನ ಕಾರ್ಯದರ್ಶಿ(ತರಬೇತಿ ಐಇಸಿ)....ಕಾರ್ಯಕ್ರಮ ನಿರ್ವಾಹಕ(ಎಂಇ/ಸಂಶೋಧನೆ)

ಕಾರ್ಯಕ್ರಮ ನಿರ್ವಾಹಕ (ಇಸಿಸಿಇ).......ವಿಭಾಗೀಯ ಅಧಿಕಾರಿ (1),ಕಾರ್ಯಕ್ರಮ ಸಹಾಯಕ(1), ಎಲ್‌ಡಿಸಿ(1)

ಕಾರ್ಯಕ್ರಮ ಸಹಾಯಕ

ಕಾರ್ಯಕ್ರಮ ಸಹಾಯಕ........ಡೇಟಾ ಎಂಟ್ರಿ ಆಪರೇಟರ್

ಜಂಟಿ ಕಾರ್ಯದರ್ಶಿ(ಮಕ್ಕಳ ಅಭಿವೃದ್ಧಿ), ಎಂಡಬ್ಲ್ಯುಸಿಡಿ-ಹಾಲಿ ಹುದ್ದೆ........ಹಾಲಿ ಹುದ್ದೆ........ಹೊಸ ಹುದ್ದೆ; ಗುತ್ತಿಗೆ ಆಧಾರ

ರಾಷ್ಟ್ರೀಯ ಮಿಷನ್ ನಿರ್ದೇಶನಾಲಯದ ನಿರ್ದಿಷ್ಟ ಕಾರ್ಯಭಾರಗಳು ಹಾಗೂ ಜವಾಬ್ದಾರಿಗಳು ಏನೆಂದರೆ.,

(i) ಮಿಷನ್‌ಗಳ ಚಟುವಟಿಕೆಗಳನ್ನು ಯೋಜಿಸುವಿಕೆ, ಅನುಷ್ಠಾನ ಮತ್ತು ಪರಾಮರ್ಶನವನ್ನು ಕಾರ್ಯಗತಗೊಳಿಸುವುದು

(ii) ಐಸಿಡಿಎಸ್ ಕಾರ್ಯಕ್ರಮಗಳ ಯೋಜನೆ ಹಾಗೂ ಪರಿಣಾಮಕಾರಿ ಅನುಷ್ಠಾನ

(iii) ಪ್ರಮುಖ ಫಲಿತಾಂಶಗಳ ಪ್ರಗತಿಯ ಜಾಡು ಹಿಡಿಯುವುದು- ಪ್ರಗತಿಯಲ್ಲಿ ಹಿಂದೆ ಉಳಿದ ರಾಜ್ಯಗಳು/ಹೆಚ್ಚು ಹೊರೆಯಿರುವ ಜಿಲ್ಲೆಗಳು ಮತ್ತು ಬೆಂಬಲ ಕ್ರಿಯೆಗಳ ವಿಶ್ಲೇಷಣೆ

(iv) ರಾಷ್ಟ್ರೀಯ ಮಿಷನ್ ಚಾಲನಾ ಗುಂಪು/ಉನ್ನತ ಕಾರ್ಯಕ್ರಮ ಸಮಿತಿ ಅಂಗೀಕರಿಸಿದ ನಿಯೋಜಿತ ಆಡಳಿತಾತ್ಮಕ ಮತ್ತು ಹಣಕಾಸು ಅಧಿಕಾರಗಳನ್ನು ಚಲಾಯಿಸುವುದು

(v) ಮೌಲ್ಯಮಾಪನ, ಕಾರ್ಯಾಚರಣೆ ಸಂಶೋಧನೆ ಮತ್ತು ಸ್ವತಂತ್ರ ಅಧ್ಯಯನದ ಮೂಲಕ ಪ್ರಗತಿಯ ಪರಿಶೀಲನೆಗೆ ಅನುವು ಮಾಡಿಕೊಡುವುದು ಮತ್ತು ಅಗತ್ಯವಿದ್ದಲ್ಲಿ, ಮಧ್ಯಂತರ ತಿದ್ದುಪಡಿಯನ್ನು ಖಾತ್ರಿಗೊಳಿಸುವುದು

(vi) ಎನ್‌ಆರ್‌ಎಚ್‌ಎಂ, ಎಸ್‌ಎಸ್‌ಎ, ಟಿಎಸ್‌ಸಿ, ನರೇಗಾ ಇತ್ಯಾದಿ ಪ್ರಮುಖ ವಿಭಾಗ ಸಚಿವಾಲಯಗಳು/ಕಾರ್ಯಕ್ರಮಗಳೊಟ್ಟಿಗೆ ಪರಿಣಾಮಕಾರಿ ಜೋಡಣೆ ಮತ್ತು ಕಾರ್ಯನಿರ್ವಹಿಸಬಲ್ಲ ಸಹಯೋಗವನ್ನು ಖಾತ್ರಿಗೊಳಿಸುವ ಮೂಲಕ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಹಾಗೂ ಪೂರೈಕೆಗಳು, ಮೂಲಸೌಲಭ್ಯ ಒಳಸುರಿಗಳು ಹಾಗೂ ಇನ್ನಿತರ ಸಂಪನ್ಮೂಲಗಳ ನಿರ್ವಹಣೆ

(vii) ಐಸಿಡಿಎಸ್ ಮಿಷನ್ ಅಡಿ ರಾಜ್ಯದ ಯೋಜನೆಗಳ ಮೌಲ್ಯಮಾಪನ ಮತ್ತು ಪ್ರಕ್ರಿಯೆಗಳಿಗೆ ಎನ್‌ಎಂಎಸ್‌ಜಿ/ಇಪಿಸಿಯಿಂದ ಅನುಮತಿ ಪಡೆಯವುದು

(viii) ಕಾರ್ಯಕ್ರಮಗಳನ್ನು ಯೋಜಿಸುವ ಮತ್ತು ಅನುಷ್ಠಾನಗೊಳಿಸುವ ಸಾಮರ್ಥ್ಯವನ್ನು ಉತ್ತಮಪಡಿಸಲು ಹಾಗೂ ರಾಜ್ಯ ಮಿಷನ್ ನಿರ್ದೇಶನಾಲಯಗಳಿಗೆ ಸಲಹಾ ಬೆಂಬಲ ನೀಡಲು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಆಡಳಿತದೊಟ್ಟಿಗೆ ಕಾರ್ಯನಿರ್ವಹಿಸುವುದು

(ix) ಐಸಿಡಿಎಸ್ ಮಿಷನ್‌ನ ಉದ್ದೇಶಿತ ಗುರಿಯನ್ನು ಸಾಧಿಸಲು ವಕಾಲತು ಮತ್ತು ಸಾರ್ವಜನಿಕ ಶಿಕ್ಷಣ(ಐಇಸಿ)ವನ್ನು ಖಾತ್ರಿಗೊಳಿಸುವುದು

(x) ಸಂಬಂಧಿಸಿದ ಜಂಟಿ ಕಾರ್ಯದರ್ಶಿ ಮೂಲಕ ಎಫ್‌ಎನ್‌ಬಿ ಮತ್ತು ಎನ್‌ಐಪಿಸಿಸಿಡಿ ಆಡಳಿತದ ಕಾರ್ಯಗಳ ಮೇಲ್ವಿಚಾರಣೆ ಮತ್ತು ಪುನರ್ವಿಮರ್ಶೆ

(xi) ದೇಶದೆಲ್ಲೆಡೆ ಐಸಿಡಿಎಸ್‌ನ ಪರಿಣಾಮಕಾರಿ ಪರಾಮರ್ಶನ ಮತ್ತು ಮೇಲ್ವಿಚಾರಣೆಗಾಗಿ ಸಾಧನಗಳು ಮತ್ತು ಮಾನದಂಡಗಳನ್ನು ಅಭಿವೃದ್ಧಿಪಡಿಸುವುದು

(xii) ಕಾಲಕಾಲಕ್ಕೆ ಸರಿಯಾಗಿ ಕಾರ್ಯಕ್ರಮದ ಪರಾಮರ್ಶನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

(xiii) ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರ, ಎನ್‌ಐಪಿಪಿಸಿಸಿಡಿ ಮತ್ತು ಅದರ ಪ್ರಾದೇಶಿಕ ಕೇಂದ್ರಗಳು, ಎಫ್‌ಎನ್‌ಬಿ ಹಾಗೂ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಹಂತದ ಇನ್ನಿತರ ಸಂಬಂಧಿಸಿದ ತರಬೇತಿ ಸಂಸ್ಥೆಗಳ ಪ್ರಾದೇಶಿಕ ಕೇಂದ್ರದ ನೆರವಿನಿಂದ ಸಿಬ್ಬಂದಿಗಳ ತರಬೇತಿ ಹಾಗೂ ಸಾಮರ್ಥ್ಯ ನಿರ್ಮಾಣಕ್ಕೆ ಅನುವು ಮಾಡಿಕೊಡುವುದು

(xiv) ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರದ ಕಾರ್ಯ ನಿರ್ವಹಣೆಯ ಸಾಂಸ್ಥಿಕ ಸಾಮರ್ಥ್ಯ ಅಭಿವೃದ್ಧಿ, ಮೇಲ್ವಿಚಾರಣೆ ಮತ್ತು ಪುನರ್ವಿಮರ್ಶೆಯನ್ನು ಬಲಗೊಳಿಸುವುದು

(xv) ಬಗೆಹರಿಸಬೇಕಾದ ಯಾವುದೇ ಬಾಕಿ ವಿಷಯಗಳಿದ್ದರೆ ಅಥವಾ ಎನ್‌ಎಂಎಸ್‌ಜಿಗೆ ಪರಿಶೀಲನೆಗೆ ಕಳಿಸಬೇಕಾದ ಸಂಗತಿಗಳ ಬಗ್ಗೆ ಇಪಿಸಿಗೆ ನಿಯತವಾಗಿ ಹಿಮ್ಮಾಹಿತಿ ನೀಡುವುದು

(xvi) ಎನ್‌ಎಂಎಸ್‌ಜಿ/ಇಪಿಸಿ/ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ಹೇಳುವ ಇದ್ಯಾವುದೇ ಕೆಲಸಗಳು

4. ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರ: ಎನ್‌ಐಪಿಸಿಸಿಡಿಯಲ್ಲಿ ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಲಿದ್ದು, ಅದು ಐಸಿಡಿಎಸ್ ಕಾರ್ಯಕ್ರಮದ ಅನುಷ್ಠಾನ, ಮೇಲ್ವಿಚಾ ರಣೆ ಮತ್ತು ಪರಾಮರ್ಶನಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ ರಾಷ್ಟ್ರ ಮತ್ತು ರಾಜ್ಯ ಐಸಿಡಿಎಸ್ ಮಿಷನ್ ನಿರ್ದೇಶನಾಲಯಗಳಿಗೆ ತಾಂತ್ರಿಕ ನೆರವು, ಪ್ರಸಾರ ಮತ್ತು ಕಾರ್ಯನಿರ್ವಹಣೆಯ ಉನ್ನತ ಕೇಂದ್ರದಂತೆ ಕಾರ್ಯ ನಿರ್ವಹಿಸಲಿದೆ. ಸಂಪನ್ಮೂಲ ಕೇಂದ್ರವು ಮಿಷನ್ ನಿರ್ದೇಶನಾಲಯಕ್ಕೆ ಅಗತ್ಯ ತಾಂತ್ರಿಕ ನೆರವು ಪೂರೈಸಲಿದೆ. ಪೋಷಕಾಂಶ (ಐವೈಸಿಎಫ್, ಸೂಕ್ಷ್ಮ ಪೋಷಕಾಂಶಗಳು), ಮಾನಸಿಕೋಸಾಮಾ ಜಿಕ ಪಾಲನೆ ಮತ್ತು ಆರಂಭಿಕ ಕಲಿಕೆ, ಸಂವಹನ (ಸಾಮಾಜಿಕ ಕ್ರೋಢೀಕರಣ ಮತ್ತು ವಕಾಲತು) ಮತ್ತು ಪೋಷಕಾಂಶ ಸಮೀಕ್ಷೆ, ಪರಾಮರ್ಶನ ಹಾಗೂ ಮೌಲ್ಯಮಾಪನ ಮತ್ತಿತರ ಕ್ಷೇತ್ರಗಳ ತಜ್ಞರಲ್ಲದೆ, ಐವೈಸಿಎಫ್, ಸೂಕ್ಷ್ಮಪೋಷಕಾಂಶಗಳು ಹಾಗೂ ಪಾಲನೆ ಮತ್ತು ಉಣಿಸುವಿಕೆ ವಿಧಾನಗಳು, ಆರಂಭಿಕ ಕಲಿಕೆ/ಶಾಲಾಪೂರ್ವ ಶಿಕ್ಷಣ, ಪೋಷಕಾಂಶ ಸರ್ವೇಕ್ಷಣೆ, ಪರಾಮರ್ಶನ ಮತ್ತು ಮೌಲ್ಯಮಾಪನ ಇತ್ಯಾದಿಗಳ ಬದಲಾವಣೆಗೆ ಸಂವಹನ ಕುರಿತ 4 ರಿಂದ 5 ವಿಷಯಸಂಬಂಧಿ ಗುಂಪುಗಳು ಇದಕ್ಕೆ ನೆರವು ನೀಡಲಿವೆ. ವಿವಿಧ ವೃತ್ತಿಪರರು, ಸಂಸ್ಥೆಗಳು, ಸ್ವಯಂಸೇವಾ ಸಂಘಟನೆಗಳಿರುವ ಈ ಗುಂಪುಗಳು ಕಾರ್ಯತಂತ್ರ ಗಳು ಮತ್ತು ಸಾಮರ್ಥ್ಯ ನಿರ್ಮಾಣ ಚಟುವಟಿಕೆಗಳನ್ನು ಅಭಿವೃದ್ಧಿಗೊಳಿಸಲು ನೆರವಾಗಲಿವೆ.

ಕಾರ್ಯಕ್ರಮದ ಯೋಜಿಸುವಿಕೆ ಹಾಗೂ ಅನುಷ್ಠಾನಕ್ಕೆ ಅಗತ್ಯ ತಾಂತ್ರಿಕ ಬೆಂಬಲ ಕೋರಿ ರಾಜ್ಯಗಳು ಮತ್ತು ಜಿಲ್ಲೆಗಳಿಂದ ಬರುವ ಮನವಿಗಳಿಗೆ ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರ ತನ್ನ ಸಂಪನ್ಮೂಲಗಳಿಂದ ಹಾಗೂ ಇನ್ನಿತರ ರಾಷ್ಟ್ರೀಯ ಸಂಸ್ಥೆಗಳೊಂದಿಗೆ ಜೋಡಿಸುವ ಮೂಲಕ

ಪ್ರತಿಕ್ರಿಯಿಸುತ್ತದೆ. ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅನುವು ಮಾಡಿಕೊಡುವುದಲ್ಲದೆ, ಈ ಸಂಸ್ಥೆಗಳಲ್ಲಿ ಕೆಲಸದ ಗುಣಮಟ್ಟ ಹಾಗೂ ಅಗತ್ಯತೆಯನ್ನು ಉತ್ತಮಗೊಳಿಸುತ್ತದೆ. ರಾಷ್ಟ್ರೀಯ ಸಂಸ್ಥೆಗಳು ರಾಜ್ಯ, ಜಿಲ್ಲಾ ಸಂಪನ್ಮೂಲ ಸಂಸ್ಥೆಗಳ ಕಾರ್ಯಜಾಲವನ್ನು ಸೃಷ್ಟಿಸುವ ಮೂಲಕ ಸ್ಥಳೀಯ ಸಾಮರ್ಥ್ಯ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುತ್ತ ವೆ.

ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರದ ಸಂರಚನೆ

ರಾಷ್ಟ್ರೀಯ ಐಸಿಡಿಎಸ್ ಮಿಷನ್ ಸಂಪನ್ಮೂಲ ಕೇಂದ್ರ

ಕಾರ್ಯನೀತಿ ಮತ್ತು ಯೋಜನೆ............ಸಲಹೆಗಾರ-ಕಾರ್ಯನೀತಿ ಮತ್ತು ಯೋಜನೆ............ಪೋಷಕಾಂಶ.........ಇಸಿಸಿಇ..............ಆರೋಗ್ಯ........ವಕಾಲತು ಮತ್ತು ಸಾರ್ವಜನಿಕ ಶಿಕ್ಷಣ............ಪರಾಮರ್ಶನ ಮತ್ತು ಮೌಲ್ಯಮಾಪನ...........ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ..............ಕುಂದುಕೊರತೆ ನಿವಾರಣೆ

ಹಿರಿಯ ಸಲಹೆಗಾರ ಎಪಿಐಪಿ/ಸಲಹೆಗಾರ ಎಪಿಐಪಿ.........ಸಲಹೆಗಾರ ಐವೈಸಿಎಫ್/ಹಿರಿಯ ಸಲಹೆಗಾರ/ಸಲಹೆಗಾರ............ಸಲಹೆಗಾರ ಸೂಕ್ಷ್ಮಪೋಷಕಾಂಶ/ಹಿರಿಯ ಸಲಹೆಗಾರ/ಸಲಹೆಗಾರ........ಸಲಹೆಗಾರ ಇಸಿಸಿಇ/ಹಿರಿಯ ಸಲಹೆಗಾರ/ಸಲಹೆಗಾರ(2)...........ಸಲಹೆಗಾರ ಆರೋಗ್ಯ ಸೇವೆಗಳು/ಹಿರಿಯ ಸಲಹೆಗಾರ/ಸಲಹೆಗಾರರು(2)..........ಸಲಹೆಗಾರ ವಕಾಲತು ಮತ್ತು ಸಾರ್ವಜನಿಕ ಶಿಕ್ಷಣ/ಹಿರಿಯ ಸಲಹೆಗಾರ/ಸಲಹೆಗಾರ........... ಸಲಹೆಗಾರ(ಎಂ ಅಂಡ್ ಇ)/ಹಿರಿಯ ಸಲಹೆಗಾರ (ಎಂಐಎಸ್)/ಡೇಟಾ ವಿಶ್ಲೇಷಕ/ಡೇಟಾ ಎಂಟ್ರಿ ಆಪರೇಟರ್(3).....ಸಲಹೆಗಾರ (ತರಬೇತಿ)/ ಹಿರಿಯ ಸಲಹೆಗಾರ/ಸಲಹೆಗಾರ.....ಹಿರಿಯ ಸಲಹೆಗಾರ(ಜಿಆರ್)/ಅಂಕಿಅಂಶ ವಿಶ್ಲೇಷಕ/ಡೇಟಾ ಎಂಟ್ರಿ ಆಪರೇಟರ್

.................................................................................

ಅನುಬಂಧ ಫಿ।ಗಿ

ರಾಜ್ಯ ಮಟ್ಟದಲ್ಲಿ ಸಾಂಸ್ಥಿಕ ವ್ಯವಸ್ಥೆಗಳನ್ನು ಸ್ಥಾಪಿಸಲು ರೂಪರೇಷೆ

ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಪೋಷಕಾಂಶ ಕೊರತೆಯನ್ನು ಕಡಿಮೆ ಮಾಡುವುದು ಮತ್ತು ಆರು ವರ್ಷ ಕೆಳಗಿನ ಎಲ್ಲ ಮಕ್ಕಳಲ್ಲಿ ಆರಂಭಿಕ ಬೆಳವಣಿಗೆ ಹಾಗೂ ಕಲಿಕಾ ಫಲಿತಾಂಶವನ್ನು ಹೆಚ್ಚಿಸಲು ಅಗತ್ಯವಾದ ಸುಧಾರಣೆಯನ್ನು ಸಾಧಿಸಲು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳನ್ನು ಸಬಲಗೊಳಿಸುವ ಪ್ರಯತ್ನವೇ ಐಸಿಡಿಎಸ್ ಮಿಷನ್. ಐಡಿಎಸ್ ಮಿಷನ್ ರಾಜ್ಯಗಳ ನಾಯಕತ್ವದ ಪಾತ್ರವನ್ನು ಗುರುತಿಸಿ, ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ಆಡಳಿತಕ್ಕೆ ಸ್ಥಳೀಯ ಅಗತ್ಯಗಳು ಹಾಗೂ ಸಾಮಾಜಿಕೋ-ಸಾಂಸ್ಕøತಿಕ ವ್ಯತ್ಯಾಸಗಳನ್ನು ಒಳಗೊಳ್ಳಲು ಅಗತ್ಯವಾದ ಹೊಂದಿಕೊಳ್ಳುವಿಕೆಯನ್ನು ನೀಡುತ್ತದೆ. ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಕೇಂದ್ರವು ಪ್ರತಿಯೊಂದು ರಾಜ್ಯದೊಂದಿಗೆ ಮಾಡಿಕೊಂಡ ಒಪ್ಪಂದ (ಎಂಒಯು)ದಲ್ಲಿರುವ ಪರಸ್ಪರ ಒಪ್ಪಿತ ಉದ್ದೇಶಗಳು/ಮೈಲುಗಲ್ಲುಗಳಿಗೆ ಬದ್ಧವಾಗಿರಬೇಕಾಗುತ್ತದೆ.

ಐಸಿಡಿಎಸ್ ಮಿಷನ್ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೆ ಎಳೆಯ ಮಕ್ಕಳ ವೈವಿಧ್ಯಮಯ ಪೋಷಕಾಂಶ ಅಗತ್ಯಗಳನ್ನು ಹಾಗು ಮಕ್ಕಳ ಬೆಳವಣಿಗೆ ಅಗತ್ಯಗಳನ್ನು ಪೂರೈಸಲು ಹೆಚ್ಚುವರಿ ಸಂಪನ್ಮೂಲವನ್ನು ಒದಗಿಸಲಿದೆ ಮತ್ತು ಸ್ಥಳೀಯ ವಿಷಯಗಳನ್ನು ನಿರ್ವಹಿಸಲು ಅನ್ವೇಷಣಾತ್ಮಕ

ಮಾರ್ಗಗಳನ್ನು ಕೈಗೆತ್ತಿಕೊಳ್ಳಲು ಒತ್ತಾಯಿಸುತ್ತದೆ. ಮಿಷನ್‌ನ ಅವಧಿಯಲ್ಲಿ ಪ್ರತಿ ವರ್ಷ ಮಕ್ಕಳ ಪ್ರಗತಿಗೆ ನಿಗದಿಪಡಿಸಿದ ಶೇಖಡಾವಾರು ವೆಚ್ಚವನ್ನು ವ್ಯಯಿಸಲು ರಾಜ್ಯಗಳು ಕ್ರಮ ತೆಗೆದುಕೊಳ್ಳಬೇಕಿದೆ.

ಪ್ರತಿಯಾಗಿ ರಾಜ್ಯಗಳು ಯೋಜನೆ ಮತ್ತು ಅನುಷ್ಠಾನ ವ್ಯವಸ್ಥೆಯನ್ನು ವಿಕೇಂದ್ರೀಕರಣಗೊಳಿಸಬೇಕಿದ್ದು, ಮಕ್ಕಳ ಅಭಿವೃದ್ಧಿ ಕ್ಷೇತ್ರದ ಮಧ್ಯಸ್ಥಿಕೆಗೆ ಅಗತ್ಯವನ್ನು ಆಧರಿಸಿದ ಮತ್ತು ಸಮುದಾಯದ ಯಜಮಾನತ್ವದ ಕ್ರಿಯಾಯೋಜನೆಗಳು ಆಧಾರ ಆಗಿರುವುದನ್ನು ಖಾತ್ರಿಪಡಿಸಬೇಕಿದೆ. ಐಸಿಡಿಎಸ್ ಮಿಷನ್ ಅಡಿ ಆಲೋಚಿಸಿದ ವಿಕೇಂದ್ರೀಕರಣವನ್ನು ದೃಷ್ಟಿಯಲ್ಲಿರಿಸಿಕೊಂಡು, ರಾಜ್ಯಗಳು ಮಕ್ಕಳ ಪಾಲನೆ ಸೇವೆಗಳ ತಲುಪುವಿಕೆ, ವ್ಯಾಪ್ತಿ, ಗುಣಮಟ್ಟ, ಮೇಲ್ವಿಚಾರಣೆ ಮತ್ತು ಪರಾಮರ್ಶನವನ್ನು ಉತ್ತಮಗೊಳಿಸಲು ಪಿಎಂಗಳು ಮತ್ತು ಯುಎಲ್‌ಬಿಗಳಿಗೆ ಅಗತ್ಯವಿರುವಷ್ಟು ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರಗಳನ್ನು ಕೊಡಬೇಕಾಗುತ್ತದೆ.

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಹಂತದಲ್ಲಿ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಐಸಿಡಿಎಸ್‌ನ ಪರಿಣಾಮಕಾರಿ ಅನುಷ್ಠಾನಕ್ಕೆ ಮಾರ್ಗದರ್ಶನ ಹಾಗೂ ಕಾರ್ಯನೀತಿಯ ಬೆಂಬಲ ನೀಡಲು ರಾಜ್ಯ ಮಕ್ಕಳ ಅಭಿವೃದ್ಧಿ ಸೊಸೈಟಿಗಳನ್ನು ಸ್ಥಾಪಿಸಬೇಕಾಗುತ್ತದೆ. ರಾಜ್ಯ ಮಿಷನ್ ಚಾಲನಾ ಸಮಿತಿ(ಎಸ್‌ಎಂಎಸ್‌ಜಿ) ಮತ್ತು ರಾಜ್ಯ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿ (ಎಸ್‌ಇಪಿಸಿ) ಎಂಬ ಉನ್ನತಾಧಿಕಾರ ಸಂರಚನೆಯನ್ನು ರಾಜ್ಯ/ಕೇಂದ್ರಾಡಳಿತ ಪ್ರದೇಶದ ಡಬ್ಲ್ಯುಸಿಡಿ ಇಲಾಖೆಯ ಉಸ್ತುವಾರಿ ಸಚಿವ ಮತ್ತು ರಾಜ್ಯ/ಕೇಂದ್ರಾಡಳಿತ ಪ್ರದೇಶದ ಡಬ್ಲ್ಯುಸಿಡಿ ಇಲಾಖೆಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ರಚಿಸಬೇಕಾಗುತ್ತದೆ.

1. ರಾಜ್ಯ ಮಿಷನ್ ಚಾಲನಾ ಗುಂಪು (ಎಸ್‌ಎಂಎಸ್‌ಜಿ): ಮುಖ್ಯಮಂತ್ರಿ ನೇತೃತ್ವದ ರಾಜ್ಯ ಮಿಷನ್ ಚಾಲನಾ ಗುಂಪು ಸಂಬಂಧಿಸಿದ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಐಸಿಡಿಎಸ್‌ನ ಅನುಷ್ಠಾನಕ್ಕೆ ಮಾರ್ಗದರ್ಶನ, ಕಾರ್ಯನೀತಿ ಹಾಗೂ ದಿಗ್ದರ್ಶನ ನೀಡುವ ಉನ್ನತಾಧಿಕಾರ ಅಂಗವಾಗಿರಲಿದೆ ಮತ್ತು ಅದರ ಸಂಯೋಜನೆ ಕೆಳಕಂಡಂತೆ ಇರಲಿದೆ;

(i) ಮುಖ್ಯಮಂತ್ರಿ - ಅಧ್ಯಕ್ಷರು

(ii) ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವ - ಉಪಾಧ್ಯಕ್ಷ

(iii) ಮುಖ್ಯ ಕಾರ್ಯದರ್ಶಿ - ಕಾರ್ಯನಿರ್ವಾಹಕ ಉಪಾಧ್ಯಕ್ಷ

(iv) ಸಂಬಂಧಿಸಿದ ರಾಜ್ಯ ಇಲಾಖೆಗಳ ಕಾರ್ಯದರ್ಶಿಗಳು - ಸದಸ್ಯರು

(v) ರಾಷ್ಟ್ರೀಯ ಐಡಿಎಸ್ ಮಿಷನ್ ನಿರ್ದೇಶನಾಲಯದ ಪ್ರತಿನಿಧಿ - ಸದಸ್ಯ

(vi) ಆಹಾರ ಮತ್ತು ಪೋಷಕಾಂಶ ಮಂಡಳಿಯ ಪ್ರತಿನಿಧಿ - ಸದಸ್ಯ

(vii) ಎನ್‌ಐಪಿಸಿಸಿಡಿಯ ಪ್ರಾಂತೀಯ ನಿರ್ದೇಶಕ - ಸದಸ್ಯ

(viii) 2/3 ಜಿಲ್ಲೆಗಳ ಜಿಲ್ಲಾ ನ್ಯಾಯಾಧೀಶ/ಉಪಜಿಲ್ಲಾಧಿಕಾರಿ(ಆವರ್ತ ಮಾದರಿಯಲ್ಲಿ)- ಸದಸ್ಯರು

(ix) ಅಧಿಕಾರಿಗಳಲ್ಲದ 4-6 ತಜ್ಞರು, ತಾಯಂದಿರ ಸಮಿತಿ ಮತ್ತು ಸ್ವಯಂಸೇವಾ ಸಂಘಟನೆಗಳ ಸದಸ್ಯರು- ಸದಸ್ಯರು

(x) ಐಸಿಡಿಎಸ್‌ನ ಪ್ರಧಾನ ಕಾರ್ಯದರ್ಶಿ/ಹಂಗಾಮಿ ಕಾರ್ಯದರ್ಶಿ - ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕ

ರಾಜ್ಯ ಮಿಷನ್ ಚಾಲನಾ ಗುಂಪು ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರಲಿದೆ ಮತ್ತು ಕೆಳಕಂಡ ಕಾರ್ಯಗಳಿಗೆ ಜವಾಬ್ದಾರವಾಗಿರಲಿದೆ:

(i) ಪ್ರಸ್ತಾವಗಳು ಹಾಗೂ ಯೋಜನೆಗಳ ಮೌಲ್ಯಮಾಪನ ಮತ್ತು ಅವುಗಳಿಗೆ ವಿಸ್ತೃತ ಪ್ರಮಾಣಾತ್ಮಕ ಅಂಗೀಕೃತ ಚೌಕಟ್ಟಿನಡಿ ಅನುಮತಿ ನೀಡುವುದು

(ii) ರಾಜ್ಯ ಐಸಿಡಿಎಸ್ ಮಿಷನ್‌ನ ವಾರ್ಷಿಕ ಕ್ರಿಯಾಯೋಜನೆಗಳನ್ನು ಪರಿಗಣಿಸಿ, ಅಂಗೀಕರಿಸುವುದು

(iii) ವಾರ್ಷಿಕ ಕ್ರಿಯಾಯೋಜನೆಯ ಅನುಷ್ಠಾನ ಮತ್ತು ಮಕ್ಕಳಿಗೆ ಸಂಬಂಧಿಸಿದ ಫಲಿತಾಂಶಗಳ ಮೌಲ್ಯಮಾಪನ ಹಾಗೂ ಅಂಗೀಕರಿಸುವಿಕೆ

(iv) ರಾಜ್ಯ ಮಿಷನ್‌ನ ಕಾರ್ಯತಂತ್ರದ ವಿನ್ಯಾಸ ಚೌಕಟ್ಟಿನಲ್ಲಿ ಅಗತ್ಯವಿರುವ ಯಾವುದೇ ಮಧ್ಯಂತರ ತಿದ್ದಿಕೊಳ್ಳುವಿಕೆಯನ್ನು ಸೂಚಿಸುವುದು

(v) ವಿವಿಧ ಇಲಾಖೆಗಳ ನಡುವೆ ಕಾರ್ಯನೀತಿ ಮತ್ತು ಆಡಳಿತದ ಪರಿಣಾಮಕಾರಿ ಏಕತ್ರಗೊಳಿಸುವಿಕೆಯನ್ನು ಖಾತ್ರಿಗೊಳಿಸುವುದು

(vi) ರಾಜ್ಯ ಐಸಿಡಿಎಸ್ ಮಿಷನ್‌ನ ನಿರ್ಧಾರಗಳ ತರುವಾಯದ ಕ್ರಿಯೆಗಳ ಪುನರ್ವಿಮರ್ಶೆ

(vii) ರಾಜ್ಯ ಐಸಿಡಿಎಸ್ ಮಿಷನ್‌ನ ಸಾಂಸ್ಥಿಕ ನಿರ್ವಹಣೆಗೆ ಸಂಬಂಧಿಸಿದ ಸುಧಾರಣೆ ಪ್ರಸ್ತಾವಗಳನ್ನು ಅಂಗೀಕರಿಸುವುದು

(viii) ರಾಜ್ಯ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿಗೆ ಕಾರ್ಯನೀತಿಗಳ ಬಗ್ಗೆ ಸಲಹೆ ನೀಡುವುದು ಹಾಗೂ ಕಾರ್ಯಕ್ರಮ ಅನುಷ್ಠಾನದ ಮೇಲ್ವಿಚಾರಣೆ

(ix) ಪ್ರಸ್ತಾವಗಳು ಮತ್ತು ಯೋಜನೆಗಳಿಗೆ ಸಂಬಂಧಿಸಿದ ಶಿಫಾರಸುಗಳ ಮೌಲ್ಯಮಾಪನ ಮತ್ತು ವಿಸ್ತೃತ ಕ್ರಮಬದ್ಧ ಚೌಕಟ್ಟನ್ನು ಆಧರಿಸಿ ಅನುಮತಿ ನೀಡುವುದು

(x) ಐಸಿಡಿಎಸ್ ಮಿಷನ್ ಅಡಿಯ ಚಟುವಟಿಕೆಗಳನ್ನು ನಡೆಸಲು ಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ಹಾಗೂ ತಜ್ಞರ ನೇಮಕಕ್ಕೆ ಸಂಬಂಧಿಸಿದಂತೆ ಎಸ್‌ಇಪಿಸಿಯ ಶಿಫಾರಸುಗಳ ಮೌಲ್ಯಮಾಪನ ಮತ್ತು ಅನುಮತಿ

(xi) ಯೋಜನೆಯ ನಿರ್ದೇಶಿತ ಗುಂಪಿನ ಪೋಷಕಾಂಶ ಸ್ಥಿತಿ ಮೇಲೆ ಪರಿಣಾಮ ಬೀರುವ ಕಾರ್ಯನೀತಿಗೆ ಸಂಬಂಧಿಸಿದ ಯಾವುದೇ ವಿಷಯ

2. ರಾಜ್ಯ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿ (ಎಸ್‌ಇಪಿಸಿ): ರಾಜ್ಯದ ಮುಖ್ಯ ಕಾರ್ಯದರ್ಶಿ ನೇತೃತ್ವದ ರಾಜ್ಯ ಉನ್ನತಾಧಿಕಾರ ಕಾರ್ಯಕ್ರಮ ಸಮಿತಿಯು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಹಂತದಲ್ಲಿ ಐಸಿಡಿಎಸ್‌ನ ಪರಿಣಾಮಕಾರಿ ಅನುಷ್ಠಾನವನ್ನು ಯೋಜಿಸುವ, ಮೇಲ್ವಿಚಾರಣೆ ಹಾಗೂ ಪರಾಮರ್ಶನ ನಡೆಸುವ ಉನ್ನತ ತಾಂತ್ರಿಕ ಸಮಿತಿ ಆಗಿರಲಿದೆ. ಎಸ್‌ಇಪಿಸಿಯ ಸಂಯೋಜನೆ ಕೆಳಕಂಡಂತೆ ಇರಲಿದೆ;

(i) ರಾಜ್ಯದ ಮುಖ್ಯ ಕಾರ್ಯದರ್ಶಿ - ಅಧ್ಯಕ್ಷ

(ii) ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಡಬ್ಲ್ಯುಸಿಡಿ - ಉಪಾಧ್ಯಕ್ಷ

(iii) ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕತೆ ಮತ್ತು ಯೋಜನೆ - ಉಪಾಧ್ಯಕ್ಷ

(iv) ಸಂಬಂಧಪಟ್ಟ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು - ಸದಸ್ಯರು

(v) ರಾಜ್ಯ ಮಿಷನ್ ನಿರ್ದೇಶಕ - ಸಂಚಾಲಕ

ಎಸ್‌ಇಪಿಸಿಯ ಅಧ್ಯಕ್ಷರು ಸಮಿತಿಯ ಕಾರ್ಯನಿರ್ವಹಣೆಯಲ್ಲಿ ನೆರವಾಗಲು ಇನ್ನಿತರ ಸದಸ್ಯರನ್ನು ಸೇರಿಸಿಕೊಳ್ಳಬಹುದು ಇಲ್ಲವೇ ಅಗತ್ಯವೆನಿಸಿದ ಅಂಥ ವ್ಯಕ್ತಿಗಳನ್ನು ವಿಶೇಷ ಅಹ್ವಾನಿತರಾಗಿ ಸಭೆಗೆ ಆಹ್ವಾನಿಸಬಹುದು. ಎಸ್‌ಇಪಿಸಿ ತಿಂಗಳಿಗೊಮ್ಮೆ ಸಭೆ ಸೇರಲಿದೆ ಮತ್ತು ಕೆಳಕಂಡ ಕಾರ್ಯಗಳಿಗೆ ಜವಾಬ್ದಾರ ಆಗಿರಲಿದೆ;

(i) ಜಿಲ್ಲಾ ಕ್ರಿಯಾಯೋಜನೆಗಳು ಮತ್ತು ಅನುಷ್ಠಾನಗೊಳಿಸುತ್ತಿರುವ ಏಜೆನ್ಸಿಗಳ ಇನ್ನಿತರ ಕ್ರಿಯಾಯೋಜನೆಗಳ ಪ್ರಸ್ತಾವಗಳನ್ನು ಪರಿಗಣಿಸುವುದು ಮತ್ತು ಅನುಮತಿ ನೀಡುವುದು

(ii) ರಾಜ್ಯ ಮಿಷನ್ ಚಾಲನಾ ಗುಂಪಿನಿಂದ ಅನುಮತಿ ಪಡೆಯಲು ರಾಜ್ಯ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವುದು

(iii) ಅನುಮತಿ ದೊರೆತ ರಾಜ್ಯ ಕ್ರಿಯಾಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದು

(iv) ಮಕ್ಕಳಿಗೆ ಸಂಬಂಧಿಸಿದ ಫಲಶ್ರುತಿಗಳ ಸಾಧನೆ ಮತ್ತು ಅನುಷ್ಠಾನದ ಪುನರ್ವಿಮರ್ಶೆ

(v) ಅನುಷ್ಠಾನದಲ್ಲಿ ಹಿಂದುಳಿದ ಜಿಲ್ಲೆಗಳ ವಿಶ್ಲೇಷಣೆ ಮತ್ತು ಬೆಂಬಲಕ್ರಿಯೆ

(vi) ಅಂತರ್ ವಿಭಾಗೀಯ ಸಹಯೋಗಕ್ಕೆ ಕಾರ್ಯನಿರ್ವಹಣ ವ್ಯವಸ್ಥೆಯನ್ನು ಅಂತಿಮಗೊಳಿಸುವುದು

(vii) ಎನ್‌ಜಿಒಗಳು/ದಾನಿಗಳು/ಇನ್ನಿತರ ಏಜೆನ್ಸಿಗಳು ಹಾಗೂ ಸಂಘಟನೆಗಳೊಂದಿಗೆ ಸಹಯೋಗ

(viii) ವೆಚ್ಚದ ಪುನರ್ವಿಮರ್ಶೆ

(ix) ವಾರ್ಷಿಕ ಕ್ರಿಯಾಯೋಜನೆಯನ್ವಯ ಜಿಲ್ಲಾ ಸೊಸೈಟಿಗಳಿಗೆ ಅನುದಾನ ಬಿಡುಗಡೆಗೊಳಿಸುವುದು

(x) ಮುಖ್ಯ ಕಾರ್ಯತಂತ್ರಗಳ ವಿನ್ಯಾಸಗೊಳಿಸುವಿಕೆ ಮತ್ತು ಅನುಷ್ಠಾನಕ್ಕೆ ಅನುವು ಮಾಡಿಕೊಡುವ ವೃತ್ತಿಪರ ಸಂಪನ್ಮೂಲ ವ್ಯಕ್ತಿಗಳ ಗುಂಪನ್ನು ರಚಿಸುವುದು ಮತ್ತು

(xi) ರಾಜ್ಯ ಮಿಷನ್ ಚಾಲನಾ ಸಮಿತಿ ವಹಿಸುವ ಇನ್ಯಾವುದೇ ಕೆಲಸ

3. ರಾಜ್ಯ ಐಸಿಡಿಎಸ್ ಮಿಷನ್ : ಸಂಬಂಧಿಸಿದ ರಾಜ್ಯದ ಮುಖ್ಯಮಂತ್ರಿ ನೇತೃತ್ವದ ರಾಜ್ಯ ಐಸಿಡಿಎಸ್ ಮಿಷನ್, ಮಕ್ಕಳ ಬೆಳವಣಿಗೆ ಮತ್ತು ಪೋಷಕಾಂಶ ವ್ಯವಸ್ಥೆಯ ಮೇಲ್ವಿಚಾರಣೆ, ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಜಾಡು ಹಿಡಿದು ಐಸಿಡಿಎಸ್‌ನ್ನು ಮಿಷನ್ ಮಾದರಿಯಲ್ಲಿ

ಅನುಷ್ಠಾನಗೊಳಿಸುವಿಕೆಯಲ್ಲಿನ ಪ್ರಗತಿಯ ಪುನರ್ವಿಮರ್ಶೆ, ಮೂರು ವರ್ಷದೊಳಗಿನ ಮಗುವಿನ ಪೋಷಕಾಂಶ ಸ್ಥಿತಿಯನ್ನು ಪ್ರಮುಖ ಫಲಶ್ರುತಿ ಸೂಚಕದಂತೆ ಬಳಸಿಕೊಳ್ಳುವುದು; ಅಂತರ್ ವಿಭಾಗೀಯ ಸಹಯೋಗ ಮತ್ತು ಒಮ್ಮುಖತೆಯನ್ನು ಸಾಧಿಸಲು ಅನುವು ಮಾಡಿಕೊಡುವುದು, ರಾಜ್ಯದಲ್ಲಿ ಐಸಿಡಿಎಸ್‌ನ ದೃಶ್ಯತೆಯನ್ನು ಉತ್ತೇಜಿಸಲು ಅಗತ್ಯವಿರುವ ವಕಾಲತು ಕ್ರಮಗಳ ಬಗ್ಗೆ ಸಲಹೆ ನೀಡುವುದು ಇತ್ಯಾದಿ ಕಾರ್ಯ ನಿರ್ವಹಿಸಲಿದೆ. ಸಂಬಂಧಿಸಿದ ರಾಜ್ಯದ ಡಬ್ಲ್ಯುಸಿಡಿ/ಸಮಾಜ ಕಲ್ಯಾಣ/ಕಾನೂನು ಸಚಿವರು ರಾಜ್ಯ ಐಸಿಡಿಎಸ್ ಮಿಷನ್‌ನ ಸಹ ಅಧ್ಯಕ್ಷರಾಗಿರಲಿದ್ದು, ಡಬ್ಲ್ಯುಸಿಡಿ/ಸಮಾಜ ಕಲ್ಯಾಣ/ ಕಾನೂನು ಇಲಾಖೆಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಸಂಚಾಲಕರಾಗಿರುತ್ತಾರೆ. ರಾಜ್ಯ ಐಸಿಡಿಎಸ್ ಮಿಷನ್‌ನ ಇನ್ನಿತರ ಸದಸ್ಯರೆಂದರೆ;

* ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ಆರೋಗ್ಯ, ಗ್ರಾಮೀಣಾಭಿವೃದ್ಧಿ/ಜಲ ಮತ್ತು ನೈರ್ಮಲ್ಯ, ನಗರಾಭಿವೃದ್ಧಿ ಪಿಎಚ್‌ಇಡಿ, ಪಂಚಾಯತ್ ರಾಜ್, ಆದಿವಾಸಿ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಮೂಲಭೂತ ಶಿಕ್ಷಣ, ಯೋಜನೆ, ಹಣಕಾಸು ಮತ್ತಿತರ ಇಲಾಖೆಗಳ ಸಚಿವರು

* ಸಂಸತ್ ಸದಸ್ಯರು, ಶಾಸಕರು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಸ್ಥಳೀಯ ಸಂಸ್ಥೆಗಳು ಸೇರಿದಂತೆ 5 ರಿಂದ 10 ಸಾರ್ವಜನಿಕ ಪ್ರತಿನಿಧಿಗಳು

* ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ಅಭಿವೃದ್ಧಿ ಆಯುಕ್ತರು, ಮೇಲೆ ಉಲ್ಲೇಖಿಸಿದ ಇಲಾಖೆಗಳ ಕಾರ್ಯದರ್ಶಿಗಳು, ಎಂಡಬ್ಲ್ಯುಸಿಡಿ, ಭಾರತ ಸರ್ಕಾರ, ಎನ್‌ಐಪಿಸಿಸಿಡಿ ಮುಖ್ಯ ಕಚೇರಿ/ಪ್ರಾದೇಶಿಕ ಕೇಂದ್ರಗಳ ಅಧಿಕೃತ ಪ್ರತಿನಿಧಿಗಳು ಹಾಗೂ 2 ಅಥವಾ 3 ಜಿಲ್ಲೆಗಳ ಡಿಎಂ/ಡಿಸಿ/ಜಿಲ್ಲಾ ಪಂಚಾಯಿತಿ(ಆವರ್ತ ಮಾದರಿಯಲ್ಲಿ) ಪ್ರತಿನಿಧಿಗಳು

* ಡಿಪಿಒಗಳು/ಸಿಡಿಪಿಒಗಳು/ಎಲ್‌ಎಸ್/ಎಡಬ್ಲ್ಯುಡಬ್ಲ್ಯು ಸೇರಿದಂತೆ ಐಸಿಡಿಎಸ್‌ನ ಕ್ಷೇತ್ರ ಮಟ್ಟದ ಇಬ್ಬರು ಅಥವಾ ಮೂವರು ಸದಸ್ಯರು

* ಮಕ್ಕಳ ಅಭಿವೃದ್ಧಿ, ಪೋಷಣೆ, ಆರೋಗ್ಯ, ಆರಂಭಿಕ ಶಿಕ್ಷಣ ಕ್ಷೇತ್ರದ ತಜ್ಞರು ಮತ್ತು ಸ್ವಯಂಸೇವಾ ಸಂಘಟನೆಗಳಿಂದ ನಾಮಕರಣಗೊಂಡ 5 ರಿಂದ 8 ಅಧಿಕಾರಿಗಳಲ್ಲದ ಸದಸ್ಯರು

ರಾಜ್ಯ ಐಸಿಡಿಎಸ್ ಮಿಷನ್ ಕನಿಷ್ಠ ಆರು ತಿಂಗಳಿಗೊಮ್ಮೆ ಸಭೆ ಸೇರುತ್ತದೆ ಮತ್ತು ಅಗತ್ಯವಿರುವಾಗ ಸದಸ್ಯರನ್ನು ಸೇರ್ಪಡೆಗೊಳಿಸಿಕೊಳ್ಳುವ ಅಧಿಕಾರವನ್ನು ಹೊಂದಿದೆ.

ರಾಜ್ಯ ಐಸಿಡಿಎಸ್ ಮಿಷನ್‌ನ ಕಾರ್ಯಗಳನ್ನು ರಾಜ್ಯ ಸರ್ಕಾರ/ಕೇಂದ್ರಾಡಳಿತ ಪ್ರದೇಶದ ವಿಶೇಷ ಕಾರ್ಯದರ್ಶಿ/ಅಪರ ಕಾರ್ಯದರ್ಶಿ (ಜೆಎಜಿ/ಆಯ್ಕೆ ಶ್ರೇಣಿಯ ಐಎಎಸ್ ಅಧಿಕಾರಿ) ದರ್ಜೆಯ ಹಿರಿಯ ಅಧಿಕಾರಿಯೊಬ್ಬ ರು ನಿರ್ದೇಶಕರಾಗಿರುವ ರಾಜ್ಯ ಮಕ್ಕಳ ಅಭಿವೃದ್ಧಿ ಸೊಸೈಟಿ ಮೂಲಕ ನಡೆಸಲಾಗುತ್ತದೆ. ರಾಜ್ಯ ಮಿಷನ್ ನಿರ್ದೇಶಕನಿಗೆ/ಳಿಗೆ ಐಸಿಡಿಎಸ್ ಮಿಷನ್‌ನ ಗುರಿಯನ್ನು ಪರಿಣಾಮಕಾರಿಯಾಗಿ ಸಾಧಿಸಲು ಅಗತ್ಯ ವಾದ, ಎಸ್‌ಎಂಎಸ್‌ಜಿ ಅನುಮತಿ ನೀಡಿದ ಕಾರ್ಯ ನಿರ್ವಹಣೆ ಮತ್ತು ವಿತ್ತಾಧಿಕಾರವನ್ನು ಕೊಡಮಾಡಲಾಗಿರುತ್ತದೆ. ರಾಜ್ಯ ಐಸಿಡಿಎಸ್ ಕೋಶದ ಲಭ್ಯ ಮೂಲಸೌಲಭ್ಯ ಮತ್ತು ಮಾನವ ಸಂಪನ್ಮೂಲವನ್ನು ರಾಜ್ಯ ಮಕ್ಕಳ ಅಭಿವೃದ್ಧಿ ಸೊಸೈಟಿಯ ಒಟ್ಟಾರೆ ಸಂರಚನೆಯಲ್ಲಿ ಅಂತರ್ಗತಗೊಳಿಸಲಾಗುತ್ತದೆ. ಅದರನ್ವಯ, ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಮಕ್ಕಳ ಅಭಿವೃದ್ಧಿ ಸೊಸೈಟಿಯ ಸಂರಚನೆ ಕೆಳಕಂಡಂತೆ ಇರಲಿದೆ;

ನಕ್ಷೆ 1: ದೊಡ್ಡ ರಾಜ್ಯಗಳ ಮಿಷನ್ ನಿರ್ದೇಶನಾಲಯ (15 ಅಥವಾ ಅದಕ್ಕಿಂತ ಹೆಚ್ಚು ಜಿಲ್ಲೆಗಳಿರುವ ರಾಜ್ಯಗಳು)

ರಾಜ್ಯ ಮಿಷನ್ ನಿರ್ದೇಶಕ- ಸ್ಟೆನೋ ದರ್ಜೆ(1)/ಜವಾನ(1)

ಜಂಟಿ ನಿರ್ದೇಶಕ.........ಆಡಳಿತ, ಹಣಕಾಸು ಮತ್ತು ಸಂಯೋಜನೆ...........ಕಾರ್ಯಕ್ರಮ ಸಂಪನ್ಮೂಲ ಘಟಕ

ಉಪ ನಿರ್ದೇಶಕ

ಕಾರ್ಯಕ್ರಮ ಅಧಿಕಾರಿ......ಹಿರಿಯ ಸಲಹೆಗಾರ(ಕಾರ್ಯನೀತಿ ಮತ್ತು ಯೋಜನೆ)............ಸಲಹೆಗಾರ

ಹಿರಿಯ ಸಲಹೆಗಾರ(ಕುಂದುಕೊರತೆ).....ಸಲಹೆಗಾರ

ಕಾರ್ಯಕ್ರಮ ನಿರ್ವಾಹಕ ಇಸಿಸಿಇ.........ಹಿರಿಯ ಸಲಹೆಗಾರ................ ಸಲಹೆಗಾರ

ಕಾರ್ಯಕ್ರಮ ನಿರ್ವಾಹಕ ತರಬೇತಿ, ವಕಾಲತು ಮತ್ತು ಇಸಿಇ.... ಹಿರಿಯ ಸಲಹೆಗಾರ....ಸಲಹೆಗಾರ.....ಹಿರಿಯ ಸಲಹೆಗಾರ(ವಕಾಲತು ಮತ್ತು ಐಇಸಿ).....ಸಲಹೆಗಾರ

* ರಾಜ್ಯ ಸರ್ಕಾರ ಹಿರಿಯ ಐಎಎಸ್ ಅಧಿಕಾರಿಯನ್ನು ನೇಮಿಸಬೇಕು

* ಹಾಲಿ ಹುದ್ದೆಗಳು

* ಹೊಸ ಹುದ್ದೆಗಳು - ಗುತ್ತಿಗೆ ಆಧಾರದಲ್ಲಿ ನೇಮಕ

ನಕ್ಷೆ 2 : ಮಿಷನ್ ನಿರ್ದೇಶನಾಲಯ (15 ಜಿಲ್ಲೆಗಳಿಗಿಂತ ಕಡಿಮೆ ಇರುವ ಸಣ್ಣ ರಾಜ್ಯಗಳಿಗೆ)

ರಾಜ್ಯ ಮಿಷನ್ ನಿರ್ದೇಶಕ....ಸ್ಟೆನೋ ದರ್ಜೆ ಡಿ (1).....ಜವಾನ (1)

ಜಂಟಿ ನಿರ್ದೇಶಕ

ಆಡಳಿತ, ಹಣಕಾಸು ಮತ್ತು ಸಂಯೋಜನೆ.............................................

ಉಪ ನಿರ್ದೇಶಕ........ಕಾರ್ಯಕ್ರಮ ಅಧಿಕಾರಿ..........ಲೆಕ್ಕಾಧಿಕಾರಿ......ಯುಡಿಸಿ.........ಎಲ್‌ಡಿಸಿ

ಕಾರ್ಯಕ್ರಮ ಸಂಪನ್ಮೂಲ ಘಟಕ

ಕಾರ್ಯಕ್ರಮ ನಿರ್ವಾಹಕ(ಕಾರ್ಯನೀತಿ, ಯೋಜನೆ ಮತ್ತು ಕುಂದುಕೊರತೆ)................ಸಲಹೆಗಾರ

ಕಾರ್ಯಕ್ರಮ ನಿರ್ವಾಹಕ, ಆರೋಗ್ಯ, ಪೋಷಣೆ ಮತ್ತು ಇಸಿಸಿಇ..........ಹಿರಿಯ ಸಲಹೆಗಾರ(ಆರೋಗ್ಯ ಮತ್ತು ಪೋಷಣೆ)..............ಸಲಹೆಗಾರ...........ಹಿರಿಯ ಸಲಹೆಗಾರ(ಇಸಿಸಿಇ)...ಸಲಹೆಗಾರ

ಕಾರ್ಯಕ್ರಮ ನಿರ್ವಾಹಕ, ತರಬೇತಿ, ವಕಾಲತು ಮತ್ತು ಐಇಸಿ.............ಹಿರಿಯ ಸಲಹೆಗಾರ(ತರಬೇತಿ,ವಕಾಲತು ಮತ್ತು ಐಇಸಿ)..........ಸಲಹೆಗಾರ

ಕಾರ್ಯಕ್ರಮ ನಿರ್ವಾಹಕ, ಎಂ ಆಂಡ್ ಇ..........ಹಿರಿಯ ಸಲಹೆಗಾರ(ಎಂ ಆಂಡ್ ಇ ಮತ್ತು ಎಂಐಎಸ್)......ಸಲಹೆಗಾರ......ಅಂಕಿಅಂಶ ಸಹಾಯಕ.....ಡೇಟಾ ಎಂಟ್ರಿ ಆಪರೇಟರ್ (2)

# ರಾಜ್ಯ ಸರ್ಕಾರ ಹಿರಿಯ ಐಎಎಸ್ ಅಧಿಕಾರಿಯನ್ನು ನೇಮಿಸಬೇಕು # ಹಾಲಿ ಹುದ್ದೆಗಳು # ಹೊಸ ಹುದ್ದೆಗಳು - ಗುತ್ತಿಗೆ ಆಧಾರದಲ್ಲಿ ನೇಮಕ

ಟಿಪ್ಪಣಿ : ಕೇಂದ್ರಾಡಳಿತ ಪ್ರದೇಶಗಳಲ್ಲಿ ಐಸಿಡಿಎಸ್ ಮಿಷನ್ ಅಡಿ ಒಬ್ಬ ಕಾರ್ಯಕ್ರಮ ಅಧಿಕಾರಿ, ಒಬ್ಬ ಹಿರಿಯ ಸಲಹೆಗಾರ ಮತ್ತು ಒಬ್ಬರು ಸಲಹೆಗಾರರನ್ನು ಬೆಂಬಲಿಸಲಾಗುತ್ತದೆ. ಮೇಲೆ ವಿವರಿಸಿದಂತೆ, ಐಸಿಡಿಎಸ್ ಮಿಷನ್‌ನ್ನು ಹಂತಹಂತವಾಗಿ ಅನುಷ್ಠಾನಗೊಳಿಸುವುದರಿಂದ, ಅದಕ್ಕನುಗುಣವಾಗಿ ಸಿಬ್ಬಂದಿ ನೇಮಕವೂ ಹಂತಗಳಲ್ಲಿ ನಡೆಯುತ್ತದೆ. ಆರಂಭದ ಎರಡು ವರ್ಷಗಳಲ್ಲಿ ಯಾವ ರಾಜ್ಯಗಳಲ್ಲಿ ಯೋಜನೆ ಅನುಷ್ಠಾನಗೊಳ್ಳುವುದಿಲ್ಲವೋ ಅಲ್ಲಿ ರಾಜ್ಯ ಮಿಷನ್ ನಿರ್ದೇಶನಾಲಯವನ್ನು ಸ್ಥಾಪಿಸಿ, ಕಾರ್ಯಾಚರಣೆ ಆರಂಭಿಸುವವರೆಗೆ ಇಬ್ಬರು ತಾಂತ್ರಿಕ ಸಿಬ್ಬಂದಿ (ಒಬ್ಬರು ಕಾರ್ಯಕ್ರಮ ಅಧಿಕಾರಿ ಮತ್ತು ಒಬ್ಬರು ಹಿರಿಯ ಸಲಹೆಗಾರ)ಯನ್ನು ಒದಗಿಸಲಾಗುತ್ತದೆ.

4. ಸೇವೆಗಳ ವಿತರಣೆಯಲ್ಲಿ ಗುಣಮಟ್ಟದ ಹೆಚ್ಚಳ ಮತ್ತು ಐಸಿಡಿಎಸ್‌ನ ಉದ್ದೇಶಿತ ಪುನರ್ವಿನ್ಯಾಸ ಹಾಗೂ ಬಲವರ್ಧನೆಯನ್ನು ಐಸಿಡಿಎಸ್‌ನ ಸಾರ್ವತ್ರೀಕರಣದ ಹಿನ್ನೆಲೆಯಲ್ಲಿ ಇಟ್ಟುಕೊಂಡು, ಕೇಂದ್ರದಿಂದ ಹಿಡಿದು ಎಡಬ್ಲ್ಯುಸಿ ಹಂತದವರೆಗೆ 5 ಹಂತದ ಪರಾಮರ್ಶನ ಹಾಗೂ ಪುನರ್ವಿಮರ್ಶೆ ಕಾರ್ಯತಂತ್ರವನ್ನು ರಚಿಸಲು ಉದ್ದೇಶಿಸಲಾಗಿದೆ. ಹಲವು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಇಂಥ ಕಾರ್ಯತಂತ್ರಗಳನ್ನು ತಾರ್ಕೀಕರಣಗೊಳಿಸುವ ಹಾಗೂ ಸಮನ್ವಯಗೊಳಿಸುವ ಪ್ರಸ್ತಾವವಿದ್ದು, ಸಂಬಂಧಿಸಿದ ಇಲಾಖೆಗಳೊಡನೆ ಏಕತ್ರಗೊಳಿಸಿ ಮತ್ತು ಸಹಭಾಗಿತ್ವವನ್ನು ಬಲಪಡಿಸುವ ಉದ್ದೇಶದಿಂದ ಹಾಗೂ ಯೋಜನೆಯ ಅನುಷ್ಠಾನದಲ್ಲಿನ ಪ್ರಗತಿಯ ಪರಾಮರ್ಶನ ಮತ್ತು ಪುನರ್ವಿಮರ್ಶೆಗೆ ಒಳಪಡಿಸುವ ಉದ್ದೇಶವಿದೆ.

5. ಬೇರೆ ಬೇರೆ ಹಂತಗಳಲ್ಲಿನ ಇಂಥ ಸಮಿತಿಗಳ ಸಂಯೋಜನೆ ಮತ್ತು ಪ್ರಮುಖ ಪಾತ್ರಗಳನ್ನು ಕೆಳಗಿನ ವಿಭಾಗದಲ್ಲಿ ವಿವರಿಸಲಾಗಿದೆ. ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಸ್ಥಳೀಯ ಪರಿಸ್ಥಿತಿ ಮತ್ತು ಸಾಂಸ್ಥಿಕ ಸಂರಚನೆಗೆ ಅನುಗುಣವಾಗಿ ಅಧಿಕಾರಿಗಳು/ಸಿಬ್ಬಂದಿಗಳ ಪದನಾಮದಲ್ಲಿ ಹೊಂದಾಣಿಕೆ ಇಲ್ಲವೇ ಸೂಕ್ತ ಬದಲಾವಣೆಯನ್ನು ಮಾಡಿಕೊಳ್ಳಬಹುದು.

I. ಐಸಿಡಿಎಸ್ ರಾಷ್ಟ್ರೀಯ ಮಟ್ಟದ ಪರಾಮರ್ಶನ ಮತ್ತು ಮೇಲ್ವಿಚಾರಣೆ ಸಮಿತಿ (ಎನ್ಎಲ್ಎಂಆರ್ಸಿ)

I಼. ಸಂಯೋಜನೆ

i) ಕಾರ್ಯದರ್ಶಿ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ........................ಅಧ್ಯಕ್ಷರು

ii) ಪ್ರಧಾನ ಸಲಹೆಗಾರ, ಡಬ್ಲ್ಯುಸಿಡಿ, ಯೋಜನಾ ಆಯೋಗ........................... ಸದಸ್ಯ

iii) ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ...................... ಸದಸ್ಯ

iv) ಕಾರ್ಯದರ್ಶಿ, ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ.............. ಸದಸ್ಯ

v) ಕಾರ್ಯದರ್ಶಿ, ಆಹಾರ ಇಲಾಖೆ .............. ಸದಸ್ಯ

vi) ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮಂತ್ರಾಲಯ .............. ಸದಸ್ಯ

vii) ಕಾರ್ಯದರ್ಶಿ, ಅಲ್ಪಸಂಖ್ಯಾಂತರ ವ್ಯವಹಾರಗಳ ಮಂತ್ರಾಲಯ .............. ಸದಸ್ಯ

viii) ಕಾರ್ಯದರ್ಶಿ, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ .............. ಸದಸ್ಯ

ix) ಕಾರ್ಯದರ್ಶಿ, ಪಂಚಾಯತಿ ರಾಜ್ ಮಂತ್ರಾಲಯ .............. ಸದಸ್ಯ

x) ಪ್ರತಿಯೊಂದು ಪ್ರಾಂತ್ಯದ 5 ರಾಜ್ಯಗಳ ಕಾರ್ಯದರ್ಶಿಗಳು (ಆವರ್ತ ಆಧಾರದಲ್ಲಿ).............. ಸದಸ್ಯ

xi) ಹೆಚ್ಚುವರಿ ಕಾರ್ಯದರ್ಶಿ ಮತ್ತು ಆರ್ಥಿಕ ಸಲಹೆಗಾರ, ಎಂಡಬ್ಲ್ಯುಡಿಸಿ.............. ಸದಸ್ಯ

xii) ನಿರ್ದೇಶಕ, ಎನ್ಐಪಿಸಿಸಿಡಿ, ಹೊಸದಿಲ್ಲಿ .............. ಸದಸ್ಯ

xiii) ನಿರ್ದೇಶಕ, ರಾಷ್ಟ್ರೀಯ ಪೋಷಕಾಂಶ ಸಂಸ್ಥೆ, ಹೈದರಾಬಾದ್.............. ಸದಸ್ಯ

xiv) ಜಂಟಿ ಕಾರ್ಯದರ್ಶಿ (ಐಸಿಡಿಎಸ್), ಎಂಡಬ್ಲ್ಯುಸಿಡಿ .............. ಸದಸ್ಯ

xv) ನಿರ್ದೇಶಕ (ಐಸಿಡಿಎಸ್), ಎಂಡಬ್ಲ್ಯುಡಿ.................................. ಸದಸ್ಯ ಕಾರ್ಯದರ್ಶಿ

ಟಿಪ್ಪಣಿ: ಮಕ್ಕಳ ಅಭಿವೃದ್ಧಿ/ಪೋಷಕಾಂಶ/ಇಸಿಇಯ ಇಬ್ಬರು ತಜ್ಞರು ಹಾಗೂ ಅಭಿವೃದ್ಧಿ ಸಹಭಾಗಿಗಳನ್ನು ಪ್ರತಿನಿಧಿಗಳ ಸಭೆಗೆ ವಿಶೇಷ ಆಹ್ವಾನಿತರಾಗಿ ಕರೆಯಬಹುದು.

* ಸಮಿತಿಯು ಆರು ತಿಂಗಳಿಗೊಮ್ಮೆ ಇಲ್ಲವೇ ಅಧ್ಯಕ್ಷರ ನಿರ್ದೇಶನದಂತೆ ಅಗತ್ಯವಿರುವಾಗ ಸಭೆ ಸೇರಲಿದೆ.

Iಃ. ಕಾರ್ಯಭಾರಗಳು

ರಾಷ್ಟ್ರೀಯ ಮಟ್ಟದ ಸಮಿತಿಯು ಕೆಳಕಂಡ ಪ್ರಮುಖ ವಿಷಯಗಳ ಪರಾಮರ್ಶನ ಮತ್ತು ಅವಲೋಕನ ಕೈಗೊಳ್ಳಲಿದ್ದು, ಸೂಕ್ತ ಕ್ರಮಗಳನ್ನು ಶಿಫಾರಸು ಮಾಡಲಿದೆ.

i. ಐಸಿಡಿಎಸ್‌ನಲ್ಲಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಒಟ್ಟಾರೆ ಪ್ರಗತಿ

* ಐಸಿಡಿಎಸ್‌ನ ಸಾರ್ವತ್ರೀಕರಣ - ಯೋಜನೆಗಳು/ಎಡಬ್ಲ್ಯುಸಿಗಳ ಕಾರ್ಯವ್ಯವಸ್ಥೆಯ ಸ್ಥಿತಿ

* ರಾಜ್ಯ ವಾರ್ಷಿಕ ಕಾರ್ಯಕ್ರಮ ಅನುಷ್ಠಾನ ಯೋಜನೆ (ಎಪಿಐಪಿ)ಗಳ ಅನುಷ್ಠಾನ

* ಆರು ವರ್ಷದೊಳಗಿನ ಮಕ್ಕಳ ಪೋಷಕಾಂಶ ಸ್ಥಿತಿ-ತೂಕ, ಡಬ್ಲ್ಯುಎಚ್ಒ ಬೆಳವಣಿಗೆ ಮಾನಕಗಳು ಮತ್ತು ಜಂಟಿ ತಾಯಿ ಹಾಗೂ ಮಗು ಸಂರಕ್ಷಣಾ ಕಾರ್ಡ್‌ಗಳ ವಿತರಣೆ. ಕಡಿಮೆ ತೂಕದ ಮತ್ತು ತೀವ್ರ ಪೋಷಕಾಂಶ ಕೊರತೆ ಇರುವ ಮಕ್ಕಳ ಪ್ರಮಾಣ ಕಡಿಮೆಗೊಳಿಸುವುದು

* ಶಾಲಾಪೂರ್ವ ಶಿಕ್ಷಣದ ನಿರ್ವಹಣೆ

ಐಸಿಡಿಎಸ್ ಕಾರ್ಯಕ್ರಮದ ಪರಾಮರ್ಶನ ಹಾಗೂ ಪುನರ್ವಿಮರ್ಶೆ ಸಮಿತಿಗಳ ರಚನೆಗೆ ಮಾನದಂಡಗಳು

(ii) ಇನ್ನಿತರ ಕಾರ್ಯಕ್ರಮಗಳೊಟ್ಟಿಗೆ ಏಕತ್ರಗೊಳಿಸುವಿಕೆ ಮತ್ತು ಹೊಂದಾಣಿಕೆ

* ಆರೋಗ್ಯ/ಎನ್ಆರ್ಎಚ್ಎಂ: ಪೂರಕ ಸೂಕ್ಷ್ಮ ಪೋಷಕಾಂಶ ಮತ್ತು ಫೋರ್ಟಿಫಿಕೇಷನ್, ಪೋಷಕಾಂಶ ತೀವ್ರ ಕೊರತೆಯಿರುವ ಮಕ್ಕಳ ನಿರ್ವಹಣೆ, ಎಡಬ್ಲ್ಯುಸಿ ಅಥವಾ ವಿಎಚ್ಎನ್ಡಿಗಳಲ್ಲಿ ಆರೋಗ್ಯ ಸಂಬಂಧಿತ ಸೇವಾ ವಿತರಣೆ, ಲಸಿಕೀಕರಣ, ಹೆರಿಗೆಗೆ ಮುನ್ನ ಗರ್ಭಿಣಿಯರ ತಪಾಸಣೆ, ವಿಟಮಿನ್ ಎ ಪೂರೈಕೆ, ಜಂತು ನಿವಾರಣೆ ಮತ್ತು ಐಎಫ್ಎ ಗುಳಿಗೆಗಳು, ಪರ್ಯಾಲೋಚನ ಸೇವೆಗಳು, ಆರೋಗ್ಯ ತಪಾಸಣೆ; ವಿಎಚ್ಎಸ್ಸಿ ಇತ್ಯಾದಿ ಕಾರ್ಯನಿರ್ವಹಣೆ

* ನೀರು ಮತ್ತು ನೈರ್ಮಲ್ಯ : ಸಂಪೂರ್ಣ ನೈರ್ಮಲ್ಯ ಆಂದೋಲನ ಮತ್ತು ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯಗಳ ಒದಗಣೆ

* ಸರ್ವ ಶಿಕ್ಷಾ ಅಭಿಯಾನ (ಎಸ್ಎಸ್ಎ): ಪ್ರಾಥಮಿಕ ಶಾಲೆಗಳೊಟ್ಟಿಗೆ ಎಡಬ್ಲ್ಯುಸಿಗಳನ್ನು ಇರಿಸುವುದು, ಎಡಬ್ಲ್ಯುಸಿಗಳಲ್ಲಿ ಪಿಎಸ್ಇಯನ್ನು ಒಟ್ಟಾಗಿಸುವುದು, ಎಸ್ಎಸ್ಎಯ ಬೆಂಬಲ ಇತ್ಯಾದಿ

* ಪಿಆರ್ಐಗಳು: ಎಡಬ್ಲ್ಯುಸಿಗಳಲ್ಲಿ ಸೇವೆಗಳ ವಿತರಣೆಗೆ ಪಿಆರ್ಐಗಳು ಮತ್ತು ಸಮುದಾಯವನ್ನು ಒಳಗೊಳ್ಳುವ ಮೂಲಕ ಮೇಲ್ವಿಚಾರಣೆ ಮತ್ತು ಸಂಯೋಜನೆ

(iii) ಎಸ್ಸಿ/ಎಸ್ಟಿ ಮತ್ತು ಅಲ್ಪಸಂಖ್ಯಾತರು ಹೆಚ್ಚು ಸಂಖ್ಯೆಯಲ್ಲಿರುವ ವಸತಿ ಪ್ರದೇಶಗಳ ರಾಜ್ಯ/ಕೇಂದ್ರಾಡಳಿತ ಪ್ರದೇಶವಾರು ಸಂಖ್ಯೆ ಹಾಗೂ ಪರಿಸ್ಥಿತಿ

(iv) ಕ್ಷೇತ್ರ ಮಟ್ಟದಲ್ಲಿ ಮಾನವ ಶಕ್ತಿಯ ಖಾಲಿ ಹುದ್ದೆಗಳು ಮತ್ತು ಇದಕ್ಕೆ ರಾಜ್ಯಗಳ ಕ್ರಿಯಾಯೋಜನೆ

(v) ರಾಜ್ಯ/ಕೇಂದ್ರಾಡಳಿತ ಪ್ರದೇಶವಾರು ಎಡಬ್ಲ್ಯುಸಿಗಳಿಗೆ ಅಗತ್ಯವಸ್ತುಗಳ ಪೂರೈಕೆ, ಔಷಧ ಮತ್ತು ಪಿಎಸ್ಇ ಕಿಟ್ಗಳು, ತಕ್ಕಡಿಗಳು, ಜಂಟಿ ಎಂಸಿಪಿ ಕಾರ್ಡ್, ಡಬ್ಲ್ಯುಎಚ್ಒ ಬೆಳವಣಿಗೆ ಪರಾಮರ್ಶನ ರೇಖಾಚಿತ್ರಗಳು ಇತ್ಯಾದಿಯ ಪೂರೈಕೆ ಸ್ಥಿತಿ

(vi) ಎನ್ಆರ್ಇಜಿಎ, ಬಹುಕ್ಷೇತ್ರೀಯ ಅಭಿವೃದ್ಧಿ ಕಾರ್ಯಕ್ರಮ (ಎಂಎಸ್ಡಿಪಿ), ಬಿಆರ್ಜಿಎಫ್, ಐಎಡಿಪಿ, ಎಂಪಿಎಲ್ಎಡಿಎಸ್ ಇತ್ಯಾದಿ ಯೋಜನೆಗಳಿಂದ ಎಡಬ್ಲ್ಯುಸಿಗಳಿಗೆ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಳಸಿಕೊಳ್ಳುವುದು

(vii) ಪೂರಕ ಪೋಷಕಾಂಶ ಪೂರೈಕೆ ಸ್ಥಿತಿ : ಗೋಧಿ ಆಧಾರಿತ ಪೋಷಕಾಂಶ ಕಾರ್ಯಕ್ರಮ (ಡಬ್ಲ್ಯುಬಿಎನ್ಬಿ)ದಡಿ ಆಹಾರ ಧಾನ್ಯಗಳನ್ನು ಎತ್ತುವಳಿ ಮತ್ತು ಬಿಡಿಸಿಕೊಳ್ಳುವ ಸ್ಥಿತಿ

(viii) ಉತ್ತಮ ಫಲಿತಾಂಶ ನೀಡಿರುವ ಸ್ಥಳೀಯ/ಸಮುದಾಯ ಹಂತದ ಅನ್ವೇಷಣಾತ್ಮಕ ಆಚರಣೆಗಳ ಗುರುತಿಸುವಿಕೆ ಮತ್ತು ಅದನ್ನು ಪ್ರಮಾಣಾನುಸಾರ ಹೆಚ್ಚಿಸಲು ಸಾಧ್ಯವೇ ಎಂದು ಪರಿಶೀಲನೆ

(ix) ಐಸಿಡಿಎಸ್ಗೆ ಸಂಬಂಧಿಸಿದ ಮೌಲ್ಯಮಾಪನ/ಮೌಲ್ಯಾಂಕನದೊಟ್ಟಿಗೆ ಎಂಡಬ್ಲ್ಯುಸಿಡಿ/ಯೋಜನಾ ಆಯೋಗ ಇತ್ಯಾದಿಗಳ ಕ್ಷೇತ್ರ ಸಂದರ್ಶನದ ವರದಿಗಳ ಪುನರ್ವಿಮರ್ಶೆ ಮತ್ತು ಸರಿಗೊಳಿಸುವ ಕ್ರಿಯೆಗಳನ್ನು ಸೂಚಿಸುವುದು

(x) ಹಣಕಾಸು ನಿರ್ವಹಣೆ : ಅನುದಾನದ ಹರಿವು ಕಾರ್ಯತಂತ್ರ, ಅನುದಾನಗಳ ಬಳಕೆ, ಅಂದಾಜು ಅಗತ್ಯಗಳು ಇತ್ಯಾದಿ

II. ಐಸಿಡಿಎಸ್‌ನ ರಾಜ್ಯ ಮಟ್ಟದ ಪರಾಮರ್ಶನ ಮತ್ತು ಅವಲೋಕನ ಸಮಿತಿ(ಎಸ್‌ಎಲ್‌ಎಂಆರ್ಸಿ)

II ೦. ಸಂಯೋಜನೆ

i. ಮುಖ್ಯ ಕಾರ್ಯದರ್ಶಿ ................ಅಧ್ಯಕ್ಷರು

ii. ಕಾರ್ಯದರ್ಶಿ, ಯೋಜನೆ..................ಸದಸ್ಯ

iii. ಕಾರ್ಯದರ್ಶಿ, ಹಣಕಾಸು..................ಸದಸ್ಯ

iv. ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ..................ಸದಸ್ಯ

v. ಕಾರ್ಯದರ್ಶಿ, ಗ್ರಾಮೀಣಭಿವೃದ್ಧಿ..................ಸದಸ್ಯ

vi. ಕಾರ್ಯದರ್ಶಿ, ಪಂಚಾಯತ್ ರಾಜ್ ಸಂಸ್ಥೆಗಳು..................ಸದಸ್ಯ

vii. ಕಾರ್ಯದರ್ಶಿ, ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ..................ಸದಸ್ಯ

viii. ಕಾರ್ಯದರ್ಶಿ, ಶಿಕ್ಷಣ ..................ಸದಸ್ಯ

ix. ಕಾರ್ಯದರ್ಶಿ, ಕೃಷಿ/ತೋಟಗಾರಿಕೆ ..................ಸದಸ್ಯ

x. ಕಾರ್ಯದರ್ಶಿ, ಆಹಾರ ..................ಸದಸ್ಯ

xi. ಕಾರ್ಯದರ್ಶಿ, ಡಬ್ಲ್ಯುಸಿಡಿ (ಐಸಿಡಿಎಸ್‌ನ ಉಸ್ತುವಾರಿ) ..................ಸದಸ್ಯ

xii. ಐವರು ಸಂಸತ್ ಸದಸ್ಯರು ..................ಸದಸ್ಯ

xiii. ಐವರು ಶಾಸಕರು ..................ಸದಸ್ಯ

xiv. ರಾಜ್ಯ ಮಿಷನ್ ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ..................ಸದಸ್ಯ

xv. ಪ್ರಾದೇಶಿಕ ನಿರ್ದೇಶಕ, ಎನ್‌ಐಪಿಸಿಸಿಡಿ (ಪ್ರಾಂತ್ಯದವರು) ..................ಸದಸ್ಯ

xvi. ಆಹಾರ ಮತ್ತು ಪೋಷಕಾಂಶ ಮಂಡಳಿ, ರಾಜ್ಯ/ಪ್ರಾಂತೀಯ ಕಚೇರಿ ..................ಸದಸ್ಯ

xvii. ಪ್ರಿನ್ಸಿಪಾಲ್, ಮಧ್ಯಮ ಹಂತದ ತರಬೇತಿ ಕೇಂದ್ರ (ಎಂಎಲ್‌ಡಿಸಿ) ..................ಸದಸ್ಯ

xviii. ಪ್ರಿನ್ಸಿಪಾಲ್, ಅಂಗನವಾಡಿ ಕಾರ್ಯಕರ್ತರ ತರಬೇತಿ ಕೇಂದ್ರ (ಎಡಬ್ಲ್ಯುಡಿಸಿ) ..................ಸದಸ್ಯ

xix. ನಿರ್ದೇಶಕ, ಡಬ್ಲ್ಯುಸಿಡಿ (ಐಸಿಡಿಎಸ್‌ನ ಉಸ್ತುವಾರಿ)..............ಸದಸ್ಯ ಕಾರ್ಯದರ್ಶಿ

* ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದರು ಮತ್ತು ಶಾಸಕರು ಸಮಿತಿಯಲ್ಲಿ ಆವರ್ತ ಮಾದರಿಯಲ್ಲಿ ಒಂದು ವರ್ಷ ಅವಧಿಗೆ ಸದಸ್ಯರಾಗಿರುತ್ತಾರೆ ಮತ್ತು ಎಷ್ಟು ಹೆಚ್ಚು ರಾಜಕೀಯ ಪಕ್ಷಗಳಿಗೆ ಸಾಧ್ಯವೋ ಅಷ್ಟಕ್ಕೆ ಪ್ರಾತಿನಿಧ್ಯ ನೀಡುವಂತೆ ಆಯ್ಕೆ ಮಾಡಲಾಗಿರುತ್ತದೆ

** ಪ್ರತಿ ವರ್ಷ ಆವರ್ತ ಮಾದರಿಯಲ್ಲಿ

ಟಿಪ್ಪಣಿ :

* ಐಸಿಡಿಎಸ್ ಕಾರ್ಯಕ್ರಮದಲ್ಲಿ ರಾಜ್ಯದೊಡನೆ ಕೆಲಸ ಮಾಡುತ್ತಿರುವ ಪ್ರಮುಖ ಸಂಸ್ಥೆಗಳು ಮತ್ತು ಅಭಿವೃದ್ಧಿ ಸಹಭಾಗಿಗಳ ತಜ್ಞರು/ಪ್ರತಿನಿಧಿಗಳನ್ನು ವಿಶೇಷ ಆಹ್ವಾನಿತರಾಗಿ ಕರೆಯಬಹುದು

* ಸಮಿತಿ ಪ್ರತಿ ಆರು ತಿಂಗಳಿಗೊಮ್ಮೆ ಇಲ್ಲವೇ ಅದಕ್ಕಿಂತ ಮೊದಲು ಅಧ್ಯಕ್ಷರ ಸೂಚನೆ ಮೇರೆಗೆ ಅಗತ್ಯವಿರುವಾಗ ಸಭೆ ಸೇರುತ್ತದೆ. ಮುಖ್ಯ ಕಾರ್ಯದರ್ಶಿ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

..........................................

II ಃ. ಕಾರ್ಯಭಾರಗಳು

ರಾಜ್ಯ ಮಟ್ಟದ ಸಮಿತಿಯ ಕೆಳಕಂಡ ವಿಷಯಗಳ ಅವಲೋಕನ ಮತ್ತು ಪರಾಮರ್ಶನ ಮಾಡಲಿದೆ ಮತ್ತು ಸೂಕ್ತ ಕ್ರಮಗಳನ್ನು ಶಿಫಾರಸು ಮಾಡುತ್ತದೆ.

i. ಒಟ್ಟಾರೆ ಪ್ರಗತಿ

* ಐಸಿಡಿಎಸ್‌ನ ಸಾರ್ವತ್ರೀಕರಣ: ಅನುಮೋದನೆ ಪಡೆದ ಯೋಜನೆಗಳು/ಎಡಬ್ಲ್ಯುಸಿಗಳ ಕಾರ್ಯ ನಿರ್ವಹಣೆ ಸ್ಥಿತಿ, ರಾಜ್ಯದ ಎಲ್ಲ ವಸತಿ ಪ್ರದೇಶಗಳು/ಹಾಡಿಗಳಿಗೆ ವಿಸ್ತರಿಸುವುದು ಮತ್ತು ಅದಕ್ಕೆ ತಡೆಯೊಡ್ಡುತ್ತಿರುವ ಅಂಶಗಳು

* ಐಸಿಡಿಎಸ್‌ನ ರಾಜ್ಯ ವಾರ್ಷಿಕ ಕಾರ್ಯಕ್ರಮ ಅನುಷ್ಠಾನ ಯೋಜನೆ (ಎಪಿಐಪಿ)ಯ ತಯಾರಿಕೆ ಮತ್ತು ಅನುಷ್ಠಾನ

* 6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪೋಷಕಾಂಶ ಸ್ಥಿತಿ: ತೂಕ, ಡಬ್ಲ್ಯುಎಚ್‌ಒ ಬೆಳವಣಿಗೆ ಮಾನಕಗಳು ಮತ್ತು ಜಂಟಿ ತಾಯಿ ಹಾಗೂ ಮಗು ಸಂರಕ್ಷಣಾ ಕಾರ್ಡ್‌ಗಳ ವಿತರಣೆ: ಮಧ್ಯಮ ಮತ್ತು ತೀವ್ರ ಪೋಷಕಾಂಶ ಕೊರತೆ ಇರುವ ಮಕ್ಕಳ ಅನುಪಾತದ ಜಿಲ್ಲಾವಾರು ಹೋಲಿಕೆ; ಅವುಗಳ ಪರಿಹಾರಕ್ಕೆ ತೆಗೆದುಕೊಂಡ ಕ್ರಮಗಳು ಮತ್ತು ಅರ್ಧವಾರ್ಷಿಕ ಲೆಕ್ಕದಲ್ಲಿ ಪ್ರಗತಿ ಪರಿಶೀಲನೆ

* ಎಡಬ್ಲ್ಯುಸಿಯಲ್ಲಿ ನೀಡುವ ಶಾಲಾಪೂರ್ವ ಅನೌಪಚಾರಿಕ ಶಿಕ್ಷಣದ ಸಾಧನೆ: ಎಡಬ್ಲ್ಯುಸಿಗಳಲ್ಲಿನ ಅನೌಪಚಾರಿಕ ಶಾಲಾಪೂರ್ವ ಶಿಕ್ಷಣದಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆ ಮತ್ತು ಕಾರ್ಯವಿಧಾನ ; ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಕಲಿಕಾ ಮತ್ತು ಆಟದ ಸಾಧನಗಳು, ಗೊಂಬೆಗಳ ಬ್ಯಾಂಕ್ ಮತ್ತು ಇನ್ನಿತರ ಉಪಕ್ರಮಗಳು

(ii) ಸಂಬಂಧಿಸಿದ ಇಲಾಖೆಗಳು/ಕಾರ್ಯಕ್ರಮಗಳೊಂದಿಗೆ ಒಮ್ಮುಖಗೊಳಿಸುವಿಕೆ:

ಎ. ಎನ್‌ಆರ್‌ಎಚ್‌ಎಂ/ಆರೋಗ್ಯ : ಎಡಬ್ಲ್ಯುಸಿಗಳಲ್ಲಿ ಸಂಪೂರ್ಣ ಲಸಿಕೀಕರಣದ ಪರಿಸ್ಥಿತಿ, ಎಡಬ್ಲ್ಯುಸಿಗಳಲ್ಲಿ ಹೆರಿಗೆಗೆ ಮುನ್ನ ಮತ್ತು ಆರೋಗ್ಯ ತಪಾಸಣೆ, ಪರ್ಯಾಲೋಚನ ಸೇವೆಗಳು ಮತ್ತು ಸೂಕ್ಷ್ಮ ಪೋಷಕಾಂಶಗಳ ಪೂರೈಕೆ (ವಿಟಮಿನ್ ಎ, ಐಎಫ್‌ಎ, ಜಂತು ನಿವಾರಣೆ ಮಾತ್ರೆ); ವಿಎಚ್‌ಎನ್‌ಡಿ, ವಿಎಚ್‌ಎಸ್‌ಸಿಗಳ ಕಾರ್ಯನಿರ್ವಹಣೆ ಹಾಗೂ ಐವೈಸಿಎಫ್‌ನ ಉತ್ತೇಜನ

ಬಿ. ನೀರು ಮತ್ತು ನೈಮಲ್ಯ : ಸಂಪೂರ್ಣ ನೈರ್ಮಲ್ಯ ಆಂದೋಲನ ಮತ್ತು ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆ ಅಥವಾ ರಾಜ್ಯ ಸರ್ಕಾರದ ಬೇರೆ ಯಾವುದಾದರೂ

ಕಾರ್ಯಕ್ರಮಗಳ ಸಹಭಾಗಿತ್ವದಲ್ಲಿ ಎಡಬ್ಲ್ಯುಸಿಗಳಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ವ್ಯವಸ್ಥೆ ಪೂರೈಸುವುದು

ಸಿ. ಸರ್ವ ಶಿಕ್ಷಣ ಅಭಿಯಾನ (ಎಸ್‌ಎಸ್‌ಎ) : ಎಡಬ್ಲ್ಯುಸಿಗಳನ್ನು ಪ್ರಾಥಮಿಕ ಶಾಲೆಗಳೊಟ್ಟಿಗೆ ಇರಿಸುವುದು, ಪಿಎಸ್‌ಇಯನ್ನು ಎಡಬ್ಲ್ಯುಸಿಯಲ್ಲಿ ಒಂದಾಗಿಸುವುದು, ಎಸ್‌ಎಸ್‌ಎಯಿಂದ ಬೆಂಬಲ ಇತ್ಯಾದಿ

ಡಿ. ಪಿಆರ್‌ಐಗಳು : ಎಡಬ್ಲ್ಯುಸಿಗಳಲ್ಲಿ ಪಿಆರ್‌ಐಗಳು ಮತ್ತು ಸಮುದಾಯದ ಒಳಗೊಳ್ಳುವಿಕೆಯಿಂದ ಸೇವೆಗಳ ವಿತರಣೆಯ ಮೇಲ್ವಿಚಾರಣೆ ಮತ್ತು ಸಂಘಟನೆ

(iii) ಎಲ್ಲರಿಗೂ ಸೇವೆಗಳ ವಿತರಣೆ ಮತ್ತು ನಿರ್ದಿಷ್ಟವಾಗಿ ಎಸ್‌ಸಿ/ಎಸ್ಟಿ/ಅಲ್ಪಸಂಖ್ಯಾತರ ವಸತಿ ಪ್ರದೇಶಗಳು/ಫಲಾನುಭವಿಗಳಿಗೆ ಸೇವೆಗಳ ವಿತರಣೆ

(iv) ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದ ಇನ್ನಿತರ ವಿಷಯಗಳು ಮತ್ತು ತೆಗೆದುಕೊಂಡ ಕ್ರಮ

ಎ. ಎಡಬ್ಲ್ಯುಸಿಗಳ ನಿಯತ ಕಾರ್ಯನಿರ್ವಹಣೆ : ಎಲ್ಲ ಎಡಬ್ಲ್ಯುಸಿಗಳು ಮತ್ತು ನಿರ್ದಿಷ್ಟವಾಗಿ, ಎಸ್‌ಸಿ/ಎಸ್ಟಿ/ಅಲ್ಪಸಂಖ್ಯಾತರು ಹೆಚ್ಚು ಸಂಖ್ಯೆಯಲ್ಲಿರುವ ವಸತಿ ಪ್ರದೇಶಗಳಲ್ಲಿ ಎಡಬ್ಲ್ಯುಸಿಗಳು ನಿಯತ ಕಾರ್ಯನಿರ್ವಹಣೆ ಮಾಡುವುದು

ಬಿ.. ಎಡಬ್ಲ್ಯುಡಬ್ಲ್ಯು/ಮೇಲ್ವಿಚಾರಕ/ಸಿಡಿಪಿಒ ಹಂತದಲ್ಲಿ ಮಾನವಬಲದ ಖಾಲಿ ಹುದ್ದೆಗಳು ಮತ್ತು ಅವರ ತರಬೇತಿ ಸ್ಥಿತಿ

ಸಿ. ಅನುದಾನದ ಹರಿವು ಮತ್ತು ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳಿಗೆ ಸಮಯಕ್ಕೆ ಸರಿಯಾಗಿ ಗೌರವಧನ ವಿತರಣೆ

ಡಿ. ಜಿಲ್ಲೆ/ವಿಭಾಗ ಹಂತದಲ್ಲಿ ಪಿಒಎಲ್, ಸಾದಿಲ್ವಾರು ಇತ್ಯಾದಿ ಅನುದಾನಗಳ ಲಭ್ಯತೆ ಮತ್ತು ಎಡಬ್ಲ್ಯುಸಿ ಹಂತದಲ್ಲಿ ಪರಿಷ್ಕೃತ ನಿಯಮಗಳಿಗೆ ಅನುಗುಣವಾಗಿ ಬಳಸಬಹುದಾದ ಅನುದಾನದ ಲಭ್ಯತೆ

ಇ. ಎಡಬ್ಲ್ಯುಸಿಗಳಲ್ಲಿ ಪರಿಷ್ಕೃತ ನಿಯಮಗಳಿಗೆ ಅನುಗುಣವಾಗಿ ಪೂರಕ ಪೋಷಕಾಂಶದ ಪೂರೈಕೆಯಲ್ಲಿ ಭಂಗ ಮತ್ತು ಅದಕ್ಕೆ ಕಾರಣ. ವಿತರಣೆ ವಿಧಾನ, ಎಸ್‌ಎಚ್‌ಜಿಗಳನ್ನು ಬಳಸಿಕೊಳ್ಳುವುದು ಇತ್ಯಾದಿ

ಎಫ್. ಎಡಬ್ಲ್ಯುಸಿಗಳಲ್ಲಿ ಪೂರಕ ಆಹಾರದ ಫೋರ್ಟಿಫಿಕೇಷನ್‌ಗೆ ವ್ಯವಸ್ಥೆ ಮತ್ತು ಅಯೋಡಿನ್‌ಯುಕ್ತ ಉಪ್ಪಿನ ಬಳಕೆ

ಜಿ. ಎಡಬ್ಲ್ಯುಸಿಗಳಲ್ಲಿ ಅನೌಪಚಾರಿಕ ಶಾಲಾಪೂರ್ವ ಶಿಕ್ಷಣದಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆ ಮತ್ತು ಕಾರ್ಯವಿಧಾನ

ಎಚ್. ಎಡಬ್ಲ್ಯುಸಿಗಳಿಗೆ ಅಗತ್ಯ ವಸ್ತುಗಳ ಹವಣಿಸಿಕೊಳ್ಳುವಿಕೆ ಮತ್ತು ಪೂರೈಕೆ/ಲಭ್ಯತೆ- ಔಷಧಗಳು ಮತ್ತು ಪಿಎಸ್‌ಇ ಕಿಟ್‌ಗಳು, ತಕ್ಕಡಿಗಳು, ಜಂಟಿ ಎಂಸಿಪಿ ಕಾರ್ಡ್, ಡಬ್ಲ್ಯುಎಚ್‌ಒ ಬೆಳವಣಿಗೆ ರೇಖಾಚಿತ್ರಗಳು ಇತ್ಯಾದಿ

ಐ. ನಿಯಮಕ್ಕೆ ಅನುಗುಣವಾಗಿ ವಿವಿಧ ಹಂತಗಳ ಪರಾಮರ್ಶನ ಮತ್ತು ಮೇಲ್ವಿಚಾರಣೆಗೆ ಅಧಿಕಾರಿಗಳ ಭೇಟಿ

ಜೆ. ಐಸಿಡಿಎಸ್ ಹೊರತಾದ ಚಟುವಟಿಕೆಗಳಲ್ಲಿ ಐಸಿಡಿಎಸ್ ಸಿಬ್ಬಂದಿಯ ಪಾಲ್ಗೊಳ್ಳುವಿಕೆ ಮತ್ತು ಅದರ ತಡೆಗೆ ವ್ಯವಸ್ಥೆ

ಕೆ. ಅನುಷ್ಠಾನವನ್ನು ಉತ್ತಮಗೊಳಿಸಲು ಸೂಕ್ತವೆನಿಸಿದ ಬೇರಾವುದೇ ವಿಷಯ

v. ಎಡಬ್ಲ್ಯುಸಿ ಮೂಲಸೌಲಭ್ಯದ ಸುಧಾರಣೆ : ಬಿಆರ್‌ಜಿಎಫ್, ಎಂಎಸ್‌ಡಿಪಿ, ಎಂಪಿಎಲ್‌ಎಡಿ ಇತ್ಯಾದಿ ವಿವಿಧ ಕಾರ್ಯಕ್ರಮ/ಯೋಜನೆಗಳಿಗೆ ಮೀಸಲಿಟ್ಟ ಅನುದಾನವನ್ನು ಬಳಸಿಕೊಂಡು ಎಡಬ್ಲ್ಯುಸಿ ಕಟ್ಟಡಗಳ ನಿರ್ಮಾಣ

vi. ಐಸಿಡಿಎಸ್ ಸೇವೆಗಳು/ಆರೋಗ್ಯ ಮತ್ತು ಪೋಷಣೆ ವಿಷಯಗಳ ಬಗ್ಗೆ ಅರಿವು ಮೂಡಿಸಲು ಐಇಸಿ ಬಳಕೆ ಹಾಗೂ ಬೇರೆ ಕಾರ್ಯಕ್ರಮ/ಯೋಜನೆಗಳ ಐಇಸಿ ಚಟುವಟಿಕೆಗಳನ್ನು ಏಕತ್ರಗೊಳಿಸುವ ಸಾಧ್ಯತೆ

II. ಐಸಿಡಿಎಸ್‌ನ ಜಿಲ್ಲಾ ಹಂತದ ಪರಾಮರ್ಶನ ಮತ್ತು ಅವಲೋಕನ ಸಮಿತಿ (ಡಿಎಲ್‌ಎಂಆರ್‌ಸಿ) :

III ಂ. ಸಂಯೋಜನೆ

i. ಜಿಲ್ಲಾ ನ್ಯಾಯಾಧೀಶ/ಕಲೆಕ್ಟರ್/ಉಪ ಆಯುಕ್ತ...............ಅಧ್ಯಕ್ಷ

ii. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ)..................ಉಪಾಧ್ಯಕ್ಷ

iii. ಜಿಲ್ಲಾ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪರಿಷತ್........................ಸದಸ್ಯ

iv. ಮುಖ್ಯ ಆರೋಗ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ .........................ಸದಸ್ಯ

v. ಜಿಲ್ಲಾ ಯೋಜನಾಧಿಕಾರಿ .........................ಸದಸ್ಯ

vi. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ.........................ಸದಸ್ಯ

vii. ಜಿಲ್ಲಾ ಕೃಷಿ/ತೋಟಗಾರಿಕೆ ಅಧಿಕಾರಿಗಳು.........................ಸದಸ್ಯ

viii. ಜಿಲ್ಲಾಧಿಕಾರಿ, ಗ್ರಾಮೀಣಾಭಿವೃದ್ಧಿ/ಎಂಎನ್‌ಆರ್‌ಇಜಿಎ........................ಸದಸ್ಯ

ix. ಕಾರ್ಯನಿರ್ವಾಹಕ ಎಂಜಿನಿಯರ್, ಪಿಎಚ್‌ಇಡಿ .........................ಸದಸ್ಯ

x. ಜಿಲ್ಲಾ ಶಿಕ್ಷಣ ಅಧಿಕಾರಿ .........................ಸದಸ್ಯ

xi. ಜಿಲ್ಲೆಯ ಸಂಸತ್ ಸದಸ್ಯ .........................ಸದಸ್ಯ

xii. ಶಾಸಕರು.........................ಸದಸ್ಯ

xiii. ಪ್ರಿನ್ಸಿಪಾಲ್ ಮಧ್ಯಮ ಹಂತದ ತರಬೇತಿ ಕೇಂದ್ರ(ಎಂಎಲ್‌ಟಿಸಿ)* .........................ಸದಸ್ಯ

xiv. ಎಡಬ್ಲ್ಯುಡಿಗಳ ಪ್ರಿನ್ಸಿಪಾಲರು (ಯಾರಾದರೂ ಇಬ್ಬರು)*.........................ಸದಸ್ಯ

xv. ಆಹಾರ ಮತ್ತು ಪೋಷಕಾಂಶ ಮಂಡಳಿಯ ಕ್ಷೇತ್ರ ಘಟಕ.........................ಸದಸ್ಯ

xvi. ಸಿಡಿಪಿಒಗಳು (ಯಾರಾದರೂ ಮೂವರು)* .........................ಸದಸ್ಯ

xvii. ಜಿಲ್ಲಾ ಕಾರ್ಯಕ್ರಮ ಅಧಿಕಾರಿ (ಐಸಿಡಿಎಸ್)...................ಸದಸ್ಯ ಕಾರ್ಯದರ್ಶಿ

* ಪ್ರತಿ ವರ್ಷವೂ ಆವರ್ತ ಆಧಾರದಲ್ಲಿ

ಟಿಪ್ಪಣಿ : ಸಮಿತಿಯು ಮೂರು ತಿಂಗಳಿಗೊಮ್ಮೆ ಅಥವಾ ಅಧ್ಯಕ್ಷರ ಸೂಚನೆ ಮೇರೆಗೆ ಅಗತ್ಯವಿರುವಾಗ ಸಭೆ ಸೇರುತ್ತದೆ ಮತ್ತು ಜಿಲ್ಲಾಮಟ್ಟದಲ್ಲಿ ಕೈಗೊಂಡ ಕ್ರಮಗಳ ರೂಪರೇಷೆಯನ್ನು ಹಾಗೂ ರಾಜ್ಯ ಸರ್ಕಾರದಿಂದ ಅಗತ್ಯವಿರುವ ಸಹಾಯವನ್ನು ಸ್ಪಷ್ಟವಾಗಿ ನಮೂದಿಸಿದ ಅವಲೋಕನ ವರದಿಯನ್ನು ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ(ಡಬ್ಲ್ಯುಸಿಡಿ)ಗೆ ಸಲ್ಲಿಸುತ್ತದೆ.

III ಃ. ಕಾರ್ಯಭಾರಗಳು

ಜಿಲ್ಲಾ ಮಟ್ಟದ ಸಮಿತಿಯು ಯೋಜನೆಯ ಅನುಷ್ಠಾನ ವಿಭಾಗ/ಯೋಜನೆವಾರು ಪ್ರಗತಿಯ ಪರಾಮರ್ಶನ ಹಾಗೂ ಅವಲೋಕನ ಮಾಡುತ್ತದೆ ಹಾಗೂ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸರಿಪಡಿಸುವ ಕ್ರಮಗಳನ್ನು ಸೂಚಿಸುತ್ತದೆ/ತೆಗೆದುಕೊಳ್ಳುತ್ತದೆ.

(i) ಅನುಷ್ಠಾನದ ಒಟ್ಟಾರೆ ಪ್ರಗತಿ

ಎ. ಮಂಜೂರಾದ ಎಲ್ಲ ಯೋಜನೆಗಳು/ಎಡಬ್ಲ್ಯುಸಿಗಳ ಕಾರ್ಯಾಚರಣೆಯ ಪರಿಸ್ಥಿತಿ. ಜಿಲ್ಲೆಯ ಎಲ್ಲ ಹಾಡಿಗಳು/ಜನವಸತಿ ಪ್ರದೇಶಗಳು, ವಿಶೇಷವಾಗಿ ಎಸ್‌ಸಿ/ಎಸ್‌ಟಿ ಮತ್ತು ಅಲ್ಪಸಂಖ್ಯಾತರು ಹೆಚ್ಚು ಸಂಖ್ಯೆಯಲ್ಲಿ ರುವ ಮತ್ತು ದೂರದಲ್ಲಿರುವ ಪ್ರದೇಶಗಳಲ್ಲಿ ಕಾರ್ಯಯೋಜನೆಯ ಪರಿಸ್ಥಿತಿ

ಬಿ.. ಫಲಾನುಭವಿಗಳ ಹರಿವು : ಎಡಬ್ಲ್ಯುಸಿಗಳಲ್ಲಿ ಸಮೀಕ್ಷೆಗೊಳಗಾದ ಜನಸಂಖ್ಯೆಯಲ್ಲಿ ನೋಂದಾಯಿಸಿಕೊಂಡವರಿಗೆ ಪ್ರತಿಯಾಗಿ ವಾಸ್ತವ ಫಲಾನುಭವಿಗಳ ಪೂರಕ ಪೋಷಕಾಂಶ ಮತ್ತು ಶಾಲಾಪೂರ್ವ ಶಿಕ್ಷಣದ ವಿಭಾಗವಾರು ವಿಶ್ಲೇಷಣೆ

ಸಿ. ಎಡಬ್ಲ್ಯುಸಿಗಳಲ್ಲಿ ಪೂರಕ ಪೋಷಕಾಂಶದ ಪೂರೈಕೆಯಲ್ಲಿ ನಿಯತತೆ ಮತ್ತು ಗುಣಮಟ್ಟ; ತಿಂಗಳೊಂದರಲ್ಲಿ ನಿಗದಿಪಡಿಸಿದಷ್ಟು ದಿನ ಬಿಸಿಯಾದ ಸಿದ್ಧಪಡಿಸಿದ ಊಟ, ಬೆಳಗಿನ ಉಪಹಾರ ಮತ್ತು ಮನೆಗೆ ಕೊಂಡೊಯ್ಯುವ ದವಸ ನೀಡಿಕೆಗೆ ಅವಕಾಶ ಮತ್ತು ಉಣಿಸುವಿಕೆಯ ಕ್ಷಮತೆಯ ವಿಭಾಗವಾರು ಹೋಲಿಕೆ

ಡಿ. 0-3 ಮತ್ತು 3-6 ವರ್ಷದ ಮಕ್ಕಳ ಪೋಷಕಾಂಶ ಸ್ಥಿತಿ: ತೂಕ, ಡಬ್ಲ್ಯುಎಚ್‌ಒ ಬೆಳವಣಿಗೆ ಮಾರ್ಗದರ್ಶಿ ಸೂತ್ರಗಳು ಮತ್ತು ಜಂಟಿ ತಾಯಿ ಮತ್ತು ಮಕ್ಕಳ ಸಂರಕ್ಷಣ ಕಾರ್ಡ್‌ಗಳು : ಮಧ್ಯಮ ಮತ್ತು ತೀವ್ರ ಪೋಷಕಾಂಶ ಕೊರತೆ ಇರುವ ಮಕ್ಕಳ ಅನುಪಾತದ ಬ್ಲಾಕ್‌ವಾರು ಹೋಲಿಕೆ : ಕೊರತೆಯ ನಿವಾರಣೆಗೆ ತೆಗೆದುಕೊಂಡ ಕ್ರಮ ಮತ್ತು ಅರ್ಧ ವಾರ್ಷಿಕ ಆಧಾರದಲ್ಲಿ ಅವುಗಳ ಪ್ರಗತಿ

ಇ.. ಎಡಬ್ಲ್ಯುಸಿಗಳಲ್ಲಿ ಒದಗಿಸುವ ಅನೌಪಚಾರಿಕ ಶಾಲಾಪೂರ್ವ ಶಿಕ್ಷಣದ ಸಾಧನೆ

(ii) ಎಲ್ಲ ಇಲಾಖೆಗಳು/ಕಾರ್ಯಕ್ರಮಗಳ ಒಮ್ಮುಖತೆ ಹಾಗೂ ಸಂಯೋಜನೆ

ಎ. ಆರೋಗ್ಯ/ಎನ್‌ಆರ್‌ಎಚ್‌ಎಂ : ಎಡಬ್ಲ್ಯುಸಿಗಳಲ್ಲಿ ಮಕ್ಕಳ ಲಸಿಕೀಕರಣ, ಹೆರಿಗೆಗೆ ಮುನ್ನ ಮತ್ತು ಆರೋಗ್ಯ ತಪಾಸಣೆ, ಪರ್ಯಾಲೋಚನ ಸೇವೆಗಳು ಮತ್ತು ಸೂಕ್ಷ್ಮ ಪೋಷಕಾಂಶಗಳ ಪೂರೈಕೆ (ವಿಟಮಿನ್ ಎ, ಐಎಫ್‌ಎ, ಜಂತು ನಿವಾರಣೆ ಮಾತ್ರೆ); ವಿಎಚ್‌ಎಸ್‌ಸಿ, ವಿಎಚ್‌ಎನ್‌ಡಿಗಳ ಕಾರ್ಯನಿರ್ವಹಣೆ ಮತ್ತು ಐವೈಸಿಎಫ್‌ನ ಉತ್ತೇಜನ : ಎಡಬ್ಲ್ಯುಸಿಗಳಿಗೆ ಆರೋಗ್ಯ ಮತ್ತು ಐಸಿಡಿಎಸ್ ಸಿಬ್ಬಂದಿಗಳ ಜಂಟಿ ಭೇಟಿ

ಬಿ. ನೀರು ಮತ್ತು ನೈರ್ಮಲ್ಯ : ಎಡಬ್ಲ್ಯುಸಿಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯದ ಸೌಲಭ್ಯ

ಸಿ. ಸರ್ವ ಶಿಕ್ಷಣ ಅಭಿಯಾನ (ಎಸ್‌ಎಸ್‌ಎ) : ಪ್ರಾಥಮಿಕ ಶಾಲೆಗಳೊಟ್ಟಿಗೆ ಎಡಬ್ಲ್ಯುಸಿಗಳನ್ನು ಇರಿಸುವುದು, ಎಡಬ್ಲ್ಯುಸಿಗಳಲ್ಲಿ ಪಿಎಸ್‌ಇಗಳ ಏಕೀಕರಣ, ಎನ್‌ಎಸ್‌ಎಯಿಂದ ಬೆಂಬಲ ಇತ್ಯಾದಿ

ಡಿ. ಪಿಆರ್‌ಐಗಳು : ಎಡಬ್ಲ್ಯುಸಿಗಳಲ್ಲಿ ಸೇವೆಗಳ ವಿತರಣೆಯ ಅವಲೋಕನ ಮತ್ತು ಮೇಲ್ವಿಚಾರಣೆಗೆ ಪಿಆರ್‌ಐಗಳು ಮತ್ತು ಸಮುದಾಯದ ಒಳಗೊಳ್ಳುವಿಕೆ

(iii) ಕಾರ್ಯಕ್ರಮ ಅನುಷ್ಠಾನ ಮತ್ತು ಸಂಯೋಜನೆಗೆ ಸಂಬಂಧಿಸಿದ ಇನ್ನಿತರ ವಿಷಯಗಳು

ಎ. ಎಡಬ್ಲ್ಯುಸಿಗಳ ಕಾರ್ಯನಿರ್ವಹಣೆಯಲ್ಲಿ ನಿಯತತೆ : ಒಟ್ಟಾರೆ ಮತ್ತು ವಿಶೇಷವಾಗಿ ಎಸ್‌ಸಿ/ಎಸ್‌ಟಿ/ಅಲ್ಪಸಂಖ್ಯಾತರು ಅಧಿಕ ಸಂಖ್ಯೆಯಲ್ಲಿರುವ ಜನವಸತಿ ಪ್ರದೇಶಗಳಲ್ಲಿ ಎಡಬ್ಲ್ಯುಸಿಗಳ ಕಾರ್ಯನಿರ್ವಹಣೆಯಲ್ಲಿ ನಿಯತತೆ

ಬಿ. ಎಡಬ್ಲ್ಯುಡಬ್ಲ್ಯು/ಮೇಲ್ವಿಚಾರಕ/ಸಿಡಿಪಿಒ ಹಂತದಲ್ಲಿ ಮಾನವಶಕ್ತಿ ಖಾಲಿ ಹುದ್ದೆಗಳು ಮತ್ತು ಸಿಬ್ಬಂದಿಗಳ ತರಬೇತಿ ಸ್ಥಿತಿ

ಸಿ. ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳಿಗೆ ಗೌರವಧನ ಹಾಗೂ ಮೇಲ್ವಿಚಾರಕರಿಗೆ ಪ್ರಯಾಣಭತ್ಯೆ ನೀಡಿಕೆ

ಡಿ. ಎಡಬ್ಲ್ಯುಸಿಗಳಿಗೆ ಮೂಲಸೌಲಭ್ಯ : ಇನ್ನಿತರ ಯೋಜನೆ/ಕಾರ್ಯಕ್ರಮಗಳೊಂದಿಗೆ ಹೊಂದಾಣಿಕೆಯಿಂದ ಎಡಬ್ಲ್ಯುಸಿ ಕಟ್ಟಡಗಳ ನಿರ್ಮಾಣ

ಇ. ಎಡಬ್ಲ್ಯುಸಿಗಳಿಗೆ ಅಗತ್ಯ ವಸ್ತುಗಳ ಪೂರೈಕೆ : ಔಷಧ ಮತ್ತು ಪಿಎಸ್‌ಇ ಕಿಟ್‌ಗಳು, ತಕ್ಕಡಿಗಳು, ಜಂಟಿ ಎಂಸಿಪಿ ಕಾರ್ಡ್, ಡಬ್ಲ್ಯುಎಚ್‌ಒ ಬೆಳವಣಿಗೆ ರೇಖಾಚಿತ್ರ ಇತ್ಯಾದಿ

ಎಫ್. ಜಿಲ್ಲೆ/ವಿಭಾಗ ಹಂತದಲ್ಲಿ ಪಿಒಎಲ್ ಮತ್ತು ಸಾದಿಲ್ವಾರು ಇತ್ಯಾದಿ ಅನುದಾನದ ಲಭ್ಯತೆ ಹಾಗೂ ಪರಿಷ್ಕೃತ ನಿಯಮಗಳ ಅನ್ವಯ ಎಡಬ್ಲ್ಯುಸಿ ಹಂತದಲ್ಲಿ ಹೊಂದಾಣಿಕೆ ಮಾಡಿಕೊಳ್ಳಬಹುದಾದ ಅನುದಾನ

ಜಿ. ಸಿಡಿಪಿಒ/ಮೇಲ್ವಿಚಾರಕರ ಸಂಚಾರ : ವಾಹನಗಳ ಲಭ್ಯತೆ ಮತ್ತು ಕಾರ್ಯಕ್ರಮಕ್ಕೆ ಸಂಬಂಧಿಸಿದ ವಾಹನಗಳನ್ನು ಬಳಸದೆ ಇರುವುದು

ಎಚ್. ನಿಯಮಗಳನ್ವಯ ಎಡಬ್ಲ್ಯುಸಿಗೆ ಸಿಡಿಪಿಒಗಳು/ಮೇಲ್ವಿಚಾರಕರ ಪರಾಮರ್ಶನ ಮತ್ತು ಮೇಲ್ವಿಚಾರಣೆ ಭೇಟಿ ಮತ್ತು ವರದಿ ಸಲ್ಲಿಕೆ

ಐ. ಎಡಬ್ಲ್ಯುಸಿಗಳಲ್ಲಿ ಪೂರಕ ಆಹಾರದ ವಿತರಣೆ ವಿಧಾನಗಳು : ಎಸ್‌ಎಚ್‌ಜಿಗಳ ಬಳಕೆ ಮತ್ತು ಅಯೊಡೀಕೃತ ಉಪ್ಪು ಬಳಕೆ ಹಾಗೂ ಸೊಪ್ಪುಗಳ ಸೇರ್ಪಡೆ

ಜೆ. ಎಡಬ್ಲ್ಯುಸಿಗಳಲ್ಲಿ ಅನೌಪಚಾರಿಕ ಶಾಲಾಪೂರ್ವ ಶಿಕ್ಷಣದಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆ ಮತ್ತು ಬಳಸುವ ಕಾರ್ಯವಿಧಾನ; ಸ್ಥಳೀಯವಾಗಿ ಅಭಿವೃದ್ಧಿಪಡಿಸಿರುವ ಕಲಿಕಾ ಮತ್ತು ಆಟದ ಸಾಮಾನುಗಳ ಬಳಕೆ, ಗೊಂಬೆಗಳ ಬ್ಯಾಂಕ್ ಮತ್ತು ಇನ್ನಿತರ ಉಪಕ್ರಮಗಳು

ಕೆ. ಐಸಿಡಿಎಸ್‌ಗೆ ಸಂಬಂಧಿಸದ ಕಾರ್ಯಕ್ರಮಗಳಲ್ಲಿ ಐಸಿಡಿಎಸ್ ಸಿಬ್ಬಂದಿಗಳ ಬಳಕೆ ಮತ್ತು ಅದನ್ನು ತಡೆಯಲು ವ್ಯವಸ್ಥೆ

ಎಲ್. ಐಸಿಡಿಎಸ್ ಅನುಷ್ಠಾನದಲ್ಲಿ ಕಡಿಮೆ ಸಾಧನೆ ಮಾಡಿರುವ ವಿಭಾಗಗಳನ್ನು ಗುರುತಿಸುವುದು ಮತ್ತು ಅದಕ್ಕೆ ಕಾರಣ ಕಂಡುಕೊಳ್ಳುವುದು

ಎಂ. ಅನುಷ್ಠಾನವನ್ನು ಉತ್ತಮಗೊಳಿಸುವುದಕ್ಕೆ ಸೂಕ್ತವಾದ ಬೇರೆ ವಿಷಯಗಳು

iv. ಹಣಕಾಸು ವಿಷಯಗಳು : ವರದಿಯಾದ ಅವಧಿಯಲ್ಲಿ ಅನುದಾನದ ಹರಿವು ಮತ್ತು ಘಟಕವಾರು ಹಂಚಿಕೆಯ ಸ್ಥಿತಿ ಮತ್ತು ವೆಚ್ಚ ಹಾಗೂ ಭಾರತ ಸರ್ಕಾರ ನಿಗದಿಪಡಿಸಿದ ಹಣಕಾಸಿನ ಪರಿಷ್ಕೃತ ಶರತ್ತುಗಳ ಅನುಸರಣೆ

v. ದೂರು/ಕುಂದುಕೊರತೆ ನಿವಾರಣೆ ಕಾರ್ಯತಂತ್ರ : ಐಸಿಡಿಎಸ್ ಸೇವೆಗಳಾದ ಎಡಬ್ಲ್ಯುಸಿಯ ಕಾರ್ಯನಿರ್ವಹಣೆಯಲ್ಲಿ ನಿಯತಕಾಲಿಕತೆ, ಪೂರಕ ಪೋಷಕಾಂಶಗಳ ಗುಣಮಟ್ಟ ಇತ್ಯಾದಿ ಬಗ್ಗೆ ಮತ್ತು ಐಸಿಡಿಎಸ್ ಸಿಬ್ಬಂದಿ ಕುರಿತು ವ್ಯಕ್ತಿಗಳು, ಸಮುದಾಯ, ಪಿಆರ್‌ಐಗಳು ಇತ್ಯಾದಿಯವರಿಂದ ಸ್ವೀಕೃತ ದೂರುಗಳ ಬಗ್ಗೆ ಕ್ರಮ ಕೈಗೊಳ್ಳುವುದು

vi. ಐಇಸಿ : ಎಡಬ್ಲ್ಯುಸಿಗಳ ಸ್ಥಳ, ಐಸಿಡಿಎಸ್ ಅಡಿ ಲಭ್ಯವಾಗುವ ಸೇವೆಗಳು, ಫಲಾನುಭವಿಗಳ ಹಕ್ಕುಗಳು, ಕುಂದುಕೊರತೆ ನಿವಾರಣೆ ಕಾರ್ಯತಂತ್ರ ಇತ್ಯಾದಿಗೆ ಸಂಬಂಧಿಸಿದ ಐಇಸಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಕೈಗೆತ್ತಿಕೊಳ್ಳುವುದು

ಟಿಪ್ಪಣಿ : ಅವಲೋಕನ ಸಭೆಯಲ್ಲಿ ಕೆಳಕಂಡ ಮಾಹಿತಿ ಮೂಲಗಳನ್ನು ಬಳಸಿಕೊಳ್ಳಬಹುದು.

ಎ. ವಿಭಾಗ ಹಂತದ ಪರಾಮರ್ಶನ ಸಮಿತಿಗಳ ವರದಿಗಳು ಮತ್ತು ವಿವರಗಳು

ಬಿ. ವಿಭಾಗ ಹಂತದ ಮಾಸಿಕ ಪ್ರಗತಿ ವರದಿಗಳು (ಎಂಪಿಆರ್‌ಗಳು) ಮತ್ತು ವಿಭಾಗಗಳ ವಾರ್ಷಿಕ ಯಥಾಪೂರ್ವ ವರದಿ(ಎಎಸ್‌ಆರ್)ಗಳ ವಿಶ್ಲೇಷಣೆ

ಸಿ. ಸಮಿತಿಯ ಸದಸ್ಯರು ಮತ್ತು ಜಿಲ್ಲೆಯ ಇತರ ಅಧಿಕಾರಿಗಳ ಕ್ಷೇತ್ರ ಭೇಟಿಗಳ ವರದಿಗಳು ಮತ್ತು ಇನ್ಯಾವುದೇ ಮೌಲ್ಯಮಾಪನ/ಮೌಲ್ಯಾಂಕನ ವರದಿ ಹಾಗೂ

ಡಿ. ಸಾರ್ವಜನಿಕರು/ಮಾಧ್ಯಮದ ವರದಿಗಳು (ಇದ್ದಲ್ಲಿ)

Iಗಿ. ಐಸಿಡಿಎಸ್‌ನ ವಿಭಾಗ ಹಂತದ ಪರಾಮರ್ಶನ ಸಮಿತಿ (ಬಿಎಲ್‌ಎಂಸಿ)

Iಗಿ ೦. ಸಂಯೋಜನೆ

i. ಉಪವಿಭಾಗೀಯ ನ್ಯಾಯಾಧೀಶ (ಎಸ್‌ಡಿಎಂ)...............ಅಧ್ಯಕ್ಷರು

ii. ವಿಭಾಗ ಅಭಿವೃದ್ಧಿ ಅಧಿಕಾರಿ/ಟಿಡಿಒ .........................ಉಪಾಧ್ಯಕ್ಷರು

iii. ವಿಭಾಗ ಪ್ರತಿನಿಧಿ/ಆರೋಗ್ಯ (ಬಿಎಂಒ/ಪಿಎಚ್‌ಸಿಯ ಎಂಒ/ಸಿಎಚ್‌ಸಿ)..........................ಸದಸ್ಯ

iv. ಶಿಕ್ಷಣ ಇಲಾಖೆ ವಿಭಾಗದ ಪ್ರತಿನಿಧಿ (ಬಿಇಒ/ಶಾಲೆಯ ಡೆಪ್ಯುಟಿ ಇನ್‌ಸ್ಪೆಕ್ಟರ್/ಎಸ್‌ಎಸ್‌ಎ ಉಸ್ತುವಾರಿ) .....................ಸದಸ್ಯ

v. ಕೃಷಿ ತೋಟಗಾರಿಕೆ ವಿಭಾಗದ ವಿಸ್ತರಣ ಅಧಿಕಾರಿ.....................ಸದಸ್ಯ

vi. ವಿಭಾಗ/ನಗರ/ತಾಲೂಕು ಪಂಚಾಯಿತಿ ಪ್ರತಿನಿಧಿ.....................ಸದಸ್ಯ

vii. ಅಂಗನವಾಡಿ ತರಬೇತಿ ಕೇಂದ್ರದ ಪ್ರಿನ್ಸಿಪಾಲ್*....................ಸದಸ್ಯ

viii. ಸ್ಥಳೀಯ ಎನ್‌ಜಿಒಗಳ ಪ್ರತಿನಿಧಿಗಳು (2).....................ಸದಸ್ಯ

ix. ಸಿಡಿಪಿಒ.................ಸಂಚಾಲಕ

* ಇದ್ದಲ್ಲಿ

ಟಿಪ್ಪಣಿ : * ಸಮಿತಿಯು ಮೂರು ತಿಂಗಳಿಗೊಮ್ಮೆ ಸಭೆ ಸೇರಲಿದೆ ಮತ್ತು ಜಿಲ್ಲಾ ಸಮಿತಿಗೆ ವರದಿ ನೀಡಲಿದ್ದು, ಅದರ ಪ್ರತಿಯನ್ನು ಐಸಿಡಿಎಸ್‌ನ ರಾಜ್ಯ ನಿರ್ದೇಶನಾಲಯಕ್ಕೆ ಕಳುಹಿಸಲಿದೆ

* ವಿಭಾಗ ಹಂತದ ಸಮಿತಿಯಲ್ಲಿ ಸಂಬಂಧಿಸಿದ ಇಲಾಖೆಗಳ ವಿಭಾಗ ಹಂತದ ಪ್ರತಿನಿಧಿಗೆ ಪ್ರಾತಿನಿಧ್ಯ ನೀಡಬೇಕೇ ಎಂಬುದನ್ನು ರಾಜ್ಯ ಸರ್ಕಾರ ನಿರ್ಧರಿಸಬಹುದು

* ಪಶುಸಂಗೋಪನೆ/ಹೈನುಗಾರಿಕೆ/ಮೀನುಗಾರಿಕೆ ಇತ್ಯಾದಿ ಇಲಾಖೆಗಳ ಪ್ರತಿನಿಧಿಗಳನ್ನು ಅಗತ್ಯವಿದ್ದಲ್ಲಿ ಆಹ್ವಾನಿಸಬಹುದು

* ವಿಭಾಗದ 2-3 ಐಸಿಡಿಎಸ್ ಮೇಲ್ವಿಚಾರಕರನ್ನು ಆವರ್ತ ಮಾದರಿಯಲ್ಲಿ ಆಹ್ವಾನಿಸಬಹುದು

Iಗಿ ಃ. ಕಾರ್ಯಭಾರಗಳು

ವಿಭಾಗ ಹಂತದ ಸಮಿತಿಯು ಕೆಳಕಂಡ ವಿಷಯಗಳನ್ನು ಪರಾಮರ್ಶಿಸಲಿದೆ ಮತ್ತು ಅವಲೋಕಿಸಲಿದೆ ಹಾಗೂ ಸೂಕ್ತ ಸಲಹೆ ನೀಡಲಿದೆ/ಕ್ರಮ ತೆಗೆದುಕೊಳ್ಳಲಿದೆ;

i. ಒಟ್ಟಾರೆ ಅನುಷ್ಠಾನದ ಪ್ರಗತಿಗೆ ಸಂಬಂಧಿಸಿದಂತೆ

ಎ. ವಿಭಾಗದಲ್ಲಿರುವ ಎಲ್ಲ ಜನವಸತಿಗಳು/ಹಾಡಿಗಳು, ವಿಶೇಷವಾಗಿ, ಎಸ್‌ಸಿ/ಎಸ್‌ಟಿ ಮತ್ತು ಅಲ್ಪಸಂಖ್ಯಾತರು ಹೆಚ್ಚು ಸಂಖ್ಯೆಯಲ್ಲಿ ಇರುವೆಡೆ ಹಾಗೂ ದೂರದ ಪ್ರದೇಶಗಳಲ್ಲಿ

ಬಿ. ಫಲಾನುಭವಿಗಳ ಹರವು : ಎಡಬ್ಲ್ಯುಸಿಗಳಲ್ಲಿ ಸಮೀಕ್ಷೆಗೊಳಗಾದ ಜನಸಂಖ್ಯೆಯಲ್ಲಿ ನೋಂದಾಯಿಸಿಕೊಂಡವರಿಗೆ ಪ್ರತಿಯಾಗಿ ವಾಸ್ತವ ಫಲಾನುಭವಿಗಳ ಪೂರಕ ಪೋಷಕಾಂಶ ಮತ್ತು ಶಾಲಾಪೂರ್ವ ಶಿಕ್ಷಣದ ವಿಭಾಗವಾರು ವಿಶ್ಲೇಷಣೆ

ಸಿ. ಪೂರಕ ಪೋಷಕಾಂಶದ ಗುಣಮಟ್ಟ

ಡಿ. 0-3 ಮತ್ತು 3-6 ವರ್ಷದ ಮಕ್ಕಳ ಪೋಷಕಾಂಶ ಸ್ಥಿತಿ: ತೂಕ, ಡಬ್ಲ್ಯುಎಚ್‌ಒ ಬೆಳವಣಿಗೆ ಮಾರ್ಗದರ್ಶಿ ಸೂತ್ರಗಳು ಮತ್ತು ತಾಯಿ ಹಾಗೂ ಮಕ್ಕಳ ಜಂಟಿ ಸುರಕ್ಷಾ ಕಾರ್ಡ್‌ಗಳು : ಮಧ್ಯಮ

ಮತ್ತು ತೀವ್ರ ಪೋಷಕಾಂಶ ಕೊರತೆ ಇರುವ ಮಕ್ಕಳ ಅನುಪಾತದ ವಿಭಾಗವಾರು ಹೋಲಿಕೆ: ಅವುಗಳ ನಿವಾರಣೆಗೆ ತೆಗೆದುಕೊಂಡು ಕ್ರಮ ಮತ್ತು ಅರ್ಧವಾರ್ಷಿಕ ಆಧಾರದಲ್ಲಿ ಸಾಧಿಸಿದ ಪ್ರಗತಿ

ಇ. ವರದಿಯಾಗುವ ತಿಂಗಳಿನಲ್ಲಿ 21ಕ್ಕೂ ಹೆಚ್ಚು ದಿನ ಮನೆಗೆ ದವಸಧಾನ್ಯ, ಬೆಳಗಿನ ಉಪಹಾರ ಮತ್ತು ಬಿಸಿಯೂಟವನ್ನು ಪೂರೈಸುವ ಎಡಬ್ಲ್ಯುಸಿಗಳ ಸಂಖ್ಯೆ

ಎಫ್. ಮಾಸಿಕ ಗ್ರಾಮ ಮತ್ತು ಆರೋಗ್ಯ ಪೋಷಕಾಂಶ ದಿನ(ವಿಎಚ್ಎನ್‌ಡಿ)ಗಳನ್ನು ಸಂಘಟಿಸಿದ ಎಡಬ್ಲ್ಯುಸಿಗಳ ಸಂಖ್ಯೆ ಮತ್ತು ವಿಎಚ್ಎನ್‌ಡಿಗಳಲ್ಲಿ ನಡೆಸಿದ ಚಟುವಟಿಕೆಗಳ ವಿವರಗಳು

(ii) ಸಂಬಂಧಪಟ್ಟ ಇಲಾಖೆಗಳು/ಕಾರ್ಯಕ್ರಮಗಳ ಏಕತ್ರಗೊಳಿಸುವಿಕೆ ಮತ್ತು ಸಹಯೋಗ:

ಎ.ಆರೋಗ್ಯ/ಎನ್‌ಎಚ್‌ಆರ್‌ಎಂ : ಎಡಬ್ಲ್ಯುಸಿಗಳಲ್ಲಿ ಸಮಯಕ್ಕೆ ಸರಿಯಾಗಿ ಮಕ್ಕಳ ಲಸಿಕೀಕರಣ, ಹೆರಿಗೆ ಪೂರ್ವ ಮತ್ತು ಆರೋಗ್ಯ ತಪಾಸಣೆಗಳು, ಪರ್ಯಾಲೋಚನ ಸೇವೆಗಳು ಮತ್ತು ಸೂಕ್ಷ್ಮ ಪೋಷ ಕಾಂಶಗಳ ಪೂರೈಕೆ (ವಿಟಮಿನ್ ಎ, ಐಎಫ್‌ಎ, ಜಂತು ನಿವಾರಣೆ ಮಾತ್ರೆ): ವಿಎಚ್‌ಎನ್‌ಡಿ ಮತ್ತು ವಿಎಚ್‌ಎಸ್‌ಸಿಗಳ ಕಾರ್ಯನಿರ್ವಹಣೆ ಹಾಗೂ ಐವೈಸಿಎಫ್‌ನ ಉತ್ತೇಜನ : ಎಡಬ್ಲ್ಯುಸಿಗಳಿಗೆ ಎಎನ್‌ಎಂಗಳ ಯೋಜಿತ ಭೇಟಿ

ಬಿ. ನೀರು ಮತ್ತು ನೈರ್ಮಲ್ಯ : ಎಡಬ್ಲ್ಯುಸಿಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ

ಸಿ. ಪಿಆರ್‌ಐಗಳು : ಎಡಬ್ಲ್ಯುಸಿಗಳಲ್ಲಿ ಸೇವೆಗಳ ವಿತರಣೆಯ ಪರಾಮರ್ಶನ ಮತ್ತು ಸಂಘಟನೆಯಲ್ಲಿ ಪಿಆರ್‌ಐಗಳು ಮತ್ತು ಸಮುದಾಯದ ಒಳಗೊಳ್ಳುವಿಕೆ

iii. ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದ ಇತರ ವಿಷಯಗಳು ಮತ್ತು ತೆಗೆದುಕೊಂಡ ಕ್ರಮಗಳು:

ಎ. ಎಡಬ್ಲ್ಯುಸಿಗಳ ಕಾರ್ಯನಿರ್ವಹಣೆಯಲ್ಲಿ ನಿಯತತೆ : ಒಟ್ಟಾರೆಯಾಗಿ ಮತ್ತು ನಿರ್ದಿಷ್ಟವಾಗಿ, ಎಸ್‌ಸಿ/ಎಸ್‌ಟಿ/ಅಲ್ಪಸಂಖ್ಯಾತರು ಹೆಚ್ಚು ಸಂಖ್ಯೆಯಲ್ಲಿರುವ ವಸತಿ ಪ್ರದೇಶ/ಹಾಡಿಗಳಲ್ಲಿ ಎಡಬ್ಲ್ಯುಸಿಗಳ ಕಾರ್ಯನಿರ್ವಹಣೆಯಲ್ಲಿ ನಿಯತತೆ ಹಾಗೂ ಎಡಬ್ಲ್ಯುಡಬ್ಲ್ಯುಗಳಿಂದ ಎಂಪಿಆರ್‌ಗಳ ಸಲ್ಲಿಕೆ

ಬಿ.. ಎಡಬ್ಲ್ಯುಡಬ್ಲ್ಯು/ಮೇಲ್ವಿಚಾರಕ/ಸಿಡಿಪಿಒ ಹಂತದಲ್ಲಿ ಮಾನವಶಕ್ತಿ ಖಾಲಿ ಹುದ್ದೆಗಳು ಹಾಗೂ ಅವರ ತರಬೇತಿಯ ಸ್ಥಿತಿ

ಸಿ. ಎಡಬ್ಲ್ಯುಡಬ್ಲ್ಯು/ಎಡಬ್ಲ್ಯುಎಚ್‌ಗಳಿಗೆ ಗೌರವಧನ ಮತ್ತು ಮೇಲ್ವಿಚಾರಕರಿಗೆ ಪ್ರಯಾಣಭತ್ಯೆ ನೀಡಿಕೆ

ಡಿ. ಎಡಬ್ಲ್ಯುಸಿಗಳಿಗೆ ಮೂಲಸೌಲಭ್ಯ : ಇನ್ನಿತರ ಯೋಜನೆ/ಕಾರ್ಯಕ್ರಮಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು, ಎಡಬ್ಲ್ಯುಸಿಗಳಿಗೆ ಕಟ್ಟಡ ನಿರ್ಮಾಣ

ಇ. ಎಡಬ್ಲ್ಯುಸಿಗಳಿಗೆ ಅಗತ್ಯ ವಸ್ತುಗಳ ಪೂರೈಕೆ (ಔಷಧ ಮತ್ತು ಪಿಎಸ್‌ಇ ಕಿಟ್‌ಗಳು, ತಕ್ಕಡಿಗಳು, ಎಂಸಿಪಿ ಜಂಟಿ ಕಾರ್ಡ್, ಡಬ್ಲ್ಯುಎಚ್‌ಒ ಬೆಳವಣಿಗೆ ರೇಖಾಚಿತ್ರ ಇತ್ಯಾದಿ)

ಎಫ್. ಜಿಲ್ಲೆ ಮತ್ತು ವಿಭಾಗ ಹಂತದಲ್ಲಿ ಪಿಒಎಲ್ ಮತ್ತು ಸಾದಿಲ್ವಾರು ಇತ್ಯಾದಿ ಅನುದಾನದ ಲಭ್ಯತೆ ಹಾಗೂ ಪರಿಷ್ಕೃತ ನಿಯಮಗಳ ಅನ್ವಯ ಎಡಬ್ಲ್ಯುಸಿ ಹಂತದಲ್ಲಿ ಹೊಂದಿಸಿಕೊಳ್ಳಬಹುದಾದ ಅನುದಾನ

ಜಿ. ಮುಖ್ಯ ಸಂಪರ್ಕ ಅವಧಿಯಲ್ಲಿ ಎಡಬ್ಲ್ಯುಡಬ್ಲ್ಯುಗಳಿಂದ ಮನೆಗಳಿಗೆ ಭೇಟಿ : ಪ್ರಮುಖ ಆರೋಗ್ಯ ಮತ್ತು ಪೋಷಕಾಂಶ ವಿಷಯಗಳಿಗೆ ಸಂಬಂಧಿಸಿದಂತೆ ಗರ್ಭಿಣಿಯರು ಮತ್ತು ಹಾಲುಣಿಸುತ್ತಿರುವ ತಾಯಂದಿರು ಹಾಗೂ 2 ವರ್ಷಕ್ಕಿಂತ ಕಿರಿಯ ವಯಸ್ಸಿನ ಮಕ್ಕಳಿರುವ ಕುಟುಂಬಗಳಿಗೆ ಸಲಹೆ ನೀಡುವಿಕೆ

ಎಚ್. ಮೇಲ್ವಿಚಾರಕರಿಂದ ಮೇಲ್ವಿಚಾರಣಾ ಬೆಂಬಲ : ವಿಭಾಗೀಯ ಹಂತದಲ್ಲಿ ಅವಲೋಕನ ಸಭೆಗಳನ್ನು ಸಂಘಟಿಸುವಿಕೆ; ಎಂಪಿಆರ್‌ಗಳ ವಿಶ್ಲೇಷಣೆ ಇತ್ಯಾದಿ (ಮೇಲ್ವಿಚಾರಣ ಭೇಟಿಯ ನಡುವಿನ ಅಂತರದ ಪರಾಮರ್ಶನ ಮತ್ತು ನಿರೀಕ್ಷಿಸಿದಷ್ಟು ಭೇಟಿಗಿಂತ ಕಡಿಮೆ ಇರಲು ಕಾರಣಗಳು)

ಐ. ಗ್ರಾಮ ಆರೋಗ್ಯ ಮತ್ತು ಪೋಷಕಾಂಶ ದಿನ (ವಿಎಚ್‌ಎನ್‌ಡಿ) ದಿನಾಚರಣೆ- ಎಎನ್‌ಎಂ ಮತ್ತು ಪಿಆರ್‌ಐ ಸದಸ್ಯರ ಪಾಲ್ಗೊಳ್ಳುವಿಕೆ

ಜೆ. ಎಡಬ್ಲ್ಯುಸಿಗಳಲ್ಲಿ ಪೂರಕ ಪೋಷಕಾಂಶ ವಿತರಣೆ ವಿಧಾನಗಳು- ಎಸ್‌ಎಚ್‌ಜಿಗಳನ್ನು ತೊಡಗಿಸಿಕೊಳ್ಳುವುದು ಮತ್ತು ಎಡಬ್ಲ್ಯುಸಿಗಳಲ್ಲಿ ಅಯೋಡೀಕೃತ ಉಪ್ಪು ಬಳಕೆ

ಕೆ. ಎಡಬ್ಲ್ಯುಸಿಗಳಲ್ಲಿ ಅನೌಪಚಾರಿಕ ಶಾಲಾಪೂರ್ವ ಶಿಕ್ಷಣದಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆ ಮತ್ತು ಕ್ರಮವಿಧಾನ : ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಬೋಧನೆ ಮತ್ತು ಆಟದ ವಸ್ತುಗಳು, ಗೊಂಬೆಗಳ ಬ್ಯಾಂಕ್ ಮತ್ತು ಇನ್ನಿತರ ಉಪಕ್ರಮಗಳು

ಎಲ್. ಎಡಬ್ಲ್ಯುಡಬ್ಲ್ಯುಗಳು ಹಾಗೂ ಮೇಲ್ವಿಚಾರಕರನ್ನು ಐಸಿಡಿಎಸ್ ಅಲ್ಲದ ಕಾರ್ಯಕ್ರಮಗಳಲ್ಲಿ ಬಳಸಿಕೊಳ್ಳುವುದು ಮತ್ತು ಅದನ್ನು ತಡೆಯುವ ವ್ಯವಸ್ಥೆ

ಎಂ. ಐಸಿಡಿಎಸ್ ಅನುಷ್ಠಾನದಲ್ಲಿ ಕಳಪೆ ಸಾಧನೆ ಮಾಡಿದ ಎಡಬ್ಲ್ಯುಸಿ/ವಿಭಾಗಗಳನ್ನು ಮತ್ತು ಅದಕ್ಕೆ ಕಾರಣವಾದ ಅಂಶಗಳನ್ನು ಗುರುತಿಸುವುದು

ಎನ್. ಅನುಷ್ಠಾನವನ್ನು ಉತ್ತಮಗೊಳಿಸಲು ಅಗತ್ಯವೆನ್ನಿಸಿದ ಇನ್ಯಾವುದೇ ವಿಷಯ

iv. ದೂರು/ಐಸಿಡಿಎಸ್ ಕಾರ್ಯನಿರ್ವಹಣೆಯಲ್ಲಿ ಕುಂದುಕೊರತೆಗಳನ್ನು ಪರಿಹರಿಸಲು ಕಾರ್ಯತಂತ್ರ: ಐಸಿಡಿಎಸ್‌ನ ಸೇವೆಗಳಾದ ನಿಯತಕಾಲಿಕತೆ, ಪೂರಕ ಪೋಷಕಾಂಶಗಳ ಗುಣಮಟ್ಟ ಇತ್ಯಾದಿ ಕುರಿತು ವ್ಯಕ್ತಿ ಗಳು, ಸಮುದಾಯ, ಪಿಆರ್‌ಐಗಳು ಇತ್ಯಾದಿಗಳಿಂದ ಸ್ವೀಕರಿಸಿದ ದೂರಿಗೆ ತೆಗೆದುಕೊಂಡ ಕ್ರಮಗಳು ಹಾಗೂ ಮೇಲ್ವಿಚಾರಕರು/ಎಡಬ್ಲ್ಯುಡಬ್ಲ್ಯುಗಳ ಕರ್ತವ್ಯ ನಿರ್ಲಕ್ಷ್ಯ ಕುರಿತ ದೂರುಗಳ ಬಗ್ಗೆ ತೆಗೆದುಕೊಂಡ ಕ್ರಮ

ಟಿಪ್ಪಣಿ : ಪರಾಮರ್ಶನ ಸಭೆಯಲ್ಲಿ ಕೆಳಕಂಡ ಮಾಹಿತಿ ಮೂಲಗಳನ್ನು ಬಳಸಿಕೊಳ್ಳಬಹುದು;

ಎ. ವಿಭಾಗ ಹಂತದ ಪರಾಮರ್ಶನ ವರದಿಗಳು ಮತ್ತು ವಿವರಗಳು

ಬಿ. ವಿಭಾಗದ ಮಾಸಿಕ ಪ್ರಗತಿ ವರದಿ(ಎಂಪಿಆರ್‌ಗಳು) ಮತ್ತು ವಿಭಾಗಗಳ ವಾರ್ಷಿಕ ಯಥಾಪೂರ್ವ ವರದಿಗಳು (ಎಎಸ್‌ಆರ್‌ಗಳು)

ಸಿ. ಎಡಬ್ಲ್ಯುಸಿಗಳಿಗೆ ಸಮಿತಿಯ ಸದಸ್ಯರು ಮತ್ತು ವಿಭಾಗ/ಜಿಲ್ಲೆಯ ಇನ್ನಿತರ ಅಧಿಕಾರಿಗಳ ಕ್ಷೇತ್ರ ಭೇಟಿಯ ವರದಿಗಳು

ಡಿ. ಸಾರ್ವಜನಿಕರು/ಮಾಧ್ಯಮಗಳ ವರದಿಗಳು (ಇದ್ದಲ್ಲಿ)

ಗ. ಐಸಿಡಿಎಸ್‌ನ ಅಂಗನವಾಡಿ ಹಂತದ ಪರಾಮರ್ಶನ ಮತ್ತು ಬೆಂಬಲ ಸಮಿತಿ (ಎಎಲ್‌ಎಂಎಸ್‌ಸಿ)

ಗ೦. ಸಂಯೋಜನೆ

i. ಗ್ರಾಮಪಂಚಾಯಿತಿ/ವಾರ್ಡ್ ಸದಸ್ಯ(ಮಹಿಳಾ ಸದಸ್ಯೆಗೆ ಆದ್ಯತೆ)...................ಅಧ್ಯಕ್ಷ/ಕ್ಷೆ

ii. ಮಹಿಳಾ ಮಂಡಳಿ(2 ಸದಸ್ಯೆಯರು, ಆವರ್ತ ಮಾದರಿಯಲ್ಲಿ)................ಸದಸ್ಯರು

iii. ಆಶಾ..................ಸದಸ್ಯರು

ಪ್ರತಿನಿಧಿಗಳು

iv. ಸಮುದಾಯ ಆಧಾರಿತ ಸಂಘಟನೆಗಳು (2)........ಸದಸ್ಯರು

v. ಸಮುದಾಯ (ಶಿಕ್ಷಕರು)/ನಿವೃತ್ತ ಸರ್ಕಾರಿ ಅಧಿಕಾರಿಗಳು/ಎಡಬ್ಲ್ಯುಸಿಗೆ ಬರುತ್ತಿರುವ ಮಕ್ಕಳ ಪೋಷಕರು (3)................ ಸದಸ್ಯರು

vi. ಸಬಲಾ ಕಾರ್ಯಕ್ರಮದಡಿಯ ಸಖಿ (ಇದ್ದಲ್ಲಿ)..................ಸದಸ್ಯರು

vii. ಅಂಗನವಾಡಿ ಕಾರ್ಯಕರ್ತೆ.............ಸಂಚಾಲಕರು

ಟಿಪ್ಪಣಿ : ಸಮಿತಿಯು ಗ್ರಾಮ ಅಥವಾ ವಾರ್ಡ್/ಕೊಳೆಗೇರಿಯ ಅಂಗನವಾಡಿ ಪ್ರದೇಶದಲ್ಲಿರುವ ನಾನಾ ವಿಷಯಗಳ ಬಗ್ಗೆ ಮಾಸಿಕ ನಿಯತ ಸಭೆಯನ್ನು ಆಯೋಜಿಸಲಿದೆ ಮತ್ತು ಸಭೆಯ ವಿವರಗಳನ್ನು ದಾಖಲಿಸಿಕೊಳ್ಳಲಿದೆ. ವಿವರಗಳ ಪ್ರತಿಯನ್ನು ವಿಭಾಗ ಹಂತದ ಸಮಿತಿ ಮತ್ತು ಸಿಡಿಪಿಒಗೆ ಕಳುಹಿಸಬಹುದು

* ಅಗತ್ಯವಿರುವಾಗ ಐಸಿಡಿಎಸ್ ಮೇಲ್ವಿಚಾರಕ, ಎಎನ್‌ಎಂ, ಎಲ್‌ಎಚ್‌ವಿಯನ್ನು ಸಭೆಗೆ ಆಹ್ವಾನಿಸಬಹುದು

ಗl ಃ. ಕಾರ್ಯಭಾರಗಳು

ಅಂಗನವಾಡಿ ಹಂತದ ಸಮಿತಿಯು ಎಡಬ್ಲ್ಯುಸಿಯಲ್ಲಿ ಸೇವೆಗಳ ವಿತರಣೆಯನ್ನು ಪರಾಮರ್ಶಿಸಲಿದೆ ಮತ್ತು ಸುಧಾರಣೆಗೆ ಅಗತ್ಯವಾದ ಸಲಹೆಗಳನ್ನು ಪರಿಗಣಿಸುತ್ತದೆ, ಕ್ರಮಗಳನ್ನು ಸೂಚಿಸುತ್ತದೆ. ಸಮಿತಿಯು ಕೆಳಕಂಡ ಪಾತ್ರಗಳನ್ನು ನಿರ್ವಹಿಸುವ ಅಧಿಕಾರ ಹೊಂದಿದೆ ಮತ್ತು ಕ್ರಮಗಳನ್ನು ನಿರೀಕ್ಷಿಸಲಾಗಿದೆ:

i. ಎಡಬ್ಲ್ಯುಸಿ ನಿಯತವಾಗಿ ಕಾರ್ಯನಿರ್ವಹಿಸುತ್ತಿದೆಯೇ ಎಂದು ಪರಿಶೀಲಿಸುವುದು

ii. ಸಮೀಕ್ಷೆಯಡಿಯ ಜನಸಂಖ್ಯೆಗೆ ಪ್ರತಿಯಾಗಿ ಎಲ್ಲ ಅರ್ಹ ಫಲಾನುಭವಿಗಳಿಗೂ ಸೇವೆಯನ್ನು ಖಾತ್ರಿಗೊಳಿಸುವುದು

iii. ತಿಂಗಳೊಂದರಲ್ಲಿ ಕನಿಷ್ಠ 21 ದಿನ ಎಲ್ಲ ಫಲಾನುಭವಿಗಳಿಗೆ ಪೂರಕ ಆಹಾರ ಪೂರೈಕೆಯಾಗುತ್ತಿದೆ ಎಂಬುದರ ಯಥಾರ್ಥ ಪರಾಮರ್ಶನ

iv. 0-3 ಮತ್ತು 3-6 ವರ್ಷದ ಮಕ್ಕಳ ಪೋಷಕಾಂಶ ಸ್ಥಿತಿಯ ಅವಲೋಕನ- ತೂಕ, ಡಬ್ಲ್ಯುಎಚ್‌ಒದ ಹೊಸ ಬೆಳವಣಿಗೆ ನಕ್ಷೆ ಮತ್ತು ತಾಯಿ ಮತ್ತು ಮಗು ಜಂಟಿ ಸುರಕ್ಷಾ ಕಾರ್ಡ್‌ನ ಲಭ್ಯತೆ ಹಾಗೂ ಮಧ್ಯಮ ಮತ್ತು ತೀವ್ರ ಪೋಷಕಾಂಶ ಕೊರತೆಯಿರುವ ಮಕ್ಕಳ ಸಂಖ್ಯೆ ಹಾಗೂ ತೆಗೆದುಕೊಂಡ ಪರಿಹಾರ ಕ್ರಮಗಳು

v. ಅನೌಪಚಾರಿಕ ಪಿಎಸ್‌ಇಗಳ ಕಾರ್ಯನಿರ್ವಹಣೆಯ ಪರಾಮರ್ಶನ - ದೈನಿಕ ಚಟುವಟಿಕೆ, ಸ್ಥಳೀಯ ಕಲಿಕಾ ಮತ್ತು ಆಟದ ಸಾಮಾನುಗಳ ಬಳಕೆ/ಅಭಿವೃದ್ಧಿ, ಪೋಷಕರ ಸಭೆ ನಡೆಸುವುದು ಇತ್ಯಾದಿ.

vi. ವಿಎಚ್‌ಎಸ್‌ಸಿ ಸಭೆಗಳಲ್ಲಿ ಎಡಬ್ಲ್ಯುಡಬ್ಲ್ಯುಗಳ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸುವುದು

vii. ಎಡಬ್ಲ್ಯುಸಿಗಳಲ್ಲಿ ನಡೆಯುವ ಮಾಸಿಕ ವಿಎಚ್‌ಎನ್‌ಡಿಯಲ್ಲಿ ಕನಿಷ್ಠ ಒಬ್ಬರು ಸದಸ್ಯರು (ಎಡಬ್ಲ್ಯುಡಬ್ಲ್ಯು, ಆಶಾ ಮತ್ತು ಎಎನ್‌ಎಂ ಹೊರತುಪಡಿಸಿ) ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸುವುದು ಮತ್ತು ಸಭೆಯನ್ನು ಉತ್ತಮವಾಗಿ ಸಂಯೋಜಿಸುವುದು ಹಾಗೂ ಹೆಚ್ಚು ಜನ ಹಾಜರಿರುವಂತೆ ಮತ್ತು ಅಂದು ಎಲ್ಲ ಸೇವೆಗಳೂ ಲಭ್ಯವಿರುವಂತೆ ನೋಡಿಕೊಳ್ಳುವುದು

viii. ಸ್ಥಾಪಿತ ಮಾದರಿಗಳ ಬೆಳಕಿನಲ್ಲಿ ಎಡಬ್ಲ್ಯುಸಿಯಲ್ಲಿ ಲಭ್ಯವಿರುವ ಮೂಲಸೌಲಭ್ಯಗಳ ಅವಲೋಕನ (ಮೂಲಸೌಲಭ್ಯಗಳಾದ ಕುಡಿಯುವ ನೀರು, ಸುಸ್ಥಿತಿಯಲ್ಲಿರುವ ಶೌಚಾಲಯ, ಆಟದ ಮೈದಾನ, ಪಿಎಸ್‌ಇ/ಔಷಧದ ಕಿಟ್‌ಗಳು, ಅಡುಗೆ ಪಾತ್ರೆಗಳು ಇತ್ಯಾದಿ)

(ಸಮಿತಿಯು ಸಮುದಾಯದಿಂದ/ಇನ್ನಿತರ ಯೋಜನೆಗಳ ಸಂಪನ್ಮೂಲವನ್ನು ಕ್ರೋಡೀಕರಿಸಿ, ಎಡಬ್ಲ್ಯುಸಿಯ ಮೂಲಸೌಲಭ್ಯಗಳನ್ನು ಸ್ಥಳೀಯವಾಗಿಯೇ ಬಲಗೊಳಿಸಲು ಇರುವ ಮಾರ್ಗಗಳನ್ನು ಪರಿಗಣಿಸ ಬಹುದು)

ix. ಪೂರಕ ಆಹಾರ ಮತ್ತು ಔಷಧದಂಥ ವಸ್ತುಗಳ ಬಳಕೆ ಮತ್ತು ಸ್ವೀಕೃತಿಯ ಅವಲೋಕನ ಹಾಗೂ ಭೌತಿಕ ಸಂಗ್ರಹದ ಪರಿಶೀಲನೆ

* ನಿರೀಕ್ಷಿಸಿದ್ದಕ್ಕಿಂತ ಕಡಿಮೆ ಇದ್ದಲ್ಲಿ ಇಲ್ಲವೇ ಸಂಗ್ರಹದಲ್ಲಿ ವ್ಯತ್ಯಾಸವಿದ್ದಲ್ಲಿ ಕಾರಣ ಹುಡುಕುವುದು

* ದಾಖಲಿಸುವುದು ಮತ್ತು ಸಂಗ್ರಹದಲ್ಲಿ ಕೊರತೆ ಇದ್ದಲ್ಲಿ ಹಾಗೂ ವ್ಯತ್ಯಯಗಳಿದ್ದಲ್ಲಿ ವಿಭಾಗ ಹಂತದ ಪರಾಮರ್ಶನ ಸಮಿತಿ ಮತ್ತು ಸಿಡಿಪಿ2 ಅವರಿಗೆ ವರದಿ ಮಾಡುವುದು

* ಎಡಬ್ಲ್ಯುಸಿ ಇಲ್ಲವೇ ಎಡಬ್ಲ್ಯುಡಬ್ಲ್ಯುಗೆ ಸಂಬಂಧಿಸಿದ ಸ್ಥಳೀಯ ವಿವಾದಗಳದ್ದಲ್ಲಿ ಗಮನಿಸುವುದು ಹಾಗೂ ಅಂಥ ವಿವಾದಗಳನ್ನು ಸೌಹಾರ್ದಯುತವಾಗಿ ಬಗೆಹರಿಸುವುದು; ಬಗೆಹರಿಯದ ವಿವಾದಗಳನ್ನು ಗ್ರಾಮಪಂಚಾಯಿತಿ ಇಲ್ಲವೇ ವಿಭಾಗ ಹಂತದ ಪರಾಮರ್ಶನ ಸಮಿತಿಗೆ ರವಾನಿಸುವುದು

xi. ಎಡಬ್ಲ್ಯುಸಿಗಳಲ್ಲಿ ಪೂರೈಸುವ ಸೇವೆಗಳಲ್ಲಿ ಯಾವುದೇ ಕೊರತೆಯಿದ್ದಲ್ಲಿ, ಎಡಬ್ಲ್ಯುಡಬ್ಲ್ಯು/ಐಸಿಡಿಎಸ್ ಮೇಲ್ವಿಚಾರಕನ ಜೊತೆ ಮಾತನ್ನಾಡಿ ಅದಕ್ಕೆ ಕಾರಣವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಸಮಸ್ಯೆಯನ್ನು ಸ್ಥಳೀಯವಾಗಿ ಬಗೆಹರಿಸಲು ಪ್ರಯತ್ನಿಸುವುದು ಅಥವಾ ಕೊರತೆಗಳನ್ನು ನಿವಾರಿಸುವುದು; ಬಗೆಹರಿಯದ ವಿವಾದಗಳನ್ನು ಔಪಚಾರಿಕವಾಗಿ ದಾಖಲಿಸಿ, ವಿಭಾಗ ಹಂತದ ಪರಾಮರ್ಶನ ಸಮಿತಿಗೆ ಕಳಿಸುವುದು: ಪ್ರತಿಯನ್ನು ಸೂಕ್ತವಾದವರಿಗೆ ಮತ್ತು ಸಂಬಂಧಿಸಿದ ಸಿಡಿಪಿಒ, ಎಂಒ/ಪಿಎಚ್‌ಸಿ ಹಾಗೂ ಗ್ರಾಮ ಪಂಚಾಯಿತಿಗೆ ರವಾನಿಸುವುದು

xii. ಸೇವಾ ವಿತರಣೆಯನ್ನು ಉತ್ತಮಗೊಳಿಸಲು ಅಗತ್ಯವಾದ ಇನ್ಯಾವುದೇ ವಿಷಯ

ಟಿಪ್ಪಣಿ: i. ಮೇಲಿನ ಯಾವುದನ್ನಾದರೂ/ಎಲ್ಲವನ್ನೂ ಖಾತ್ರಿಗೊಳಿಸಲು, ಎಡಬ್ಲ್ಯುಸಿ ಹಂತದ ಸಮಿತಿಯ ಸದಸ್ಯರು ಮಾಡಬೇಕಾದುದೇನೆಂದರೆ.,

* ಐಸಿಡಿಎಸ್ ಕಾರ್ಯಕ್ರಮದ ಉದ್ದೇಶ ಮತ್ತು ಅಗತ್ಯದ ಬಗ್ಗೆ ತಿಳಿದುಕೊಳ್ಳುವುದು

* ವಿಭಾಗ ಹಂತದ ಪರಾಮರ್ಶನ ಸಮಿತಿಯಿಂದ ಐಸಿಡಿಎಸ್‌ನ ಸ್ಥಾಪಿತ ಮಾದರಿಗಳು ಹಾಗೂ ಮಾರ್ಗದರ್ಶಕ ಸೂತ್ರಗಳ ಪುಸ್ತಕದ ಪ್ರತಿಯನ್ನು ಪಡೆದುಕೊಂಡು, ಓದಿ ತಿಳಿದುಕೊಳ್ಳುವುದು: ಬಿಎಲ್‌ಎಂಸಿ ಸದಸ್ಯರು ಅಥವಾ ಮೇಲ್ವಿಚಾರಕರು ಇಲ್ಲವೇ ಸಿಡಿಪಿಒ ಅಥವಾ ಎಲ್‌ಎಚ್‌ವಿ ಇಲ್ಲವೇ ಎಂಒ/ಪಿಎಚ್‌ಸಿ ಜತೆ ಚರ್ಚಿಸಿ, ಈ ಮಾದರಿ ಬಗ್ಗೆ ಸ್ಪಷ್ಟೀಕರಣ ಅಗತ್ಯವಿದ್ದಲ್ಲಿ ಪಡೆದುಕೊಳ್ಳುವುದು

* ಆಗಾಗ ಎಡಬ್ಲ್ಯುಸಿಗೆ ಭೇಟಿ ಕೊಡುವುದು ಮತ್ತು ಎಡಬ್ಲ್ಯುಸಿಯ ಕಾರ್ಯನಿರ್ವಹಣೆ ಬಗ್ಗೆ ಸಮುದಾಯದ ಇನ್ನಿತರ ಸದಸ್ಯರನ್ನು ವಿಚಾರಿಸುವುದು

* ಎಡಬ್ಲ್ಯುಸಿಯ ಎಂಪಿಆರ್ ಸಿದ್ಧಗೊಂಡ ಬಳಿಕ ವಹಿವಾಟುಗಳನ್ನು ನಡೆಸಲು ಮಾಸಿಕ ಸಭೆ ನಡೆಸುವುದು ಮತ್ತು ಸದಸ್ಯರ ಹಾಜರಿ ಬಗ್ಗೆ, ಯಾವ ವಿಷಯಗಳು ಪರಾಮರ್ಶನಗೊಂಡವು, ಕಂಡುಬಂದಿದ್ದೇನು ಮತ್ತು ತೆಗೆದುಕೊಂಡ ಕ್ರಮಗಳೇನು ಎಂಬುದನ್ನು ವರದಿಯಲ್ಲಿ ದಾಖಲಿಸುವುದು

* ಮಾಸಿಕ ಸಭೆಯ ವರದಿಯ ಪ್ರತಿಯೊಂದನ್ನು ವಿಭಾಗ ಹಂತದ ಪರಾಮರ್ಶನ ಸಮಿತಿಗೆ ಕಳಿಸುವುದು

ii. ವಿಷಯ ಯಾವುದೇ ಇರಲಿ, ಸಂಧಾನದ ಮೂಲಕ ಮತ್ತು ಅವಿರೋಧ ನಿರ್ಧಾರ ತೆಗೆದುಕೊಳ್ಳುವಿಕೆಗೆ ಆದ್ಯತೆ ನೀಡಲಾಗುತ್ತದೆ: ಹಾಜರಿರುವ ಸದಸ್ಯರು ಮಾರ್ಗದರ್ಶಿ ಸೂತ್ರಗಳು ಮತ್ತು ನಿಯಮಗಳನ್ನು ಆಧರಿಸಿ ನಿರ್ಧಾರ ತೆಗೆದುಕೊಳ್ಳಬೇಕು. ಬಗೆಹರಿಯದ ವಿವಾದಗಳನ್ನು ದಿಗ್ದರ್ಶನಕ್ಕಾಗಿ ಉನ್ನತ ಹಂತಕ್ಕೆ ರವಾನಿಸಬಹುದು

iii. ಸಮಿತಿ ಮತ್ತು ಅದರ ಸದಸ್ಯರು ಎಡಬ್ಲ್ಯುಸಿ/ಎಡಬ್ಲ್ಯುಡಬ್ಲ್ಯುನ ದೈನಂದಿಕ ಚಟುವಟಿಕೆಗೆ ಯಾವುದೇ ಭಂಗ ಬರದಂತೆ ತಮ್ಮ ಚಟುವಟಿಕೆ ನಡೆಸಬೇಕಾಗುತ್ತದೆ

6. ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಪ್ಯಾರಾ 5ರಲ್ಲಿ ಸೂಚಿಸಿದಂತೆ, ನಾನಾ ಹಂತದಲ್ಲಿ ಪರಾಮರ್ಶನ ಮತ್ತು ಅವಲೋಕನ ಸಮಿತಿಗಳನ್ನು ರಚಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡಲಾಗಿದೆ. ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ವರದಿಯನ್ನು ಪರಾಮರ್ಶನ ಕಾರ್ಯತಂತ್ರದ ಪರಿಣಾಮವೇನು ಎಂಬ ವರದಿಯೊಟ್ಟಿಗೆ ರಾಷ್ಟ್ರೀಯ ಹಂತದ ಪರಾಮರ್ಶನ ಮತ್ತು ಅವಲೋಕನ ಸಮಿತಿಗೆ ಮತ್ತು/ಇಲ್ಲವೇ ರಾಜ್ಯ ಕಾರ್ಯದರ್ಶಿಗಳೊಟ್ಟಿಗಿನ ಪರಾಮರ್ಶನ ಸಭೆಯಲ್ಲಿ ಚರ್ಚೆಗೆ ಜೂನ್ 30, 2011ರೊಳಗೆ ಕಳಿಸಬೇಕು.

ನಿಮ್ಮ ವಿಶ್ವಾಸಿ,

(ಡಾ. ಶ್ರೀರಂಜನ್)

ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ, ದೂರವಾಣಿ : 2338 7683

ಪ್ರತಿಗಳು;

i. ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ

ii. ಕಾರ್ಯದರ್ಶಿ, ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ

iii. ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮಂತ್ರಾಲಯ

iv. ಕಾರ್ಯದರ್ಶಿ, ಅಲ್ಪಸಂಖ್ಯಾತರ ವ್ಯವಹಾರಗಳ ಮಂತ್ರಾಲಯ

v. ಕಾರ್ಯದರ್ಶಿ, ಆಹಾರ ಮಂತ್ರಾಲಯ

vi. ಕಾರ್ಯದರ್ಶಿ, ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ

vii. ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ

viii. ಪ್ರಧಾನ ಸಲಹೆಗಾರ (ಡಬ್ಲ್ಯುಸಿಡಿ), ಯೋಜನಾ ಆಯೋಗ

ix. ನಿರ್ದೇಶಕ, ಎನ್ಐಪಿಸಿಸಿಡಿ, ಹೊಸದಿಲ್ಲಿ

x. ಪ್ರಾಂತೀಯ ನಿರ್ದೇಶಕರು, ಎನ್ಐಪಿಸಿಸಿಡಿ (ಬೆಂಗಳೂರು, ಗುವಾಹತಿ, ಇಂದೋರ್ ಮತ್ತು ಲಖ್ನೋ)

xi. ನಿರ್ದೇಶಕ, ಎನ್ಐಎನ್, ಹೈದರಾಬಾದ್

xii. ಐಸಿಡಿಎಸ್ ಕಾರ್ಯಕ್ರಮಕ್ಕೆ ಸಂಬಂಧಿಸಿದ ಎಲ್ಲ ನಿರ್ದೇಶಕರು/ಉಪಕಾರ್ಯದರ್ಶಿಗಳು, ಎಂಡಬ್ಲ್ಯುಸಿಡಿ

xiii. ಜಂಟಿ ತಾಂತ್ರಿಕ ಸಲಹೆಗಾರ, ಆಹಾರ ಮತ್ತು ಪೋಷಕಾಂಶ ಮಂಡಳಿ, ಎಂಡಬ್ಲ್ಯುಸಿಡಿ

xiv. ಎಂಒಎಸ್ (ಉಸ್ತುವಾರಿ) ವೈಯಕ್ತಿಕ ಕಾರ್ಯದರ್ಶಿ, ಎಂಡಬ್ಲ್ಯುಸಿಡಿ

xv. ಕಾರ್ಯದರ್ಶಿಯವರ ಪಿಎಸ್, ಎಂಡಬ್ಲ್ಯುಸಿಡಿ

xvi. ಎಎಸ್ ಮತ್ತು ಎಫ್ಎ (ಡಬ್ಲ್ಯುಸಿಡಿ)ಯವರ ಪಿಎಸ್

xvii. ಜೆಎಸ್(ಸಿಡಿ), ಜೆಎಸ್(ಡಬ್ಲ್ಯುಡಿ)/ಜೆಎಸ್(ಡಬ್ಲ್ಯುಡಬ್ಲ್ಯು)/ಇಎ/ಎಸ್ಎ ಅವರ ಪಿಎಸ್

xviii. ಯುಎಸ್(ಸಿಡಿ-1)/ಯುಎಸ್(ಸಿಡಿ-2)/ಯುಎಸ್(ತರಬೇತಿ)/ಎಡಿ(ಡಬ್ಲ್ಯುಬಿ/ಎಂಇ)

xix. ಸಂರಕ್ಷಿತ ಕಡತ/ಅನುಮೋದನೆ ಫೋಲ್ಡರ್

xx. ತಾಂತ್ರಿಕ ನಿರ್ದೇಶಕ, ಎನ್ಐಸಿ, ಎಂಡಬ್ಲ್ಯುಸಿಡಿ; ಮಂತ್ರಾಲಯದ ಜಾಲತಾಣದಲ್ಲಿ ಪ್ರಕಟಿಸಬೇಕೆಂದು ಕೋರಿಕೆಯೊಂದಿಗೆ (ಮಕ್ಕಳ ಅಭಿವೃದ್ಧಿ ವಿಭಾಗ)

(ಡಾ. ಶ್ರೀರಂಜನ್)

ಜಂಟಿ ಕಾರ್ಯದರ್ಶಿ, ಭಾರತ ಸರ್ಕಾರ

..................................

ಎಫ್. ಸಂಖ್ಯೆ 16-3/2004-ಎಂಇ(ಪಿಟಿ)

ಭಾರತ ಸರ್ಕಾರ

ಮಹಿಳೆ ಮತ್ತು ಮಕ್ಕಳ ಕಲ್ಯಾಣ ಮಂತ್ರಾಲಯ

ಶಾಸ್ತ್ರಿಭವನ, ಹೊಸದಿಲ್ಲಿ - 110 001

22 ಅಕ್ಟೋಬರ್ 2010

ಇವರಿಗೆ,

ಎ. ಐಸಿಡಿಎಸ್ ಯೋಜನೆಯ ಉಸ್ತುವಾರಿಗಳಾದ ರಾಜ್ಯ ಕಾರ್ಯದರ್ಶಿಗಳಿಗೆ (ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು)

ಬಿ. ಐಸಿಡಿಎಸ್ ಯೋಜನೆಯ ಉಸ್ತುವಾರಿ ವಹಿಸಿರುವ ನಿರ್ದೇಶಕರು (ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು)

ವಿಷಯ : ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಧಿಕಾರಿಗಳು ಐಸಿಡಿಎಸ್ ವಿಭಾಗಗಳು ಮತ್ತು ಎಡಬ್ಲ್ಯುಸಿಗೆ ಪರಾಮರ್ಶನ ಮತ್ತು ಮೇಲುಸ್ತುವಾರಿ ಭೇಟಿ ನೀಡುವ ಸಂಬಂಧದ ಮಾರ್ಗದರ್ಶಿ ಸೂತ್ರಗಳು

ಸರ್/ಮೇಡಂ,

ಐಸಿಡಿಎಸ್ ಯೋಜನೆಯ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಪರಾಮರ್ಶನ ಮತ್ತು ಅವಲೋಕನ ಒಂದು ಮುಖ್ಯ ಅಗತ್ಯ ಎಂದು ಗುರುತಿಸಲಾಗಿದೆ. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು ಈ ಕಾರ್ಯಕ್ರಮದಡಿಯ ಮಾಹಿತಿ ನಿರ್ವಹಣೆ ವ್ಯವಸ್ಥೆ (ಎಂಐಎಸ್)ಯನ್ನು ಸಂಪೂರ್ಣವಾಗಿ ಪುನಾರಚಿಸಲು ಹಲವು ಹೆಜ್ಜೆಗಳನ್ನು ಇರಿಸಿದೆ. ಎಂಐಎಸ್ ಮೂಲಕ ನಿಯತವಾಗಿ ಪರಾಮರ್ಶನದ ಅಂಕಿಅಂಶಗಳ ಸಂಗ್ರಹ ವಲ್ಲದೆ, ವಿವಿಧ ಹಂತಗಳ ಕಾರ್ಯಕ್ರಮ ಅಧಿಕಾರಿಗಳು ಎಡಬ್ಲ್ಯುಸಿಗಳು/ಐಸಿಡಿಎಸ್ ವಿಭಾಗಗಳಿಗೆ ನಿಯತವಾಗಿ ಕ್ಷೇತ್ರ ಸಂದರ್ಶನ ಮಾಡುತ್ತಿದ್ದು, ಅಂಗನವಾಡಿ ಕೇಂದ್ರ (ಎಡಬ್ಲ್ಯುಸಿ)ಗಳ ಕೆಲಸದ ಪರಾಮರ್ಶನಕ್ಕೆ ಇದು ಅಗತ್ಯವಾಗಿರಲಿದೆ. ತೀವ್ರತರ ಪರಾಮರ್ಶನ ಮತ್ತು ಮೇಲ್ವಿಚಾರಣೆ ಭೇಟಿಗಳ ಮೂಲಕ ಎಡಬ್ಲ್ಯುಸಿಗಳಲ್ಲಿನ ಸೇವೆಗಳ ವಿತರಣೆಯಲ್ಲಿನ ಸಮಸ್ಯೆಗಳು/ಅಡೆತಡೆಗಳನ್ನು ನಿವಾರಿಸಬಹುದಾಗಿದೆ. ಇದರೊಟ್ಟಿಗೆ, ಎಡಬ್ಲ್ಯುಸಿಗಳ ದೈನಂದಿನ ಕಾರ್ಯನಿರ್ವಹಣೆ ಮತ್ತು ಸೇವೆಗಳ ವಿತರಣೆಯ ಸುಧಾರಣೆಯಲ್ಲಿ ಸಮುದಾಯದ ದೃಷ್ಟಿಕೋನ ಹಾಗೂ ನಿಲುವುಗಳನ್ನು ಗ್ರಹಿಸಿ, ಸೂಕ್ತವಾದ ಸರಿಗೊಳಿಸುವ ಕ್ರಮಗಳನ್ನು ಕೈಗೊಳ್ಳ ಲಾಗುತ್ತದೆ.

2. ಬೇರೆ ಬೇರೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಪರಾಮರ್ಶನ ಮತ್ತು ಮೇಲ್ವಿಚಾರಣೆ ಭೇಟಿಗೆ ಅನುಸರಿಸುತ್ತಿರುವ ಹಾಲಿ ಅಚರಣೆಗಳನ್ನು ಪ್ರಮಾಣಾನುಸಾರಗೊಳಿಸಲು, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಮಂತ್ರಾಲಯವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಧಿಕಾರಿಗಳಿಗೂ ಅನ್ವಯಿಸುವ ಮಾರ್ಗದರ್ಶಿ ಸೂತ್ರಗಳನ್ನು ಸಿದ್ದಪಡಿಸಿದೆ. ಈ ಮಾರ್ಗದರ್ಶಿ ಸೂತ್ರಗಳು ನಾನಾ ಹಂತಗಳಲ್ಲಿ ಮಾಡಬೇಕಾದ ಭೇಟಿಗಳ ಕನಿಷ್ಠ ಅಗತ್ಯಗಳನ್ನು ನಿಗದಿಮಾಡಿವೆ. ಮಾರ್ಗದರ್ಶಿ ಸೂತ್ರಗಳ ಪ್ರತಿಯನ್ನು ಇಲ್ಲಿ ಅಳವಡಿಸಲಾಗಿದೆ.

3. ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಬೇಕು ಮತ್ತು ಅನುಷ್ಠಾನಕ್ಕೆ ಆರೋಗ್ಯ ಇಲಾಖೆ ಹಾಗೂ ಜಿಲ್ಲಾ ಕಲೆಕ್ಟರ್ ಜೊತೆಗೆ ಹಂಚಿಕೊಳ್ಳಬೇಕೆಂದು

ಕೋರಲಾಗಿದೆ. ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಸೂಕ್ತವಾದ ಹಂತಗಳಲ್ಲಿ ಪರಾಮರ್ಶನ ಮತ್ತು ಮೇಲ್ವಿಚಾರಣೆ ವರದಿಗಳನ್ನು ಅವಲೋಕಿಸಲು ಅಗತ್ಯವಿರುವ ಸರಿಪಡಿಸುವ ಕ್ರಮಗಳುಳ್ಳ ಸೂಕ್ತವಾದ ಕಾರ್ಯವಿಧಾನವೊಂದನ್ನು ಖಾತ್ರಿಗೊಳಿಸಬೇಕಿದೆ.

4. ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಳು ಈ ಮಾರ್ಗದರ್ಶಿ ಸೂತ್ರಗಳನ್ನು ಅನುಷ್ಠಾನಗೊಳಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ಮಂತ್ರಾಲಯಕ್ಕೆ ಮಾಹಿತಿ ನೀಡಬಹುದು. ಒಂದುವೇಳೆ, ಈ ಮಾರ್ಗದರ್ಶಿ ಸೂತ್ರಗಳು ಹೇಳುವ ವ್ಯವಸ್ಥೆ ಈಗಾಗಲೇ ಇದ್ದಲ್ಲಿ, ಆ ಕುರಿತ ವಿವರಗಳನ್ನು ಮಂತ್ರಾಲಯಕ್ಕೆ ತಿಳಿಸಬಹುದು.

(ಡಾ. ಶ್ರೀರಂಜನ್)

ಜಂಟಿ ಕಾರ್ಯದರ್ಶಿ, ದೂರವಾಣಿ: 23387683

ಪ್ರತಿಗಳು (1) ನಿರ್ದೇಶಕ, ಎನ್ಐಪಿಸಿಸಿಡಿ (2) ಎನ್ಐಪಿಸಿಸಿಡಿಯ ಪ್ರಾಂತೀಯ ನಿರ್ದೇಶಕರು (ಗುವಾಹತಿ, ಇಂದೋರ್, ಲಖ್ನೌ, ಬೆಂಗಳೂರು) (3) ಆಹಾರ ಮತ್ತು ಪೋಷಕಾಂಶ ಮಂಡಳಿ ಮತ್ತು ಅದರ ಎಲ್ಲ ಕ್ಷೇತ್ರ ಘಟಕಗಳು (4) ಎಂಡಬ್ಲ್ಯುಸಿಡಿಯ ಸಿಡಿ ಬ್ಯೂರೋದ ನಿರ್ದೇಶಕರು/ಉಪಕಾರ್ಯದರ್ಶಿಗಳು (5) ಯುಎಸ್(ಸಿಡಿ-1/3)/ಯುಎಸ್ (ಸಿಡಿ-2)/ಯುಎಸ್ (ಡಬ್ಲ್ಯುಬಿ)/ಯುಎಸ್(ತರಬೇತಿ)/ಯುಎಸ್ (ಎಂಇ)/ಹಿರಿಯ ಪ್ರೋಗ್ರಾಮರ್/ಎಡಿ(ಡಬ್ಲ್ಯುಬಿ ಮತ್ತು ಎಂಇ) (6) ಯೋಜನೆ ಮತ್ತು ಸಂಶೋಧನೆ ಘಟಕ, ಎಂಡಬ್ಲ್ಯುಸಿಡಿ

……………………………………………………………………………………

ರಾಜ್ಯ/ಕೇಂದ್ರ ಸರ್ಕಾರದ ಅಧಿಕಾರಿಗಳಿಂದ ಐಸಿಡಿಎಸ್ ವಿಭಾಗಗಳು ಮತ್ತು ಅಂಗನವಾಡಿ ಕೇಂದ್ರ (ಎಡಬ್ಲ್ಯುಸಿ)ಗಳಿಗೆ ಪರಾಮರ್ಶನ ಮತ್ತು ಮೇಲ್ವಿಚಾರಣೆ ಭೇಟಿ ಹಾಗೂ ಎಡಬ್ಲ್ಯುಸಿ ಚಟುವಟಿಕೆಗಳ ಪರಾಮರ್ಶನದಲ್ಲಿ ಪಿಆರ್ಐಗಳನ್ನು ಒಳಗೊಳ್ಳುವಿಕೆ ಕುರಿತ ಮಾರ್ಗದರ್ಶನ ಸೂತ್ರಗಳು

ಅಕ್ಟೋಬರ್ 2010

ಐಸಿಡಿಎಸ್ ಪರಾಮರ್ಶನ ಮತ್ತು ಮೌಲ್ಯಮಾಪನ ಘಟಕ

ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ

ಭಾರತ ಸರ್ಕಾರ

ರಾಜ್ಯ/ಕೇಂದ್ರ ಸರ್ಕಾರದ ಅಧಿಕಾರಿಗಳಿಂದ ಐಸಿಡಿಎಸ್ ವಿಭಾಗಗಳು ಮತ್ತು ಅಂಗನವಾಡಿ ಕೇಂದ್ರ (ಎಡಬ್ಲ್ಯುಸಿ)ಗಳಿಗೆ ಪರಾಮರ್ಶನ ಮತ್ತು ಮೇಲ್ವಿಚಾರಣೆ ಭೇಟಿ ಮತ್ತು ಎಡಬ್ಲ್ಯುಸಿ ಚಟುವಟಿಕೆಗಳ ಪರಾಮರ್ಶನದಲ್ಲಿ ಪಿಆರ್ಐಗಳನ್ನು ಒಳಗೊಳ್ಳುವಿಕೆ ಕುರಿತ ಮಾರ್ಗದರ್ಶನ ಸೂತ್ರಗಳು

ಮಕ್ಕಳ ಸಮಗ್ರ ಕಲ್ಯಾಣ ಸೇವೆ(ಐಸಿಡಿಎಸ್) ಯೋಜನೆಯಲ್ಲಿ ಆರಂಭದಿಂದಲೇ ಅಂತರ್ಗತವಾದ ಪರಾಮರ್ಶನ ವ್ಯವಸ್ಥೆಯೊಂದು ಇದ್ದು, ಅಂಗನವಾಡಿ ಕೇಂದ್ರ(ಎಡಬ್ಲ್ಯುಸಿ)ಗಳಿಂದ ವಿಭಾಗ, ರಾಜ್ಯ ಮತ್ತು ಅಂತಿಮವಾಗಿ ಒಟ್ಟು ರೂಪದಲ್ಲಿ ಭಾರತ ಸರ್ಕಾರಕ್ಕೆ ನಿಯತಕಾಲಿಕ ವರದಿಗಳು ಮತ್ತು ವಾಪಸಾತಿಗಳು ಮೇಲ್ಮುಖವಾಗಿ ಹರಿಯುತ್ತವೆ. ಮಾಹಿತಿ ನಿರ್ವಹಣೆ ವ್ಯವಸ್ಥೆ(ಎಂಐಎಸ್)ಯ ಮೂಲಕ ನಿಯತವಾಗಿ ಪರಾಮರ್ಶನ ಅಂಕಿಅಂಶಗಳ ಸಂಗ್ರಹವಲ್ಲದೆ, ನಾನಾ ಹಂತಗಳ

ಅಧಿಕಾರಿಗಳು ಐಸಿಡಿಎಸ್ ವಿಭಾಗ(ಎಡಬ್ಲ್ಯುಸಿ)ಗಳಿಗೆ ಆಗಾಗ ಭೇಟಿ ನೀಡುತ್ತಾರೆ ಮತ್ತು ಕಾರ್ಯಕ್ರಮದ ನಿಯತಕಾಲಿಕ ಪರಾಮರ್ಶನದ ಭಾಗವಾಗಿ ವಿವಿಧ ಹಂತಗಳಲ್ಲಿ ಕಾರ್ಯಕ್ರಮ ಅನುಷ್ಠಾನದ ಪರಾಮರ್ಶನವನ್ನು ಮಾಡಲಾಗುತ್ತದೆ.

2. ಐಸಿಡಿಎಸ್ ಕ್ಷೇತ್ರ ಸಿಬ್ಬಂದಿಗಳ ಸೇವಾ ವಿತರಣೆ ಗುಣಮಟ್ಟವನ್ನು ಹೆಚ್ಚಿಸಲು ಹಾಗೂ ನಾನಾ ಸಮಸ್ಯೆಗಳು/ಅಡೆತಡೆಗಳನ್ನು ನಿವಾರಿಸಲು ಮತ್ತು ಎಡಬ್ಲ್ಯುಸಿಗಳ ದೈನಂದಿನ ಕಾರ್ಯನಿರ್ವಹಣೆ ಹಾಗೂ ಸೇವೆಗಳ ವಿತರಣೆಯಲ್ಲಿ ಸುಧಾರಣೆ ತರಲು, ಸಮುದಾಯದ ದೃಷ್ಟಿಕೋನ ಮತ್ತು ಅಭಿಪ್ರಾಯಗಳನ್ನು ಪಡೆದುಕೊಳ್ಳಲು ಕಾರ್ಯಕ್ರಮ ಅಧಿಕಾರಿಗಳು ವಿವಿಧ ಹಂತಗಳಲ್ಲಿ ತೀವ್ರ ಪರಾಮರ್ಶನ ಮತ್ತು ಮೇಲ್ವಿಚಾರಣೆ ನಡೆಸಲಿದ್ದು, ಸೂಕ್ತ ಕ್ರಮಗಳ ಮೂಲಕ ತಿದ್ದಿಕೊಳ್ಳಲು ಅಗತ್ಯ ಬೆಂಬಲ ನೀಡಬೇಕಾಗುತ್ತದೆ. ಬೇರೆ ಬೇರೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಪರಾಮರ್ಶನ ಮತ್ತು ಮೇಲ್ವಿಚಾರಣೆ ಭೇಟಿಗೆ ಅನುಸರಿಸುತ್ತಿರುವ ಪ್ರಸ್ತುತದ ಆಚರಣೆಗಳನ್ನು ಪ್ರಮಾಣಾನುಸಾರಗೊಳಿಸಲು ಕೆಳಕಂಡ ಮಾರ್ಗದರ್ಶಿ ಸೂತ್ರಗಳನ್ನು ನಿಗದಿಗೊಳಿಸಲಾಗಿದ್ದು, ಇವು ಐಸಿಡಿಎಸ್ ವಿಭಾಗಗಳು/ಎಡಬ್ಲ್ಯುಸಿಗಳಿಗೆ ರಾಜ್ಯ/ಕೇಂದ್ರ ಸರ್ಕಾರಗಳ ಅಧಿಕಾರಿಗಳ ಪರಾಮರ್ಶನ ಹಾಗೂ ಮೇಲ್ವಿಚಾರಣೆ ಭೇಟಿಗೆ ಕನಿಷ್ಠ ಅಗತ್ಯಗಳನ್ನು ಒದಗಿಸುತ್ತವೆ. ಎಡಬ್ಲ್ಯುಸಿ ಚಟುವಟಿಕೆಗಳ ಪರಾಮರ್ಶನದಲ್ಲಿ ಪಿಆರ್‌ಐಗಳ ಪಾತ್ರದ ರೂಪರೇಷೆ ನೀಡುತ್ತವೆ.

3. ಐಸಿಡಿಎಸ್‌ಗಳಲ್ಲಿ ಸೇವೆಗಳ ವಿತರಣೆಯ ಕ್ಷಮತೆಯನ್ನು ಖಾತ್ರಿಗೊಳಿಸಲು, ಕೇಂದ್ರ ಮತ್ತು ರಾಜ್ಯಗಳ ಅಧಿಕಾರಿಗಳ ಪರಾಮರ್ಶನ ಮತ್ತು ಮೇಲ್ವಿಚಾರಣೆಗೆ ವಿಧಿಸಲಾದ ಮತ್ತು ನಿರ್ದೇಶಿತ ಅನುಸೂಚಿಗಳು ಕೆಳಕಂಡಂತಿವೆ;

ಕ್ರಮಸಂಖ್ಯೆ...................ಅಧಿಕಾರಿಗಳ ವರ್ಗ..........................ಅನುಸೂಚಿತ/ಉದ್ದೇಶಿತ ಅಗತ್ಯ

ಎ. ರಾಜ್ಯದ ಹಂತದಲ್ಲಿ

1. ಮೇಲ್ವಿಚಾರಕರು (ಐಸಿಡಿಎಸ್)...............ಪ್ರತಿ ತಿಂಗಳು ಮೇಲ್ವಿಚಾರಕನ ಉಸ್ತುವಾರಿಯಲ್ಲಿರುವ ಎಡಬ್ಲ್ಯುಸಿಗಳಲ್ಲಿ ಕನಿಷ್ಠ ಶೇ.50ಕ್ಕೆ ಭೇಟಿ

2. ಎಎನ್‌ಎಮ್/ಎಲ್‌ಎಚ್‌ವಿ ಜೊತೆಗೆ ಐಸಿಡಿಎಸ್ ಮೇಲ್ವಿಚಾರಕರ ಜಂಟಿ ಭೇಟಿ..........ಪ್ರತಿ ತಿಂಗಳು ಕನಿಷ್ಠ 2-3 ಎಡಬ್ಲ್ಯುಸಿಗಳಿಗೆ ಭೇಟಿ ಮತ್ತು ಇದರಲ್ಲಿ ಕ್ರಮಸಂಖ್ಯೆ 1ರಲ್ಲಿನ ಭೇಟಿಗಳು ಸೇರಿರಲಿವೆ

3. ಸಿಡಿಪಿಓಗಳು/ಎಸಿಡಿಪಿಓಗಳು.............ಮಾಸಿಕ ಕನಿಷ್ಠ 30 ಎಡಬ್ಲ್ಯುಸಿಗಳಿಗೆ ಆವರ್ತ ಮಾದರಿಯಲ್ಲಿ ಭೇಟಿ ಹಾಗೂ ವರ್ಷದಲ್ಲಿ ಶೇ.100ರಷ್ಟು ಎಡಬ್ಲ್ಯುಸಿಗಳಿಗೆ ಭೇಟಿಯನ್ನು ಖಾತ್ರಿಗೊಳಿಸುವುದು

4. ವೈದ್ಯಾಧಿಕಾರಿ (ಎಂಓ) ಜೊತೆಗೆ ಸಿಡಿಪಿಓ/ಎಸಿಡಿಪಿಓಗಳ ಜಂಟಿ ಭೇಟಿ............ಮಾಸಿಕ ಕನಿಷ್ಠ 5 ಎಡಬ್ಲ್ಯುಸಿಗಳಿಗೆ ಭೇಟಿ ಮತ್ತು ಇವು ಕ್ರಮಸಂಖ್ಯೆ 3ರಲ್ಲಿರುವ ಭೇಟಿಯ ಭಾಗವಾಗಿರಬಹುದು

5. ಐಸಿಡಿಎಸ್ ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳು(ಡಿಪಿಓಗಳು)/ಆರ್‌ಡಿಗಳು/ಉಪ ಸಿಇಓಗಳು................ಮೂರು ತಿಂಗಳಿಗೊಮ್ಮೆ ಎಲ್ಲ ವಿಭಾಗಗಳ ಭೇಟಿಯನ್ನು ಮುಗಿಸಬೇಕು. ಪ್ರತಿ ವಿಭಾಗದ ಭೇಟಿಯಲ್ಲಿ ಕನಿಷ್ಠ 3 ಎಡಬ್ಲ್ಯುಸಿಗಳಂತೆ, ವರ್ಷವಿಡೀ ಸಮಾನವಾಗಿ ಹಂಚಿಕೆಯಾಗುವಂತೆ, ವಾರ್ಷಿಕ ಶೇ.10 ಎಡಬ್ಲ್ಯುಸಿ ಭೇಟಿ ಖಾತ್ರಿಗೊಳಿಸುವುದು

6. ಸಿಎಂಎಚ್‌ಒಗಳೊಂದಿಗೆ ಡಿಪಿಒಗಳ ಜಂಟಿ ಭೇಟಿ.................ಪ್ರತಿ ತಿಂಗಳು ಒಂದು ವಿಭಾಗ ಮತ್ತು 2 ಎಡಬ್ಲ್ಯುಸಿಗಳು

7. ಜಿಲ್ಲಾ ನ್ಯಾಯಾಧೀಶ/ಕಲೆಕ್ಟರ್‌ಗಳು (ಡಿಎಂ/ಡಿಸಿ)/ಎಡಿಎಂ/ಯೋಜನಾಧಿಕಾರಿಗಳು/ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ)............ಕನಿಷ್ಠ 15 ಎಡಬ್ಲ್ಯುಸಿಗಳು (ವಿಶೇಷವಾಗಿ ವಿಎಚ್‌ಎನ್‌ಡಿ ದಿನದಂದು) ಮತ್ತು ಪ್ರತಿ ಆರು ತಿಂಗಳಿಗೆ ಶೇ.25ರಷ್ಟು ವಿಭಾಗಗಳು

8. ಸಿಇಒ/ಜಿಲ್ಲಾ ಪರಿಷತ್ ಅಧಿಕಾರಿ(ಐಸಿಡಿಎಸ್‌ನ ಜವಾಬ್ದಾರಿ ವಹಿಸಿರುವ ಕಡೆಗಳಲ್ಲಿ)........................ ಕನಿಷ್ಠ 15 ಎಡಬ್ಲ್ಯುಸಿಗಳು (ವಿಶೇಷವಾಗಿ ವಿಎಚ್‌ಎನ್‌ಡಿ ದಿನದಂದು) ಮತ್ತು ಪ್ರತಿ ಆರು ತಿಂಗಳಿಗೆ ಶೇ.25 ರಷ್ಟು ವಿಭಾಗಗಳು

9. ರಾಜ್ಯ ನಿರ್ದೇಶನಾಲಯದ ನೋಡಲ್ ಅಧಿಕಾರಿ (ಎಂ ಆಂಡ್ ಇ/ಎಂಐಎಸ್)(ಹುದ್ದೆ ಇರುವಲ್ಲಿ)................ಪ್ರತಿ ತಿಂಗಳು ಕನಿಷ್ಠ 10 ಎಡಬ್ಲ್ಯುಸಿ ಮತ್ತು 2 ವಿಭಾಗಗಳು

10. ಇನ್ನಿತರ ನಿರ್ದೇಶನಾಲಯಗಳ ಅಧಿಕಾರಿಗಳು (ಉಪ ನಿರ್ದೇಶಕ/ಜಂಟಿ ನಿರ್ದೇಶಕ/ಸಹಾಯಕ ನಿರ್ದೇಶಕ)..................ಪ್ರತಿ ತಿಂಗಳು ಕನಿಷ್ಠ 5 ಎಡಬ್ಲ್ಯುಸಿ ಮತ್ತು ಪ್ರತಿ ವರ್ಷ ಶೇ.20 ವಿಭಾಗಗಳು (ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಮವಾಗಿ ಹಂಚಿಕೆಯಾಗಿರತಕ್ಕದ್ದು)

11. ರಾಜ್ಯ ನಿರ್ದೇಶಕ (ಐಸಿಡಿಎಸ್)................ಪ್ರತಿ ಮೂರು ತಿಂಗಳಿಗೆ 20 ಎಡಬ್ಲುಸಿ ಮತ್ತು ಪ್ರತಿ ವರ್ಷ ಶೇ.10 ರಷ್ಟು ವಿಭಾಗಗಳು (ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಮವಾಗಿ ಹಂಚಿಕೆಯಾಗಿರತಕ್ಕದ್ದು)

12. ರಾಜ್ಯ ಕಾರ್ಯದರ್ಶಿ(ಡಬ್ಲ್ಯುಸಿಡಿ) (ಅಂಡರ್ ಸೆಕ್ರೆಟರಿಯಿಂದ ಆರಂಭಿಸಿ ವಿಶೇಷ ಕಾರ್ಯದರ್ಶಿಯವರೆಗೆ)............ವರ್ಷಕ್ಕೆ ಕನಿಷ್ಠ 50 ಎಡಬ್ಲ್ಯುಸಿ ಮತ್ತು 25 ವಿಭಾಗಗಳು (ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಮವಾಗಿ ಹಂಚಿಕೆಯಾಗಿರತಕ್ಕದ್ದು)

13. ಆಹಾರ ಮತ್ತು ಪೋಷಕಾಂಶ ಮಂಡಳಿಯ ಕ್ಷೇತ್ರ ಘಟಕಗಳ ಅಧಿಕಾರಿಗಳು (ಸಿಎಫ್‌ಇಎನ್‌ಯು).........ತಿಂಗಳಿಗೆ 10 ಎಡಬ್ಲ್ಯುಸಿ ಅಥವಾ ನಿಗದಿಪಡಿಸಿದಂತೆ, ಯಾವುದು ಹೆಚ್ಚೋ ಅದು (ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಮವಾಗಿ ಹಂಚಿಕೆಯಾಗಿರತಕ್ಕದ್ದು)

14. ಎಡಬ್ಲ್ಯುಟಿಸಿಗಳು/ಎಂಎಲ್‌ಟಿಸಿಗಳ ಬೋಧಕರು..................5 ಎಡಬ್ಲ್ಯುಡಬ್ಲ್ಯುಗಳು/5 ಮೇಲ್ವಿಚಾರಕರ ಪುನರ್ಮನನ ತರಬೇತಿ/ಕೆಲಸ ಮುಗಿದ 2 ತಿಂಗಳ ಬಳಿಕ ಎಡಬ್ಲ್ಯುಟಿಸಿಗಳು/ಎಂಎಲ್‌ಟಿಸಿಗಳಲ್ಲಿ ನೀಡಿದ ತರಬೇತಿಯ ಕೋರ್ಸ್‌ಗಳ ಅನುಸರಣೆ

15. ಎನ್‌ಐಪಿಸಿಸಿಡಿಯ ಕೇಂದ್ರ ಪರಾಮರ್ಶನ ಘಟಕ (ಸಿಎಂಯು)ನೇಮಿಸಿದ ಗೃಹ ವಿಜ್ಞಾನ ಕಾಲೇಜುಗಳು/ವೈದ್ಯಕೀಯ ವಿದ್ಯಾಲಯಗಳ ಸಲಹೆಗಾರರು...........ಸಿಎಂಯುನ ಪರ್ಯಾಲೋಚನೆ ನಿಬಂಧನೆಗಳಿಗೆ ಅನುಗುಣವಾಗಿ

ಬಿ. ಕೇಂದ್ರದ ಹಂತದಲ್ಲಿ

16. ಎಂಡಬ್ಲ್ಯುಸಿಡಿಯ ಐಸಿಡಿಎಸ್ ಎಂ ಮತ್ತು ಇ ಘಟಕದ ಅಧಿಕಾರಿಗಳು........ತಿಂಗಳಿಗೆ ಒಂದು ರಾಜ್ಯ (ರಾಜ್ಯದ ಒಂದು ಜಿಲ್ಲೆ, ಜಿಲ್ಲೆಯೊಂದರ 2 ವಿಭಾಗ ಮತ್ತು ವಿಭಾಗವೊಂದರ 4 ಎಡಬ್ಲ್ಯುಸಿಗಳು)

17. ಎಂಡಬ್ಲ್ಯುಸಿಡಿಯ ಇತರ ಹಿರಿಯ ಅಧಿಕಾರಿಗಳು(ಉಪ ಕಾರ್ಯದರ್ಶಿ/ನಿರ್ದೇಶಕ/ಜಂಟಿ ಕಾರ್ಯದರ್ಶಿ).............ಮಾಸಿಕ ಕನಿಷ್ಠ ಒಂದು ರಾಜ್ಯ (ರಾಜ್ಯದ 2-3 ಎಡಬ್ಲ್ಯುಸಿಗಳು/ಒಂದು ಜಿಲ್ಲಾ ಮುಖ್ಯ ಕೇಂದ್ರ/ ಒಂದು ವಿಭಾಗ ಕಚೇರಿ)

18. ಎನ್‌ಐಪಿಸಿಸಿಡಿಯ ಶಿಕ್ಷಕರು (ಎಲ್ಲ ಪ್ರಾಂತೀಯ ಕಚೇರಿಗಳು ಸೇರಿದಂತೆ).............4 ತಿಂಗಳಿಗೆ 2 ರಾಜ್ಯಗಳು (3 ಯೋಜನೆ ಮತ್ತು ರಾಜ್ಯದ 2-3 ಎಡಬ್ಲ್ಯುಸಿಗಳು, 1 ಎಡಬ್ಲ್ಯುಟಿಸಿ ಮತ್ತು ಒಂದು ಎಂಎಲ್‌ಟಿಸಿ) ಅಥವಾ ಹಾಲಿ ವ್ಯವಸ್ಥೆಗನುಗುಣವಾಗಿ ಯಾವುದು ಹೆಚ್ಚೋ ಅದು

19. ಆಹಾರ ಮತ್ತು ಪೋಷಕಾಂಶ ಮಂಡಳಿ (ಎಚ್‌ಕ್ಯೂ) ಅಧಿಕಾರಿಗಳು.......................ತಿಂಗಳಿಗೆ ಒಂದು ರಾಜ್ಯ (ಒಂದು ಭೇಟಿಗೆ ರಾಜ್ಯವೊಂದಕ್ಕೆ 2-3 ಎಡಬ್ಲ್ಯುಸಿಗಳು)

4. ಕ್ರಿಯಾಯೋಜನೆಯ ತಯಾರಿ : ಪ್ರತಿ ಆರು ತಿಂಗಳಿಗೊಮ್ಮೆ ನಾನಾ ಹಂತದ ಅಧಿಕಾರಿಗಳ ಪರಾಮರ್ಶನ ಮತ್ತು ಮೇಲ್ವಿಚಾರಣೆ ಭೇಟಿಗಳ ಬಳಿಕ ರಾಜ್ಯಗಳು ಜಿಲ್ಲಾವಾರು ಕ್ರಿಯಾಯೋಜನೆಯನ್ನು ಸಿದ್ಧಗೊಳಿ ಸುತ್ತವೆ. ಆರೋಗ್ಯ ಇಲಾಖೆಯವರ ಪರಾಮರ್ಶನ ಭೇಟಿಗಳನ್ನು ಆರೋಗ್ಯಾಧಿಕಾರಿಗಳೊಡನೆ ಜಂಟಿ ಭೇಟಿಯೊಟ್ಟಿಗೆ ಮೇಳೈಸಿ, ಅವರ ಸಲಹೆಯನ್ವಯ ಮುಂದಾಗಿಯೇ ಯೋಜನೆಯನ್ನು ಸಿದ್ಧಗೊಳಿಸಲಾಗುತ್ತದೆ. ರಾಜ್ಯಗಳು ಜಂಟಿ ಭೇಟಿಯ ವ್ಯಾಪ್ತಿಯನ್ನು ಬೇರೆ ಇಲಾಖೆಗಳೊಡನೆ ಅಂದರೆ, ಸರ್ವ ಶಿಕ್ಷಾ ಅಭಿಯಾನ (ಎಸ್‌ಎಸ್‌ಎ), ಪಿಆರ್‌ಐ ಮತ್ತು ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು ಮತ್ತು ನೈರ್ಮಲ್ಯ ಇತ್ಯಾದಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಈ ಯೋಜನೆಗಳೊಡನೆ ಐಸಿಡಿಎಸ್ ಕಾರ್ಯಕ್ರಮದ ಏಕತ್ರಗೊಳಿಸುವಿಕೆಯ ಕ್ಷಮತೆಯನ್ನು ಬಲಗೊಳಿಸಬಹುದು/ಮೌಲ್ಯಮಾಪನ ಮಾಡಬಹುದು.

5. ರಾಜ್ಯ ಮತ್ತು ಕೇಂದ್ರದ ಅಧಿಕಾರಿಗಳಿಗೆ ಐಸಿಡಿಎಸ್ ವಿಭಾಗಗಳು ಮತ್ತು ಎಡಬ್ಲ್ಯುಸಿಗಳ ಪರಾಮರ್ಶನ ಮತ್ತು ಮೇಲ್ವಿಚಾರಣೆ ಭೇಟಿಗೆ ಪರೀಕ್ಷಾ ಪಟ್ಟಿ

Š. ರಾಜ್ಯ ಹಂತದ ಅಧಿಕಾರಿಗಳು ಕ್ಷೇತ್ರ ಭೇಟಿ ವೇಳೆ ಐಸಿಡಿಎಸ್ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದ ಕೆಳಕಂಡ ವಿಷಯಾಂಶಗಳ ಪರಾಮರ್ಶನ ಮತ್ತು ಮೇಲ್ವಿಚಾರಣೆ ಮಾಡಬೇಕಾಗುತ್ತದೆ;1*

i. ಲಭ್ಯವಿರುವ ಮೂಲಭೂತ ಸೌಕರ್ಯಗಳು (ಕಟ್ಟಡ, ಸಾಕಷ್ಟು ಸ್ಥಳಾವಕಾಶ, ಶೌಚಾಲಯಗಳು, ಪ್ರತ್ಯೇಕವಾದ ಮುಚ್ಚಿಗೆ ಇರುವ ಅಡುಗೆ ಕೋಣೆ ಹಾಗೂ ಮಹಿಳೆಯರ ಆರೋಗ್ಯ ತಪಾಸಣೆಗೆ ಸ್ಥಳಾವಕಾಶ), ವಿದ್ಯುತ್ ಪೂರೈಕೆ: ಎಡಬ್ಲ್ಯುಸಿಗೆ ಕುಡಿಯುವ ನೀರಿನ ಪೂರೈಕೆ

ii. ಸುಸ್ಥಿತಿಯಲ್ಲಿರುವ ತಕ್ಕಡಿಗಳು (ಮಕ್ಕಳು ಹಾಗೂ ದೊಡ್ಡವರು) ಮತ್ತು ಎಲ್ಲ ಮಕ್ಕಳಿಗೂ ಬೆಳವಣಿಗೆ ಕಾರ್ಡ್‌ಗಳು

iii. ಅಡುಗೆ ಪಾತ್ರೆಗಳು, ನೀರು ಸಂಗ್ರಹಿಸುವ ಪಾತ್ರೆ, ಔಷಧ ಮತ್ತು ಪಿಎಸ್‌ಇ ಕಿಟ್, ನಿಗದಿಪಡಿಸಿದ ರಿಜಿಸ್ಟರ್, ಮುದ್ರಿತ ವರದಿ ನಮೂನೆಗಳು(ಎಂಪಿಆರ್)

iv. ಎಡಬ್ಲ್ಯುಸಿಗಳ ಕಾರ್ಯನಿರ್ವಹಣೆಯ ನಿಯತತೆಯನ್ನು ಮತ್ತು ಕೇಂದ್ರದಲ್ಲಿ ಪ್ರತಿದಿನ ಎಡಬ್ಲ್ಯುಡಬ್ಲ್ಯು ಹಾಜರಿರುವರೇ ಎಂದು ಪರಿಶೀಲನೆ

v. 3-6 ವರ್ಷದ ಮಕ್ಕಳಿಗೆ ತಿಂಗಳಿಗೆ 25 ದಿನ ಅಡೆತಡೆಯಿಲ್ಲದೆ ಉಪಹಾರ ಮತ್ತು ಬೇಯಿಸಿದ ಬಿಸಿಯಾದ ಪೂರಕ ಆಹಾರ ಹಾಗೂ ಗರ್ಭಿಣಿಯರು, ಹಾಲುಣಿಸುತ್ತಿರುವ ತಾಯಂದಿರು ಮತ್ತು 6-36 ತಿಂಗಳ ಮಕ್ಕಳಿಗೆ ಮನೆಗೆ ಕೊಂಡೊಯ್ಯುವ ದವಸ (ಟಿಎಚ್ಆರ್) ನೀಡಲಾಗುತ್ತಿದೆಯೇ?

1* ಈ ಪರೀಕ್ಷಾ ಪಟ್ಟಿಯು ಈಗಾಗಲೇ ಐಸಿಡಿಎಸ್ ಮೇಲ್ವಿಚಾರಕರು ಬಳಸುತ್ತಿರುವ ಹಾಲಿ ಪರೀಕ್ಷಾ ಪಟ್ಟಿಯ ಪುನರಾವರ್ತನೆ/ಸೇರ್ಪಡೆಯಾಗಿದೆ

vi. ಪೂರಕ ಆಹಾರದ ತಯಾರಿಕೆ ಮತ್ತು ವಿತರಣೆಯಲ್ಲಿ ಸ್ವಯಂಸೇವಾ ಗುಂಪುಗಳು ಅಥವಾ ಮಹಿಳಾ ಗುಂಪುಗಳನ್ನು ಒಳಗೊಳ್ಳುವುದು ಅಥವಾ ಬೇರಾವುದೇ ವಿಕೇಂದ್ರೀಕೃತ ಏರ್ಪಾಟು ಮಾಡುವುದು

vii. ನಿಗದಿಪಡಿಸಿದ ಕ್ಯಾಲೊರಿ ಶರತ್ತುಗಳನ್ನು ಪೂರೈಸಲಾಗಿದೆಯೇ ಅಥವಾ ಇಲ್ಲವೇ? (ಆಹಾರ ಮತ್ತು ಪೋಷಕಾಂಶ ಮಂಡಳಿ/ರಾಜ್ಯ ಮತ್ತು ಕೇಂದ್ರ ಸರ್ಕಾರದ ಎಲ್ಲ ಪರಾಮರ್ಶಕರು ಊರ್ಜಿತಗೊಳಿಸಬೇಕು)

viii. ಫಲಾನುಭವಿಗಳು ಪೂರಕ ಆಹಾರದ ರುಚಿ ಮತ್ತು ಗುಣಮಟ್ಟವನ್ನು ಇಷ್ಟಪಟ್ಟರೇ?

ix. ಮಕ್ಕಳನ್ನು ನಿಯತವಾಗಿ ತೂಕ ಮಾಡಲಾಗುತ್ತಿದೆಯೇ? ಬೆಳವಣಿಗೆ ರೇಖಾಚಿತ್ರವನ್ನು ಪರಿಶೀಲಿಸಬೇಕು ಮತ್ತು ಕೆಲವು ಮಕ್ಕಳ ವಯಸ್ಸು ಹಾಗೂ ತೂಕ ಮತ್ತು ಅವರ ಪೋಷಕಾಂಶ ಸ್ಥಿತಿಯು ಬೆಳವಣಿಗೆ ರೇಖಾಚಿತ್ರದಲ್ಲಿರುವಂತೆ ಇದೆಯೇ ಎಂದು ಪ್ರಮಾಣಿಸಿ ನೋಡಬೇಕು

x. ಲಸಿಕೀಕರಣ ಮತ್ತು ಆರೋಗ್ಯ ತಪಾಸಣೆಯನ್ನು ನಿಯತವಾಗಿ ಮಾಡಲಾಗುತ್ತಿದೆಯೇ? (ಎರಡು ತಿಂಗಳ ದಾಖಲೆಗಳನ್ನು ಪರಿಶೀಲಿಸಬೇಕು)

xi. ಗ್ರಾಮ ಆರೋಗ್ಯ ಮತ್ತು ಪೋಷಕಾಂಶ ದಿನ(ವಿಎಚ್ಎನ್ಡಿ)ಗಳ ಆಚರಣೆ. ಪರಾಮರ್ಶಕರು ವಿಎಚ್ಎನ್ಡಿಗೆ ಗ್ರಾಮವಾರು ಸೂಕ್ಷ್ಮ ಯೋಜನೆಯನ್ನು ಅವಲೋಕಿಸುವ ಅಗತ್ಯವಿದೆ ಮತ್ತು ಅದು ವಿಭಾಗ ಮತ್ತು ಜಿಲ್ಲಾ ಹಂತದಲ್ಲಿ ಸಿಡಿಪಿಒ ಬಳಿ ಲಭ್ಯವಿರಬೇಕು

xii. ಎಡಬ್ಲ್ಯುಸಿಗೆ ಭೇಟಿ ನೀಡಿದ ದಿನ ಒಟ್ಟು ನೋಂದಾಯಿಸಿಕೊಂಡವರಲ್ಲಿ ಹಾಜರಿದ್ದ ಮಕ್ಕಳ ಸಂಖ್ಯೆ ಮತ್ತು ಪೂರಕ ಆಹಾರ ಪಡೆದವರ ಸಂಖ್ಯೆ (ಕಳೆದ ವಾರದ ಅಂದಾಜು ಸಂಖ್ಯೆಯನ್ನು ಈ ಸಂಖ್ಯೆಯೊಂದಿಗೆ ಹೋಲಿಸಿ ನೋಡಬೇಕು)

xiii. ಎಡಬ್ಲ್ಯುಸಿಯಲ್ಲಿ ನೋಂದಾಯಿಸಿಕೊಂಡ ಮಕ್ಕಳಿಗೆ ಹೋಲಿಸಿದರೆ, ಭೇಟಿ ನೀಡಿದ ದಿನದಂದು ಶಾಲಾಪೂರ್ವ ಶಿಕ್ಷಣ ಪಡೆದ ಮಕ್ಕಳ ಸಂಖ್ಯೆ (ಎಡಬ್ಲ್ಯುಡಬ್ಲ್ಯು ಯಾರ ಚಟುವಟಿಕೆಗಳನ್ನು ಕೈಗೊಂಡಿದ್ದರು?)

xiv. ಎಡಬ್ಲ್ಯುಸಿಗೆ ಸಮುದಾಯದ ಬೆಂಬಲವಿದೆಯೇ? ಇಲ್ಲವಾದಲ್ಲಿ ಏಕೆ?(ಗ್ರಾಮಸಮಿತಿ/ಪಿಆರ್ಐ ಸದಸ್ಯರೊಂದಿಗೆ ಮಾತುಕತೆ ನಡೆಸಬೇಕು)

xv. ಮಹಿಳೆ ಗರ್ಭಿಣಿಯಾಗಿದ್ದಾಗ, ನವಜಾತ ಇಲ್ಲವೇ ಮಕ್ಕಳ ಅನಾರೋಗ್ಯದಂಥ ಗಂಭೀರ ಸಂಪರ್ಕ ಸಮಯದಲ್ಲಿ ಎಡಬ್ಲ್ಯುಡಬ್ಲುಗಳು ನಿಯತವಾಗಿ ಮನೆ ಭೇಟಿ ನೀಡಿದ್ದರೆ? (ಇಂಥ ಕೆಲವು ಮನೆಗಳಿಗೆ ಭೇಟಿ ನೀಡಿ, ಸ್ಥಿರೀಕರಿಸಬೇಕು)

xvi. ಎಡಬ್ಲ್ಯುಸಿಯ ಕಾರ್ಯನಿರ್ವಹಣೆ ಬಗ್ಗೆ ಸಮುದಾಯದ ಸಾಮಾನ್ಯ ಭಾವನೆಯಲ್ಲಿ ಕಳೆದ 2-3 ವರ್ಷಕ್ಕೆ ಹೋಲಿಸಿದರೆ, ಯಾವುದೇ ಸುಧಾರಣೆ ಆಗಿದೆಯೇ?

xvii. ಬೇರೆ ಯಾವುದೇ ಸಲಹೆಗಳಿದ್ದರೆ

ಬಿ. ಕೇಂದ್ರ ಹಂತದ ಅಧಿಕಾರಿಗಳಿಗೆ:

ಮೇಲಿನ ಪರಿಶೀಲನಾ ಪಟ್ಟಿಯಲ್ಲದೆ, ಕೇಂದ್ರ ಸಚಿವಾಲಯದ ಅಧಿಕಾರಿಗಳು ರಾಜ್ಯ ಸರ್ಕಾರದ ಅಧಿಕಾರಿಗಳೊಂದಿಗೆ ಕೆಳಕಂಡ ವಿಚಾರಗಳ ಬಗ್ಗೆ ಪರಿಶೀಲಿಸುತ್ತಾರೆ;

i. ಹೊಸ ವಿಭಾಗಗಳು ಮತ್ತು ಎಡಬ್ಲ್ಯುಸಿಗಳ ಕಾರ್ಯಾಚರಣೆಯ ಸ್ಥಿತಿ

ii. ರಾಜ್ಯ ಮತ್ತು ಜಿಲ್ಲಾ ಹಂತದಲ್ಲಿ ಐಸಿಡಿಎಸ್‌ನ ಸಾಂಸ್ಥಿಕ ಸಂರಚನೆ (ಸಿಬ್ಬಂದಿ ದರ್ಜೆ, ಖಾಲಿ ಹುದ್ದೆಗಳು, ಯಾವಾಗ ಭರ್ತಿ ಮಾಡಲಾಗುತ್ತದೆ ಮತ್ತು ಅದರ ಪ್ರಕ್ರಿಯೆಗಳು, ಐಸಿಡಿಎಸ್ ಅಧಿಕಾರಿಗಳಿಗೆ ಪ್ರತ್ಯೇಕ ಶ್ರೇಣಿ ಇದೆಯೇ ಇತ್ಯಾದಿ)

iii. ಎಡಬ್ಲ್ಯುಡಬ್ಲ್ಯುಗಳು/ಮೇಲ್ವಿಚಾರಕರು/ಸಿಡಿಪಿಒಗಳಿಗೆ ಬಡ್ತಿಯ ಮಾರ್ಗಗಳು

iv. ಎಡಬ್ಲ್ಯುಸಿಗಳು/ವಿಭಾಗಗಳಿಗೆ ಅವಲೋಕನ/ಪರಾಮರ್ಶನ ಭೇಟಿಯನ್ನು ನಿಯತವಾಗಿಸುವಂತೆ ಪರಾಮರ್ಶಿಸುವ ಕಾರ್ಯವಿಧಾನ

v. ಸರ್ಕಾರದಿಂದ ನಿರ್ದೇಶನಾಲಯ, ಅಲ್ಲಿಂದ ಜಿಲ್ಲೆ/ವಿಭಾಗಗಳು/ಎಡಬ್ಲ್ಯುಸಿಗಳಿಗೆ ಅನುದಾನದ ಹರಿವು- ಪ್ರತಿ ಹಂತದಲ್ಲೂ ತೆಗೆದುಕೊಂಡ ಸಮಯ

vi. ಎಲ್ಲ ಹಂತದಲ್ಲೂ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕೆ ಭಾರತ ಸರ್ಕಾರ ನಿಗದಿಪಡಿಸಿದ ಆರ್ಥಿಕ/ಉಣಿಸುವಿಕೆ ನಿಯಮಗಳ ಅನುಸರಣೆ

vii. ಎಡಬ್ಲ್ಯುಸಿಯ ಮೂಲಸೌಲಭ್ಯವನ್ನು ಬಲಗೊಳಿಸಲು ರಾಜ್ಯ ಸರ್ಕಾರದ ಯೋಜನೆ (ಇನ್ನಿತರ ಕಾರ್ಯಕ್ರಮಗಳು/ಇಲಾಖೆಗಳ ಸಂಪನ್ಮೂಲದ ಬಳಕೆ)

viii. ಆರೋಗ್ಯ ಮತ್ತು ಇತರ ಸಂಬಂಧಿತ ಇಲಾಖೆಗಳೊಡನೆ ಪರಿಣಾಮಕಾರಿಯಾಗಿ ಏಕತ್ರಗೊಳಿಸುವ ಕಾರ್ಯವಿಧಾನ

ix. ಗೋಧಿ ಆಧಾರಿತ ಪೋಷಕಾಂಶ ಕಾರ್ಯಕ್ರಮ (ಡಬ್ಲ್ಯುಬಿಎನ್‌ಪಿ)ದಡಿ ಧಾನ್ಯಗಳ ಎತ್ತುವಳಿ ಸ್ಥಿತಿ ಮತ್ತು ಅದರ ಬಳಕೆ ಇತ್ಯಾದಿ

ಟಿಪ್ಪಣಿ :

1. ಮೇಲಿನ ಅಂಶಗಳು ಕೇವಲ ಸೂಚನೆಗಳಷ್ಟೆ. ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ನಿರ್ದಿಷ್ಟ ಅಗತ್ಯಗಳು/ಸಮಸ್ಯೆಗಳನ್ನು ಆಧರಿಸಿ, ಇನ್ನಷ್ಟು ಸೂಚನೆಗಳನ್ನು ಸೇರ್ಪಡೆಗೊಳಿಸಬಹುದು

2. ಆರೋಗ್ಯ ಇಲಾಖೆಯೊಂದಿಗೆ ಜಂಟಿಯಾಗಿ ಭೇಟಿ ನೀಡಿದಾಗ, ನಿಯತಕಾಲದಲ್ಲಿ ಲಸಿಕೀಕರಣ, ಲಸಿಕೀಕರಣ ತಪ್ಪಿಸಿಕೊಂಡವರು, ವಿಎನ್‌ಎಚ್‌ಡಿಯಲ್ಲಿ ಎಎನ್‌ಎಂಗಳ ಉಪಸ್ಥಿತಿ, ಪರ್ಯಾಲೋಚನ ಸೇವೆಗಳು ಇತ್ಯಾದಿಯನ್ನು ಪರಿಗಣಿಸಬೇಕು

3. ಕೆಲವು ಭೇಟಿಗಳನ್ನು ವಿಎಚ್‌ಎನ್‌ಡಿಗಳಲ್ಲಿ ಮಾಡಬೇಕು

4. ಅಧಿಕಾರಿಗಳು ಕಾರ್ಯಕ್ರಮದ ಸ್ಪಷ್ಟ ಮತ್ತು ಸರಿಯಾದ ಚಿತ್ರಣವನ್ನು ಪಡೆಯಲು ಹಾಗೂ ಉದ್ದೇಶಿತ ಫಲಾನುಭವಿಗೆ ಸೇವೆಗಳ ವಿತರಣೆ ಮಾಡುತ್ತಿದೆಯೇ ಎಂಬುದನ್ನು ತಿಳಿದುಕೊಳ್ಳಲು, ಎಡಬ್ಲ್ಯುಸಿ ಭೇಟಿಗೆ ಸಾಕಷ್ಟು ಸಮಯ ಕೊಡಬೇಕಾಗುತ್ತದೆ

5. ಭೇಟಿಗೆ ಎಡಬ್ಲ್ಯುಸಿಗಳನ್ನು ಆಯ್ಕೆ ಮಾಡುವಾಗ ಒಳಭಾಗದ ಪ್ರದೇಶಗಳೂ ಇರುವಂತೆ ನೋಡಿಕೊಳ್ಳಬೇಕು ಮತ್ತು ರಸ್ತೆ ಪಕ್ಕದ ಗ್ರಾಮಗಳಿಗೆ ಮಾತ್ರ ಅನಗತ್ಯ ಆದ್ಯತೆ ನೀಡಬಾರದು

6. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅಧಿಕಾರಗಳ ಕೆಲವು ಭೇಟಿಗಳು ಇತ್ತೀಚೆಗೆ ಸಿಡಿಪಿಒ/ಡಿಪಿಒಗಳು ಭೇಟಿ ಕೊಟ್ಟು ನೀಡಿರುವ ವರದಿ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ ಎಂಬುದನ್ನು ಪರಿಶೀಲಿಸಲು ಮತ್ತು ವಿಭಾಗ/ಎಡಬ್ಲ್ಯುಸಿ ಹಂತದಲ್ಲಿ ಗುಣಮಟ್ಟದಲ್ಲಿ ಸುಧಾರಣೆಯಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ನಡೆಯಬೇಕು

6. ವರದಿ ಮಾಡುವುದು ಮತ್ತು ಹಿಮ್ಮಾಹಿತಿ: ಡಿಪಿಒ ಹಂತದ ಪ್ರತಿಯೊಬ್ಬ ಅಧಿಕಾರಿಯೂ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮೇಲೆ ಉಲ್ಲೇಖಿಸಿದ ಅಂಶಗಳು/ವಿಷಯಗಳ ಬಗ್ಗೆ ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ, ಸಂಕ್ಷಿಪ್ತ ವರದಿ (ಗರಿಷ್ಠ 2 ಪುಟ)ಯನ್ನು ಸಿದ್ಧಗೊಳಿಸಬೇಕು ಮತ್ತು ಎಡಬ್ಲ್ಯುಡಬ್ಲ್ಯು/ಮೇಲ್ವಿಚಾರಕರು/ಸಿಡಿಪಿಒಗಳಿಗೆ ಅಗತ್ಯ ಹಿಮ್ಮಾಹಿತಿ ನೀಡುವುದನ್ನು ಖಾತ್ರಿಪಡಿಸಬೇಕು. ಮೇಲ್ವಿಚಾರಕರು ಮತ್ತು ಸಿಡಿಪಿಒ/ಎಸಿಡಿಪಿಒಗಳು ತಮ್ಮ ಕ್ಷೇತ್ರ ಭೇಟಿಯಲ್ಲಿ ಕಂಡುಕೊಂಡಿದ್ದನ್ನು ಮಾಸಿಕ/ತ್ರೈಮಾಸಿಕ ವರದಿಯಲ್ಲಿ ಪ್ರತಿಫಲಿಸಬೇಕು. ಕಂಡುಕೊಂಡ ಅಂಶಗಳನ್ನು ಗ್ರಾಮ/ವಿಭಾಗ/ಜಿಲ್ಲೆ/ರಾಜ್ಯ ಹಂತದ ಪರಾಮರ್ಶನ ಸಭೆಯಲ್ಲಿ ಚರ್ಚಿಸಬೇಕು. ರಾಜ್ಯ ನಿರ್ದೇಶನಾಲಯವು ಪ್ರತಿ ತ್ರೈಮಾಸಿಕದ ಅಂತ್ಯದಲ್ಲಿ ಕ್ಷೇತ್ರ ಭೇಟಿಗಳ ಜಿಲ್ಲಾವಾರು ಪ್ರಮುಖ ಅಂಶಗಳನ್ನು ಸಂಕಲಿಸುವ ಮತ್ತು ಅದನ್ನು ಭಾರತ ಸರ್ಕಾರಕ್ಕೆ ಸಲ್ಲಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಒಟ್ಟಾರೆ ಕೇಂದ್ರ ಹಂತದ ಅಧಿಕಾರಿಗಳು ಪ್ರಮುಖ ಅಂಶಗಳನ್ನು ವಿಶ್ಲೇಷಿಸಿ, ರಾಜ್ಯವಾರು ನಿರ್ದಿಷ್ಟ ವರದಿಗಳನ್ನು ಸಿದ್ಧಗೊಳಿಸುತ್ತಾರೆ ಮತ್ತು ಭೇಟಿ ನೀಡಿದ ಹತ್ತು ದಿನಗಳೊಳಗೆ ಎಂಡಬ್ಲ್ಯುಸಿಡಿಯ ಬ್ಯೂರೋ ಮುಖ್ಯಸ್ಥನ ಮೂಲಕ ರಾಜ್ಯ ಸರ್ಕಾರಗಳಿಗೆ ಹಿಮ್ಮಾಹಿತಿ ನೀಡಬೇಕು.

7. ಎಡಬ್ಲ್ಯುಸಿ ಚಟುವಟಿಕೆಗಳ ಪರಾಮರ್ಶನದಲ್ಲಿ ಪಿಆರ್‌ಐಗಳ ಒಳಗೊಳ್ಳುವಿಕೆ: ಎಡಬ್ಲ್ಯುಸಿ ಹಂತದಲ್ಲಿ ಪೂರೈಕೆಗಳ ಲಭ್ಯತೆ ಮತ್ತು ಸೇವೆಗಳ ವಿತರಣೆ ಕಾರ್ಯವಿಧಾನದಲ್ಲಿ ಉತ್ತರದಾಯಿತ್ವವನ್ನು ತರಲು ಐಸಿಡಿಎಸ್‌ನ ಚಟುವಟಿಕೆಗಳ ಪರಾಮರ್ಶನದಲ್ಲಿ ಪಿಆರ್‌ಐಗಳ ಒಳಗೊಳ್ಳುವಿಕೆ ಅಗತ್ಯವಿದೆ ಎಂಬ ಭಾವನೆ ಮೊದಲಿನಿಂದಲೂ ಇದೆ. ಆದರೆ, ಸ್ಪಷ್ಟವಾಗಿ ವಿವರಿಸಿದ ಮಾರ್ಗದರ್ಶಕ ಸೂತ್ರಗಳಿಲ್ಲದ್ದರಿಂದ ಐಸಿಡಿಎಸ್‌ನ ಅನುಷ್ಠಾನವನ್ನು ಬೆಂಬಲಿಸಲು ಪಿಆರ್‌ಐಗಳ ಒಳಗೊಳ್ಳುವಿಕೆ ಕ್ವಚಿತ್ತಾಗಿತ್ತು ಮತ್ತು ಎಡಬ್ಲ್ಯುಡಬ್ಲ್ಯುಗಳು ಹಾಗೂ ಎಡಬ್ಲ್ಯುಎಚ್‌ಗಳ ಆಯ್ಕೆ, ಎಡಬ್ಲ್ಯುಸಿ ಕಟ್ಟಡಗಳ ನಿರ್ಮಾಣ ಇತ್ಯಾದಿಗೆ ಸೀಮಿತವಾಗಿತ್ತು. ಎಡಬ್ಲ್ಯುಸಿಗಳ ದೈನಂದಿನ ಕಾರ್ಯನಿರ್ವಹಣೆಯ ಪರಾಮರ್ಶನದಲ್ಲಿ ಪಿಆರ್‌ಐಗಳನ್ನು ವಿಶೇಷವಾಗಿ ಕೆಳಕಂಡ ಅಂಶಗಳಲ್ಲಿ ಒಳಗೊಳ್ಳಲು ಪ್ರಸ್ತಾಪಿಸಲಾಗಿದೆ;

i. ಎಡಬ್ಲ್ಯುಸಿಗಳ ಕಾರ್ಯನಿರ್ವಹಣೆಯಲ್ಲಿ ನಿಯತತೆ

ii. ಪೂರಕ ಆಹಾರ (ಉಪಹಾರ, ಬಿಸಿಯೂಟ ಮತ್ತು ಟಿಎಚ್‌ಆರ್), ಅದರ ಗುಣಮಟ್ಟದ ನಿಯತತೆ ಹಾಗೂ ಸಮುದಾಯದಿಂದ ಸ್ವೀಕೃತಿ

iii. ಎಲ್ಲ ಮನೆಗಳಿಗೆ ಹಾಗೂ ಅರ್ಹ ಫಲಾನುಭವಿಗಳಿಗೆ ತಲುಪಿಸುವಿಕೆ

iv. ಮಕ್ಕಳನ್ನು ನಿಯತವಾಗಿ ತೂಕ ಮಾಡುವುದು

v. ಆರೋಗ್ಯ ಇಲಾಖೆಯಿಂದ ಐಎಫ್‌ಎ, ವಿಟಮಿನ್ ಎ ಮತ್ತು ಜಂತು ನಿವಾರಣೆ ಔಷಧಗಳ ನಿಯತ ಪೂರೈಕೆ

vi. ಆರೋಗ್ಯ ಇಲಾಖೆ ಮತ್ತು ಐಸಿಡಿಎಸ್ ನಡುವಿನ ಜಂಟಿ ಮಾಸಿಕ ಸಭೆ ಏರ್ಪಡಿಸುವುದು(ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳು)

vii. ಪ್ರತಿ ತಿಂಗಳು ಗ್ರಾಮೀಣ ಆರೋಗ್ಯ ಮತ್ತು ಪೋಷಕಾಂಶ ದಿನ (ವಿಎಚ್‌ಎನ್‌ಡಿ) ಆಚರಣೆ

viii. ಎಡಬ್ಲ್ಯುಸಿಗಳಲ್ಲಿ ನಿಗದಿಪಡಿಸಿದ ದಾಖಲೆಗಳು ಮತ್ತು ರಿಜಿಸ್ಟರ್‌ಗಳ ಲಭ್ಯತೆ

ix. ಎಡಬ್ಲ್ಯುಡಬ್ಲ್ಯು ಮತ್ತು ಎಡಬ್ಲ್ಯುಎಚ್‌ಗಳಿಗೆ ನಿಯತವಾಗಿ ಗೌರವಧನ ಪಾವತಿಯ ಪರಾಮರ್ಶನ

x. ಎಡಬ್ಲ್ಯುಸಿಗಳ ನಿರ್ಮಾಣ ಮತ್ತು ನಿರ್ವಹಣೆ

xi. ಐಸಿಡಿಎಸ್ ಸೇವೆಗಳ ವಿತರಣೆಯಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು ಸಮುದಾಯದ ಕ್ರೋಢೀಕರಣ ಹಾಗೂ

xii. ಆರೋಗ್ಯ, ಪೋಷಕಾಂಶ ಮತ್ತು ನೈರ್ಮಲ್ಯ ಶಿಕ್ಷಣದಲ್ಲಿ ಒಳಗೊಳ್ಳುವಿಕೆ

ರಾಜ್ಯಗಳು ರಾಜ್ಯದ ಪಿಆರ್‌ಐ ಇಲಾಖೆಯ ಸಲಹೆಯನ್ವಯ ಪಿಆರ್‌ಐ ಸದಸ್ಯರಿಂದ ಬಂದ ಹಿಮ್ಮಾಹಿತಿಯನ್ನು ಅವಲೋಕಿಸಲು ಸೂಕ್ತವಾದ ಹಾಗೂ ಅಗತ್ಯಕ್ರಮ ತೆಗೆದುಕೊಳ್ಳಲು ವರದಿ ಕಾರ್ಯತಂತ್ರವನ್ನು ರೂಪಿಸಬಹುದು.

ಟಿಪ್ಪಣಿ : ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಮೇಲಿನ ಮಾರ್ಗದರ್ಶಿ ಸೂತ್ರಗಳನ್ನು ಐಸಿಡಿಎಸ್ ಕಾರ್ಯಕ್ರಮದ ಅನುಷ್ಠಾನದಲ್ಲಿರುವ ಹಾಲಿ ಪರಾಮರ್ಶನ ಮತ್ತು ಮೇಲ್ವಿಚಾರಣೆ ಕಾರ್ಯತಂತ್ರದಲ್ಲಿ ಸೂಕ್ತವಾಗಿ ಅಳವಡಿಸಿಕೊಳ್ಳಬಹುದು.